
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

04 ಜನವರಿ 2017 ಪುಟ 20 ರೂ. 15/-

ಮಾತಂಗ ಸಾಹಿತ್ಯ ಪರಿಷತ್ತು
ಜಾತಿ ಕೇರೀಕರಣ



ಅಳಿವು ಉಳಿವಿನ ಅಂತಿಮ ಕಾಳಗ






ಕೊಡಗು ಚಲೋ


ಯಡ್ಡಿ ಪಡಸಾಲೆಯಲ್ಲಿ 'ಪ್ರಸಾದ್' ಗೇಮು





ರಾಜ್-ಲೀಲಾ 'ವಿನೋದ'ವಲ್ಲ

ಸೋಷಿಯಲ್ ಮೀಡಿಯಾ ಧ್ರುವೀಕರಣದ ಕಾಲದಲ್ಲಿ ಆರೋಗ್ಯಕರ ಸಂವಾದ ಅಗತ್



ಡಾ.ವಾಸು ಎಚ್.ವಿ.

ಇಡೀ ಸಮಾಜವೇ ಇಂದು ಪರಸ್ಪರ ವಿರುದ್ಧ ಧ್ರುವಗಳಲ್ಲಿ ನಿಂತು ಕಿತ್ತಾಡುತ್ತಿದೆಯೋ ಇಲ್ಲವೋ ಗೊತ್ತಿಲ್ಲ, ಆದರೆ, ಸಾಮಾಜಿಕ ಜಾಲತಾಣಗಳ ಗಣನೀಯ ಪ್ರಮಾಣದ ಜಾಗೆಯಲ್ಲಿ ಸ್ಪಷ್ಟವಾದ ವಿರುದ್ಧ ಧ್ರುವಗಳು ಸೃಷ್ಟಿಯಾಗಿವೆ. ಇದು ಬೇರೆ ದೇಶಗಳಲ್ಲಿ ಹೇಗೋ ಗೊತ್ತಿಲ್ಲ; ಆದರೆ, ಭಾರತದಲ್ಲಿ ಸಾಮಾಜಿಕ ಜಾಲತಾಣಗಳು ವಿಸ್ತಾರವಾಗಿದ್ದೂ, ಅಖಿಲ ಭಾರತ ರಾಜಕಾರಣದಲ್ಲಿ ಮೋದಿ ಮೇಲೇರಿದ್ದೂ ಹೆಚ್ಚುಕಡಿಮೆ ಒಂದೇ ಸಮಯಕ್ಕೆ ಆಗಿ, ಈ ವಿರುದ್ಧ ಧ್ರುವಗಳು ಒಂದೋ ಮೋದಿ ಪರ ಅಥವಾ ಮೋದಿ ವಿರುದ್ಧ ತೋಳೇರಿಸಿ ನಿಂತಿರುವುದು ಎದ್ದು ಕಾಣುತ್ತದೆ. ಈ ಅವಧಿಗೆ ಸ್ವಲ್ಪ ಮುಂಚೆ ಈ ಜಾಗದಲ್ಲಿ ಪ್ರಾಬಲ್ಯ ಮೆರೆದಿದ್ದು ಆಮ್‌ಆದ್ಮಿ ಪಕ್ಷ. ಇಂದಿಗೂ ದೆಹಲಿ, ಪಂಜಾಬ್ ಮುಂತಾದೆಡೆ ಅವರ ಗಣನೀಯ ಅಸ್ತಿತ್ವ ಇದ್ದೇ ಇದೆ. ಉಳಿದಂತೆ ಎಲ್ಲೆಡೆ ಮೋದಿಯೇ ಚರ್ಚೆಯ ಕೇಂದ್ರ.

ಇದನ್ನು ಒಂದು ಚರ್ಚೆ ಎಂದು ಹೇಳುವುದೇ ತಪ್ಪು, ಇದೊಂದು ತರ್ಕಹೀನ, ನೀತಿಹೀನ ಕಾದಾಟ. ಅಲ್ಲಿ ಕಾದಾಡುವ ವಿರುದ್ಧ ಧ್ರುವಗಳ ನಡುವೆ ವಾಗ್ವಾದದಲ್ಲಿ ಇರಬೇಕಾದ ಪರಸ್ಪರ ಗೌರವದ ಸಣ್ಣ ಎಳೆಯೂ ಕಾಣುವುದಿಲ್ಲ. ನಮ್ಮ ವಾದವೇ ಸರಿ ಎಂದು ಅದಕ್ಕೇ ಅಂಟಿಕೊಳ್ಳುತ್ತಾರೆ ಎಂಬಷ್ಟು ಸರಳ ವಾದ ಮೊಂಡುತನವೂ ಅದಲ್ಲ; ಎದುರಾಳಿಗಳನ್ನು ಹೀಗಳೆಯುವುದಕ್ಕೇ ಇಲ್ಲಿ ಮೊದಲ ಆದ್ಯತೆ. ಸಾಮಾಜಿಕವಾಗಿ ಕ್ರಿಯಾಶೀಲರಾದ ಬಹುತೇಕರು ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಪಕ್ಷ ಇವೆರಡರಲ್ಲಿ ಯಾವುದೆಂದು ತೀರ್ಮಾನಿಸಿಕೊಂಡುಬಿಟ್ಟಿದ್ದಾರೆ. ಕೆಲವೊಮ್ಮೆ ಅಂತಹವರು ಯಾವೊಂದು ಕಡೆಯೂ ಇರುವುದಿಲ್ಲವಾದರೂ, ವಾದದ ಬಿರುಸು ಅವರನ್ನು ಒಂದು ಕಡೆಗೆ ತಳ್ಳಿಯೇ ಸಿದ್ಧ. ಮೂರನೆಯ ತಾವಿಗೆ ಅಲ್ಲಿ ಅವಕಾಶವೇ ಇಲ್ಲ.


ಹಾಗೆ ನೋಡಿದರೆ, ಪ್ರಜಾತಂತ್ರದಲ್ಲಿ ಕನಿಷ್ಠ ವಿಶ್ವಾಸ ಇರುವ ಯಾರೇ ಆದರೂ ಮೋದಿಯನ್ನು ವಿರೋಧಿಸದೇ ಇನ್ನೇನು ಮಾಡಲಿಕ್ಕೆ ಸಾಧ್ಯ ಎಂಬ ಪ್ರಶ್ನೆಯೇನೋ ಸಹಜವಾಗಿಯೇ ಬರಬಹುದು. ಹೌದು, ಮೋದಿಯನ್ನು ವಿರೋಧಿಸಲೇಬೇಕು. ಆದರೆ, ಮೋದಿಯನ್ನು ಬೆಂಬಲಿಸು ವವರೆಲ್ಲರನ್ನೂ ಅಷ್ಟೇ ತೀವ್ರವಾಗಿ ವಿರೋಧಿಸಲೇಬೇಕು ಎಂದೇನೂ ಇಲ್ಲವಲ್ಲ. ಮೋದಿ ಮತ್ತು ಮೋದಿ ಬೆಂಬಲಿಗರ ನಡುವಿನ ಗೆರೆಯೂ ಅಳಿಸಿಹೋಗಿರುವ ಸಂದರ್ಭವಿದು.

ಈ ರೀತಿ ಧ್ರುವೀಕರಣ ಆರಂಭವಾಗಿದ್ದು ಮೋದಿ ಭಕ್ತರಿಂದಲೇ ಎನ್ನುವುದರಲ್ಲಿ ಅನುಮಾನವಿಲ್ಲ. ನೀವು ಮೋದಿಯನ್ನು ವಿರೋಧಿಸುತ್ತೀರೆಂದರೆ, ನೀವು ಕಾಂಗ್ರೆಸ್ ಆಗಿರಬೇಕು ಎಂದು ಒಂದು ಕಡೆಗೆ ತಳ್ಳುವುದರಿಂದ ಅದು ಆರಂಭವಾಯಿತು. ಆಪ್ ಪಕ್ಷದ ಉದಯದ ನಂತರ, ನೀವು ಆಪ್ ಇದ್ದರೂ ಇರಬಹುದು ಎಂಬ ಸಣ್ಣ ರಿಯಾಯಿತಿ ದೊರೆಯಿತು. ಇವೆರಡೂ ಆಗಿರದಿದ್ದರೆ ನೀವು ಭಯೋತ್ಪಾದಕರೋ, ಪಾಕಿಸ್ತಾನ ಅಥವಾ ಚೀನಾದ ಏಜೆಂಟೋ ಆಗಿರಬೇಕು; ನಿಮಗೆ ಗಡಿ ಕಾಯುವ ಸೈನಿಕರ ಬಗ್ಗೆ ಕಾಳಜಿಯಿಲ್ಲ, ದೇಶದ ಅಭಿವೃದ್ಧಿಯನ್ನು ಬಯಸದವರು, ಕಾಂಗ್ರೆಸ್ಸಿನಿಂದ ಲಾಭ ಪಡೆದವರು ಇತ್ಯಾದಿ ಇತ್ಯಾದಿ ಮಾತುಗಳು ಪುಂಖಾನುಪುಂಖವಾಗಿ ಬಂದು ಬೀಳುತ್ತಿದ್ದವು; ಈಗಲೂ ಬೀಳುತ್ತಿವೆ.

ಮೊದಲು ಸಂಘಪರಿವಾರ ಮತ್ತು ಬಿಜೆಪಿಯಿಂದ ನಿಯೋಜಿತವಾದ ಕಸುಬುದಾರರು ಸೃಷ್ಟಿಸಿದ ಸುಳ್ಳುಗಳು ಮತ್ತು ಫೋಟೋಶಾಪ್ ಚಿತ್ರಗಳು ಅನಾರೋಗ್ಯಕರ ಚರ್ಚೆಯನ್ನು ಹುಟ್ಟುಹಾಕಿದವು. ನೆಹರೂ ಕುಟುಂಬ ಮಾತ್ರವಲ್ಲದೇ, ಗಾಂಧಿ ಒಳಗೊಂಡಂತೆ ಕೆಲವು 'ರಾಷ್ಟ್ರೀಯ ನಾಯಕರು'ಗಳ ಬಗ್ಗೆ ಕಪೋಲಕಲ್ಪಿತ ಸುಳ್ಳುಗಳನ್ನು ಕೂತಲ್ಲೇ ಹೊಸೆಯಲಾಯಿತು. ವಿರೋಧಿಗಳನ್ನು ಬಯ್ಯಲು ಸಿಕ್ಯುಲರ್‌ಗಳು, ಪ್ರೆಸ್ಟಿಟ್ಯೂಟ್‌ಗಳು, ಆಪ್‌ಟರ್ಡ್‌ಗಳು ಇತ್ಯಾದಿ ಪದಗಳನ್ನು ಸೃಷ್ಟಿಸಲಾಯಿತು. ಕಪ್ಪುಹಣ ಇಡಲಾಗಿರುವ ಸ್ವಿಸ್ ಬ್ಯಾಂಕ್ ಅಕೌಂಟ್‌ಗಳು ಯಾರ ಹೆಸರಿನಲ್ಲಿವೆ, ಅವುಗಳಲ್ಲಿ ಎಷ್ಟು ಹಣ ಇದೆ ಎಂಬ ಕುರಿತ ನಕಲಿ ಪಟ್ಟಿಗಳನ್ನು ತಯಾರು ಮಾಡಿ ಬಿಡಲಾಯಿತು. ನಕಲಿ ಫೇಸ್‌ಬುಕ್ ಖಾತೆ ಮುಖೇಡಿಗಳು ಎಷ್ಟು ಸಂಖ್ಯೆಯಲ್ಲಿದ್ದಾರೋ ಗೊತ್ತಿಲ್ಲ. ಕೃತಕವಾದ ಪ್ರಾಬಲ್ಯದಿಂದ ಆರಂಭವಾದ ಇದು ನಿಧಾನಕ್ಕೆ ಸಮಾಜದಲ್ಲೇ ಒಂದು ಸನ್ನಿಯನ್ನು ಸೃಷ್ಟಿಸಿತು. ಈ ಸನ್ನಿಗೆ ಸಹಜ ಸಾಮಾಜಿಕ ನೆಲೆ ಮೇಲ್ಜಾತಿಗಳ, ಮಾತು ಬಲ್ಲ ವಿದ್ಯಾವಂತರಿಂದ ರೂಪುಗೊಂಡಿತು. ಇದಕ್ಕೆ ಯಾವ ಸೃಜನಶೀಲತೆಯ ಅಗತ್ಯವೇನೂ ಇಲ್ಲ. ಸುಳ್ಳು ಸಂದೇಶಗಳನ್ನು ಒಂದೇ ಸಮನೇ ಕಾಪಿ ಪೇಸ್ಟ್ ಅಥವಾ ಫಾರ್ವರ್ಡ್ ಮಾಡಲು ಯಾವ ಕೌಶಲ್ಯ ಬೇಕು? ಕೊನೆ ಮೊದಲಿಲ್ಲದ ರೀತಿಯಲ್ಲಿ ಜಾತಿ ಹಾಗೂ ವರ್ಗದ ಕಾರಣದಿಂದ ಹೊಟ್ಟೆ ತುಂಬಿಸಿಕೊಂಡಿದ್ದವರು ಊರೂರುಗಳಲ್ಲಿ, ಬೀದಿಬೀದಿಗಳಲ್ಲಿ ಸುಳ್ಳುಗಳ ಸೋಂಕನ್ನು ಹಬ್ಬಿಸಲಾರಂಭಿಸಿದರು.

ಇದರ ಕುರಿತು ಎಷ್ಟು ಹೇಳಿದರೂ ಸಾಲದು. ಈಗ ಪ್ರಶ್ನೆ ಇರುವುದು ಇದಲ್ಲ. ಇದರ ವಿರುದ್ಧದ ಇನ್ನೊಂದು ಧ್ರುವವೂ ಈಗ ಅಷ್ಟೇ ಬಿರುಸಿನಿಂದ ಸಮರದಲ್ಲಿ ತೊಡಗಿದೆ. ಕೋಮುವಾದದ ಅಪಾಯಕಾರಿ ಸೋಂಕಿಗೆ ಆಂಟಿಬಯಾಟಿಕ್‌ಗಳು ಸಿದ್ಧವಾಗಿವೆ. ತಿರುಗೇಟು ಕೊಡಲು ಸಿದ್ಧವಾಗಿರುವ ಪಡೆಯೂ ಬಲಗೊಳ್ಳುತ್ತಾ ಇದೆ. ಈ ಸದ್ಯ ಅಗತ್ಯವಿದೆ.

ಮೋದಿ ಭಕ್ತರು ಸುಮ್ಮನೇ ಬಕ್ವಾಸ್ ಬೊಗಳುತ್ತಿರುತ್ತಾರೆ ಎಂದೇ ಇಟ್ಟುಕೊಳ್ಳೋಣ. ಈ ಸದ್ಯ ಅವರ ತಲೆಯೊಳಕ್ಕೆ ಏನೂ ಇಳಿಯದು ಎಂತಲೂ ಇಟ್ಟುಕೊಳ್ಳೋಣ. ಅದರರ್ಥ, ಅವರು ಬಳಸಿದ ಭಾಷೆಯನ್ನೇ ನಾವೂ ಬಳಸುತ್ತಾ ಹೋಗುವುದೇ? ಅವರಿಗೆ ಅವರ ರೀತಿಯಲ್ಲೇ ಉತ್ತರ ಕೊಡಬೇಕು ಎಂಬುದೇ ಸರಿಯೇ? ಅವರ ಭಾಷೆಯಲ್ಲಿ ಕೊಟ್ಟರೆ ಸಾಲದು, ಅದಕ್ಕಿಂತ 'ಭೀಕರವಾದ' ಭಾಷೆಯಲ್ಲಿ ತಿರುಗೇಟು ಕೊಡಬೇಕು ಎಂಬ ವಾದವೂ ಇದೆ. ಹಾಗಾಗಿಯೇ ಸ್ವಿಸ್‌ಬ್ಯಾಂಕ್‌ನಲ್ಲಿ ಅಕೌಂಟ್ ಹೊಂದಿರುವವರು ಎಂದು ಸಂಘಪರಿವಾರದ ಕಾರ್ಖಾನೆಯಿಂದ ಒಂದು ಪಟ್ಟಿ ಹೊರಬಿದ್ದ ಕೆಲವು ದಿನಗಳ ನಂತರ ಇನ್ನೊಂದು ಕಡೆಯಿಂದ ಇನ್ನೊಂದು ಪಟ್ಟಿ ಹೊರಡುತ್ತದೆ. ಅದರಲ್ಲಿ ಕೆಲವು ಕಾಂಗ್ರೆಸ್ ಮತ್ತು ಜನತಾದಳದ ನಾಯಕರ ಹೆಸರುಗಳಿದ್ದರೂ, ಹೆಚ್ಚಿನ ಹೆಸರುಗಳು ಬಿಜೆಪಿಯವರದ್ದಾಗಿರುತ್ತದೆ. ಈ ಪಟ್ಟಿಗೂ ಯಾವುದೇ ಆಧಾರವಿರುವುದಿಲ್ಲ. ಫೋಟೋಶಾಪ್ ಸಾಫ್ಟ್‌ವೇರ್ ಒಬ್ಬರ ಗುತ್ತಿಗೆ ಮಾತ್ರವಲ್ಲವಾದ್ದರಿಂದ, ಇನ್ನೊಂದು ಕಡೆಯಿಂದಲೂ ಫೋಟೋಶಾಪ್ ಚಿತ್ರಗಳು ಬಿಡಿಸಲ್ಪಡುತ್ತವೆ. ಈ ರೀತಿ ಫೋಟೋಶಾಪ್ ಮಾಡಬಹುದು ಎಂದು ಗೊತ್ತಿರದ ಜನರೂ ಸಾಮಾಜಿಕ ಜಾಲತಾಣಗಳಲ್ಲಿರುತ್ತಾರೆ. ಅಂಥವರು ಇದನ್ನು ನಂಬುತ್ತಾರೆ. ಜೆಎನ್‌ಯು ಘಟನೆಗೆ ಸಂಬಂಧಿಸಿದಂತೆ 'ಉನ್ನತಮಟ್ಟ' ದಿಂದಲೇ ಸುಳ್ಳು ವಿಡಿಯೋ ತಯಾರಿಸಲಾಯಿತು. ಈಗಲೂ ಕನ್ಹಯ್ಯ ಕುಮಾರ್ ದೇಶವಿರೋಧಿ ಘೋಷಣೆ ಕೂಗಿದ್ದು ಸರಿಯೇ, ಅದನ್ನೇಕೆ ನೀವು ವಿರೋಧಿಸುವುದಿಲ್ಲ ಎಂದು ಬಿಜೆಪಿಯಲ್ಲದ ಸಾಮಾನ್ಯರೂ ಆಗಾಗ ಕೇಳುತ್ತಿರುತ್ತಾರೆ. ಹಾಗಾಗಿ, ಸುಳ್ಳು ವಿಡಿಯೋಗೆ ನಾವೊಂದು ಸುಳ್ಳು ವಿಡಿಯೋ ತಯಾರಿಸಬೇಕು ಎಂದು ಹೊರಟು ನಿಂತರೆ ಏನಾಗುತ್ತದೆ? ಅನಾರೋಗ್ಯಕರ ಸಂವಾದ ಸಮಾಜದಲ್ಲಿ ನೆಲೆಯೂರಲಾರಂಭಿಸುತ್ತದೆ.



ಬಲಪಂಥೀಯ ಸೈನ್ಯಕ್ಕೂ ಇದಕ್ಕೂ ಸಂಖ್ಯೆಯಲ್ಲಿ ಹೋಲಿಕೆಯಿಲ್ಲವಾದರೂ, ಕ್ರಿಯಾಶೀಲತೆಯಲ್ಲಿ, ಸೃಜನಾತ್ಮಕತೆಯಲ್ಲಿ ಈ ಗುಂಪಿನ ಸಾಮರ್ಥ್ಯ ಕೆಲವೊಮ್ಮೆ ಅದನ್ನು ಮೀರಿ ಸಾಗುತ್ತದೆ. ಹಾಗಾಗಿ, ಪ್ರಜಾತಂತ್ರದ ಬಗೆಗಿನ ಕಾಳಜಿಯಿಂದ, ಇನ್ನೊಂದು ಧ್ರುವದ ಬಗ್ಗೆಯೇ ಕೆಲವು ಒಳಗಿನ ಮಾತುಗಳನ್ನು ಆಡಿಕೊಳ್ಳುವ ಅಗತ್ಯವಿದೆಯೆನಿಸುತ್ತದೆ.

ಈ ವಾಗ್ವಾದವು ಸಮರದ ರೂಪ ತಾಳಿರುವುದರಿಂದ, ಇಂದು ಉತ್ಪ್ರೇಕ್ಷೆ ಮತ್ತು ಸುಳ್ಳುಗಳು ಒಂದು ಕಡೆಗೆ ಸೀಮಿತವಾಗಿಲ್ಲ. ಮೇಲ್ನೋಟಕ್ಕೇ ತಮ್ಮವರು ಮಾಡಿದ್ದೆಲ್ಲಾ ಸರಿ, ಬೇರೆಯವರು ಮಾಡಿದ್ದೆಲ್ಲಾ ತಪ್ಪು ಎನ್ನುವ ಧೋರಣೆಯಿಂದಲೇ ಚರ್ಚೆ ಆರಂಭವಾಗುತ್ತದೆ. ಯಾವ ವಿಚಾರದ ಸುತ್ತ ಚರ್ಚೆ ನಡೆಯುತ್ತಿರುತ್ತದೋ ಅಲ್ಲಿಂದ ಸೀದಾ, ಚರ್ಚೆ ಮಾಡುತ್ತಿರುವವರ ಮೇಲೆ ನಿಂದನೆಗಳ ಮಳೆ ಸುರಿಯುತ್ತದೆ. ಕೋಮುವಾದಿ ಮನಸ್ಥಿತಿ ಇಟ್ಟುಕೊಂಡಿದ್ದಾರೋ ಇಲ್ಲವೋ, 'ಅಭಿವೃದ್ಧಿಯ ಮಾಯಾಜಾಲ'ಕ್ಕೆ ಸಿಕ್ಕಿ ಆ ಕಡೆ ಗುಂಪಿಗೆ ಹೋಗಿದ್ದಾರೋ ಯಾವುದನ್ನೂ ನೋಡದೇ ನಿಂದಾಪ್ರಹಾರ ನಡೆಯುತ್ತದೆ. ಕೂಡಲೇ ಆ ಕಡೆಯವರ ತಲೆಗೆ 'ಭಕ್ತ' ಎನ್ನುವ ಪಟ್ಟಿ ಅಂಟಿಸಲಾಗುತ್ತದೆ. ನಂತರ ಭಕ್ತರು ಎಂದಮೇಲೆ ಬಕ್ವಾಸ್ ಭಕ್ತರು, ಭಕ್ತರ ತಲೆಯಲ್ಲಿ ಸೆಗಣಿಯಲ್ಲದೇ ಇನ್ನೇನು ಇರಲು ಸಾಧ್ಯ ಇತ್ಯಾದಿ ಇತ್ಯಾದಿ ಮುಂದುವರೆಯುತ್ತದೆ. ಎಲ್ಲರೂ ಹೀಗೆ ಮಾಡುತ್ತಾರೆ ಎಂದೇನೂ ಅಲ್ಲ, ಆದರೆ, ಜಾತಿ ಮೇಲರಿಮೆಯ ಅಸಹನೆ, ಕುಂತಲ್ಲೇ ಸುಳ್ಳು ಸೃಷ್ಟಿ, ಎಂದೂ ದೇಶಕ್ಕಾಗಿ ಸಣ್ಣ ಕಿರಿಕಿರಿಯನ್ನೂ ಸಹಿಸಿಕೊಳ್ಳಲಾರದವರು ಸೈನ್ಯ-ಸೈನಿಕರ ಕಷ್ಟದ ಕುರಿತು ಮಾತಾಡುವುದು ಇವೆಲ್ಲಾ ನೋಡಿ ಸಿಟ್ಟು ಬರದೇ ಇರುತ್ತದೆಯೇ? ಹೀಗಾಗಿ ಒಳಗಿಂದ ಬರುವ ಕುದಿಯನ್ನು ಒಂದೇಸಮನೆ ಕಾರಿಕೊಳ್ಳಲೇಬೇಕು ಬೇರೆ ದಾರಿಯಿಲ್ಲ ಎಂದು ತೀರ್ಮಾನಿಸಿ ದಾಳಿ ನಡೆಸಲಾಗುತ್ತದೆ. ಅಂತಿಮವಾಗಿ ಇವೆಲ್ಲದರ ಪರಿಣಾಮ ಏನಾಗಬಹುದೆಂಬುದನ್ನು ಕೆದಕಿ ನೋಡುವ

ಈ ರೀತಿಯ ಅನಾರೋಗ್ಯಕರ ಸಂವಾದ ಕೊನೆಗೆ ಮೋದಿ ಪರ ಅಥವಾ ವಿರೋಧಕ್ಕೆ ನಿಲ್ಲುವುದಿಲ್ಲ. ಮೋದಿಯ ಪರ ನಿರಂತರ ಉತ್ಪಾದನಾ ಸಾಮರ್ಥ್ಯ ಇರುವ ಹಲವಾರು ಸುಳ್ಳಿನ ಫ್ಯಾಕ್ಟರಿಗಳು ಇರುವುದು ನಿಜವೇ. ಆದರೆ, ಸುಳ್ಳಿಗೆ ಸುಳ್ಳಿನ ಎದಿರೇಟು ನಿಧಾನಕ್ಕೆ ನಾವು ನಮ್ಮ ನಮ್ಮೊಳಗೇ ಅಂತಹ ಸುಳ್ಳುಗಳನ್ನು ಹೇಳಿಕೊಳ್ಳುವ ಅಭ್ಯಾಸ ಮಾಡಿಸುವುದಿಲ್ಲವೆಂಬ ಖಾತರಿ ಇಲ್ಲ. ಇದುವರೆಗೆ ಗೆಳೆಯರಾಗಿದ್ದವರೂ, ಸ್ವಲ್ಪ ಭಿನ್ನಾಭಿಪ್ರಾಯ ಬಂತೆಂದರೆ ಅದೇ ಭಾಷೆಯಲ್ಲಿ ಬೈದುಕೊಳ್ಳಲು ಹೇಸುವುದಿಲ್ಲ. ಏಕೆಂದರೆ, ಅಷ್ಟು ಹೊತ್ತಿಗೆ ಇದು ಸಾರ್ವಜನಿಕ ಸಂವಾದದ ರೀತಿ ಆಗಿಬಿಟ್ಟಿರುತ್ತದೆ.

ಈ ಸಾರ್ವಜನಿಕ ಸಂವಾದವು, ಸಾರ್ವಜನಿಕ ಸಂಗತಿಗಳಿಗೆ ಮಾತ್ರ ಸೀಮಿತವಾಗಿಲ್ಲ. ಅದು ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳ ಖಾಸಗಿ ಜೀವನದೊಳಕ್ಕೂ ಲಗ್ಗೆ ಇಡುತ್ತದೆ. ಪುರಾವೆಗಳಿಲ್ಲದ, ಆದರೆ ಯಾರಿಗೋ ಗುಮಾನಿ ಮಾತ್ರ ಬಂದಿರಬಹುದಾದ ಅಥವಾ ಪುರಾವೆಗಳಿದ್ದರೂ ಅದು ಇನ್ನಾರದೋ ಖಾಸಗಿ ವಿಚಾರ ಮಾತ್ರವಾಗಿರುವ ಸಂಗತಿಗಳೆಲ್ಲಾ, ಎಲ್ಲರ ಬಾಯ ಎಲೆ ಅಡಿಕೆಗಳಾಗಿ ಜಗಿಯಲ್ಪಡುತ್ತಿರುವ ಕಾಲದಲ್ಲಿ ನಾವಿದ್ದೇವೆ. ಒಂದುವೇಳೆ ಆ ಗುಮಾನಿ ನಿಜವಾಗಿದ್ದರೂ, ಯಾರ್ಯಾರದೋ ಖಾಸಗಿ ಸಂಗತಿಗಳ ಕುರಿತು ನೈತಿಕ-ಅನೈತಿಕ ತೀರ್ಪುಗಳನ್ನು ನೀಡುವ ಅಧಿಕಾರವನ್ನು ನಮಗೆ ಯಾರೂ ಕೊಟ್ಟಿಲ್ಲ. ಒಂದು ವೇಳೆ ಅದು ಸುಳ್ಳಾಗಿದ್ದರೆ ಆಗ ನಾವು ಇನ್ನೂ ದೊ… ತಪ್ಪು ಮಾಡಿದ್ದೇವೆಂದೇ ಅರ್ಥ. ಕೆಲವು ಸಾರಿ ಸಾರ್ವಜನಿಕ ಜೀವನದಲ್ಲಿರುವ ಗಂಡಿನ ಜೊತೆ ಇನ್ನಾರದೋ ಮಹಿಳೆಯ ಹೆಸರು ತಳುಕು ಹಾಕಿಕೊಂಡಿರುತ್ತದೆ. ನಮ್ಮ ಗುರಿಯಾಗಿರುವ ಗಂಡಸನ್ನು ಹೀಗಳೆಯುವ ದೃಷ್ಟಿಯಿಂದ ಆ ಮಹಿಳೆಯನ್ನೂ ಇನ್ನಿಲ್ಲದಂತೆ ಜಾಲಾಡಲಾಗಿರುತ್ತದೆ.

ಮಹಿಳೆಯರು ಸಾರ್ವಜನಿಕ ಕ್ಷೇತ್ರಕ್ಕೆ ಕಾಲಿಟ್ಟು ಜೈಸಿಕೊಳ್ಳುವುದು ಸಲೀಸಾದ ಬಾಬತ್ತೇ ಅಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ಇರುವವರು ಬಹುತೇಕರು ಗಂಡಸರೇ ಆಗಿರುವಾಗ ಆಕೆ ಗಂಡಸರ ಜೊತೆ ಮಾತಾಡದೇ, ನಾಲ್ಕು ಜಾಗಗಳಿಗೆ ಹೋಗದೇ, ಪ್ರೀತಿವಿಶ್ವಾಸದಿಂದ ಬೆರೆಯದೇ ಏನನ್ನಾದರೂ ಸಾಧಿಸುವುದು ಕಷ್ಟ. ಆ ಎಲ್ಲಾ ಸಹಜ ಅಥವಾ ಕಷ್ಟದ ನಡವಳಿಕೆಗಳಿಗೆ ನೂರೆಂಟು ಅರ್ಥಗಳು ಬಂದುಬಿಡುತ್ತವೆ. ಸೈದ್ಧಾಂತಿಕವಾಗಿ ನಮಗೆ ವಿರೋಧಿಗಳು ಎನ್ನುವ ಕಾರಣಕ್ಕೆ ಅಥವಾ ಆ ಅ… ವ್ಯಕ್ತಿಗಳು (ಮಹಿಳೆಯೂ ಸೇರಿದಂತೆ) ಬೇರೆಯವರ ಬಗ್ಗೆ ತಪ್ಪಾಗಿ ನಡೆದುಕೊಳ್ಳುತ್ತಿದ್ದಾರೆ ಎನ್ನುವ ಕಾರಣ… ನಾವು ಅವರ ಕುರಿತು ಬೀಸು ಹೇಳಿಕೆಗಳನ್ನು ಬಿಸಾಡಬಹುದೇ?

ಇಂತಹ ಸಾರ್ವಜನಿಕ ವಾಗ್ವಾದದ ತಪ್ಪು ಮಾದರಿಯನ್ನು ಆರಂಭಿಸಿದ್ದು ಆರೆಸ್ಸೆಸ್ ಮಾತ್ರವ… ಅದನ್ನು ನಾವೆಲ್ಲರೂ ಗೌರವಿಸುವ ಹಲವು ಹಿರಿಯ… ಯಾವ್ಯಾವುದೋ ಕಾಲದಲ್ಲಿ ಬಳಸಿದ್ದಾರೆ. ಆದರೆ ಆ ಮಾದರಿಯನ್ನು ನೂರ್ಮಡಿ ಬೆಳೆಸಿದ್ದು, ಅದನ್ನೇ ಒಂದು ವಿಧಾನವನ್ನಾಗಿ ಬಳಸಿದ್ದು ಮಾತ್ರ ಕೋಮು ವಾದಿ ಸಂತಾನವೇ ಆಗಿದೆ. ಇದರ ಪೂರ್ವಸೂರಿ ಯಾಗಿ ಮತ್ತು ಐಕಾನ್ ಆಗಿ 20ನೇ ಶತಮಾನದ… ಗೊಬೆಲ್ಸ್ ಮಹಾಶಯ ಆಗಿಹೋಗಿದ್ದಾನೆ. ಈಗೊ… 30 ವರ್ಷಗಳ ಕೆಳಗೆ ಅದನ್ನು ಒಂದು ಐತಿಹಾಸಿ… ಪಾಠವಾಗಿ ಮಾತ್ರ ಕೇಳುತ್ತಿದ್ದ ನಮಗೆ, ಇಂದು ಅ… ನಿತ್ಯ ಎದುರುಗೊಳ್ಳುವ ಸಂಗತಿಯಾಗಿಬಿಟ್ಟಿದೆ. ಆದೇ… ಇದ್ದರೂ, ಸುಳ್ಳನ್ನು ಸತ್ಯದಿಂದ ಮಾತ್ರ ಎದುರಿಸುವ ನಿಷ್ಠುರ ವ್ರತವನ್ನು ಪಾಲಿಸಲೇಬೇಕಾಗಿದೆ. ಪುರಾವೆಗಳಿಲ್ಲದೇ ಸಾರ್ವಜನಿಕ ಸಂಗತಿಯನ್ನೂ ಬೇಕಾಬಿಟ್ಟಿ ಎಳೆದಾಡುವುದಿಲ್ಲವೆಂಬ ನಿಯಮವನ್ನು ನಮಗೆ ನಾವೇ ಹಾಕಿಕೊಳ್ಳಬೇಕಿದೆ. ಎಷ್ಟೇ ದುಷ್ಟರಾದರೂ, ಅಪಾರ್ಥಭೂತಿಗಳಾದರೂ ಇನ್ನೊಬ್ಬರ ಖಾಸಗಿ ಸಂಗತಿಗಳನ್ನು ನೂರೆಂಟು ರೀತಿಯ ಕಾರಣ ಹುಡುಕಿ, ಅದನ್ನು ಸಾರ್ವಜನಿಕಗೊಳಿಸುವ ಕೆಲಸ ಮಾಡಬಾರದು. ಇಲ್ಲವಾದರೆ, ನಮ್ಮ ಟಿ.ವಿ. ಮಾಧ್ಯ… ಹಾಗೂ ಕೆಲವು ಪತ್ರಿಕೆಗಳು ನಡೆಸುತ್ತಿರುವ ಅಸಹ್ಯಕ… ದುಷ್ಟತನವನ್ನು ವಿರೋಧಿಸುವ ನೈತಿಕತೆ ನಮಗೂ ಇಲ್ಲವಾದೀತು. ಈ ಮಾತುಗಳನ್ನು ಇನ್ನಾರಿಗೋ ಹೇಳುತ್ತಿರುವಂತೆ, ಪೀಠದ ಮೇಲಿಂದ ಉಳಿದವರಿಗೆ ಬೋಧಿಸುತ್ತಿರುವಂತೆ ಕಂಡರೆ ಕ್ಷಮಿಸಬೇಕೆಂದೂ, ಅದನ್ನು ಬರವಣಿಗೆಯ ಮಿತಿ ಎಂದಷ್ಟೇ ಪರಿಗಣಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಒಂದು ರೀತಿಯಲ್ಲಿ ಇದು ಸ್ವಗತವಾಗಿದೆ.

ಕೊನೆಯದಾಗಿ,

ಎಡಪಂಥವೂ ಅಲ್ಲ, ಬಲಪಂಥವೂ ಅಲ್ಲ ಮಧ್ಯಮಮಾರ್ಗ ಎಂದು ಕೆಲವರು ಪ್ರತಿಪಾದಿಸಲು ಹೊರಟಿದ್ದಾರೆ. ಅವರು ಇಂತಹ ಧ್ರುವೀಕರಣದಿಂದ ರೋಸಿ ಹೋಗಿ ಬೇರೊಂದು ದಾರಿ ಹಿಡಿದಿದ್ದಾರೆ ಎಂದೇನೂ ಭಾವಿಸುವಂತಿಲ್ಲ. ಅದು, ಎಡಪಂಥದ ರಿಸ್ಕಿಗೆ ಸಿದ್ಧವಿಲ್ಲದೇ, ಬಲಪಂಥ ಎಂದು ಈಗಲೇ ಬಹಿರಂಗವಾಗಿ ಘೋಷಿಸಿಕೊಳ್ಳುವುದು ಬೇಡ ಎಂಬ ಭಾವನೆಯಿಂದ ಹುಡುಕಿಕೊಂಡ ಅವಕಾಶವಾದಿ ಮಾರ್ಗ ಅಷ್ಟೇ. ಫ್ಯಾಸಿಸ್ಟ್ ಯುಗದಲ್ಲಿ ಎಂತಹ … ಎಡಪಂಥವಾದರೂ, ಅದು ಮಧ್ಯಮಮಾರ್ಗಕ್ಕಿಂತ ಒಳ್ಳೆಯದೇ ಆಗಿರುತ್ತದೆ. ಸಮಸ್ಯೆ ಇರುವುದು … ಎಂದರೆ, ಒಳ್ಳೆಯ ಎಡಪಂಥವೂ, ತನ್ನೊಂದಿಗೆ ಇರಬಹುದಾದವರನ್ನು, ಇರಲೇಬೇಕಾದವರನ್ನು ಇನ್ನೊಂದು ಕಡೆಗೆ ತಳ್ಳಿಬಿಡುವುದರಲ್ಲಿ ಮತ್ತು ತಾನು ಯಾವುದನ್ನು ವಿರೋಧಿಸುತ್ತಿದೆಯೋ ತಾನೂ ಅದ… ವಿಧಾನಗಳನ್ನು ನಕಲು ಮಾಡುವುದರಲ್ಲಿ

ಮಾನ ಉಳಿಸಿಕೊಳ್ಳಲು ಮಾನಗೆಟ್ಟ ಕಸರತ್ತುಗಳು

ಐನೂರು ಮತ್ತು ಸಾವಿರ ರೂಪಾಯಿಗಳ ...ಾನ್ಯೀಕರಣದಿಂದಾಗಿ ಕರಗುತ್ತಿರುವ ಮಾನವನ್ನು ...ಳಿಸಿಕೊಳ್ಳಲು ಮೋದಿ ಸರ್ಕಾರ ಮಾನಗೆಟ್ಟ ಹೊಸ ...ರತ್ತುಗಳನ್ನು ಮಾಡುತ್ತಿದೆ. ಅವುಗಳಲ್ಲಿ ಒಂದು ಡಿಸೆಂಬರ್ ...ರ ನಂತರ ಐದು ಸಾವಿರಕ್ಕಿಂತ ಹೆಚ್ಚು ಹಣವನ್ನು ... ನೋಟುಗಳ ಲೆಕ್ಕದಲ್ಲಿ ಬ್ಯಾಂಕ್ ಖಾತೆಗೆ ಹಾಕುವಂತಿಲ್ಲ ...ದದ್ದು ಮತ್ತು ಎರಡೇ ದಿನಗಳಲ್ಲಿ ಆ ನಿರ್ಧಾರವನ್ನು ...ರಲಿಸಿದ್ದು.


ಮೊದಮೊದಲು ಮೋದಿಯ ಈ ಹುಚ್ಚು ಕ್ರಮವನ್ನು ...ನ ಭಕ್ತರು ಮಾತ್ರವಲ್ಲ, ದೇಶದ ಹೆಚ್ಚು ಜನ ಮೆಚ್ಚಿದ್ದರು. ...ದರಿಂದಾಗಿ ಕಪ್ಪು ಹಣ ಮಾಯವಾಗುತ್ತೆ, ನಕಲಿ ...ೇಟುಗಳು ಬಂದ್ ಆಗುತ್ತೆ, ಭಯೋತ್ಪಾದನೆ ನಿಂತು ...ೇಗುತ್ತೆ, ದೇಶದ ಆರ್ಥಿಕ ಸ್ಥಿತಿ ಉದ್ಧಾರವಾಗುತ್ತೆ, ...ರ ಜೇಬುಗಳಿಗಲ್ಲದಿದ್ದರೂ ಬ್ಯಾಂಕ್ ಖಾತೆಗಳಿಗಂತೂ ...ಂತರ ರೂಪಾಯಿಗಳು ಜಮೆ ಆಗುತ್ತೆ ಎಂದು ...ಬಿದ್ದರು. ಇಂತಹ ಐತಿಹಾಸಿಕ ಕ್ರಮ ಕೈಗೊಳ್ಳುವುದಕ್ಕೆ ...ೇದಿಯಂತಹ ದಿಟ್ಟ ವ್ಯಕ್ತಿ ಪ್ರಧಾನಿ ಆಗಬೇಕಿತ್ತು; ...ರಿಂದ ಕೆಲ ದಿನಗಳ ಕಾಲ ಸಮಸ್ಯೆಗಳು ಎದುರಾದರೂ ...ವಾಗಿಲ್ಲ ದೇಶಕ್ಕಾಗಿ ಅಷ್ಟನ್ನಾದರೂ ಮಾಡದಿದ್ದರೆ ಹೇಗೆ ...ಬ ಭಾವನೆಯಲ್ಲೇ ಮುಳುಗಿದ್ದ ಜನ ಎಲ್ಲವನ್ನೂ ...ಸಲು ಸಿದ್ಧರಾಗಿದ್ದರು.

ಆದರೆ ಮೋದಿ ಮಾಡಿದ್ದು ದೊಡ್ಡ ವಂಚನೆ ಎಂಬುದು ...ನಕ್ಕೆ ಕೆಲವರಿಗಾದರೂ ಅರ್ಥವಾಗಲಾರಂಭಿಸಿತು. ಅದಕ್ಕೆ ...ಯಾಗಿ ಮೋದಿ ಸರ್ಕಾರ ದಿನಕ್ಕೊಂದು ನಿರ್ಧಾರವನ್ನು ...ದುಕೊಳ್ಳುತ್ತಾ ದೇಶದ ಜನರನ್ನೆಲ್ಲ ಮಂಗಗಳನ್ನಾಗಿಸಿತು. ...ದು ಅಂದಾಜಿನ ಪ್ರಕಾರ ನವೆಂಬರ್ 8ರಂದು ಹಳೆ ...ೇಟುಗಳನ್ನು ಅನಾಣ್ಯೀಕರಿಸಿದ ನಂತರ ಈ ಕುರಿತಂತೆಯೇ ...ದ್ರ ಸರ್ಕಾರ 48 ದಿನಗಳಲ್ಲಿ ತನ್ನ ನಿಯಮಗಳನ್ನು ... ಬಾರಿ ತಿದ್ದಿದೆ.

ಅದರಲ್ಲಿ ಲೇಟೇಸ್ಟ್ ತಿದ್ದುಪಡಿ ಡಿಸೆಂಬರ್ 19ರ ...ರ ಹಳೆಯ ಐನೂರು ಮತ್ತು ಒಂದು ಸಾವಿರ ...ೇಟುಗಳ ರೂಪದಲ್ಲಿ ಐದು ಸಾವಿರಕ್ಕಿಂತ ಹೆಚ್ಚನ್ನು ...ಕ್ ಖಾತೆಗೆ ಹಾಕುವಂತಿಲ್ಲ ಎಂದದ್ದು.

ಜನರು ಹತಾಶರಾದಾಗ ಅವರು ವ್ಯಂಗ್ಯದ ಮೊರೆ ...ೇಗುತ್ತಾರೆ. "ದೇಶದ ಆರ್ಥಿಕ ಸ್ಥಿತಿಯನ್ನು ...ಾರಿಸುತ್ತೇನೆ, ನನಗೆ ಕೇವಲ ಐವತ್ತು ದಿನಗಳ ...ಾವಕಾಶ ಕೊಡಿ" ಎಂದಿದ್ದ ಮೋದಿಯ ತುಘಲಕ್ ...ರದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಜನ ...ಕಿಗಳನ್ನು ಹಾರಿಸಲಾರಂಭಿಸಿದರು.

ಪ್ರಶಾಂತ್ ಭೂಷಣ್ ಅವರು "ಇನ್ನು ಮುಂದೆ ...ನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಎಂದು ...ಯುವ ಬದಲು ರಿವರ್ಸ್ ಬ್ಯಾಂಕ್ ಆಫ್ ಇಂಡಿಯಾ ...ದು ಕರೆದರೇ ಸೂಕ್ತ" ಎಂದು ಟ್ವೀಟ್ ಮಾಡಿದರು. ...ವ ವಕೀಲೆ ರಾಜಲಕ್ಷ್ಮಿ ಅಂಕಲಗಿ "ನಮ್ಮ ಆರ್‌ಬಿಐ ...ಸುತ್ತಿರುವವರು ಆರ್ಥಿಕ ತಜ್ಞರೋ ಅಥವಾ ಇನ್ನೂ ...ೇತಿ ಪಡೆಯುತ್ತಿರುವ ಗ್ರಾಮೀಣ ಲೆಕ್ಕಿಗರೋ" ಎಂಬ




ಗುಮಾನಿಯನ್ನು ವ್ಯಕ್ತಪಡಿಸಿದರು.

ಸಿದ್ಧಾರ್ಥ್ ಭಾಟಿಯಾ ಎಂಬುವವರು "ದಶಕಗಳಿಂದ ಆರ್‌ಬಿಐ ಕಾಪಾಡಿಕೊಂಡು ಬಂದಿದ್ದ ವಿಶ್ವಾಸಾರ್ಹತೆ ಮತ್ತು ತರ್ಕಸಮ್ಮತಿ ಎರಡೇ ತಿಂಗಳಲ್ಲಿ ನಾಶವಾಯಿತು" ಎಂದು ವಿಷಾದಿಸಿದರು.

ನಿನ್ನೆ ಯೋಗೇಂದ್ರ ಯಾದವ್ ಅವರು ತಮ್ಮ ಅಕೌಂಟಿಗೆ ಹಣ ಜಮೆ ಮಾಡಲು ಹೋದಾಗ ಅವರು ಇದಕ್ಕೂ ಮುನ್ನವೇ ಯಾಕೆ ಹಳೆ ನೋಟುಗಳನ್ನು ಜಮೆ ಮಾಡಲಿಲ್ಲ ಎಂದು ಕೇಂದ್ರ ಸರ್ಕಾರದ ಆದೇಶದಂತೆ ವಿವರಿಸಬೇಕೆಂದು ಬ್ಯಾಂಕಿನವರು ಹೇಳಿದರು. ಅದಕ್ಕೆ ಯಾದವ್ ಅವರು ಕೊಟ್ಟ ಉತ್ತರ ಹೀಗಿತ್ತು: "ನಾನು ನವೆಂಬರ್ 8ರ ನಂತರ ನನ್ನ ಅಕೌಂಟಿಗೆ ಯಾವುದೇ ಹಣವನ್ನು ಜಮೆ ಮಾಡಿರಲಿಲ್ಲ, ಯಾಕೆ ಮಾಡಿರಲಿಲ್ಲ ಎಂದು ವಿಶೇಷವಾಗಿ ಸ್ಪಷ್ಟಪಡಿಸುವ ಜರೂರತ್ತು ನನಗೆ ಕಂಡುಬರುತ್ತಿಲ್ಲ, ಸಾಮಾನ್ಯವಾಗಿ ಜನರು ಸಾಲುಗಟ್ಟಿ ನಿಲ್ಲುವ ಅವಶ್ಯಕತೆ ಅಂತ್ಯಗೊಳ್ಳುವವರೆಗೂ ಕಾಯುವವನು ನಾನು. ನಮ್ಮ ಪ್ರಧಾನಿ, ಅರ್ಥಮಂತ್ರಿ ಮತ್ತು ಆರ್‌ಬಿಐ ಅಧಿಕಾರಿಗಳು ಬ್ಯಾಂಕಿಗೆ ಧಾವಿಸುವ ಅಗತ್ಯತೆ ಇಲ್ಲ, ಡಿಸೆಂಬರ್ 30ರ ತನಕ ಕಾಲಾವಕಾಶ ಇದೆ ಎಂದು ಹೇಳಿದ್ದರು. ಅವರನ್ನು ನಾನು ನಂಬಿದ್ದೆ."

ಹಾಗೆಯೇ ಪಿಯು ಎಂಬ ಯುವತಿ "ಮುಂಚೆಯೇ ಹಾಕಬಹುದಿತ್ತು. ಆದರೆ ಹಾಕಲಿಲ್ಲ, ಯಾಕೆಂದರೆ ಸರ್ಕಾರದಲ್ಲಿ ನನಗೆ ನಂಬಿಕೆ ಇತ್ತು, ಅದೇ ಇವತ್ತು ಯಡವಟ್ಟು ಆಗಿರುವುದು" ಎಂದು ಬ್ಯಾಂಕ್ ಅಧಿಕಾರಿಗಳು ಕೊಟ್ಟ 'ಸ್ಪಷ್ಟೀಕರಣದ ದಾಖಲೆ'ಯಲ್ಲಿ ಬರೆದದ್ದನ್ನು ಹಂಚಿಕೊಂಡಳು. ಸುನೀತ್ ಸಿಂಗ್ ಎಂಬುವವರು "ಯಾಕೆ ಹಾಕಿರಲಿಲ್ಲ ಅಂದರೆ ಡೆಡ್‌ಲೈನ್ ಡಿಸೆಂಬರ್ 30 ಅಂದಿದ್ದರಿಂದ" ಎಂದು ತಮ್ಮ ಕೋಪ ಕಾರಿಕೊಂಡರು.



ಇನ್ನೊಬ್ಬರು ಈ ಅನಾಣ್ಯೀಕರಣದ ಬಗ್ಗೆ ಮೋದಿ ಸರ್ಕಾರ ನೀಡಿದ್ದ ಜಾಹೀರಾತಿನ ಪ್ರತಿಯನ್ನು ಬ್ಯಾಂಕಿಗೆ ಸಲ್ಲಿಸಿದರು. ಆ ಜಾಹೀರಾತಿನಲ್ಲಿ "30 ಡಿಸೆಂಬರ್ 2016 ತಕ್ ಕೋಹೀ ಭೀ ರೂ. 2,50,000 ಜಮಾ ಕರಾ ಸಕ್ತಾ ಹೈ" ಎಂದು ಹೇಳಲಾಗಿತ್ತಲ್ಲದೆ "ಮೇರಾ ಪೈಸಾ ಸುರಕ್ಷಿತ್ ಹೈ" ಎಂದು ಒಬ್ಬ ಮಹಿಳೆ ಸಂತುಷ್ಟಳಾಗಿರುವ ಚಿತ್ರವೂ ಇದೆ.

ಹೀಗೆ ಮೋದಿ ಸರ್ಕಾರದ ತುಘಲಕ್ ತರ್ಕಗಳಿಂದಾಗಿ ಗೊಂದಲಗಳ ಮೇಲೆ ಗೊಂದಲಗಳು ಸೃಷ್ಟಿಯಾಗುತ್ತಿವೆಯೇ ಹೊರತು ಅವು ಕಡಿಮೆಯಂತೂ ಆಗುತ್ತಿಲ್ಲ. ಇವೆಲ್ಲವುಗಳ ಮಧ್ಯೆ ಹೊಸ 2,000 ರೂಪಾಯಿಗಳ ಕುರಿತೂ ಈಗ ಹೊಸ ಗೊಂದಲಗಳು ಶುರುವಾಗಿವೆ. ಅದೇನೆಂದರೆ ಸದ್ಯದಲ್ಲೇ ಈ ಹೊಸ ನೋಟನ್ನು ನಿಷೇಧಿಸಲಾಗುತ್ತದೆ ಎಂಬ ಸುದ್ದಿ! ಈ ಕುರಿತು ರೋಹನ್ ವೆಂಕಟರಾಮಕೃಷ್ಣನ್ ಎಂಬುವವರು ಸ್ಕ್ರೋಲ್.ಇನ್ ನಲ್ಲಿ ಒಂದು ಹಾಸ್ಯ ಲೇಖನ ಬರೆದಿದ್ದಾರೆ. ಅದರ ಸಾರಾಂಶ ಹೀಗಿದೆ:

"ಭಾರತದ ಹೊಸ 2000 ರೂಪಾಯಿ ನೋಟು ರಹಸ್ಯ ಜಿಪಿಎಸ್ ಚಿಪ್ ಹೊಂದಿರುವ ಪಿಂಕ್ ಬಣ್ಣದ ಒಗಟು. ನರೇಂದ್ರ ಮೋದಿ ನೋಟುಗಳನ್ನು ಅನಾಣ್ಯೀಕರಣಗೊಳಿಸುವ ಮುನ್ನವೇ ಹೀಗೊಂದು ಕ್ರಮವನ್ನು ಸದ್ಯದಲ್ಲೇ ತೆಗೆದುಕೊಳ್ಳಲಿದ್ದಾರೆ ಎಂಬ ಸೂಚನೆಗಳು ಹೊರಬಿದ್ದಿದ್ದವು. ಅದಕ್ಕೆ ಇಂಬುಕೊಡುವಂತೆ ಹಿಂದೂ ಬಿಸಿನೆಸ್‌ಲೈನ್ ಪತ್ರಿಕೆ 2000 ರೂಪಾಯಿಗಳ ನೋಟನ್ನು ಪರಿಚಯಿಸಲಿದ್ದಾರೆ ಎಂದು ವರದಿ ಮಾಡಿತ್ತು, ಇದಾದ ಕೆಲದಿನಗಳಲ್ಲೇ ಹೊಸ ನೋಟಿನ ಚಿತ್ರಗಳು ಲೀಕ್ ಆಗಿದ್ದವು.

ನವೆಂಬರ್ 8ರಂದು ಮೋದಿ ಅನಾಣ್ಯೀಕರಣವನ್ನು ಪ್ರಕಟಿಸಿದಾಗಲೇ ಹೊಸ 2000 ನೋಟಿನ ಬಗ್ಗೆಯೂ ಪ್ರಸ್ತಾಪಿಸಿದರು. ಅದನ್ನು ಕೇಳಿ ಜನರು ದಿಗ್ಭ್ರಮೆಗೊಂಡಿದ್ದರು. ಯಾಕೆಂದರೆ 500 ಮತ್ತು 1000 ರೂಪಾಯಿ ನೋಟುಗಳನ್ನು ರದ್ದುಗೊಳಿಸಿರುವಾಗ ಅದಕ್ಕಿಂತ ಹೆಚ್ಚಿನ 2000 ರೂಪಾಯಿ ನೋಟು ಹೇಗೆ ಕಪ್ಪು ಹಣ ಸಂಗ್ರಹಣೆಯನ್ನು ತಡೆಯುತ್ತದೆ ಎಂದು ಜನ ತರ್ಕಿಸಿದ್ದರು.

ಆಗ ಮೋದಿ ಪರವಾಗಿರುವ ಹಲವು ಟಿವಿ ಚಾನೆಲ್‌ಗಳು ಮತ್ತು ಬಿಜೆಪಿಯ ಹಿಂಬಾಲಕರು ಹೊಸ ನೋಟಿನಲ್ಲಿ ನ್ಯಾನೋ ಜಿಪಿಎಸ್ ಇರುತ್ತೆ, ಅದನ್ನು ಭೂಮಿಯಲ್ಲಿ 120 ಮೀಟರ್ ಅಡಿ ಹೂತಿಟ್ಟರೂ ಸ್ಯಾಟಲೈಟುಗಳು ಅದನ್ನು ಪತ್ತೆ ಹಚ್ಚುತ್ತವೆ ಎಂಬ ಕಟ್ಟುಕತೆಯನ್ನು ಪ್ರಚಾರ ಮಾಡಿದರು. ಆಗ ತಕ್ಷಣವೇ ಸ್ವತಃ ಆರ್‌ಬಿಐ "ಹೊಸ ನೋಟಿನಲ್ಲಿ ಅಂತಹ ಚಿಪ್ ಇಲ್ಲ, ಮಾತ್ರವಲ್ಲ ಅಂತಹ ತಂತ್ರಜ್ಞಾನವೇ ಇನ್ನೂ ಜಗತ್ತಿನ ಯಾವುದೇ ಭಾಗದಲ್ಲಿ ಅಸ್ತಿತ್ವದಲ್ಲಿಲ್ಲ" ಎಂದು ಸ್ಪಷ್ಟಪಡಿಸಬೇಕಾಯಿತು.

ಅಲ್ಲಿಗೆ ಈ ಹೊಸ ನೋಟಿನ ಸುತ್ತಲಿನ ಚರ್ಚೆಗಳು ನಿಲ್ಲಲಿಲ್ಲ, ಒಂದೆಡೆ ಎಟಿಎಂಗಳನ್ನು ಹೊಸ ನೋಟಿನ ಸೈಜಿಗೆ ಬದಲಾಯಿಸಬೇಕಾಯಿತಲ್ಲದೆ, ಇನ್ನೊಂದೆಡೆ ಹೊಸ ನೋಟಿನ ಡಿಸೈನ್ ಕೂಡ ಟೀಕೆಗೆ ಗುರಿಯಾಯಿತು. ಆ ಚರ್ಚೆಗಳು ಮುಗಿಯುತ್ತಿದ್ದಂತೆ ಹೊಸ ನೋಟಿನ ಪಿಂಕ್ ಬಣ್ಣ ಮಾಸುತ್ತದೆ ಎಂಬ ವಿಚಾರ ಹೊರಬಿತ್ತು, ಆಗ ಬಿಜೆಪಿ ಭಕ್ತರು "ಹಾಗೇನಿಲ್ಲ, ಹೊಸ ನೋಟಿನ ಬಣ್ಣ ಮಾಸುವುದಿಲ್ಲ, ಅದೆಲ್ಲ ವಿರೋಧ ಪಕ್ಷಗಳು ಹಬ್ಬಿಸುತ್ತಿರುವ ಸುಳ್ಳುಗಳು" ಎಂದು ಹೇಳಲಾರಂಭಿಸಿದರು. ಆಗ ಸರ್ಕಾರವೇ "ಹೌದು ಹೊಸ ನೋಟನ್ನು ತೊಳೆದರೆ ಅದರ ಬಣ್ಣ ಮಾಸುತ್ತದೆ. ಹಾಗೆ ಬಣ್ಣ ಮಾಸಲಿಲ್ಲ ಎಂದರೆ ಅದು ನಕಲಿ ನೋಟು ಎಂದೇ ಅರ್ಥ" ಎಂದು ಒಪ್ಪಿಕೊಂಡಿತು. ಆಗ ಬಿಜೆಪಿಯ ಭಕ್ತರು ಇನ್ನೊಂದು ವಿಲಕ್ಷಣ ಹೊಸ ತರ್ಕವನ್ನು ಮಂಡಿಸಲಾರಂಭಿಸಿದರು. ಅದೇನೆಂದರೆ "ಹೊಸ ನೋಟಿಗೆ ವಿಕಿರಣಶೀಲ ಬಣ್ಣವನ್ನು ಉಪಯೋಗಿಸಲಾಗಿದೆ. ಇದರಲ್ಲಿ 15 ಪ್ರೋಟಾನ್ ಮತ್ತು 19 ನ್ಯೂಟ್ರಾನ್‌ಗಳಿವೆ. ಈ ವಿಕಿರಣಶೀಲ ಬಣ್ಣದಿಂದಾಗಿ ಇದನ್ನು ಎಲ್ಲಿ ಬಚ್ಚಿಟ್ಟರೂ ಪತ್ತೆಹಚ್ಚಬಹುದಾಗಿದೆ" ಎಂಬುದಾಗಿತ್ತು. ಇದು ಅಸತ್ಯವಾದುದು ಮಾತ್ರವಲ್ಲ, ಹಾಗೊಮ್ಮೆ ವಿಕಿರಣಶೀಲ ಅಂಶವಿರುವ ಬಣ್ಣವನ್ನು ಸರ್ಕಾರ ಉಪಯೋಗಿಸಿದ್ದರೆ ಅದರಿಂದಾಗುವ ಹಾನಿ ಕಪ್ಪುಹಣದಿಂದಾಗುವ ಹಾನಿಗಿಂತಲೂ ಅಪಾಯಕಾರಿಯಾದದ್ದು.

ಇವೆಲ್ಲ ಗೊಂದಲಗಳ ಮಧ್ಯೆ ಹೊಸ ನೋಟಿನಲ್ಲಿ ಯಾವುದೇ ಭದ್ರತಾ ಅಂಶಗಳು ಇಲ್ಲವೆಂದೂ, ಅವುಗಳನ್ನು ಅಳವಡಿಸಲು ಕಾಲಾವಕಾಶ ಇರಲಿಲ್ಲವೆಂದೂ ಆರ್‌ಬಿಐ ಹೇಳಿದ್ದು ಯಾರ ಗಮನಕ್ಕೂ ಬಾರದೆ ಹೋಯಿತು. ಅಷ್ಟೇ ಅಲ್ಲ, ದಿನಗಟ್ಟಲೆ ಬ್ಯಾಂಕ್ ಮತ್ತು ಎಟಿಎಂಗಳ ಮುಂದೆ ಸಾಲುಗಟ್ಟಿ ನಿಂತ ನಂತರ ಈ ನೋಟುಗಳನ್ನು ಪಡೆದರೆ ಅವು ಯಾವುದಕ್ಕೂ ಲಾಯಕ್ಕು ಆಗಿರಲಿಲ್ಲ,



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಯಾಕೆಂದರೆ ಯಾರ ಹತ್ತಿರವೂ ಅದಕ್ಕೆ ಬೇಕಾದ ಚಿಲ್ಲರೆ ಇರಲಿಲ್ಲ.

ಆದರೇನಂತೆ ಮೋದಿ ಭಕ್ತರು ಈ ಹೊಸ ನೋಟ್ ಕುರಿತಂತೆ ಮತ್ತೊಂದು ಸುಳ್ಳಿನ ಕಂತೆಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟರು. ಅದು ಹೀಗಿತ್ತು: "ನಿಮ್ಮೆಲ್ಲರಿಗೂ ಶುಭಾಷಯಗಳು. ಯುನೆಸ್ಕೋ ಸಂಸ್ಥೆಯು ನಮ್ಮ ಹೊಸ 2000 ರೂಪಾಯಿ ನೋಟನ್ನು 'ಜಗತ್ತಿನ ಅತಿ ಶ್ರೇಷ್ಠ ನೋಟ್' ಎಂದು ಘೋಷಿಸಿದೆ. ಯುನೆಸ್ಕೋದ ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥರಾಗಿರುವ ಡಾ. ಸೌರಬ್ ಮುಖರ್ಜಿ ಇವತ್ತಿನ ಮಧ್ಯಾಹ್ನದ ಪತ್ರಿಕಾಗೋಷ್ಠಿಯಲ್ಲಿ ಇದನ್ನು ಮಾಧ್ಯಮಗಳ ಮುಂದೆ ಪ್ರಕಟಿಸಿದರು. ದಯವಿಟ್ಟು ಈ ವಿಷಯವನ್ನು ಎಲ್ಲರೊಂದಿಗೆ ಹಂಚಿಕೊಳ್ಳಿ. ಭಾರತೀಯ ಪ್ರಜೆ ಆಗಿರುವುದರ ಬಗ್ಗೆ ಹೆಮ್ಮೆ ಪಡಿ."

(ಈ ಹಿಂದೆಯೂ ತಲೆಯಲ್ಲಿ ಸಗಣಿ ತುಂಬಿಕೊಂಡಿರುವ ಮೋದಿ ಭಕ್ತರು ಯುನೆಸ್ಕೋ ನಮ್ಮ ರಾಷ್ಟ್ರಗೀತೆಯನ್ನು 'ಜಗತ್ತಿನ ಅತ್ಯುತ್ತಮ ರಾಷ್ಟ್ರಗೀತೆ' ಎಂದು ಘೋಷಿಸಿದೆ ಎಂದೆಲ್ಲ ಸಾಮಾಜಿಕ ಜಾಲತಾಣಗಳಲ್ಲಿ ಹರಡಿದ್ದರು. ದುರದೃಷ್ಟವಶಾತ್ ನನ್ನೊಂದಿಗೆ ನ್ಯಾಷನಲ್ ಕಾಲೇಜಿನಲ್ಲಿ ಪಿಯುಸಿ ಓದಿದ, ಈಗ ವೈದ್ಯರು, ಇಂಜಿನಿಯರ್‌ಗಳು ಇತ್ಯಾದಿಗಳಾಗಿರುವ ನನ್ನ ಮಾಜಿ ಸಹಪಾಠಿಗಳೂ ಅದನ್ನು ವಾಟ್ಸ್‌ಆಪ್ ಗುಂಪಿನಲ್ಲಿ ಹಂಚಿಕೊಂಡಿದ್ದರು. ಆಗ ನಾನು "ಇಂತಹ ಪೆದ್ದು ಮೆಸೇಜ್‌ಗಳನ್ನು ಹಂಚಬೇಡಿ. ಯುನೆಸ್ಕೋದ ಕೆಲಸ ರಾಷ್ಟ್ರಗೀತೆಗಳ ಮೌಲ್ಯಮಾಪನ ಮಾಡುವುದಲ್ಲ, ಅಷ್ಟಾದರೂ ಸುಶಿಕ್ಷಿತರಾದ ನಮ್ಮಂತವರಿಗೆ ಗೊತ್ತಿರಬೇಕು" ಎಂದು ಪ್ರತಿಕ್ರಿಯಿಸಿದ್ದೆ, ಅದಕ್ಕೆ ಹಲವಾರು ಜನ "ಯುನೆಸ್ಕೋ ಹಾಗೆ ಹೇಳದಿದ್ದರೂ ಏನಂತೆ. ನಮ್ಮ ರಾಷ್ಟ್ರಗೀತೆ ಮಹಾನ್ ಗೀತೆ" ಎಂದು ವಾದಿಸಿದ್ದರು! ನಾನು ತಲೆ ಚಚ್ಚಿಕೊಂಡು ಸುಮ್ಮನಾದೆ.


ಇಂತಹ ಜನರೇ ಮೊನ್ನೆ ನೋಟು ಅನಾಣ್ಯೀಕರಣವನ್ನು ನಾನು ವಿರೋಧಿಸಿ ಮನೆಕೆಲಸ ಮಾಡುವ ಮಹಿಳೆಯರು, ಕೈತೋಟಗಳನ್ನು ನೋಡಿಕೊಳ್ಳುವ ಪುರುಷರು ಮತ್ತು ಕಾರ್‌ಗಳನ್ನು ದಿನನಿತ್ಯ ತೊಳೆಯುವ ಯುವಕರು ಹೇಗೆ ತಮ್ಮ ನವೆಂಬರ್ ತಿಂಗಳ ಪಗಾರವನ್ನು ಪಡೆಯಬೇಕು ಎಂದು ಪ್ರಶ್ನಿಸಿದ್ದಕ್ಕೆ ಕೆಲವರು "ಅವರೆಲ್ಲ ಬ್ಯಾಂಕ್ ಖಾತೆಗಳನ್ನು ತೆರೆಯುವಂತೆ ಮಾಡಿ" ಎಂದು ಉತ್ತರಿಸಿದ್ದರು. ಬ್ಯಾಂಕುಗಳು ಮತ್ತು ಪೇಟಿಎಂ ತರಹದ ಆಪ್‌ಗಳು ಸರ್ವಿಸ್ ಚಾರ್ಜ್ ಮತ್ತು ಕಮೀಷನ್ ಅನ್ನು ವಿಧಿಸುತ್ತದೆ ಎಂಬುದಾಗಲೀ, ದೇಹವನ್ನು ದಂಡಿಸಿ ಕೈಗೊಂದಿಷ್ಟು ಪಗಾರ ಪಡೆಯುವ ಬಡವರಿಗೆ ಅಂತಹ ಚಾರ್ಜ್ ಮತ್ತು ಕಮೀಷನ್ ಕಟ್ಟುವ ಶಕ್ತಿ ಇರುವುದಿಲ್ಲ ಎಂದು ಯೋಚಿಸುವ ಸೂಕ್ಷ್ಮತೆಯನ್ನೇ ಕಳೆದುಕೊಂಡಿದ್ದಾರೆ.)

ಕೊನೆಗೆ ಸ್ವದೇಶ ಜಾಗರಣ ಮಂಚ್‌ನ ಮುಖ್ಯಸ್ಥ ಎಸ್. ಗುರುಮೂರ್ತಿಯವರು ಈಗ ಈ ಹೊಸ ನೋಟನ್ನೂ ಬರುವ ಐದು ವರ್ಷಗಳಲ್ಲಿ ರದ್ದು ಮಾಡಲಾಗುವುದು ಎಂದಿದ್ದಾರೆ. ಅಲ್ಲಿಗೆ ಈ ನಿಗೂಢ ತಂತ್ರಜ್ಞಾನವನ್ನು ಹೊಂದಿರುವ, ಸೋರುವ ವಿಕಿರಣಶೀಲ ಬಣ್ಣವನ್ನು ಲೇಪಿಸಿಕೊಂಡಿರುವ ದೇಶದಾದ್ಯಂತ ಕೋಲಾಹಲವನ್ನು, ಕುತೂಹಲವನ್ನು ಸೃಷ್ಟಿಸಿರುವ ಈ ನೋಟನ್ನು ಸಂಪೂರ್ಣವಾಗಿ ನಾವೆಲ್ಲ ಅರ್ಥೈಸಿಕೊಳ್ಳುವ ಮುನ್ನವೇ ಅದು ರದ್ದಾಗಲಿದೆ ಎಂದೇ ಅರ್ಥ! ■

ಉತ್ತರ ಕನ್ನಡ: ಯಡ್ಡಿ ಶೋ ಮತ್ತು ಎಡವಟ್ಟು ಪುಢಾರಿಗಳು!!



ಹೊನ್ನಾವರದಲ್ಲಿ ಯಡ್ಡಿ ಶೋ....



ಯಡ್ಡಿ

ಉತ್ತರ ಕನ್ನಡ ರಾಜಕೀಯ ನಿಧಾನಕ್ಕೆ ಮಗ್ಗಲು ಬದಲಿಸುತ್ತಿದೆ. ದಿಗ್ಗಜರೆಂದು ಭ್ರಮಿಸಿಕೊಂಡಿರುವ ಬಿಜೆಪಿ-ಕಾಂಗ್ರೆಸ್-ಜೆಡಿಎಸ್ ಭಂಡ ಪುಢಾರಿಗಳು ಯಾವ ಛದ್ಮವೇಷ ಕಟ್ಟಿದರೆ ಬರಲಿರುವ ಅಸೆಂಬ್ಲಿ ಚುನಾವಣೆ ಲಾಭದಾಯಕ ಆದೀತೆಂಬ ಲೆಕ್ಕಾಚಾರದ ಕಸರತ್ತು ಶುರುಹಚ್ಚಿಕೊಂಡಿದ್ದಾರೆ. ರಾಜ್ಯ ಬಿಜೆಪಿ ಯಜಮಾನ-ಉರಿಮುಸುಡಿ ಯಡ್ಡಿ ಜಿಲ್ಲೆಗೆ ಬಂದು ಎಲೆಕ್ಷನ್ ಕುಲುಮೆಯ ತಿದಿ ಒತ್ತಿಹೋಗಿದ್ದಾರೆ. ಉತ್ತರ ಕನ್ನಡದ ಮಟ್ಟಿಗೆ ತನ್ನ ನಿಷ್ಠಾವಂತ ಹೇತ್ಲಾಂಡಿ ಹಿಂಬಾಲಕ ಶಿವಾನಂದ ನಾಯ್ಕರ್ ಮಗಳ ಮದುವೆಗೆಂದು ಹೊನ್ನಾವರಕ್ಕೆ ಬಂದಿದ್ದ ಯಡ್ಡಿಜಿ ಅಲ್ಲೆ ಒಂದು ಬಯಲಾಟ ಆಡಿಹೋಗಿದ್ದಾರೆ. ಕಾರವಾರಕ್ಕೆ ಬಂದಿದ್ದ ಜೆಡಿಎಸ್ ಮಣ್ಣಿನ ಮೊಮ್ಮಗ ಕುಮ್ಮಿ ಪಕ್ಷಾಂತರಿ ಹುಳುಗಳ ಪೀಡೆಗೆ ಸಿಲುಕಿರುವ ಪಕ್ಷಕ್ಕೆ ಯಾವ ಕ್ರಿಮಿನಾಶಕ ಸಿಂಪಡಿಸಬೇಕೆಂಬ ಅಧ್ಯಯನ ಮಾಡಿದ್ದಾರೆ. ಅಧಿಕಾರ ಇಲ್ಲದಿದ್ದರೆ ಸತ್ತೇ ಹೋಗುತ್ತೇನೆಂಬ ನಂಬಿಕೆಯ ಮಂತ್ರಿ ದೇಶಪಾಂಡೆ ತನ್ನ ಮತ್ತು ಮಗನ ಭವಿಷ್ಯಕ್ಕಾಗಿ ಬಿಜೆಪಿಗೆ ವಲಸೆ ಹೋಗಲು ಲಗೇಜ್ ಕಟ್ಟುತ್ತಿದ್ದಾರೆಂಬ ವದಂತಿ ಜಿಲ್ಲೆಯ ರಾಜಕೀಯ ಜಗುಲಿಯಲ್ಲಿ ಹರಿದಾಡಲಾರಂಭಿಸಿದೆ....


ಹೊನ್ನಾವರದ ಸಾರ್ವಜನಿಕ ಸಭೆಯಲ್ಲಿ ಭಾಷಣ ಕುಟ್ಟಿದ ಯಡ್ಡಿಯಲ್ಲಿ ಮೊದಲಿನ ವೀರಾವೇಶವೇನೂ ಇರಲಿಲ್ಲ. ಆತನ ಸಪ್ಪೆ ಕುಣಿತ ಕಂಡ ಬಿಜೆಪಿ ಕಾರ್ಯಕರ್ತರು ಒಂದು ಅನುಮಾನಕ್ಕೆ ಬಿದ್ದಿದ್ದಾರೆ. ಹುರುಪಿಲ್ಲದ ಯಡ್ಡಿ ಮಾತುಗಾರಿಕೆಗೆ ಕಾರಣ ವಯೋಸಹಜ ಆಯಾಸವೋ? ಅಥವಾ ಪಕ್ಷದೊಳಗಿನ ಎದುರಾಳಿ-ಕೇಂದ್ರ ಮಂತ್ರಿ ಅನಂತಕುಮಾರ್ ಶಾಸ್ತ್ರಿಯ ಜನಿವಾರ ಲಾಬಿ ಸಿಎಂ ಸ್ಥಾನ ವಂಚಿಸುವ ದೂರದ ಭಯವೋ? ಒಟ್ಟಿನಲ್ಲಿ ಯಡ್ಡಿಯ ಕಳೆಗುಂದಿದ ಮುಖ ಕಂಡವರಿಗೆ ಆತ ಆತಂಕದಲ್ಲಿರುವುದು ಖಾತ್ರಿಯಾಗಿದೆ. ಅಂದಿನ ಬಹಿರಂಗ ಸಭೆಯಲ್ಲಿ ತುಂಡುಗುಪ್ಪಳಿ ಹೊಡೆದಿದ್ದು ಮಾತ್ರ ಯಡ್ಡಿಯ ಅಜನ್ಮ ಆಪ್ತೆ ಶೋಭಾ ಕರಂದ್ಲಾಜೆ ಎಂಬ 'ಕೂಗುಮಾರಿ' ಒಬ್ಬಳೇ!

ಸಿದ್ದು ಸರ್ಕಾರವನ್ನು ಬಾಯಿಗೆಬಂದಂತೆ ತೆಗಳಿದ ಸೋಬಕ್ಕನ ಸೋಬಾನೆ ಏರುಸ್ವರದಲ್ಲೇ ನಡೆದಿತ್ತು. ಮೇಟಜ್ಞ ತನ್ವೀರ್ ಶೇಠ್‌ಗಳ 'ಕಾಮ'ಗಾರಿ ಎತ್ತೆತ್ತಿ ಆಡಿದ ಸೋಬಕ್ಕ ಅಶ್ಲೀಲ ಹಗರಣಗಳೇ ಸಿದ್ದು ಸರ್ಕಾರದ ಸಾಧನೆ ಎಂದು ಮೂದಲಿಸಿ ಮುದಗೊಂಡರು. ಸೋಬಕ್ಕನ ಈ ಶೀಲ-ಅಶ್ಲೀಲದ ವ್ಯಾಖ್ಯಾನ ಕೇಳಿದ ಬಿಜೆಪಿಗರೇ ಮುಜುಗರದಿಂದ ಮುಸಿಮುಸಿ ನಕ್ಕಿದ್ದು ಮಾತ್ರ ಮೋಜಾಗಿತ್ತು. ಭೂತದ ಬಾಯಲ್ಲಿ ಭಗವದ್ಗೀತೆ ಕೇಳಿದಂತಾಗಿತ್ತು ಮಡಿ ಚಡ್ಡಿಗಳಿಗೆ.


ಅಸೆಂಬ್ಲಿಯಲ್ಲೇ ರಾಸಲೀಲಾ ವಿನೋದದ ಚಿತ್ರ ನೋಡಿ ಚಪ್ಪರಿಸಿದ್ದ ಲಕ್ಷ್ಮಣ ಸವದಿ, ಕೃಷ್ಣ ಪಾಲೇಮಾರ್, ಪಾಟೀಲ್ ಮಾಮಾಗಳು ಜಗದ್ವಿಖ್ಯಾತರಾಗಿದ್ದರು; ರೇಣುಕಾಚಾರ್ಯ, ರಘುಪತಿ ಭಟ್ಟ ಮತ್ತು ಹರಕುತಾಳದ ಹಾಲಪ್ಪ ಹಗಲು ಹಾದರ ಸ್ವಯಂಘೋಷಿತ ಶಿಸ್ತು-ಶೀಲದ ಪಕ್ಷ ಬಿಜೆಪಿಯ ಬಂಡವಾಳ ಬಯಲಾಗಿಸುತ್ತಲ್ಲ, ಅದು ನೆರೆದಿದ್ದ ಬಿಜೆಪಿ ಅಭಿಮಾನಿಗಳಿಗೆ ಶೋಭಕ್ಕನ ಭಾಷಣ ಕಣ್ಣೆದುರು ಕುಣಿದಾಡಿಸಿದೆ. ಅಷ್ಟೇ ಏಕೆ? ಇದೇ ಶೋಭಕ್ಕ ಗೋಕರ್ಣ ಮಹಾಬಲೇಶ್ವರನಿಗೆ ಯಡ್ಡಿ ಅಭಿಷೇಕ ಮಾಡುವಾಗ ಆತನ ಕೈಹಿಡಿದು 'ದಂಪತಿ' ಪೋಸು ಕೊಟ್ಟದ್ದು, ಆ ಫೋಟೋ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದೆಲ್ಲ ಬಿಜೆಪಿಗಳಿಗೆ ಬೇಡ-ಬೇಡವೆಂದರೂ ನೆನಪಾಗಿದೆ.

ಶೋಭಕ್ಕನ ಸಂಭಾವಿತೆಯ ಮಾತು ಕೇಳಿದ ಸಾರ್ವಜನಿಕರಂತೂ "..... ಎಲಾ ಇವಳಾ... ಇವಳೂ ಮೇಟಿ ಮುದುಕನ ಕಾಮಕಾಂಡದ ಕತೆ ಹೇಳೋಳಾ... "ಛೀ..." ಎಂದು ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದಾರೆ! ಕಾಂಗ್ರೆಸ್ ಕರ್ಮಕತೆ ಹೇಳಲು ಹೋಗಿ ತನ್ನ ಪಕ್ಷದ ಹುಳುಕು ಇತಿಹಾಸ ತೋರಿಸಿಕೊಂಡಂತಾಯ್ತೆಂಬ ಸಣ್ಣ "ಪ್ರಜ್ಞೆ"ಯೂ ಪೆದ್ದಿ ಶೋಭಕ್ಕನಲ್ಲಿರಲಿಲ್ಲ, ಪಾಪ! ಇದು ಯಡ್ಡಿ-ಶೋಭಾ ಶೋಥ ಬಹಿರಂಗ ಹೈಲೈಟ್‌ಗಳಾದರೆ, ರಹಸ್ಯ ಕಾರ್ಯಾಚರಣೆ ಮತ್ತೂ ಕುತೂಹಲಕರವಾಗಿದೆ.

ಜಿಲ್ಲೆಯ ಆರು ಅಸೆಂಬ್ಲಿ ಕ್ಷೇತ್ರದಲ್ಲಿ ಕನಿಷ್ಠ ಆರು ಡಜನ್ ಬಿಜೆಪಿ ಟಿಕೆಟ್ ಆಕಾಂಕ್ಷಿಗಳ ತಳಿ ತಯಾರಾಗಿ ನಿಂತಿದೆ! ಇವರಲ್ಲಿ ಒಂದಿಷ್ಟು ತೋಳ್ಬಲ, ಕಳ್ಳಕಾಸಿನ ತಾಕತ್ತು ಇರುವ ಲಫಡಾ ಲೀಡರ್‌ಗಳು ಗುಪ್-ಗುಪ್ ಆಗಿ ಯಡ್ಡಿ-ಶೋಭಕ್ಕನಿಗೆ ಅಡ್ಡಬಿದ್ದು ಹೋಗಿದ್ದಾರೆ. ಎಲ್ಲರ ಮೂಗಿಗೂ ಯಡ್ಡಿ ತುಪ್ಪ ಸವರಿ ಕಳಿಸಿದ್ದಾರೆ; ಆದರೆ ಶೋಭಕ್ಕ, "ಪ್ರಭಾವಿಗಳು ಯಾರೇ ಬಂದರೂ ಸುಸ್ವಾಗತ. ಆದರೆ ಟಿಕೆಟ್ ಕೊಡೋದು ಮಾತ್ರ ಆ ಕಣ್ಣಲ್ಲಿ ರಕ್ತ ಇಲ್ಲದ ಅಮಿತ್ ಶಾ...." ಎಂಬ ಅದ್ನಾಡಿ ಮಾತಾಡಿ ಚೆಡ್ಡಿ ನಿಷ್ಠರಿಗೆ ರೇಜಿಗೆ ಹುಟ್ಟಿಸಿದ್ದಾಳೆ. ಅಲ್ಲಿಗೆ ತಾನು ಯಡ್ಡಿಗೇ ದೊರೆಸಾನಿ ಎಂದು ಬಿಂಬಿಸಿಕೊಂಡಿದ್ದಾಳೆ. ಯಡ್ಡಿಗಿಂತಲೂ ಕಡಕ್ ಆಗಿ ಮಾತಾಡುವ ಶೋಭಕ್ಕನ ಸೊಕ್ಕಿಗೆ ಹಿಡಿಶಾಪ ಹಾಕುತ್ತ ಕಾರ್ಯಕರ್ತರು ಊರು ಸೇರಿದ್ದಾರೆ.



ದಿನಕರ ಶೆಟ್ಟಿ



ಸೂರಜ್ ನಾಯ್ಕ ಸೋನಿ

ಕುಮಟಾದ ಮಾಜಿ ಶಾಸಕ ಸದ್ಯಕ್ಕೆ ಜೆಡಿಎಸ್ ಮುಖಂಡನಾದ ದಗಲುಬಾಜಿ ದಿನಕರ ಶೆಟ್ಟಿ ಕದ್ದುಮುಚ್ಚಿ ಯಡ್ಡಿಯನ್ನು ಭೇಟಿಯಾಗಿದ್ದು ಈಗ ಜಗಜ್ಜಾಹೀರಾಗಿ ಹೋಗಿದೆ. ಕಳೆದೊಂದು ವರ್ಷದಿಂದ ಈ ದಿನಕರ ಶೆಟ್ಟಿ ಪ್ರೇತಾತ್ಮದಂತಾಗಿ ಒದ್ದಾಡುತ್ತಿರುವುದು ಮೋಜಾಗಿದೆ. ಬಿಜೆಪಿ ಮೇಲೆ ಕಣ್ಣಿಟ್ಟಿರುವ ಈತನಿಗೆ ಅಲ್ಲಿ ಟಿಕೆಟ್ ಸಿಗುವ ಭರವಸೆ ಇಲ್ಲದಾಗಿದೆ; ಜೆಡಿಎಸ್‌ನಲ್ಲಿ ಕಾಸಿನ ಕೊರತೆ. ಕುಮ್ಮಿ ಹತ್ತು ಕೋಟಿ ಕೊಟ್ಟರೆ ಜೆಡಿಎಸ್‌ನಿಂದ ಸ್ಪರ್ಧಿಸುತ್ತೇನೆಂಬ ಸಂದೇಶ ಆತ ದೊಡ್ಡ ಗೌಡರಿಗೆ ತಲುಪುವಂತೆ 'ಸೆಂಡ್' ಮಾಡಿದ್ದಾನೆ. ಕೆಲವು ತಿಂಗಳ ಹಿಂದೆ ದಿನಕರನ ಪಕ್ಷಾಂತರ ತಯಾರಿ ಬಗ್ಗೆ ನಿಷ್ಠಾವಂತ ದಳಪತಿಗಳು ಕುಮ್ಮಿಗೆ ದೂರು ಕೊಟ್ಟಿದ್ದರು. ಆಗ ಉತ್ತರ ಕನ್ನಡ ಜೆಡಿಎಸ್ ಉಸ್ತುವಾರಿ ಮಧು ಬಂಗಾರಪ್ಪ ಆದಿಯಾಗಿ ಕುಮ್ಮಿ ತನಕದ ದಳಾಗ್ರೇಸರು ದಿನಕರನನ್ನು ರಮಿಸಿದ್ದರು. ಕೋಟಿ ಕ್ಯಾಶ್ ಕೊಡುವ ಭರವಸೆಯೂ ಕೊಟ್ಟಿದ್ದರು. ಆದರೆ ಅದ್ಯಾಕೋ ಕುಮ್ಮಿ ಮೇಲೆ ದಿನಕರ ಶೆಟ್ಟಿಗೆ ಒಂಚೂರೂ ನಂಬಿಕೆ ಇಲ್ಲ.

ಹೀಗಾಗಿ ಆತ ಬಿಜೆಪಿ ಸೇರಲು ಶತಾಯ-ಗತಾಯ ಪ್ರಯತ್ನ ನಡೆಸುತ್ತಲೇ ಇದ್ದರು. ಕಾಂಗ್ರೆಸ್ ಮತ್ತು ಬಿಜೆಪಿ ಓಟ್‌ಬ್ಯಾಂಕ್ ಹತ್ತು ಸಾವಿರದಿಂದ ಶುರು ಆಗುತ್ತದೆ. ಜೆಡಿಎಸ್ ಓಟಿನ ಬುಟ್ಟಿ ಸೊನ್ನೆಯಿಂದ ತುಂಬಬೇಕೆಂದು ಹೇಳುವ ದಿನಕರ ಶೆಟ್ಟಿಗೆ ಕುಮ್ಮಿ ಕೋಟಿ-ಕೋಟಿ ಕೊಡುವ ಭರವಸೆಯೂ ಇಲ್ಲ; ಜೆಡಿಎಸ್‌ನಿಂದ ದೊಡ್ಡ ಮೊತ್ತದ ಫಂಡ್ ಸಿಕ್ಕರೂ ಆ ಪಕ್ಷದಿಂದ ಗೆಲ್ಲುವ ಧೈರ್ಯವೂ ಇಲ್ಲ. ಹಾಗಾಗಿ ಆತನ ಜೀವ ಬಿಜೆಪಿಯತ್ತಲೇ ಸೆಳೆದಾಡುತ್ತಿದೆ. ಆದರೆ ಆತನಿಗೆ ಸ್ಥಳೀಯ ಬಿಜೆಪಿ ಭೂಪರು ಅಷ್ಟು ಸುಲಭಕ್ಕೆ ಪಕ್ಷದೊಳಗೆ ಪ್ರವೇಶ ಮಾಡಲು ಬಿಡುತ್ತಿಲ್ಲ. ಆತ ಹೆಂಗಸರ ಚಟದವನು, ಅಧಿಕಾರಕ್ಕೆ ಬಂದರೆ ಅಧಿಕಾರಿಗಳಿಂದ ಹಫ್ತಾ ವಸೂಲಿ ಮಾಡೋನು; ಕ್ಷೇತ್ರದ ಬಹುಸಂಖ್ಯಾತ ದೀವರನ್ನು ಎದುರು ಹಾಕಿಕೊಂಡೋನು. ಇಂಥವನು ಪಕ್ಷಕ್ಕೆ ಬಂದರೆ ಬಿಜೆಪಿಗೆ ಡ್ಯಾಮೇಜು ಗ್ಯಾರಂಟಿ ಎಂಬ ಕತೆಗಳನ್ನು ಯಡ್ಡಿ-ಅನಂತಕುಮಾರ್-ಈಶ್ವರಪ್ಪರಂಥವರ ಕಿವಿಗೆ ಬಿಜೆಪಿಯೊಳಗಿನ ಒಂದು ಗುಂಪು ವ್ಯವಸ್ಥಿತವಾಗಿ ತಲುಪಿಸಿಬಿಟ್ಟಿದೆ.

ಉತ್ತರ ಕನ್ನಡ ಬಿಜೆಪಿಗೆ ತಾನೊಬ್ಬನೇ ಪ್ರಶ್ನಾತೀತ ನಾಯಕನೆಂಬ ಭ್ರಮೆಯಲ್ಲಿ ಓಡಾಡುತ್ತಿರುವ ನಿದ್ದೆ ಬಡುಕ ಸಂಸದ ಅನಂತ್ಮಾಣಿಗೂ ಈ ದಿನಕರ ಶೆಟ್ಟಿ ಎಂದರೆ ಅಷ್ಟಕ್ಕಷ್ಟೇ. ಹಾಗಂತ ಆತ ದಿನಕರ ಬಿಜೆಪಿಗೆ ಬರುವುದು ಬೇಡವೆನ್ನುತ್ತಿಲ್ಲ. ಕಂಡ-ಕಂಡವರನ್ನೆಲ್ಲ ಬಿಜೆಪಿಗೆ ಸೇರಿಸಿ ಕೊಂಡು ಮಂತ್ರಿಯಾಗುವ ಕನಸು ನನಸು ಮಾಡಿಕೊಳ್ಳುವ ಪ್ಲಾನ್ ಹಾಕಿಕೊಂಡಿರುವ ಅನಂತ್ಮಾಣಿ ತಾನೇ ಕುಮಟೆಯ ಅಭ್ಯರ್ಥಿಯಾಗುವ ನಿರ್ಧಾರಕ್ಕೆ ಬಂದಿದ್ದಾನೆ. ದಿನಕರ ಶೆಟ್ಟಿಯಂಥ ಒಂಚೂರು ಜನ ಬಳಕೆಯ ಪುಢಾರಿಗಳು ಯಾವ ದಿಕ್ಕಿಂದ ಬಂದರೂ ಬರಲಿ ಎಂಬುದು ಅನಂತ್ಮಾಣಿ ಅಂಬೋಣ. ಆದರೂ ನಿಂಗೇ ಟಿಕೆಟ್ ಎನ್ನುತ್ತ ಅನಂತ್ಮಾಣಿ ಗತಿಗೇಡಿ ದಿನಕರ ಶೆಟ್ಟಿಗೆ ಸೆಳೆಯುತ್ತಿದ್ದಾನೆ.


ಯಾವಾಗ ಖುದ್ದು ಅನಂತ್ಮಾಣಿಯೇ ಕುಮಟಾದಿಂದ ಸ್ಪರ್ಧೆಗಿಳಿವ ಹಿಕಮತ್ತು ನಡೆಸುತ್ತಿದ್ದಾನೆಂದು ದಿನಕರ ಶೆಟ್ಟಿಗೆ ಗೊತ್ತಾಯಿತೋ ಆಗಾತ ಕೇಂದ್ರ ಮಂತ್ರಿ ಸದಾನಂದಗೌಡರ ಕಾಲಿಗೆ ಬಿದ್ದಿದ್ದಾನೆ. ಮತ್ತೊಂದೆಡೆಯಿಂದ ಜೆಡಿಎಸ್‌ನ ಸಂಗಾತಿ ಶಿವನಗೌಡ ನಾಯಕ್ ಎಂಬ ಆಪರೇಷನ್ ಕಮಲ ಕುಖ್ಯಾತಿಯ ಅಭಿನವ ಚೆಡ್ಡಿ ಮೂಲಕ ಪ್ರಯತ್ನ ನಡೆಸಿದ್ದಾನೆ. ಕುಮಟೆಯ ಸಂಘ ಪರಿವಾರದ ಸರದಾರರ ಜತೆಗೂಡಿ ಕಲ್ಲಡ್ಕ ಭಟ್ಟನ ಅಡ್ಡಿಗೂ ಎಡತಾಕಿದ್ದಾನೆ. ಹಳಿಯಾಳದ ಸುನಿಲ್ ಹೆಗಡೆ ಕೇರ್ ಆಫ್‌ನಲ್ಲಿ ಯಡ್ಡಿಯನ್ನೂ ಸಂಧಿಸಿ ಬಂದಿದ್ದಾನೆ. ಸಂಸದ ಅನಂತ್ಮಾಣಿಗೆ ಆತ ದುಂಬಾಲು ಬಿದ್ದಿದ್ದೇ ತಾಲಿ ದಳವಾಯಿಗಳ ಬಾಯಲ್ಲಿ ರಸಗವಳದಂತಾಗಿದೆ! ತಾನು ಕುಮಟೆ ಟಿಕೆಟ್ ಆಕಾಂಕ್ಷಿಯಲ್ಲ; ಅದು ನಿನಗೇ ಎಂದು ಅನಂತ್ಮಾಣಿ ಬಾಯಿಂದ ಯಾವಾಗ ಬರುತ್ತದೆಂದು ದಿನಕರ ಕಾಯುತ್ತಿರುವುದು ಶೋಚನೀಯವಾಗಿದೆ.

ಮೊನ್ನೆ ಯಡ್ಡಿ ಹೊನ್ನಾವರಕ್ಕೆ ಬಂದಾಗ ಆತನ ಭೇಟಿಯಾಗಲು ಶಿವನಗೌಡ ನಾಯಕ್ ಮೂಲಕ ದಿನಕರ ಮೊದಲೇ ಸಮಯ-ಸ್ಥಳ ನಿಗದಿ ಮಾಡಿಸಿಕೊಂಡಿದ್ದ! ಹೊನ್ನಾವರದ ಹೊರವಲಯದಲ್ಲಿ ನೂತನವಾಗಿ ಶುರುವಾಗಿರುವ 'ಸಾಗರ್ ರೆಸಿಡೆನ್ಸಿ' ಯಲ್ಲಿ ಯಡ್ಡಿಗೆ ಮಾಜಿ ಮಂತ್ರಿ ಶಿವಾನಂದ ನಾಯ್ಕ ರೂಮು ಬುಕ್ ಮಾಡಿದ್ದರು. ಅದರ ಪಕ್ಕದ ರೂಮ್‌ಗೆ ದಿನಕರ ಶೆಟ್ಟಿ ಯಡ್ಡಿ ಆಗಮನಕ್ಕೂ ಮೊದಲೇ ಹೋಗಿ ಸೇರಿಕೊಂಡಿದ್ದ. ಆಗಿನ್ನೂ ಬೆಳಕೇ ಹರಿದಿರಲಿಲ್ಲ. ಈ ಕೋಣೆಗಳು ಹೇಗಿವೆಯೆಂದರೆ, ಹಿಂದಿನ ರಹಸ್ಯ ಬಾಗಿಲಿಂದ ಎರಡೂ ಕೋಣೆ ಹೋಗಿಬರುವಂಥ ವ್ಯವಸ್ಥೆ ಮಾಡಲಾಗಿದೆ. ಕಳ್ಳಾಟಕ್ಕೆ ಅನುಕೂಲಕರವಾಗಿರುವ ಈ ಕೋಣೆಯಲ್ಲಿ ದಿನಕರ ಶೆಟ್ಟಿ ಮತ್ತು ಯಡ್ಡಿ ಮಹಾತ್ಮನ ಭೇಟಿಯಾಗಲಿದೆ ಎಂಬುದು ಅವರಿಬ್ಬರನ್ನು ಬಿಟ್ಟರೆ ಬೇರ್ಯಾರಿಗೂ ಗೊತ್ತಿರಲಿಲ್ಲ.


ಯಡ್ಡಿ ರೂಮಿನ ಒಳಗೆ ಹೋದವರೇ ಸೀದಾ ವಾಶ್ ಕೋಣೆಗೆ ಹೋದಂತೆ ಒಬ್ಬರೇ ನಡೆದುಬಿಟ್ಟರು. ಆದರೆ ಯಡ್ಡಿ ಹಿಂದಿನ ಬಾಗಿಲಿಂದ ಹೋಗಿದ್ದು ದಿನಕರ ಶೆಟ್ಟಿಯಿದ್ದ ಕೋಣೆಗೆ. ಅಲ್ಲಿ ಲೇವಾದೇವಿ ಮಾತುಗಾರಿಕೆ ನಡೆದಿದೆ. ತನ್ನ ತಾಕತ್ತಿನ ಕತೆ ದಿನಕರ ಹೇಳಿದ್ದಾನೆ; ಬಿಜೆಪಿಯಿಂದ ಗೆದ್ದರೆ ಸಾಯುವತನಕ ಯಡ್ಡಿಗೆ ನಿಷ್ಠನಾಗಿರುವ ಆಣೆ ಮಾಡಿದ್ದಾನೆ; ಹತ್ತು-ಹದಿನೈದು ನಿಮಿಷ ಮಾತಾಡಿದ್ದಾರೆ. ದಿನಕರ್‌ಗೆ ಟಿಕೆಟ್ ಭರವಸೆ ಸಿಕ್ಕಿದೆ. ಇತ್ತ ಯಡ್ಡಿ ಜತೆಗಿದ್ದವರು ಬಾಸ್ ತುಂಬ ಹೊತ್ತಾದರೂ ಬರದಿದ್ದದ್ದು ನೋಡಿ ಟೈಲೆಟ್‌ಗೆ ಹೋಗಿರಬೇಕೆಂದು ಮಾತಾಡಿಕೊಂಡರು. ಅತ್ತ ದಿನಕರ ತನಗೆ ಅನಂತ್ಮಾಣಿಯಿಂದ ಟಿಕೆಟ್‌ಗೆ ಅಡ್ಡಗಾಲಾಗಬಾರದೆಂದು ಬೇಡಿಕೆ ಮಂಡಿಸಿದ್ದಾನೆ.

ಯಡ್ಡಿ ತನ್ನ ಕೋಣೆಗೆ ಬಂದು ಸೇರಿಕೊಳ್ಳುತ್ತಿದ್ದಂತೆಯೇ ದಿನಕರ ಶೆಟ್ಟಿ ಮುಂಜಾನೆಯ ಚುಮು-ಚುಮು ಚಳಿಯಲ್ಲಿ ಸಾಗರ್ ರೆಸಿಡೆನ್ಸಿಯಿಂದ ಪಾರಾಗಿದ್ದಾನೆ. ಆದರೆ ಯಡ್ಡಿ-ದಿನಕರ ಶೆಟ್ಟಿಯ ಈ ಗುಪ್ತ ಭೇಟಿ ಗುಟ್ಟಾಗೇನೂ ಉಳಿಯಲಿಲ್ಲ. ಕ್ಷಣಾರ್ಧದಲ್ಲಿ ಈ ಸುದ್ದಿ ಬಿಜೆಪಿಯೊಳಗಿನ ದಿನಕರನ ಕಟ್ಟಾ ವೈರಿಗಳಿಗೆ ತಲುಪಿದೆ. ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಹೀನಾಯ ಸೋಲು ಕಂಡಿದ್ದ ಸೂರಜ್ ನಾಯ್ಕ ಸೋನಿ ಈ ರಹಸ್ಯ ಭೇಟಿ ವಿಷಯ ತಿಳಿದು ಕುದ್ದುಹೋಗಿದ್ದಾನೆ. ತಕ್ಷಣ ಮೂರ್ನಾಲ್ಕು ವಾಹನದಲ್ಲಿ ತನ್ನ ಹಿಂಬಾಲಕರ ತುಂಬಿಕೊಂಡು ಯಡ್ಡಿ ಉಳಿದುಕೊಂಡಿದ್ದ ಹೋಟೇಲ್‌ಗೆ ಬಂದಿದ್ದಾರೆ.


ಬಂದವರೇ ಯಾವ ಕಾರಣಕ್ಕೂ ದಿನಕರ ಶೆಟ್ಟಿಯನ್ನು








ಅನಂತಕುಮಾರ್ ಹೆಗಡೆ, ಶಶಿಭೂಷಣ ಹೆಗಡೆ, ಕಾಗೇರಿ ಹೆಗಡೆ



ಜೆಪಿ ಒಳಗೆ ಬಿಟ್ಟುಕೊಳ್ಳಕೂಡದೆಂದು ವರಾತ ಹಚ್ಚಿದ್ದಾರೆ. ...ನ ಹೆಸರು ಕ್ಷೇತ್ರದಲ್ಲಿ ಕೆಟ್ಟು ಕೆರ ಹಿಡಿದಿದೆ. ಇಂಥವನಿಂದ ...ರ್ಟಿಗೆ ಡ್ಯಾಮೇಜಾಗುತ್ತದೆ. ನನ್ನ ಟಿಕೆಟ್‌ಗೆ ಸಂಚಕಾರ ...ುವ ಇರಾದೆಯಿಂದ ನಿವೃತ್ತ ಅರಣ್ಯಾಧಿಕಾರಿ ನಾಗರಾಜ್ ...ಯಕ್, ಕಾಂಗ್ರೆಸ್‌ನಿಂದ ಡಾ. ಜಿ.ಜಿ. ಹೆಗಡೆ ಬಿಜೆಪಿ ...ರಿದ್ದಾರೆ. ಆಗ ನಾನೇನು ತಕರಾರು ಮಾಡಿಲ್ಲ. ಆದರೆ ದಿನಕರ ಶೆಟ್ಟಿಗೆ ಎಂಟ್ರಿ ಕೊಟ್ಟರೆ ನಾನು ಸುಮ್ಮನುಳಿಯ ...ರೆನೆಂದು ಸೋನಿ ಗುಟುರು ಹಾಕಿದ್ದಾನೆ. ಯಡ್ಡಿ ಅಜ್ಜ ಯುವಕರ ಆಟಾಟೋಪ ಕಂಡು ಥಂಡ ಹೊಡೆದು ...ತಿದ್ದಾರೆ. ಸಮಾಧಾನದಿಂದಲೇ ಮಾತಾಡಿದ್ದಾರೆ. ಆದರೆ ...ಡ್ಡಿಗೆ ಅಧಿನಾಯಕಿಯಾಗಿರುವ ಶೋಭಾ ಕೆರಳಿ ...ಲಿದ್ದಾಳೆ. "ಯಾರ್ಯಾರಿಗೆ ಸೇರಿಸಿಕೊಳ್ಳಬೇಕು... ಯಾರ್ಯಾರನ್ನು ...ಸಿಕೊಳ್ಳಬಾರದೆಂದು ನೀವು ಹೇಳಬೇಕಾಗಿಲ್ಲ, ಗೆಲ್ಲುವಂಥ ...ಕತ್ತಿನವರು ಎಲ್ಲಿಂದ ಬಂದರೂ ಸೇರ್ಸಿಕೊಳ್ತೇವೆ... ನಮ್ಮದು ...ಲ್ಲುವ ತಂತ್ರಗಾರಿಕೆ ಒಂದೇ..." ಎಂದು ಬಿಜೆಪಿಗೀಗ ...ವ ತತ್ವ-ನೈತಿಕತೆ ಇಲ್ಲ ಎಂಬುದನ್ನು ಬಹಿರಂಗ ...ಡಿದ್ದಾಳೆ.

ಅಲ್ಲಿಗೆ ದಿನಕರ ಶೆಟ್ಟಿಯ ಚಡ್ಡಿ ಪಡೆ ಸೇರುವ ಜೋಶ್ ...ೀರಾಗಿದೆ! 2017ರ ಸಂಕ್ರಮಣದ ನಂತರ


ವೈಎಸ್‌ವಿ ದತ್ತ, ಭೀಮಣ್ಣ ನಾಯ್ಕ ಶಿವಾನಂದ ನಾಯ್ಕ

...ತ್ತರಾಯಣದ ಶುಭ ಮುಹೂರ್ತದಲ್ಲಿ ಆತ ಬಿಜೆಪಿ ...ಬಾಗಲು ಸಿದ್ಧತೆಯಲ್ಲಿ ತೊಡಗಿದ್ದಾನೆ. ಕಬ್ಬಾಗಿ ಬಿಜೆಪಿಗೆ ...ೀಗುವ ದಿನಕರ ರಸ ಹಿಂಡಿದ ಜಲ್ಲೆಯಾಗಿ ...ರಬರುವುದು ಗ್ಯಾರಂಟಿ. ವಲಸಿಗರ ಟಿಕೆಟ್ ಕಾಳಗ ...ೀರಾಗುವಂತೆ ಮಾಡಿ ಅಂತಿಮವಾಗಿ ಸಂಸದ ಅನಂತ್ಕುಮಾರ್ ...ೀ ಕ್ಯಾಂಡಿಡೇಟಾಗೋದು ಗ್ಯಾರಂಟಿ ಎಂದು ಆತನ ...' ಬಲ್ಲವರು ಪಿಸುಗುಡುತ್ತಿದ್ದಾರೆ. ದಿನಕರ ಶೆಟ್ಟಿಯ ...ಚಾರ ಹೇಗಿದೆಯೋ?! ದಿನಕರ ಬಿಜೆಪಿ ಸೇರಿದ ... ಅನಂತ್ಕುಮಾರ್‌ರ ಶಿಷ್ಯ ಸೂರಜ್ ಸೋನಿ ಜೆಡಿಎಸ್ ...ುವ ಯೋಚನೆ-ಯೋಜನೆ ಹಾಕಿಕೊಂಡಿದ್ದಾನೆ. ...ಬಂಧು ಮಧು ಬಂಗಾರಪ್ಪನ ಸಂಪರ್ಕ ...ಸಿಕೊಂಡಿರುವ ಸೋನಿ ಬಿಜೆಪಿಯೊಳಗೆ ವಲಸಿಗರ ...ಾಟದಿಂದ ಹತಾಶರಾಗಿಹೋಗಿದ್ದಾರೆ. ಕ್ರಮೇಣ ...ಪಿಯಲ್ಲಿ ನಡೆಯುತ್ತಿರುವ ವಿಪ್ಲವ ಕರಾರುವಾಕ್ಕಾಗಿ ...ಸುತ್ತಿರುವ ಅನಂತ್ಕುಮಾರ್ ಎದುರಾಳಿ ಕಾಗೇರಿ ಮಾಣಿ ದಾಳ ಉರುಳಿಸಲು ಸಮಯ ಕಾಯುತ್ತಿದ್ದಾನೆ.

ಶಿರಸಿಯಿಂದ ರಾಮಕೃಷ್ಣ ಹೆಗಡೆಯ ದಾಯಾದಿ ...ಮ್ಮಗ ಶಶಿಭೂಷಣ ಹೆಗಡೆ ಜೆಡಿಎಸ್‌ನಿಂದ ಮತ್ತೆ ...ಸಿದರೆ ತನಗೆ ಗಂಡಾಂತರ ಎಂಬುದು ಕಾಗೇರಿಗೆ ...ಯವಾಗಿದೆ. ಕಳೆದ ಬಾರಿ ಗೆಲುವಿನ ಹೊಸ್ತಿಲಿಗೆ ಬಂದು ...ಭೂಷಣ್ ಎಡವಿ ಬಿದ್ದಿದ್ದರು. ಕಾಗೇರಿ ಹೀನಾಯ ...ಪ್ಪು ಕಂಡಿದ್ದರು. ಹಿಂದೆ ಜಿಲ್ಲಾ ಬಿಜೆಪಿ ಭೀಷ್ಮನಂತಿದ್ದ ಎಂ.ಪಿ. ಕರ್ಕಿ ಗೆದ್ದರೆ ತನಗೆ ಹವ್ಯಕ ಲೀಡರಿಕೆ ...ತ್ತು ಮಂತ್ರಿಗಿರಿ ಎರಡೂ ತಪ್ಪುತ್ತದೆಂದು ಇದೇ ...ಭೂಷಣ್ ಹೆಗಡೆಗೆ ಕುಮಟಾದಲ್ಲಿ ಕಾಗೇರಿ ಕ್ಯಾಂಡಿಡೇಟ್ ...ದ್ದರು. ಹೆಗಡೆಜೀ ಮೊಮ್ಮಗನೆಂಬ ಟ್ರಂಪ್‌ಕಾರ್ಡ್ ... ಡಾ. ಕರ್ಕಿಯಿಂದ ಆಪ್ಯೋಷನ ಪಡೆದಿದ್ದರು. ಈಗ ...ತ್ಕುಮಾರ್ ಹುಟ್ಟಡಗಿಸಲು ಅದೇ ಶಶಿಭೂಷಣನನ್ನು ...ರಿ ಅಸ್ತ್ರ ಮಾಡಿಕೊಳ್ಳಲು ಬಿಜೆಪಿ ಬ್ರಾಹ್ಮಣ ಲಾಬಿ ...ಸಿಕೊಳ್ಳುತ್ತಿದ್ದಾರೆ.

ಇದಕ್ಕೆ ಸಮಾನಾಂತರವಾಗಿ ಅನಂತ್ಕುಮಾರ್‌ನೆಯೂ ಕರಾಮತ್ತು ನಡೆಸುತ್ತಿದ್ದಾನೆ. "ನೀನು ಜೆಡಿಎಸ್‌ನಿಂದಲೇ ಶಿರಸಿಯಿಂದ ಆಖಾಡಕ್ಕೆ ಇಳಿ... ನಿಂಗೆ ಹವ್ಯಕರ ಓಟು ಸಿಗುವಂತೆ ನಾನು ನೋಡಿಕೊಳ್ತೇನೆ... ಕಾಗೇರಿ ಸೋಲಿಸೋ ಗುರಿ ನನ್ನದು..." ಎಂದು ಶಶಿಭೂಷಣ ಹೆಗಡೆಗೆ ಹುರಿದುಂಬಿಸುತ್ತಿದ್ದಾನೆ. ಜೀವನದಲ್ಲಿ ಒಮ್ಮೆ ಎಮ್ಮೆಲ್ಲೆಯಾಗಿ ಅಪ್ಪನ ಆಸೆ ಈಡೇರಿಸಬೇಕೆಂಬ ಹಠದಲ್ಲಿರುವ ಶಶಿ ಈಗ ಗೊಂದಲಕ್ಕೆ ಬಿದ್ದಿದ್ದಾನೆ. ಕುಮಟೆಗೆ ಬರಲು ಅನಂತ್ಕುಮಾರ್ ಬಿಡುತ್ತಿಲ್ಲ. ಶಿರಸಿಯಿಂದ ಗೆಲ್ಲುವುದು ಅನುಮಾನ. ಕಾಂಗ್ರೆಸ್‌ನಿಂದ 'ಬಂ' ಭಾಮೈದ ಭೀಮಣ್ಣ ನಾಯ್ಕ ಅಭ್ಯರ್ಥಿಯಾದರೆ ಆತನಿಗೆ ದೀವರ ಓಟು ಇಡಿಗಂಟಲ್ಲಿ ಸಿಗುತ್ತದೆ; ಹವ್ಯಕರ ಓಟು ತನಗೆ-ಕಾಗೇರಿಗೆ ಹಂಚಿಹೋಗುತ್ತದೆ. ಆಗ ಗೆಲ್ಲುವುದು ಭೀಮಣ್ಣ ನಾಯ್ಕ ಎಂಬುದು ಶಶಿಗೆ ಗೊತ್ತಿದೆ. ಅನಂತ್ಕುಮಾರ್‌ಗೂ ಗೊತ್ತಿದೆ. ಕಾಗೇರಿ-ಶಶಿ ಇಬ್ಬರೂ ಹವ್ಯಕರು ಸೋಲಬೇಕು; ತಾನು ಗೆದ್ದು ಮಂತ್ರಿ ಗದ್ದುಗೆ ಏರಬೇಕೆಂಬುದು ಅನಂತ್ಕುಮಾರ್ ಸ್ಟ್ರಾಟಜಿ!

ಜಿಲ್ಲಾ ಬಿಜೆಪಿಯ ರಾಜಕೀಯಕ್ಕೆ ರಂಗೇರುತ್ತಿರುವ ಹೊತ್ತಲ್ಲೇ ಜೆಡಿಎಸ್‌ನಲ್ಲಿ ಅಲ್ಲೋಲಕಲ್ಲೋಲ ಆಗುತ್ತಿದೆ. ಶಶಿಭೂಷಣ, ದಿನಕರ ಶೆಟ್ಟಿಯಂಥ ಗಟ್ಟಿಗರ ಉಳಿಸಿಕೊಳ್ಳಲು ಕುಮ್ಮಿ ಕಟಿಪಿಟಿ ಮಾಡುತ್ತಿದ್ದಾರೆ. ಶಿರಸಿ-ಸಿದ್ದಾಪುರ ಕ್ಷೇತ್ರದ ಜೆಡಿಎಸ್‌ಗೆ ಶಶಿಭೂಷಣ ಹೆಗಡೆ-ರಾಮಕೃಷ್ಣ ಹೆಗಡೆ ಪ್ರಭಾವವೇ ಆಕ್ಸಿಜನ್. ಈ ಶಿರಸಿ ಜೆಡಿಎಸ್‌ನಲ್ಲಿ ಕಳೆದೊಂದು ವರ್ಷದಿಂದ ವಿಚಿತ್ರವಾದ ನಾಟಕ ಒಂದು ನಡೆಯುತ್ತಿದೆ. ಕಡೂರು ಶಾಸಕ-ದೊಡ್ಡ ಗೌಡರ ಕುಟುಂಬದ ಜನ್ಮಜನ್ಮಾಂತರದ ನಿಷ್ಠಾವಂತನೆಂಬ ಪ್ರತೀತಿಯ ವೈ.ಎಸ್.ವಿ. ದತ್ತ ಶಿರಸಿಯಲ್ಲಿ ರಾಜಕಾರಣ ಮಾಡುತ್ತಿರುವುದು ಕುತೂಹಲಕರವಾಗಿದೆ.

ಶಿರಸಿಯಿಂದ ಜೆಡಿಎಸ್ ಕ್ಯಾಂಡಿಡೇಟಾಗುವ ಉದ್ದೇಶದಿಂದ ದತ್ತ ಕ್ಷೇತ್ರ ಹದ ಮಾಡಿಕೊಳ್ಳಲೆಂದೇ ಆಗಾಗ ಬಂದುಹೋಗುತ್ತಿದ್ದರು. ಜಾತಿ ಬಂಧುಗಳಾದ ಬ್ರಾಹ್ಮಣರಿಗೆ ನಗರಸಭೆಯ ಉದ್ದೇಶಿತ ಮೀನು ಮಾರುಕಟ್ಟೆಯಿಂದ ತೊಂದರೆ ಆಗುತ್ತದೆಂದು ಪ್ರತಿಭಟನೆಗೆ ಇಳಿದಿದ್ದ ದತ್ತ ಬೆಂಗಳೂರಿನಿಂದ ಸದ್ರಿ ಫಿಶ್ ಮಾರ್ಕೆಟ್‌ಗೆ ತಡೆ ತಂದಿದ್ದರು. ಸಹಕಾರಿ ಸಂಘದಲ್ಲಿನ ಆಸಾಮಿ ಸಾಲ ವಸೂಲಾತಿಯಿಂದ ರೈತರಿಗೆ ತೊಂದರೆ ಆಗದಂತೆ ನೋಡಿಕೊಂಡಿದ್ದರು; ಆತನ ಒಂದೊಂದೇ ಹೆಜ್ಜೆ ಸ್ವ-ಜಾತಿ ಶಾಸಕ ಕಾಗೇರಿಗೆ ಟಾಂಗ್ ಕೊಡುತ್ತ ಸಾಗಿತ್ತು. ಹವ್ಯಕ-ಬ್ರಾಹ್ಮಣರು ಹೆಚ್ಚಿರುವ ಶಿರಸಿ-ಸಿದ್ದಾಪುರ ಕ್ಷೇತ್ರದ ಮೇಲೆ ದತ್ತರ ಕಣ್ಣು ಬೀಳುವುದಕ್ಕೆ ಕಾರಣ ಕುತೂಹಲಕರವಾಗಿದೆ.


ಕಡೂರಲ್ಲಿ ಕುರುಬ ಮತದಾರರು ಜಾಸ್ತಿಯಿರುವುದರಿಂದ ದತ್ತ ಸಿಎಂ ಕುರುಬರ ಸಿದ್ದು ಸಂಗಡ ಸಲಿಗೆ ಬೆಳೆಸಿಕೊಂಡಿದ್ದರು. ಇದು ದೇವೇಗೌಡ-ಕುಮ್ಮಿ ಕಣ್ಣುರಿ ತರಿಸಿತ್ತು. ಹೀಗಾಗಿ ದತ್ತರಿಗೆ ಕಡೂರು ಟಿಕೆಟ್ ತಪ್ಪಿಸುವ ತಂತ್ರಗಾರಿಕೆ ಗೌಡರ ಫ್ಯಾಮಿಲಿ ಹೆಣೆಯಿತು ಎಂಬ ಮಾತು ಕೇಳಿಬರುತ್ತಿದೆ.


ಕಡೂರಲ್ಲಿ ಸ್ವಜಾತಿ ಒಕ್ಕಲಿಗರಿಗೆ ಟಿಕೆಟ್ ಕೊಡುವ ನಿರ್ಧಾರಕ್ಕೆ ದೇವೇಗೌಡ ಬರುತ್ತಿದ್ದಂತೆಯೇ ಬ್ರಾಹ್ಮಣರು ಹೆಚ್ಚಿರುವ ಶಿರಸಿ-ಸಿದ್ದಾಪುರ ಕ್ಷೇತ್ರಕ್ಕೆ ವಲಸೆ ಹೋಗುವ ಅನಿವಾರ್ಯ ತೀರ್ಮಾನಕ್ಕೆ ದತ್ತ ಬರಬೇಕಾಯ್ತು. ವಿಚಿತ್ರವೆಂದರೆ ಈ ಒಂದು ವರ್ಷದಲ್ಲಿ ಲೆಕ್ಕವಿಲ್ಲದಷ್ಟು ಬಾರಿ ದತ್ತ ಶಿರಸಿಗೆ ಬಂದುಹೋಗಿದ್ದಾರೆ. ತರಹೇವಾರಿ ಜನಪರ ಮಾತುಗಾರಿಕೆ ತೋರಿಸಿದ್ದಾರೆ. ಶಾಸಕ ಕಾಗೇರಿ ಕಾಲೆಳೆದಿದ್ದಾರೆ. ಅಡಿಕೆ ಬೆಳೆಗಾರರ ಸಮಸ್ಯೆಯೇ ಮುಂತಾದ ಶಿರಸಿ-ಸಿದ್ದಾಪುರದ ಬೇಕುಬೇಡಗಳ ಇಟ್ಟುಕೊಂಡು ರಾಜಕಾರಣ ಮಾಡುತ್ತಿರುವ ದತ್ತ ಇಲ್ಲಿಂದ ಗೆಲ್ಲುವುದು ಅಷ್ಟು ಸುಲಭವೇನಲ್ಲ.

ಅಸೆಂಬ್ಲಿ ಎಲೆಕ್ಷನ್‌ಗೆ ಒಂದೂವರೆ ವರ್ಷ ಬಾಕಿಯಿದೆ. ಆಗಲೆ ಉತ್ತರ ಕನ್ನಡದ ಬಿಜೆಪಿ ಮತ್ತು ಜೆಡಿಎಸ್‌ನ ರಾಜಕೀಯಕ್ಕೆ, ಚುನಾವಣಾ ಚಂಡಮಾರುತ ಅಪ್ಪಳಿಸಿದೆ. ಎಲೆಕ್ಷನ್ ಹತ್ತಿರಾದಂತೆ ಬಿಜೆಪಿಗೆ ಲಾಟ್-ಫ್ರುಟ್ ವಲಸಿಗರೇ ಹೊರೆಯಾಗಿ ಕುಸಿದರೆ ಅಚ್ಚರಿಯೇನಿಲ್ಲ!

■ ನಹುಷ


ಗಂಗಾವತಿ: ಅನ್ಸಾರಿ ತಂತ್ರ, ಶ್ರೀನಾಥ ಅತಂತ್ರ







ಗಂಗಾವತಿಯಲ್ಲಿ ಅನಿಶ್ಚಿತ ರಾಜಕಾರಣದ್ದೇ ಕಾರುಬಾರು. ಹಾಲಿ ಜೆಡಿಎಸ್ ಶಾಸಕ ಇಕ್ಬಾಲ್ ಅನ್ಸಾರಿ ತನ್ನ ಪಕ್ಷದಿಂದಲೇ ಅಮಾನತುಗೊಂಡು ಅತಂತ್ರದಲ್ಲಿದ್ದಾರೆ. ಮುಂದಿನ ಎಲೆಕ್ಷನ್‌ನಲ್ಲಿ ಅವರು ಕಾಂಗ್ರೆಸ್ ಸೇರಿ ಕೈ ಹುರಿಯಾಳಾಗಿ ಸ್ಪರ್ಧಿಸುತ್ತಾರೆನ್ನುವುದು ಬಹುಪಾಲು ದೃಢವಾದರೂ ಇನ್ನೂ ಅಧಿಕೃತಗೊಂಡಿಲ್ಲ. ಇದು ಕಾಂಗ್ರೆಸ್ ಟಿಕೆಟ್‌ಗೆ ಕಸರತ್ತು ನಡೆಸುತ್ತಿರುವ ಎಚ್.ಆರ್ ಶ್ರೀನಾಥ್‌ರ ರಾಜಕಾರಣಕ್ಕೂ ಅನಿಶ್ಚಿತತೆಯನ್ನು ತಂದೊಡ್ಡಿದೆ. ಒಂದೊಮ್ಮೆ ಅನ್ಸಾರಿ ಕಾಂಗ್ರೆಸ್‌ಗೆ ಬಂದರೆ, ಆತನಿಗೇ ಟಿಕೆಟು ಸಿಕ್ಕರೆ ಮುಂದೆ ತನ್ನ ಗತಿ ಏನು ಅನ್ನೋದು ಶ್ರೀನಾಥ್ ಪಾಲಿನ ಮಿಲಿಯನ್ ಡಾಲರ್ ಪ್ರಶ್ನೆ.

ಅನ್ಸಾರಿ ಜೆಡಿಎಸ್‌ನಿಂದ ಗೆದ್ದ ನಂತರ ಕುಮಾರಸ್ವಾಮಿ ಮತ್ತು ದೇವೇಗೌಡರೊಂದಿಗೆ ಮುನಿಸಿಕೊಂಡು ಸಿದ್ದರಾಮಯ್ಯನವರ ದೋಸ್ತಿಯ ಕಾರಣಕ್ಕೆ ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮತ ನೀಡಿದ್ದು, ಅದಕ್ಕೆ ಪ್ರತಿಯಾಗಿ ಅನ್ಸಾರಿಯೂ ಸೇರಿದಂತೆ ಅಷ್ಟ ಅಡ್ಡಮತಾಧೀಶರನ್ನು ಜೆಡಿಎಸ್ ದಿಗ್ಗಜರು ಅಮಾನತ್ತು ಮಾಡಿದ್ದು ಇವೆಲ್ಲವೂ ಹಳೇ ವಿಷಯ. ಆದರೆ ಕಾಂಗ್ರೆಸ್ ನಾಯಕ, ಮಾಜಿ ಎಮ್.ಎಲ್.ಸಿ ಶ್ರೀನಾಥ್ ಪಾಲಿಗಿದು ತಾಜಾ ದುರಂತ. ಯಾಕೆಂದರೆ ಈ ಕ್ಷೇತ್ರದಲ್ಲಿ ನಗರ ಪ್ರಾಧಿಕಾರ ಮತ್ತು ಸ್ಥಳಿಯ ನಗರಸಭೆಗೆ ಸೇರಿದಂತೆ ಎಲ್ಲಾ ನೇಮಕಗಳು ಅನ್ಸಾರಿಯ ಇಶಾರೆಯಂತೆ ನಡೆಯುತ್ತಿರುವುದರಿಂದ 2018ರ ವಿಧಾನಸಭಾ ಚುನಾವಣೆಯಲ್ಲಿ ಅನ್ಸಾರಿಗೆ ಕಾಂಗ್ರೆಸ್ ಟಿಕೆಟ್ ಸಿಗುವುದು ಬಹುತೇಕ ನಿಕ್ಕಿಯಾಗಿದೆ. ಸಹಜವಾಗಿಯೇ ಗಾಬರಿಗೆ ಬಿದ್ದಿರುವ ಶ್ರೀನಾಥ ದೆಹಲಿ ಮಟ್ಟದಲ್ಲಿ ತಮ್ಮ ಕುಟುಂಬಕ್ಕಿರುವ ಕಾಂಗ್ರೆಸ್ ಲಿಂಕ್ ಬಳಸಿಕೊಂಡು ಟಿಕೆಟ್ ಅಂಗಲಾಚುತ್ತಿದ್ದಾನೆ. ಹೀಗಾಗಿ ಅನ್ಸಾರಿ ಮತ್ತು ಶ್ರೀನಾಥನ ನಡುವೆ ನಡೆಯುತ್ತಿರುವ ರಾಜಕೀಯ ಚದುರಂಗದಾಟ ಗಮನ ಸೆಳೆದಿದೆ.







ಆ ಪರಿ ಮೆರೆದಾಟ ಈಗ ನರಳಾಟ


ಗಂಗಾವತಿಯನ್ನು ತಮ್ಮ ಪಾಳೆಪಟ್ಟಾಗಿ ಮಾಡಿಕೊಂಡು 70ರ ದಶಕದಿಂದ ಕೊಪ್ಪಳಕ್ಕೆ ನಾಲ್ಕು ಬಾರಿ ಸಂಸದ ಒಮ್ಮೆ ಶಾಸಕನಾಗಿ ಮೆರೆದಾಡಿದ್ದ ಶ್ರೀನಾಥ್ ತಂದೆ ಎಚ್.ಜಿ.ರಾಮುಲು ಬಳ್ಳಾರಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಕಾಂಗ್ರೆಸಿನ ಸುಪ್ರೀಂ ಸರ್ವಾಧಿಕಾರಿಯಂತೆ ಮೆರೆದಾತ. ಲಿಕ್ಕರ್ ದಂಧೆ ಲಾಬಿಯ ಮುಖಾಂತರ ಆರ್ಥಿಕವಾಗಿ ಬಲಾಢ್ಯರಾದ ರಾಮುಲು ಕಾಂಗ್ರೆಸ್ ಪಕ್ಷವನ್ನು ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಂಡಿದ್ದರು. ಇವರ ಸಹೋದರನ ಮಗ ಎಚ್.ಆರ್.ಗವಿಯಪ್ಪ 2004 ರಲ್ಲಿ ಹೊಸಪೇಟೆಯ ಶಾಸಕನಾಗಿದ್ದರೆ, ಇನ್ನೊಬ್ಬ ಸಂಬಂಧಿ ಎಚ್.ಎಸ್.ಮುರಳಿಧರ ಗಂಗಾವತಿಯ ಶಾಸಕನಾಗಿದ್ದ. ರಾಮುಲು ಮಗ ಎಚ್.ಆರ್.ಶ್ರೀನಾಥ ಎರಡು ಬಾರಿ ಕೊಪ್ಪಳ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮತ್ತು ತುಂಗಭದ್ರಾ ಕಾಡಾ ಅಧ್ಯಕ್ಷನಾಗಿದ್ದ. ಹೀಗೆ ಇವರ ಕುಟುಂಬ ರಾಜಕಾರಣ ಭರ್ಜರಿಯಾಗಿ ಮೆರೆದಾಡಿತ್ತು. ಇವರ ವಿರುದ್ಧ ಹೋರಾಟ ಮಾಡಿದ್ದ ಅಂದು ಜನತಾದಳದಲ್ಲಿದ್ದ ಈಗಿನ ಸಚಿವ ಬಸವರಾಜ ರಾಯರೆಡ್ಡಿ, ಮಾಜಿ ಮಂತ್ರಿ ಸಾಲೋಣಿ ನಾಗಪ್ಪ, ಕನಕಗಿರಿ ಶಾಸಕನಾಗಿದ್ದ ಮಲ್ಲಿಕಾರ್ಜುನ ನಾಗಪ್ಪ ಸೇರಿದಂತೆ ಹಲವರು ರಾಜಕೀಯವಾಗಿ ಅತಂತ್ರರಾಗಿ ಹೋಗಿದ್ದರು. ಆದರೆ ಯಾವಾಗ 2004ರಲ್ಲಿ ರಾಮುಲು ರಾಜಕೀಯದಿಂದ ನಿವೃತ್ತಿಯಾದನೋ ಅಂದಿನಿಂದ ಇವರ ವಿರೋಧಿಗಳು ಚಿಗುರಿಕೊಂಡು ರಾಮುಲು ಕುಟುಂಬದ ರಾಜಕೀಯ ಭವಿಷ್ಯ ಅತಂತ್ರವಾಗತೊಡಗಿತ್ತು. ತನ್ನ ಮಗ ಶ್ರೀನಾಥ ತನ್ನಂತೆಯೇ ರಾಜಕೀಯದಲ್ಲಿ ಬೆಳೆಯಬೇಕೆಂಬ ರಾಮುಲು ಕನಸು ನನಸಾಗಲೇ ಇಲ್ಲ. ಈ ಶ್ರೀನಾಥ ತಂದೆಯ ರಾಜಕೀಯ ಪಟ್ಟುಗಳನ್ನು ಕಲಿಯುವಲ್ಲಿ ವಿಫಲನಾಗಿ ಹೋದ. 2013ರ ಚುನಾವಣೆಯಲ್ಲಿ ಗಂಗಾವತಿ ಕ್ಷೇತ್ರದಿಂದ ಶ್ರೀನಾಥ ಕಾಂಗ್ರೆಸ್ ಅಭ್ಯರ್ಥಿಯಾಗಿ ಠೇವಣಿ ಕಳೆದುಕೊಂಡದ್ದು ಇದಕ್ಕೊಂದು ನಿದರ್ಶನ.

ಅನ್ಸಾರಿ ಈಗ ಶ್ರೀನಾಥನಿಗೆ ಮಗ್ಗುಲಮುಳ್ಳು


ಇಕ್ಬಾಲ್ ಅನ್ಸಾರಿ ಮೂಲತಃ ಕಾಂಗ್ರೆಸಿಗ. ಅದರಲ್ಲೂ ಅದೇ ರಾಮುಲು ಸಾಮ್ರಾಜ್ಯದಲ್ಲಿ ಅವರ ಹಿಂಬಾಲಕನಾಗಿ ರಾಜಕೀಯದಲ್ಲಿ ಸಕ್ರಿಯನಾಗಿದ್ದ. ಯಾವಾಗ ರಾಮುಲು, ಅನ್ಸಾರಿಗೆ ಯಾವುದೇ ಅಧಿಕಾರ ನೀಡದೆ ತಮ್ಮ ಚುನಾವಣೆಗೆ ಮಾತ್ರ ಬಳಸಿಕೊಳ್ಳುತ್ತಿದ್ದುದು ಬಲಯಾಯಿತೋ ಆಗ ಸಹಜವಾಗಿಯೇ ರಾಜಕೀಯ ಮಹತ್ವಾಕಾಂಕ್ಷೆ ಹೊಂದಿದ್ದ ಅನ್ಸಾರಿ 2004ರಲ್ಲಿ ರಾಮುಲು ಕುಟುಂಬಕ್ಕೆ ಸೆಡ್ಡು ಹೊಡೆದು ಜೆಡಿಎಸ್ ಪಕ್ಷಕ್ಕೆ ಸೇರಿಕೊಂಡಿದ್ದ. ಆ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಅನ್ಸಾರಿ ಸ್ಪರ್ಧಿಸಿದ್ದರೆ, ಕಾಂಗ್ರೆಸ್‌ನಿಂದ ನಾಲ್ಕುಬಾರಿ ಶಾಸಕನಾಗಿದ್ದ ಶ್ರೀರಂಗದೇವರಾಯಲು, ಬಿಜೆಪಿಯಿಂದ ರೈತ ಮುಖಂಡ ಎಚ್.ಗಿರಿಗೌಡ ಸ್ಪರ್ಧಿಸಿದ್ದರು. ಅನ್ಸಾರಿಯನ್ನು ಸೋಲಿಸಲೇಬೇಕೆಂಬ ಕಾರಣಕ್ಕೆ ರಾಮುಲು ಕಂಪನಿ ಆಂತರಿಕವಾಗಿ ಬಿಜೆಪಿ ಅಭ್ಯರ್ಥಿ ಗಿರಿಗೌಡನ ಪರವಾಗಿ ಕಾರ್ಯನಿರ್ವಹಿಸಿದ್ದರು. ಆದರೂ ಅಂದು ಅನ್ಸಾರಿ ಬಿಜೆಪಿಯ ಗಿರಿಗೌಡನ ವಿರುದ್ಧ 1500 ಮತಗಳಿಂದ ಗೆದ್ದದ್ದಲ್ಲದೆ ಸಚಿವನಾಗಿಯೂ ಮೆರೆದಿದ್ದರು. 2008ರಲ್ಲಿ ಅನ್ಸಾರಿ 2ನೇ ಬಾರಿ ಸ್ಪರ್ಧಿಸಿದಾಗ ಕಾಂಗ್ರೆಸ್ ನಿಂದ ಮಾಜಿ ಮಂತ್ರಿ ಸಾಲೋಣಿ ನಾಗಪ್ಪ ಸ್ಪರ್ಧಿಸಿದ್ದ. ಆಗಲೂ ಸಹ ರಾಮುಲು ಕಂಪನಿ ಬಿಜೆಪಿ ಅಭ್ಯರ್ಥಿಯಾಗಿದ್ದ ಪರಣ್ಣ ಮುನವಳ್ಳಿ ಪರ ಕೆಲಸ ಮಾಡಿತ್ತು. ಅದರಿಂದಾಗಿ ಅನ್ಸಾರಿ ಸೋಲಬೇಕಾಗಿತ್ತು. ರಾಮುಲು ಕೈವಾಡವಲ್ಲದೆ ಅನ್ಸಾರಿಯ ಕೆಲ ಸ್ವಯಂಕೃತ ಅಪರಾಧಗಳೂ ಆ ಸೋಲಿನಲ್ಲಿ ತಮ್ಮ ಪಾತ್ರ ನಿಭಾಯಿಸಿದ್ದವು.

ಆಮೇಲೆ ದೇವೇಗೌಡರೊಂದಿಗೆ ಮುನಿಸಿಕೊಂಡು ಕಾಂಗ್ರೆಸ್ ಸೇರಿದ ಅನ್ಸಾರಿ ನಂತರ ಅಲ್ಲಿದ್ದ ಮಾಜಿಮಂತ್ರಿ ಮಲ್ಲಿಕಾರ್ಜುನ ನಾಗಪ್ಪ ಮತ್ತು ಶ್ರೀನಾಥರ ಕಾಟ ತಾಳದೆ 2013ರಲ್ಲಿ ಮತ್ತೆ ಜೆಡಿಎಸ್ ಬಾಗಿಲುತಟ್ಟಿ 2ನೇ ಬಾರಿಗೆ ಶಾಸಕನಾಗಿದ್ದ. ಈಗ ಮತ್ತೆ ದೇವೇಗೌಡರ ಜೊತೆ ಮುನಿಸಿಕೊಂಡು ಕಾಂಗ್ರೆಸ್ ದಿಡ್ಡಿ ಬಾಗಿಲು ತಟ್ಟುತ್ತಿದ್ದಾರೆ. ಒಟ್ಟಾರೆ ಅನ್ಸಾರಿಗೆ ಜೆಡಿಎಸ್-ಕಾಂಗ್ರೆಸ್ ಪಕ್ಷಾಂತರಕ್ಕೆ ಉಚಿತ ಪಾಸ್ ಸಿಕ್ಕಿರುವಂತೆ ಕಾಣುತ್ತೆ. ಒಂದೊಂದು ಚುನಾವಣೆಯಲ್ಲಿ ಒಂದೊಂದು ಪಕ್ಷದ ಲಾಂಛನದಡಿ ಮಿಂಚುತ್ತಾರೆ. ಅದೇನೇ ಇರಲಿ ಅನ್ಸಾರಿ ಕಾಂಗ್ರೆಸ್‌ಗೆ ವಾಪಸಾದರೆ ಅದು ಶ್ರೀನಾಥ್ ಪಾಲಿಗೆ ಮಗ್ಗುಲಮುಳ್ಳು ಎನ್ನುವುದಂತು ಮಾತ್ರ ಸುಳ್ಳಲ್ಲ.

■ ಸ. ಶರಣಪ್ಪ ಪಾಟೀಲ ಕರಮುದಿ



ಇದು ಜಿಪಂ ಚುನಾವಣೆಯಲ್ಲಿ ಹೆಂಡತಿ ಚಂದ್ರಿಕ ಗೆದ್ದ ಸಂಭ್ರಮದ ಫೋಟೋ.



ಶ್ರೀನಿವಾಸ್ ಮತ್ತು ಶಾಸಕ ರಘು ಮೂರ್ತಿ

ಚಳ್ಳಕೆರೆ: ಫಢಾರಿ ಸೀನನ ಅಕ್ರಮ ಸೋಲಾರ್ ದಂಧೆ

ಬಿಸಿಲನಾಡು ಚಿತ್ರದುರ್ಗದ ಚಳ್ಳಕೆರೆಯಲ್ಲಿ ವಿಚಿತ್ರವೊಂದು ನಡೆಯುತ್ತಿದೆ. ಸತ್ತು ಮೂವತ್ತೈದು ವರ್ಷವಾದವರೂ ದಿಢೀರನೆ ಎದ್ದು ಬರುತ್ತಾರೆ, ಅಸ್ತಿತ್ವವೇ ಇಲ್ಲದವರು ತಾಲ್ಲೂಕು ಕಚೇರಿ ಅಂಗಳದಲ್ಲಿ ಅಲೆದಾಡುತ್ತಾರೆ, ಅಪ್ಪ-ಮಕ್ಕಳ ವಂಶಾವಳಿಯೇ ಹಠಾತ್ತನೆ ಅದಲು-ಬದಲಾಗುತ್ತೆ..! ಇವೆಲ್ಲಾ 'ಹೀಗೂ ಉಂಟೇ?' ಅಂತ ಹುಬ್ಬೇರಿಸುವ ತಲೆಬುಡವಿಲ್ಲದ ಸ್ಯಾಂಪಲ್‌ಗಳಲ್ಲ, ಬದಲಿಗೆ ಚಳ್ಳಕೆರೆ ಜಿಲ್ಲಾ ಪಂಚಾಯ್ತಿ ಮೆಂಬರಮ್ಮ ಚಂದ್ರಿಕಾಳ ಗಂಡ ಶ್ರೀನಿವಾಸನ ಬೋಗಸ್ ಪವಾಡಗಳು!! ಈ ಸೀನ ಮಹಾ ಖತರ್ನಾಕ್ ಆಸಾಮಿ. ಬೆಂಗಳೂರಿನ ಅಡ್ಡಾದಿಡ್ಡಿ ರಸ್ತೆಗಳಲ್ಲಿ ಪಳಗೆದ್ದು ಬಂದವನು. ಸೋಲಾರ್ ದಂಧೆಯ ನೆಪದಲ್ಲಿ ಬಡ ರೈತರ ಜಮೀನುಗಳ ಮೇಲೆ ಕಾಕದೃಷ್ಟಿ ಬೀರಿ ಇನ್ನಿಲ್ಲದ ಲೂಟಿಗಿಳಿದಿದ್ದಾನೆ. ಇವನ ಕರಾಮತ್ತಿನಿಂದಲೇ ಸತ್ತವರು ಎದ್ದು ಬಂದು ಜಮೀನು ಮಾರುತ್ತಾರೆ, ಅಸ್ತಿತ್ವವೇ ಇಲ್ಲದವರು ಅದನ್ನು ಖರೀದಿಸುತ್ತಾರೆ!

ಮಳೆ ಕೈಕೊಟ್ಟು, ಕರೆಂಟು ಕಣ್ಣು ಮುಚ್ಚಿದ್ದೇ ತಡ ಸೋಲಾರ್ ಬೆಳಕಿನ ಬಂಡವಾಳಶಾಹಿಗಳ ಕರೆಂಟ್ ದಂಧೆ ಚಿಗುರಿಕೊಂಡಿದೆ. ಹತ್ತಾರು ಕೋಟಿ ಬಂಡವಾಳ ಹೂಡಿ ಸೋಲಾರ್ ಪ್ಲಾಂಟ್ ಶುರುಮಾಡಲು ನೂರಾರು ಎಕರೆ ಜಮೀನು ಬೇಕು. ಹಾಗಾಗಿಯೇ ಈ ಸೋಲಾರ್ ದಂಧೆಯ ಕುಳಗಳು ಸದಾ ಬರಗಾಲದ ರೈತರ ಜಮೀನಿಗೆ ಮುಗಿಬೀಳುತ್ತವೆ. ಇಂತಹ ಜಮೀನು ಖರೀದಿಗೆ ಸ್ಥಳೀಯ ಪುಡಿ ರಾಜಕಾರಣಿಗಳ ಹೆಗಲ ಮೇಲೆ ಕೈಹಾಕಿ ವ್ಯವಹಾರಕ್ಕಿಳಿಯುತ್ತಾರೆ. ಹಾಗೆ ಕಮೀಷನ್ ಆಸೆಗಾಗಿ ಮುಗ್ಧ ರೈತರ ಜಮೀನು ಮುಂಡಾಮೋಚುವ ದಂಧೆಗೆ ಕೈಹಾಕಿದವರಲ್ಲಿ ಈ ಶ್ರೀನಿವಾಸನೂ ಒಬ್ಬ.

ಡಿಕೆಶಿ ಶಿಷ್ಯನಂತೆ

ಮೂಡಲಜಾಜೂರು ಎಸ್ಸಿ ಮೀಸಲು ಜಿ.ಪಂ ಕ್ಷೇತ್ರದಿಂದ ಚಂದ್ರಿಕಾ ಗೆದ್ದು ಮೆಂಬರಾಗಿದ್ದರೂ ಕಾರುಬಾರು ಮಾತ್ರ ಆಕೆಯ ಗಂಡ ಶ್ರೀನಿವಾಸನದ್ದೆ. ಸೋಲಾರ್ ದಂಧೆ ಶುರುವಾದದ್ದೇ ತಡ ತಾನು ಡಿಕೆಶಿ ಶಿಷ್ಯ ಅಂತ ಹವಾ ಬಿಡತೊಡಗಿದ ಸೀನ ಅಲ್ಲಿಂದಲೇ ರಿಯಲ್ ಎಸ್ಟೇಟ್ ದಂಧೆಯ ಪಾತಕ ಪ್ರಪಂಚಕ್ಕೆ ನಿಧಾನವಾಗಿ ಇಣುಕತೊಡಗಿದ್ದ.

ಅದೇನೋ ಡಿಕೆ ಶಿವಕುಮಾರ್ ಪವರ್ ಮಿನಿಷ್ಟ್ರು ಆದದ್ದೇ ತಡ ಸೋಲಾರ್ ಕರೆಂಟಿಗೆ ಮಹತ್ವ ಬಂದು ನೂರಾರು ಎಕರೆ ಭೂಮಿಗೆ ಬೇಡಿಕೆ ಬಂತು. ಸೀನನಿಗೆ ಮೊದಲೇ ಡಿಕೆಶಿ ಪ್ಲಾನು ಗೊತ್ತಾಗಿತ್ತೋ, ಹಾಗೆ ಗೊತ್ತಾಗಿಯೇ ಸೀನ ತಾನು ಡಿಕೆಶಿ ಶಿಷ್ಯ ಅಂದುಕೊಂಡು ಅಡ್ಡಾಡಿದನೋ ಏನೋ, ಅಂತೂಇಂತೂ ಪವರ್‌ಮಂತ್ರಿ ಡಿಕೆಶಿ ಒಡೆತನದ ಸೋಲಾರ್ ಪ್ಲಾಂಟ್ ಚಳ್ಳಕೆರೆಯ ಚನ್ನಮ್ಮನಾಗತಿಹಳ್ಳಿಯಲ್ಲಿ ತಲೆ ಎತ್ತಲು ಪ್ರಯತ್ನ ಮಾಡತೊಡಗಿದ್ದು ಸೀನನ ಬಾಳಿಗೆ ಭರ್ಜರಿ ಬೆಳಕು ಬಂದಂತಾಗಿತ್ತು, ಯಾಕೆಂದರೆ ಈ ಹಳ್ಳಿ ಸೀನನ ಹೆಂಡತಿ ಚಂದ್ರಿಕ ಗೆದ್ದುಬಂದ ಜಿ.ಪಂ. ಕ್ಷೇತ್ರದ ವ್ಯಾಪ್ತಿಗೇ ಬರುತ್ತದೆ.

ಚಳ್ಳಕೆರೆ ಕ್ಷೇತ್ರದಲ್ಲಿ ಸಿದ್ದರಾಮಯ್ಯನ ಸರ್ಕಾರದ ಪವರ್‌ಫುಲ್ ಮಂತ್ರಿ ಡಿಕೆ ಶಿವಕುಮಾರರ ಸೋಲಾರ್ ಪ್ಲಾಂಟ್ ತಲೆಎತ್ತುತ್ತದೆಂದರೆ ಸುಮ್ಮನೆಯ ಮಾತಾ? ಕ್ಷೇತ್ರದ ಕೈ ರಾಜಕಾರಣವೇ ಜಾಗೃತಗೊಳ್ಳುತ್ತದಲ್ಲದೇ ಸಕಲ ಸಹಕಾರ ನೀಡಲೂ ತಯಾರಿ ನಡೆಸುತ್ತದೆ. ಹಾಗಾಗಿಯೇ ಸೀನನೆಂಬ ನಮಕ್‌ಹರಾಮಿ ರಾಜಕಾರಣಿ ಡಿಕೆಶಿ ದಂಧೆಗೆ ಸಾತ್‌ನೀಡಲು ಸಿದ್ಧನಾಗಿದ್ದ. ಚನ್ನಮ್ಮನಾಗತಿಹಳ್ಳಿ ಕಾವಲ್‌ನ 250 ಎಕರೆ ಭೂಮಿ ಖರೀದಿಗೆ ಸೀನ ಕೈತೊಳೆದು ಬೆನ್ನಹತ್ತಿದ್ದ.

ಕಾನೂನುಬಾಹಿರ ವ್ಯವಹಾರ


ಎಸ್ಸಿ-ಎಸ್ಟಿಯಲ್ಲದವರು ಎಸ್ಸಿ-ಎಸ್ಟಿ ರೈತರ ಭೂಮಿ ಖರೀದಿಸಬಾರದು ಎನ್ನುವ ಕಾನೂನಿದ್ದರೂ ಸೀನನೆಂಬೋ ದಗಲುಬಾಜಿ ಎಸ್ಟಿ ಸಮುದಾಯದ ಪೆದ್ದಣ್ಣ ಬಿನ್ ಗಾದ್ರಪ್ಪನ ಚನ್ನಮ್ಮನಾಗತಿಹಳ್ಳಿ ಕಾವಲ್ ಸರ್ವೆ ನಂಬರ್ 96ರ 5 ಎಕರೆ ಜಮೀನನ್ನು ಗೊಲ್ಲರ ಕೆ. ನಿಂಗಣ್ಣನಿಗೆ ಎಕರೆಗೆ ಕೇವಲ ಲಕ್ಷದಂತೆ ಮಾರಿಸಿಬಿಡುತ್ತಾನೆ. ಹಾಗೆ ನೋಡಿದರೆ ನಿಂಗಣ್ಣ ಲಕ್ಷಾಂತರ ರೂಪಾಯಿ ಎಣಿಸಿ ಐದೆಕರೆ ಜಮೀನು ಖರೀದಿಸುವ ಆರ್ಥಿಕ ಸದೃಢದವನಲ್ಲ. ಇಲ್ಲಿ ವಿಚಿತ್ರವಾದದ್ದೊಂದು ಸಂಗತಿಯಿದೆ. ನಿಂಗಪ್ಪ-ಗಾದ್ರಪ್ಪ ಬಿನ್ ಓಬಯ್ಯ ಎನ್ನುವವರು ಸತ್ತು ದಶಕಗಳೇ ಆಗಿಹೋಗಿವೆ. ಇವರ ಐದು ಜನ ಮಕ್ಕಳಲ್ಲಿ ಬಸವರಾಜ ತೀರಿಕೊಂಡು ನಾಲ್ಕು ಜನ ಮಕ್ಕಳಾದ ಓಬಣ್ಣ, ಚಂದ್ರಪ್ಪ, ಪೆದ್ದಣ್ಣ, ಜಯಣ್ಣ ಬದುಕಿದ್ದಾರೆ. ಈ ನಾಲ್ವರ ಪೈಕಿ ಪೆದ್ದಣ್ಣ, ಜಯಣ್ಣರಿಬ್ಬರ ಎರಡು ಎಕರೆ ಜಮೀನನ್ನು ಇದೇ ಸೀನ ಎಕರೆಗೆ 80 ಸಾವಿರದಂತೆ 2 ವರ್ಷಗಳ ಹಿಂದೆಯೇ ಖರೀದಿ ಮಾಡಿದ್ದಾನೆ. ಆ ಎರಡು ಎಕರೆ ಸೇರಿದಂತೆ ಅದೇ 96ರ ಸರ್ವೆ ನಂಬರಿನ 5 ಎಕರೆ ಜಮೀನನ್ನು ಗೊಲ್ಲರ ನಿಂಗಣ್ಣನ ಹೆಸರಲ್ಲಿ ಖರೀದಿಸಿ ಡಿಕೆ ಶಿವಕುಮಾರರ ಸೋಲಾರ್ ಕಂಪನಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಸೀನನ ಉದ್ದೇಶ.

ನಕಲಿ ದಾಖಲೆಗಳು


ಸೀನ ಇಂಥಾ ದಂಧೆಗಳಲ್ಲಿ ನಿಸ್ಸೀಮ ಎನ್ನುವುದು ಚಳ್ಳಕೆರೆ ರಾಜಕೀಯ ವಲಯವೇ ಹೇಳುತ್ತದೆ. ಗಾದ್ರಪ್ಪ ಬಿನ್ ಓಬಯ್ಯ ಸತ್ತು ದಶಕಗಳೇ ಸಂದಿವೆ. ಹಾಗೆ ಗಾದ್ರಪ್ಪನ 2ನೇ ಮಗ ಬಸವರಾಜ ಕೂಡ ತೀರಿಕೊಂಡಿದ್ದಾನೆ. ಇನ್ನು 4ನೇ ಮಗ ಪೆದ್ದಣ್ಣನೇ ಈ ಜಮೀನು ಮಾರಾಟದ ಉಸ್ತುವಾರಿ ವಹಿಸಿದ್ದಾನೆ. ಹಾಗೆ ನೋಡಿದರೆ ಜಮೀನು ಮಾರಾಟ ಅಥವಾ ಹದ್ದುಬಸ್ತು ಮಾಡಿಸಲು ಇಲಾಖೆಯಿಂದ ವಂಶವೃಕ್ಷ ಪಡೆಯುವುದು ಕಾನೂನು. ಹಾಗೇ ಗಾದ್ರಪ್ಪನ ವಂಶವೃಕ್ಷದಲ್ಲಿ 1ನೇ ಮಗ ಓಬಣ್ಣ, 2ನೇ ಮಗ ಬಸವರಾಜ (ಪೌತಿ), 3ನೇ ಮಗ ಚಂದ್ರಪ್ಪ, 4ನೇ ಮಗ ಪೆದ್ದಣ್ಣ, 5ನೇ ಮಗ ಜಯಣ್ಣ ಎಂದಿದೆ. ಹಾಗೆ ನೋಡಿದರೆ ಇದು ಒರಿಜಿನಲ್. ಇದನ್ನು ಚಳ್ಳಕೆರೆ ತಾಲ್ಲೂಕಿನ ಕಂದಾಯಾಧಿಕಾರಿ ಡಿ. ಮಲ್ಲಿಕಾರ್ಜುನ ಎನ್ನುವವರು ದೃಢೀಕರಿಸಿದ್ದಾರೆ.

ಆದರೆ 05.08.2014ರಲ್ಲಿಯೇ ಖರೀದಿ ಪ್ರಕ್ರಿಯೆ ಶುರುವಾದಾಗ ಒಂದು ವಂಶವೃಕ್ಷ ಪಡೆಯಲಾಗಿದೆ. ಇದನ್ನು ಗ್ರಾಮ ಲೆಕ್ಕಾಧಿಕಾರಿ ಎನ್.ಸಿ.ತಿಪ್ಪೇಸ್ವಾಮಿ ಕೈಬರಹದಲ್ಲಿ ನೀಡಿದ್ದಾನೆ. ಗಾದ್ರಪ್ಪ ಬಿನ್ ಓಬಯ್ಯ ಪೌತಿ (ಖಾತೆದಾರರು), ಹೆಂಡತಿ ಈರಕ್ಕ ಪೌತಿ, ನಂತರ ಮಗ ಕಾನೆಪ್ಪ ಪೌತಿ, ಮಗಳು ರತ್ನಮ್ಮ, ಕದುರಮ್ಮ ಮತ್ತು ಸಣ್ಣೀರಮ್ಮ ಈ ಸಣ್ಣೀರಮ್ಮನಿಗೆ ಇಬ್ಬರು ಮಕ್ಕಳು, 1 ನಿಂಗಣ್ಣ-ಬಾಲಮ್ಮ. ಇಲ್ಲಿ ಈ ನಿಂಗಣ್ಣನೇ ಜಮೀನು ಖರೀದಿಸಿರುವುದು.

ಇಲ್ಲಿ ವಿಚಿತ್ರವಾದ್ದೊಂದು ಸಂಗತಿ ಬಯಲಾಗಿದೆ. ಒರಿಜಿನಲ್ ವಂಶವೃಕ್ಷದಲ್ಲಿರುವ ಗಾದ್ರಪ್ಪ ಬಿನ್ ಓಬಯ್ಯನ ಮಕ್ಕಳು ಓಬಣ್ಣ, ಬಸವರಾಜಪ್ಪ, ಚಂದ್ರಪ್ಪ, ಪೆದ್ದಣ್ಣ, ಜಯಣ್ಣ. ಆದರೆ ನಕಲಿ ವಂಶವೃಕ್ಷದಲ್ಲಿ ಅದೇ ಗಾದ್ರಪ್ಪ ಬಿನ್ ಓಬಯ್ಯ ಎಂದು ಮಕ್ಕಳ ಹೆಸರುಗಳು ಮಾತ್ರ ಬೇರೆಯಾಗಿವೆ. ಹಾಗೆ ನೋಡಿದರೆ ಎರಡನೆಯ ವಂಶವೃಕ್ಷದಲ್ಲಿ ನಿಂಗಣ್ಣ ಮಾತ್ರ ಒರಿಜಿನಲ್. ಇವನೇ ಒರಿಜಿನಲ್ ವಂಶವೃಕ್ಷದಲ್ಲಿರುವ ಜಮೀನು ಖರೀದಿಸಿದ ನಾಯಕ ಸಮುದಾಯದವ. ಈತ ಗೊಲ್ಲರ ಸಮುದಾಯದವನು. ಇಲ್ಲಿ ಮತ್ತೊಂದು ವಿಚಿತ್ರವಾದ ಅಚ್ಚರಿ ಬೆಳಕಿಗೆ ಬಂದಿದೆ. ನಕಲಿ ವಂಶವೃಕ್ಷದಲ್ಲಿರುವ ಕಾನೆಪ್ಪ ಈಗಲೂ ಜೀವಂತವಾಗಿದ್ದರೂ 07.06.1993ರಂದು ಸತ್ತನೆಂದು ತಹಸೀಲ್ದಾರರೇ ಸರ್ಟಿಫಿಕೇಟು ನೀಡಿದ್ದಾರೆ. ಹಾಗೆ ಗಾದ್ರಪ್ಪ ಸತ್ತು 35 ವರ್ಷಗಳಾಗಿವೆ. ಆದರೆ ಈತನನ್ನು 01.02.2002ರಲ್ಲಿ ಸಾಯಿಸಲಾಗಿದೆ. ಹಾಗೆ ಈರಕ್ಕ 20.2.2007 ಮತ್ತು ಸಣ್ಣೀರಮ್ಮ 05.06.2012ರಂದು ಸಾಯಿಸಲಾಗಿದೆ. ಅಸಲಿಗೆ ಈ ಈರಕ್ಕ, ಸಣ್ಣೀರಮ್ಮ ಇಬ್ಬರ ಅಸ್ತಿತ್ವವೇ ಸುಳ್ಳು. ಹಾಗಾದರೆ ಈ 2 ವಂಶವೃಕ್ಷವನ್ನು ತಹಸೀಲ್ದಾರರು 17.08.2015 ರಂದು ಅದೇಗೆ ಕ್ರಮವಾಗಿ 09.09.2015, 10.08.2015, 23.09.2015, 17.08.2015 ಎಂದು ನಮೂದಿಸಿ ಸಹಿ ಹಾಕಿದರು? ಎಂಬುದೇನು ಚಿದಂಬರ ರಹಸ್ಯವೇನಲ್ಲ ಬಿಡಿ.



ಶ್ರೀನಿವಾಸ



(ನಕಲು)

ಗ್ರಾಮ: ಕೊರ್ಲಕುಂಟೆ

ಹೋಬಳಿ: ಪರಶುರಾಮಪುರ

ತಾಲ್ಲೂಕು: ಚಳ್ಳಕೆರೆ

-: ಪ್ರಮಾಣ ಪತ್ರ :-


No of Corrections

Sworn to Before me


ತೊಲಗಿ ಹೋಗಿದ್ದವನು ವಕ್ಕರಿಸಿದ

ಇನ್ನು ಈ ಸೀನನ ಬಯೋಡೆಟಾ ಬಿಡಿಸುತ್ತಾ ಹೋದರೆ ಹುಬ್ಬೇರುವಂತ ಘಟಂಗತನಗಳು ತೆರೆದುಕೊಳ್ಳುತ್ತವೆ. ಸೂರನಹಳ್ಳಿ ವೀರಭದ್ರಪ್ಪನ ಮಗನೇ ಶ್ರೀನಿವಾಸ. ವೀರಭದ್ರಪ್ಪನೇನು ಶ್ರೀಮಂತನಲ್ಲ, ದಲಿತ ಕುಟುಂಬದ ವೀರಭದ್ರಪ್ಪ ಹೊಟ್ಟೆಬಟ್ಟೆಗಂತೂ ಪರವಾಗಿಲ್ಲ ಅನ್ನುವ ಹಾಗಿದ್ದ. ಅಂತವರ ಮಗ ಶ್ರೀನಿವಾಸ ಅದೇನಾಯಿತೋ ಗೊತ್ತಿಲ್ಲ ಹದಿನೆಂಟು ವರ್ಷದವನಾಗಿದ್ದಾಗಲೇ ಊರು ಬಿಟ್ಟು ಬೆಂಗಳೂರು ಸೇರಿಕೊಂಡ. ಅಲ್ಲಿ ಅದ್ಯಾವ ದಂಧೆಗೆ ಕೈಹಾಕಿ ಪಳಗಿದನೋ ತಿಪ್ಪೇರುದ್ರನೇ ಬಲ್ಲ, ಕೆಲವೇ ವರ್ಷಗಳಲ್ಲಿ ಕೈತುಂಬ ಕಾಸು ತುಂಬಿಕೊಂಡು ತಕ್ಕಮಟ್ಟಿಗೆ ದುಂಡಗಾದ. ಹೇಳಿಕೇಳಿ ಬರಗಾಲದ ನಾಡಿನಿಂದ ಮನೆಬಿಟ್ಟು ಬಂದಿದ್ದ ಸೀನ ಬೆಂಗಳೂರಿನಲ್ಲಿ ಬರಗೆಟ್ಟವನಂಗೆ ಸಿಕ್ಕ ದಂಧೆಗಳಿಗೆಲ್ಲಾ ಕೈಹಾಕಿದ್ದೇತಡ ತರಹೇವಾರಿ ಗುಣಗಳನ್ನೆಲ್ಲಾ ಅರಗಿಸಿಕೊಂಡ. ಹಾಗೆ ಜೀರ್ಣಿಸಿಕೊಂಡವನೇ ವಿಧಾನಸೌಧ, ಎಲ್.ಹೆಚ್. ಅಂತಾ ಅಂಡಲೆದವನಿಗೆ ಅದೇನೋ ರಾಜಕಾರಣ ಹುಸಿನಗೆ ನಕ್ಕು ಹೆಗಲಮೇಲೆ ಕೈಹಾಕಿದ್ದೇತಡ ಗಳಿಗೆಗೊಂದು ವೇಷ ಹಾಕುವ ಸೀನ, ಇಲ್ಲಿ ಪಕ್ಕಾ ಯುವ ರಾಜಕಾರಣಿಯಾಗಿ ರೂಪಾಂತರಗೊಂಡುಬಿಟ್ಟ. ಕೋರಮಂಗಲದಲ್ಲಿ ತಾತ್ಕಾಲಿಕ ನೆಲೆಕಂಡುಕೊಂಡ ಸೀನ, ಕಾವೇರಿ ನೀರು ಕುಡಿದೇ ತಮಿಳರ ನಡುವೆ ತಳ ಊರಿಬಿಟ್ಟ. ಅದೇನಂತಾ ಮರಳುಮಾಡಿದನೋ ತಮಿಳರ ಹುಡುಗಿಯನ್ನೇ ಪಟಾಯಿಸಿ ಮದುವೆ ಮಾಡಿಕೊಂಡುಬಿಟ್ಟ. ಹಾಗಂತ ಸುಮ್ಮನೆ ಆದನಾ, ಇಲ್ಲ, ಹುಡುಗಿಯ ಅಪ್ಪನ ಅಂಗೈ ಅಗಲದ ಆಸ್ತಿಗೆ ಗಂಟುಬೀಳುವ ಹುನ್ನಾರವಿಟ್ಟುಕೊಂಡೇ ಮದುವೆಯಾದ. ಅದ್ಯಾವುದೋ ಕಂಪನಿಯಲ್ಲಿ ಕೂಲಿ ಮಾಡುತ್ತಿದ್ದವನು ವಿಧಾನಸೌಧದ ಕಡೆ ಮುಖ ಮಾಡಿದ. ಹಾಗೂಹೀಗೂ ಬೆಂಗಳೂರು ಪುಡಿ ರಾಜಕಾರಣಿಗಳ ಸಹವಾಸ ಮಾಡಿಕೊಂಡಿದ್ದವನು ನಿಧಾನಕ್ಕೆ ಚಳ್ಳಕೆರೆಯ ಬಿಜೆಪಿ ಶಾಸಕ ತಿಪ್ಪೇಸ್ವಾಮಿ ಮಗ ಕುಮಾರಸ್ವಾಮಿಗೆ ಗಂಟುಬಿದ್ದ. ಆ ಮೂಲಕ ಊರುಬಿಟ್ಟ ಸೀನ ಕುಮಾರಸ್ವಾಮಿಯ ಸಹವಾಸದಿಂದ ಮರಳಿ ಚಳ್ಳಕೆರೆ ಕಡೆ ಮುಖಮಾಡಿದ್ದ.

ಜೇಬುತುಂಬಾ ಕಾಸು ತುಂಬಿಕೊಂಡು ಸೂರನಹಳ್ಳಿಗೆ ವಾಪಸಾದದ್ದೇ ಜನ ಬೆರಗಾಗಿ ನೋಡಿದ್ದರು. ಆಗಲೇ ಸೀನನೊಳಗಿನ ಪುಡಿ ರಾಜಕಾರಣಿ ತನ್ನ ರೆಕ್ಕೆ ಬಿಚ್ಚಿ ಬಡಿದಾಡಲು ಶುರುಮಾಡಿದ್ದು, ಬೆಂಗಳೂರು ಬದುಕಿನ ರಾಜಕೀಯ ಸಂಬಂಧಗಳ ಬೂಸಿ ಬಿಡುತ್ತಲೇ ಚಳ್ಳಕೆರೆ ಶಾಸಕನ ಮಗನಿಗೆ ಹತ್ತಿರದವನೆಂಬ ಬಣ್ಣದ ಮಾತಿನಿಂದ ಜನರನ್ನು ಮರಳು ಮಾಡಿದ್ದ, ಅಲ್ಲಿಂದಲೇ ಚಳ್ಳಕೆರೆ ಪುಡಿಪುಂಡ ರಾಜಕಾರಣ ಸಂಘದ ಸದಸ್ಯನಾಗಿ ಎಂಟ್ರಿ ಕೊಟ್ಟಿದ್ದ, ಹಾಗಂತ ಸೀನ ಬೆಂಗಳೂರು ಬಿಡುವುದಿಲ್ಲ, ಬೆಂಗಳೂರನ್ನು ತನ್ನ ಫಟಿಂಗ ರಾಜಕಾರಣದ ಕೇಂದ್ರವಾಗಿಸಿಕೊಂಡೇ ಆಗಾಗ ಚಳ್ಳಕೆರೆಯತ್ತ ಮುಖಹಾಕಿ ಹೋಗಿ ಕೊಡುತ್ತಿದ್ದ. ಚಳ್ಳಕೆರೆ ಹೇಳಿಕೇಳಿ ಎಸ್ಸಿ ಮತ್ತು ಎಸ್ಟಿ ಸಮುದಾಯಗಳ ಮತದಾರರಿರುವ ಕ್ಷೇತ್ರ. ಹಾಗಾಗಿ ನಾಯಕ ಸಮುದಾಯದ ಶಾಸಕನಿಗೆ ಎಸ್ಸಿ ಸಮುದಾಯದ ಯುವಕ ಸಿಕ್ಕಂತಾಗಿ ಎಂ.ಎಲ್.ಎ. ಸಾಹೇಬರು ಸೀನನಿಗೆ ಮಣೆ ಹಾಕಿದ್ದರು. ಊರುಗಳಲ್ಲಿ ರಾಜಿಪಂಚಾಯ್ತಿಗಳೂ



ತಿಪ್ಪೇಸ್ವಾಮಿ



ಕುಮಾರಸ್ವಾಮಿ

ಾತಿ ಎಂ.ಎಲ್.ಎ. ಮೂಲಕ ಬಗೆಹರಿಸುತ್ತಲೇ ಕ್ಷೇತ್ರದಲ್ಲಿ ಂಟಟ ಗಳಿಸಿಕೊಂಡಿದ್ದ.

ಈ ನಡುವೆ ಮತ್ತೊಂದು ಘಟನೆ ನಡೆದುಬಿಟ್ಟಿತ್ತು, ಗಳೂರಿನ ಆನೇಕಲ್ ವಿಧಾನಸಭಾ ಕ್ಷೇತ್ರದ ಬಿಜೆಪಿಯ ಸಕ ನಾರಾಯಣಸ್ವಾಮಿಯ ಮನೆ ಕಾಯಲು ರುಮಾಡಿದ್ದ. ಜಾತಿ ಇಬ್ಬರನ್ನೂ ಹತ್ತಿರಕ್ಕೆ ಬೆಸೆದಿತ್ತು, ತರ ನಾರಾಯಣಸ್ವಾಮಿ ಸಮಾಜ ಕಲ್ಯಾಣ ಂತ್ರಿಯಾದದ್ದೇ ತಡ ಚಳ್ಳಕೆರೆಯ ಸುತ್ತಲ ಹಳ್ಳಿಗಳಲ್ಲಿ ಮತ್ತಷ್ಟು ಚಲಾವಣೆಗೆ ಬಂದಿದ್ದ. ಒಂದುಕಡೆ ಸ್ಥಳೀಯ ಸಕ ತಿಪ್ಪೇಸ್ವಾಮಿ ಮತ್ತೊಂದು ಕಡೆ ತಮ್ಮದೇ ಮುದಾಯದ ಸಮಾಜ ಕಲ್ಯಾಣ ಮಂತ್ರಿಯ ಹವಾವನ್ನೇ ಗಾಳಿಯಾಗಿ ಮಾರ್ಪಡಿಸುವ ಮೂಲಕ ಬಿಜೆಪಿ ರ್ಟಿಯಲ್ಲಿ ಮರಿನಾಯಕನಾಗಿ ಮಿಂಚತೊಡಗಿದ್ದ. ಜೊತೆಗೆ ಂತ್ರಿ ನಾರಾಯಣಸ್ವಾಮಿಯ ಪರಿಚಯವನ್ನೇ ಬಂಡವಾಳ ಡಿಕೊಂಡ ಸೀನ, ಚಳ್ಳಕೆರೆಯಲ್ಲಿ ಎಸ್ಸಿ ಎಸ್ಟಿ ಮುದಾಯದ ಜನರನ್ನೇ ದೋಚತೊಡಗಿದ. ಅಸಲಿಗೆ ಗಳೂರಿನ ರಿಯಲ್ ಎಸ್ಟೇಟ್ ದಂಧೆಯಲ್ಲಿ ಕೈಯಾಡಿಸಿದ ಚಳ್ಳಕೆರೆಯ ಬಡ ರೈತರೊಂದಿಗೆ ತನ್ನ ರಿಯಲ್ ೇಟ್ ಆಟ ಶುರುವಿಟ್ಟುಕೊಂಡಿದ್ದ.

ಹಾಗೇ ಸೀನನ ಬೆಳವಣಿಗೆ ಬೆಳೆಯುತ್ತಲೇ 2011ರಲ್ಲಿ ಪಿ ಪಾರ್ಟಿಯಿಂದ ಜಿ.ಪಂ. ಟಿಕೆಟು ತಂದು ದೊಡ್ಡೇರಿ ದಿಂದ ಮಕಾಡೆ ಮಲಗಿದ್ದ. ಆಮೇಲೆ ಸಂಸಾರ ಸಮೇತ ರನಹಳ್ಳಿಯ ಅಪ್ಪನ ಮನೆಗೆ ವಕ್ಕರಿಸಿಕೊಂಡ. ತಾನು ಡಿಟ್ಟುಕೊಂಡಿದ್ದ ಕಾಸು ಹಂಚುತ್ತಲೇ ಪುಂಡರ ಗುಂಪು ಕೊಂಡ ಸೀನ ಚಳ್ಳಕೆರೆ ಬಿಜೆಪಿಯೊಳಗೆ ಯುವ ನೇತಾರ ಬಿಟ್ಟಿದ್ದ. ಪುಢಾರಿಗಳು ಜೇಬಿನೊಳಗಿನ ರೊಕ್ಕಕ್ಕೆ ಾಗಿದ್ದರೆನ್ನುವ ಪರಮಸತ್ಯ ಮರೆತ ಸೀನ, ಶಾಸಕ ಸ್ವಾಮಿಯ ವಿರುದ್ಧವೇ ಕ್ಷೇತ್ರದಲ್ಲಿ ರಾಜಕೀಯ ಪಿತೂರಿ ರುಮಾಡಿದ್ದ. ಅಲ್ಲಿಂದಲೇ ಸೀನನ ರಾಜಕಾರಣ ಬೀಳಿನ ಕಡೆ ಮುಖಮಾಡಿದ್ದು.

ಅಷ್ಟೊತ್ತಿಗಾಗಲೇ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಿದ್ದು ಸರ್ಕಾರ ಎದ್ದುನಿಂತಿತ್ತು, ಇತ್ತ ಚಳ್ಳಕೆರೆಯಲ್ಲಿ ತಿಪ್ಪೇಸ್ವಾಮಿ ತು ಕೈ ಕ್ಯಾಂಡಿಡೇಟು ರಘುಮೂರ್ತಿ ಗೆದ್ದುಬಂದರು. ವೇಳೆಗೆ 2013ರ ಜಿ.ಪಂ. ಚುನಾವಣೆ ಎದುರಾಗಿತ್ತು, ಲೂ ಬಿಜೆಪಿಯಲ್ಲೇ ಇದ್ದ ಸಿನ ಮೀಸಲು (ಎಸ್ಸಿ) ವಾದ ಮೂಡಲಜಾಜೂರು ಕ್ಷೇತ್ರದಿಂದ ಹೆಂಡತಿಗೆ ಟು ಕೇಳಲು ಮಾಜಿ ಶಾಸಕ ತಿಪ್ಪೇಸ್ವಾಮಿ ಮನೆಬಾಗಿಲಿಗೆ ು ನಿಂತಿದ್ದ. ಸೀನ ತಿಪ್ಪೇಸ್ವಾಮಿಗೆ ಕಂಡಕಂಡವರೆದುರು ಾಮಗೋಚರವಾಗಿ ಬೈದ ಸುದ್ದಿ ತಿಪ್ಪೇಸ್ವಾಮಿಗೂ ಪಿದ್ದರಿಂದ ಉಗಿದು ಉಪ್ಪಾಕಿ ಹಚ್ಚಾ ಅಂದಿದ್ದರು. ಿ ದಬ್ಬಿಸಿಕೊಂಡ ಸೀನ ಬಂದು ನಿಂತದ್ದು ಕೈ ಶಾಸಕ ಮೂರ್ತಿಯೆದುರು.


ಕೈ ಪಾರ್ಟಿಯಲ್ಲಿ ಭಾನ್ಗಡಿಗಳು

ಹಾಗೆ ಬಂದುನಿಂತ ಸೀನನನ್ನು ದೂರದಿಂದ ಬಲ್ಲ ಮೂರ್ತಿ ನಕ್ಕು ಸ್ವಾಗತಿಸಿದ್ದರು. ಅದೂ ಎಸ್ಸಿ ುದಾಯದ ಯುವಕನೆನ್ನುವ ರಾಜಕೀಯ ಕಾರಣಕ್ಕೆ. ೇನೇ ಇರಲಿ, ಅಂತೂ ರಘುಮೂರ್ತಿ ಸೀನನ ರ್ಣಪರದ ತರಹೇವಾರಿ ಮೋಸದಾಟಗಳನ್ನು ಕೆದಕದೆ ನ ಹೆಂಡತಿ ಚಂದ್ರಿಕಾಳಿಗೆ ಮೂಡಲಜಾಜೂರು ಜಿ.ಪಂ. ದಿಂದ ಟಿಕೆಟು ದಯಪಾಲಿಸಿದ್ದರು.

ಕ್ಷೇತ್ರದ ಮತದಾರ ಬಿಜೆಪಿಯ ತಿಪ್ಪೇಸ್ವಾಮಿಯ ಾಲಕರ ಉರುತಾವಳಿಯಿಂದ ಬೇಸತ್ತು ಕೈ ಪಾರ್ಟಿಯ ನ ಹೆಂಡತಿ ಚಂದ್ರಿಕಾಳ ಕೈಹಿಡಿದಿದ್ದ. ಜಿ.ಪಂ. ಬರಾದ ಚಂದ್ರಿಕಾಳ ಗಂಡ ಶ್ರೀನಿವಾಸ ರಾತ್ರೋರಾತ್ರಿ ರ್ಟಿಯಲ್ಲಿ ಯುವ ನಾಯಕನಾಗಿ ಮಿಂಚತೊಡಗಿದ. ತನ್ನ ರಾಜಕೀಯ ಪುಂಡಾಟದಿಂದ ಸರ್ಕಾರಿ ಾರಿಗಳನ್ನು ಹೆದರಿಸಿಟ್ಟುಕೊಂಡಿರುವ ಸೀನ ಜಾತಿಯನ್ನೇ ರ್ಕಾರ್ಡಾಗಿ ಮಾಡಿಕೊಂಡಿರುವುದೇನು ಹೊಸದಲ್ಲ. ತಿ ಜಿ.ಪಂ. ಮೆಂಬರ್, ಸಾಲದ್ದಕ್ಕೆ ಚಳ್ಳಕೆರೆ ಶಾಸಕ ಮೂರ್ತಿಯ ಬೆಂಬಲ ಇದೆ ಅಂತ ಶ್ರೀನಿವಾಸ ು ದಂಧೆಗಳಲ್ಲಿ ಮೆರೆಯುತ್ತಿದ್ದಾನೆ. ಮೊನ್ನೆ ನಡೆದ ಮಿಲಾದ್ ಮೆರವಣಿಗೆಯಲ್ಲಿ ಬಂದೋಬಸ್ತ್ ಯಲ್ಲಿದ್ದ ಪೊಲೀಸ್ ಕಾನ್‌ಸ್ಟೇಬಲ್ ಮಾರಪ್ಪ ತನ್ನ ೆ ದಾರಿ ಮಾಡಿಕೊಡಲಿಲ್ಲಾ ಅಂತ ಆ ಪೊಲೀಸಪ್ಪನ ಬಾರಿಸಿದ್ದ, ಅಲ್ಲದೇ ತನ್ನಂತಹ ಲೀಡರ ಮಾತು ರ ಪಿ.ಸಿ. ಮಾರಪ್ಪನನ್ನು ಅಮಾನತು ಮಾಡಬೇಕೆಂದು ರ ಗುಂಪಿನೊಂದಿಗೆ ಠಾಣೆಯೆದುರು ಗದ್ದಲ ಮಾಡಿದ್ದ. ಅದೇ ಧಿಮಾಕಿನಲ್ಲಿ ಚನ್ನಮ್ಮನಾಗತಿಹಳ್ಳಿ ಸಮೀಪದ ೇಸಿನಲ್ಲೇ ನೂರಾರು ಲೋಡು ಅಕ್ರಮ ಮರಳು ಮಾಡಿದ್ದ, ಇಂಥಾ ದಂಧೆಗೆ ತನ್ನ ಖಾಸಾ ಹೆಂಡತಿ ಂ. ಮೆಂಬರ್ ಚಂದ್ರಿಕಾ ಹೆಸರು, ಸಾಲದ್ದಕ್ಕೆ ಆಕೆಯ ನ ಜೆ.ಸಿ.ಬಿ. ಯಂತ್ರ (ಮರಳು ತುಂಬಲು), ತಂದೆ ಪ್ಪನ ಹೆಸರಿನಲ್ಲಿರುವ ಟ್ರ್ಯಾಕ್ಟರ್ ಬಳಸಿದ್ದ, ಸದ್ಯ ದನ್ನು ತಹಸೀಲ್ದಾರ್ ಜಪ್ತಿ ಮಾಡಿ ಕೇಸು ಜಡಿದಿದ್ದಾರೆ. ದಗಲ್ಬಾಜಿ ಸೀನ ಕ್ಷೇತ್ರದ ತುಂಬಾ ಪಕ್ಷ ಮತ್ತು ಿನಿಗೆ ಮಸಿ ಬಳಿಯುತ್ತಿದ್ದರೂ ಶಾಸಕ ರಘುಮೂರ್ತಿ ಸುಮ್ಮನಿದ್ದಾರೆ?

■ ಟಿ.ಎನ್.ಎಸ್

ತುರುವೇಕೆರೆ
ಎಮ್ಮೆಲ್ಲೆ-ಎಮ್ಮೆಲ್ಸಿ ನಡುವೆ ಬೀದಿ ಕಾಳಗ



ಎಂ.ಡಿ.ಲಕ್ಷ್ಮೀನಾರಾಯಣ

ತುರುವೇಕೆರೆಯಲ್ಲಿ 2018ರ ಎಂಎಲ್‌ಎ ಎಲೆಕ್ಷನ್‌ಗೆ ಈಗಲೇ ತಳಮಳ ಶುರುವಾಗಿದೆ. ಹಾಲಿ ಶಾಸಕ ಎಂ.ಟಿ.ಕೃಷ್ಣಪ್ಪ ಮತ್ತು ಹಾಲಿ ವಿಧಾನ ಪರಿಷತ್ ಸದಸ್ಯ ಎಂ.ಡಿ.ಲಕ್ಷ್ಮೀನಾರಾಯಣ್ ಮಧ್ಯೆ ರಾಜಕೀಯ ದಳ್ಳುರಿ ಧಗಧಗಿಸುತ್ತಿದ್ದು ಇದರ ಲಾಭ ಬಾಚಿಕೊಳ್ಳಲು ಬೇರೆ ಪೊಲಿಟಿಕಲ್ ಮುಖಗಳು ಹೊಂಚು ಹಾಕುತ್ತಿವೆ. ಮುಂದಿನ ಚುನಾವಣೆಯ ಉದ್ದೇಶದಿಂದಲೇ ಎಂಎಲ್‌ಸಿ ಲಕ್ಷ್ಮೀನಾರಾಯಣ್ ಇತ್ತೀಚೆಗೆ ತುರುವೇಕೆರೆ ಕ್ಷೇತ್ರದಲ್ಲಿ ಬೇರೆಬೇರೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಿಂಚುತ್ತಿದ್ದಾರೆ. ಇದು ಶಾಸಕ ಕೃಷ್ಣಪ್ಪನಿಗೆ ಸಹಿಸಿಕೊಳ್ಳಲಾಗುತ್ತಿಲ್ಲ.

ಕೃಷ್ಣಪ್ಪ ಮೂರು ಬಾರಿ ಸತತವಾಗಿ ತುರುವೇಕೆರೆ ಕ್ಷೇತ್ರದ ಶಾಸಕನಾಗಿ ಜೆಡಿಎಸ್‌ನಲ್ಲಿ ತಮ್ಮದೇ ಬೆಂಬಲಿಗರನ್ನು ಹೊಂದಿದ್ದಾರೆ. ಹಾಲಿ ಶಾಸಕನಾಗಿದ್ದರೂ ಸ್ವಂತ ಪಕ್ಷ ಅಧಿಕಾರದಲ್ಲಿ ಇಲ್ಲದಿರುವುದರಿಂದ ಅನುದಾನದ ಮಿತಿಗಳ ನಡುವೆಯೇ ತಕ್ಕಮಟ್ಟಿನ ಅಭಿವೃದ್ಧಿ ಕೆಲಸ ಮಾಡುವ ಕಡೆ ಗಮನ ಹರಿಸುತ್ತಿದ್ದಾರೆ. ಮತ್ತೊಂದು ಅವಧಿಗೆ ತಾನೇ ಗೆಲ್ಲಬೇಕೆಂಬ ಲೆಕ್ಕಾಚಾರದಲ್ಲಿರುವ ಕೃಷ್ಣಪ್ಪ ಈಗಾಗಲೇ ಬೆಂಬಲಿಗರನ್ನು ಒಗ್ಗೂಡಿಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಇತ್ತ ಲಕ್ಷ್ಮೀನಾರಾಯಣ ತುರುವೇಕೆರೆ ಕ್ಷೇತ್ರದ ಪ್ರಬಲ ಶಾಸಕ ಸ್ಥಾನದ ಅಭ್ಯರ್ಥಿಯಂತೆ ಕಾಣಿಸುತ್ತಿದ್ದು ಪರಿಷತ್‌ನಿಂದ ವಿಧಾನಸಭೆಗೆ ಹೋಗುವ ಇರಾದೆಯನ್ನು ಇಟ್ಟುಕೊಂಡಂತಿದೆ. ಹಾಗಾಗಿಯೇ ಪದೇಪದೆ ಕ್ಷೇತ್ರಕ್ಕೆ ಬಂದು ಕಾರ್ಯಕ್ರಮಗಳ ನೆಪದಲ್ಲಿ ರಾಜಕೀಯ ಧ್ರುವೀಕರಣಕ್ಕೆ ಕೈಹಾಕುತ್ತಿದ್ದಾರೆ.

ಎಂಟಿಕೆ ಮತ್ತು ಎಂಡಿಎಲ್ ನಡುವಿನ ಈ ರಾಜಕೀಯ ಪ್ರತಿಷ್ಠೆಗೆ ತಿರುಗಿದೆ. ಹಾಗೆ ನೋಡಿದರೆ ಸದ್ಯ ಕಾಂಗ್ರೆಸ್ ನಲ್ಲಿರುವ ಲಕ್ಷ್ಮೀನಾರಾಯಣ್ ಮೂಲತಃ ಕೇಸರಿಪುತ್ರ ಯಡ್ಯೂರಪ್ಪನ ಕಟ್ಟಾ ಅನುಯಾಯಿ. ಯಡ್ಯೂರಪ್ಪ ಬಿಜೆಪಿ ತೊರೆದು ಕೆಜೆಪಿ ಕಟ್ಟಿದಾಗ ಇದೇ ಲಕ್ಷ್ಮೀನಾರಾಯಣ್ ಕಮಲಕ್ಕೆ ಗುಡ್‌ಬೈ ಹೇಳಿ ಯಡ್ಡಿಯ ತೆಂಗಿನಕಾಯಿ ಹೊತ್ತಿದ್ದರು. ಆ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಯಡ್ಡಿಗೆ ಹೆಗಲು ಕೊಟ್ಟಿದ್ದರು. ನಂತರ ಅದೇ ಯಡ್ಯೂರಪ್ಪನ ಕೃಪಾಕಟಾಕ್ಷದಿಂದ ಸಮಾಜಸೇವೆ ಕೋಟಾದಡಿ ವಿಧಾನಪರಿಷತ್ ಸದಸ್ಯನಾಗಿಯೂ ಆಯ್ಕೆಯಾಗಿದ್ದರು.


ಆದರೆ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಯಡ್ಯೂರಪ್ಪ ಹಳೇ ಗಂಡನ ಪಾದವೇ ಗತಿ ಅಂತ ಬಿಜೆಪಿಗೆ ವಾಪಾಸಾದಾಗ ಅವರ ಬಾಲದಂತಿದ್ದ ಲಕ್ಷ್ಮೀನಾರಾಯಣ್ ಬಿಜೆಪಿಗೆ ವಾಪಸಾಗುವ ಬದಲು ನೇರವಾಗಿ ಕಾಂಗ್ರೆಸ್ ಸೇರಿಕೊಂಡು ಅಚ್ಚರಿ ಹುಟ್ಟಿಸಿದ್ದರು. ಈಗ ಸದ್ಯ ಮುಂದಿನ ಚುನಾವಣೆಯಲ್ಲಿ ಯಾವ ಪಕ್ಷ ಅಧಿಕಾರಕ್ಕೆ ಬರುವುದೋ ಆ ಕಡೆ ಟಿಕೆಟ್ ಗಿಟ್ಟಿಸಿಕೊಳ್ಳುವ ಹುನ್ನಾರದಲ್ಲಿರುವ ಲಕ್ಷ್ಮೀಜಿ ತುರುವೇಕೆರೆ ಕ್ಷೇತ್ರದಲ್ಲಿ ತಳ ಗಟ್ಟಿಮಾಡಿಕೊಳ್ಳಲು ಕಸರತ್ತು ನಡೆಸುತ್ತಿದ್ದಾರೆ. ಇದು ಎಂಟಿಕೆಗೆ ನುಂಗಲಾರದ ತುತ್ತಾಗಿದೆ.

ಪಟ್ಟಣ ಪಂಚಾಯ್ತಿ ಚುನಾವಣೆಯ ಸಂದರ್ಭದಲ್ಲಿ ತುರುವೇಕರೆ ವಿಳಾಸ ನೀಡಿ ಮತ ಚಲಾಯಿಸಿದ್ದ ಲಕ್ಷ್ಮೀನಾರಾಯಣ್ ನಂತರ ಬಿಬಿಎಂಪಿ ಚುನಾವಣೆಯ ಸಂದರ್ಭದಲ್ಲಿ ಬೆಂಗಳೂರು ತನ್ನ ನೋಡಲ್ ಕೇಂದ್ರ ಅಂತೇಳಿ ಅಲ್ಲೂ ಮತ ಚಲಾಯಿಸಿದ್ದಾರೆ ಎಂಬ ಆರೋಪಗಳು ಕೇಳಿಬರುತ್ತಿವೆ. ಇದನ್ನೇ ಅಸ್ತ್ರ ಮಾಡಿಕೊಂಡಿರುವ ಶಾಸಕ ಕೃಷ್ಣಪ್ಪ "ಲಕ್ಷ್ಮೀನಾರಾಯಣ್ ಬೆಂಗಳೂರಿನವರಾಗಿದ್ದು, ಈ ಕ್ಷೇತ್ರದ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತಿಲ್ಲ, ಹಾಗಾಗಿ ಶಿಷ್ಟಾಚಾರ ಪಾಲಿಸುವ ವೇಳೆ ಅವರ ಹೆಸರು ಕೈಬಿಡಿ" ಎಂದು ಎಲ್ಲಾ ಅಧಿಕಾರಿಗಳಿಗೂ ಫರ್ಮಾನು ಹೊರಡಿಸಿದ್ದಾರೆ ಎನ್ನಲಾಗಿದೆ. ಕೃಷ್ಣಪ್ಪನ ಈ ಅಸ್ತ್ರಕ್ಕೆ ಪ್ರತ್ಯಾಸ್ತ್ರ ಎಸೆದಿರುವ ಲಕ್ಷ್ಮೀನಾರಾಯಣ್ "ನನ್ನನ್ನು ಸಭೆ-ಸಮಾರಂಭಗಳಿಗೆ ಕರೆಯಬೇಡಿ ಎನ್ನುವ ಹಕ್ಕು ಶಾಸಕ ಕೃಷ್ಣಪ್ಪನಿಗೆ ಇಲ್ಲ, ನಾನು ತುಮಕೂರ ಜಿಲ್ಲೆಯನ್ನು ನೋಡಲ್ ಜಿಲ್ಲೆಯನ್ನಾಗಿ ಆಯ್ಕೆ ಮಾಡಿಕೊಂಡಿದ್ದು, ಸರ್ಕಾರದ ಆದೇಶದಂತೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತೇನೆ. ನನಗೂ ಕಾನೂನು ಚೆನ್ನಾಗಿ ಗೊತ್ತು. ಕೃಷ್ಣಪ್ಪನಿಗೆ ರಾಜಕೀಯ ಆಡಳಿತದಲ್ಲಿ ಅನುಭವ ಇಲ್ಲದೇ ಇರುವುದರಿಂದ ಈ ರೀತಿಯ ಹೇಳಿಕೆ ನೀಡುತ್ತಾರೆ" ಅಂತ ಪತ್ರಿಕಾಗೋಷ್ಠಿಯಲ್ಲೇ ತಾರಾಮಾರಾ ಎಗರಾಡಿದ್ದಾರೆ.

ಇದಕ್ಕೆ ಮತ್ತೊಂದು ಕೌಂಟರ್ ಎಸೆದಿರುವ ಕೃಷ್ಣಪ್ಪ "ಲಕ್ಷ್ಮಿನಾರಾಯಣ್‌ಗೆ ನಿಜವಾಗಲೂ ತಾಕತ್ತಿದ್ದರೆ ಚುನಾವಣೆಗೆ ಸ್ಪರ್ಧಿಸಿ ಗೆಲ್ಲಲಿ! ರಾಜಕಾರಣದ ಅನುಭವದ ಬಗ್ಗೆ ಜಂಭ ಕೊಚ್ಚಿಕೊಳ್ಳುವುದು ಬಿಟ್ಟರೆ ಒಳ್ಳೆಯದು. ಮೊದಲು ತಾವು ಯಾವ ಪಕ್ಷದವರೆಂದು ಜನತೆಗೆ ಬಹಿರಂಗಪಡಿಸಲಿ. ಯಡಿಯೂರಪ್ಪನ ಕೃಪೆಯಿಂದ ಎಂಎಲ್‌ಸಿಯಾಗಿ ಈಗ ಕಾಂಗ್ರೆಸ್ ತೂರಿಕೊಂಡಿದ್ದಾರೆ. ಮತದಾನದ ಹಕ್ಕು ಬೆಂಗಳೂರಿಗೆ ಸೇರಿಸಿಕೊಂಡು ಆ ಕ್ಷೇತ್ರದಲ್ಲಿ ಅನುದಾನ ತೆಗೆದುಕೊಂಡು ಇಲ್ಲಿ ರಾಜಕಾರಣ ಮಾಡುವುದು ಸರಿಯಲ್ಲ" ಅನ್ನೋ ಟಾಂಗ್ ನೀಡಿರೋದು ತುರುವೇಕ್ಷೇತ್ರದಲ್ಲಿ ರಾಜಕಾರಣ ರಂಗೇರುತ್ತಿರುವುದಕ್ಕೆ ಪ್ರತ್ಯಕ್ಷ ಸಾಕ್ಷಿ.

ಕೈ ಟಿಕೆಟ್‌ಗೆ ಬಲ ಪ್ರದರ್ಶನ

ಮುಂದಿನ ದಿನಗಳಲ್ಲಿ ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ಸಿಗೋದಿಲ್ಲ, ಹಾಗಾಗಿ ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರವೇ ಗತಿ ಎನ್ನುವ ಲೆಕ್ಕಾಚಾರದಲ್ಲಿ ಮುಳುಗಿರುವ ರಾಜಕೀಯ ಪಟುಗಳು ಕಾಂಗ್ರೆಸ್ ಟಿಕೆಟ್‌ಗೆ ಒದ್ದಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಲಕ್ಷ್ಮಿನಾರಾಯಣ್ ಕೂಡಾ ಕಾದು ನೋಡುತ್ತಿದ್ದಾರೆ ಎನ್ನಲಾಗುತ್ತಿದೆ. ಕಾಂಗ್ರೆಸ್ ಪಕ್ಷದಲ್ಲಿದ್ದರೂ ಅವರ ರಾಜಕೀಯ ಗುರುಗಳಂತಿರುವ ಬಿಎಸ್‌ವೈ ಬಿಜೆಪಿಯಲ್ಲಿ ಮತ್ತೆ ಪ್ರಭಾವಳಿಗೆ ಬಂದಿರುವುದರಿಂದ



ಎಂ.ಟಿ.ಕೃಷ್ಣಪ್ಪ


ಮಗದೊಮ್ಮೆ ಬಿಜೆಪಿ ಗೃಹಪ್ರವೇಶಕ್ಕೂ ಲಕ್ಷ್ಮೀಜಿ ಸಜ್ಜಾಗಿದ್ದಾರೆ ಎನ್ನುವ ಮಾತುಗಳೂ ಕೇಳಿಬರುತ್ತಿವೆ.


ಹಾಗೇನಾದರು ಲಕ್ಷ್ಮೀನಾರಾಯಣ್ ಬಿಜೆಪಿಗೆ ನೆಗೆದರೆ ಕಾಂಗ್ರೆಸ್ ಟಿಕೆಟ್ ದಕ್ಕಿಸಿಕೊಳ್ಳಲು ಬಹಳ ವರ್ಷಗಳಿಂದ ಕಾಂಗ್ರೆಸ್‌ನಲ್ಲಿರುವ ಹಾಗೂ ಮೂರ್‍ನಾಲ್ಕು ಬಾರಿ ಟಿಕೆಟ್ ವಂಚಿತರಾಗಿರುವ ಚೌಧರಿ ರಂಗಪ್ಪನವರು ಪ್ರಯತ್ನ ನಡೆಸುತ್ತಿದ್ದಾರೆ. ಇವರ ಪರ ಅನುಕಂಪದ ಅಲೆಯೂ ಇರುವುದರಿಂದ ಟಿಕೆಟ್ ಸಿಕ್ಕರೆ ಗೆಲ್ಲುವ ಸೂಚನೆಗಳು ದಟ್ಟವಾಗಿವೆ ಎಂದು ಹೇಳಲಾಗುತ್ತಿದೆ. ಅದೇರೀತಿ ಒಮ್ಮೆ ಪರಾಭವಗೊಂಡಿರುವ ಗೀತಾ ರಾಜಣ್ಣನವರು ಸಹ ಮಗದೊಮ್ಮೆ ಕಾಂಗ್ರೆಸ್ ಟಿಕೆಟ್ ಪಡೆಯಲು ತೆರೆಮರೆಯ ಕಸರತ್ತು ನಡೆಸಿದ್ದಾರೆ. ಈ ಮಧ್ಯೆ ಇತ್ತೀಚೆಗೆ ಸಂಸದ ಎಂ.ಪಿ.ಮುದ್ದಹನುಮೇಗೌಡರು ಕ್ಷೇತ್ರದ ಕಾರ್ಯಕ್ರಮಗಳಿಗೆ ಪದೇಪದೆ ಭೇಟಿನೀಡಿ ಭಾಗವಹಿಸುತ್ತಿದ್ದಾರಲ್ಲದೆ ತಾವು ಸಹ ರಾಜ್ಯ ರಾಜಕಾರಣಕ್ಕೆ ಮರಳುವ ಉತ್ಸಾಹದಲ್ಲಿದ್ದೇನೆಂದು ಆಪ್ತರ ಬಳಿ ಹೇಳಿಕೊಂಡಿದ್ದಾರೆಂದು ಹೇಳಲಾಗುತ್ತಿದೆ. ಹಾಗಾಗಿ ಅವರೂ ಟಿಕೆಟ್‌ಗೆ ಒಂದು ಕೈ ನೋಡಿದರೂ ಅಚ್ಚರಿಯಿಲ್ಲ.

ಬಿಜೆಪಿಯ ಕಸರತ್ತು-ಜೆಡಿಎಸ್ ಹಿಕಮತ್ತು

ತುಮಕೂರಿನಲ್ಲಿ ಬಿಜೆಪಿ ಒಡೆದು ಇಬ್ಭಾಗವಾಗಿದೆ. ಒಂದು ಮೂಲ ಬಿಜೆಪಿಗಳದ್ದಾದರೆ ಮತ್ತೊಂದು ಕೆಜೆಪಿ ರಿಟರ್ನ್ಡ್ ಬಿಜೆಪಿಗಳದ್ದು. ಕಳೆದ ಬಾರಿ ಯಡ್ಯೂರಪ್ಪನ ಬೆಂಬಲಿಗ ಮಸಾಲೆ ಜಯರಾಂ ಕೆಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದರು. ಈಗ ಬಿಜೆಪಿಗೆ ಈತನನ್ನೇ ಅಭ್ಯರ್ಥಿಯನ್ನಾಗಿಸುವ ಆಲೋಚನೆ ಯಡಿಯೂರಪ್ಪನಿಗಿದೆ ಎಂದು ಹೇಳಲಾಗುತ್ತಿದೆ. ಆದರೆ ಲಕ್ಷ್ಮೀನಾರಾಯಣ್ ನಡೆ ಇನ್ನೂ ನಿಗೂಢವಾಗಿರುವುದರಿಂದ ಮತ್ತು ಜಿ.ಎಸ್.ಬಸವರಾಜು-ಸೊಗಡು ಶಿವಣ್ಣ ಗುಂಪುಗಳ ಬಣರಾಜಕಾರಣ ರಂಗೇರುತ್ತಿರುವುದರಿಂದ ಕೊನೇಕ್ಷಣದಲ್ಲಿ ಯಾರು ಇಲ್ಲಿ ಅಭ್ಯರ್ಥಿಯಾಗುವರು ಎಂಬುದು ನಿಗೂಢವಾಗೇ ಇದೆ.


ಅತ್ತ ಜೆಡಿಎಸ್‌ನಲ್ಲಿ ಮತ್ತೊಂದು ಬಗೆಯ ತಳಮಳ ಶುರುವಾಗಿದೆ. ಈಗಾಗಲೇ ಮೂರು ಬಾರಿ ಶಾಸಕರಾಗಿರುವ ಕೃಷ್ಣಪ್ಪನನ್ನು ಈ ಸಲ ಸೋಲಿಸಲೇಬೇಕೆಂದು ಸ್ವ-ಪಕ್ಷದವರೇ ಸಂಚು ಹೂಡಿದ್ದಾರೆ ಎಂಬ ಮಾತುಗಳು ಕೇಳಿರುತ್ತಿವೆ. ಸಾಧ್ಯವಾದಷ್ಟು ಕೃಷ್ಣಪ್ಪನಿಗೆ ಟಿಕೆಟ್ ತಪ್ಪಿಸಿ ತಾವು ಗಿಟ್ಟಿಸಿಕೊಳ್ಳಬೇಕೆಂದು ಕೆಲವು ಜಿಲ್ಲಾ ಪಂಚಾಯ್ತಿ ಸದಸ್ಯರು ಬಂಡವಾಳ ಹೂಡಿಕೊಂಡು ಕಾಯುತ್ತಿರುವ ಮಾಹಿತಿಯೂ ಇದೆ. ಇನ್ನೂ ಒಂದೂವರೆ ವರ್ಷದಲ್ಲಿ ಏನೆಲ್ಲ ಚಮತ್ಕಾರಗಳು ನಡೆಯುತ್ತವೋ ನೋಡಬೇಕು. ■





ಮುದ್ದಹನುಮೇಗೌಡ

ಮೈಸೂರು: ಚೆಲ್ಲಿದ ನೆತ್ತರ ಹಿಂದೆ ಮಾಜಿಮಂತ್ರಿ ರಾಮದಾಸನ ಕೈವಾಡ?




ಬಿಜೆಪಿಯ ರಾಜ್ಯಾಧ್ಯಕ್ಷ ಯಡ್ಯೂರಪ್ಪ ಅದ್ಯಾವ ಘಳಿಗೆಯಲ್ಲಿ ಮೈಸೂರಿಗೆ ಕಾಲಿಟ್ಟರೋ ಏನೊ, ಬಿಜೆಪಿಯೊಳಗಿದ್ದ ಆಂತರಿಕ ಕಚ್ಚಾಟ ಹೊಡಿಬಡಿ ರಕ್ತಸಿಕ್ತ ಕಾದಾಟಕ್ಕೆ ತಿರುಗಿಕೊಂಡಿದೆ. ಡಿಸೆಂಬರ್ 20ರ ಮಧ್ಯರಾತ್ರಿ ಮೈಸೂರು ತಣ್ಣಗೆ ಮಲಗಿದ್ದಾಗ ನಡೆದುಹೋಯ್ತಲ್ಲ ಆ ಭೀಕರ ಬಡಿದಾಟ ಅದು ಕ್ಷುಲ್ಲಕ ರೌಡಿಸಂ ಕದನವಲ್ಲ, ಬಿಜೆಪಿಯ ಮಾಜಿ ಸಚಿವ ಎಸ್.ಎ.ರಾಮದಾಸ್ ಹಾಗೂ ಜಿಲ್ಲಾ ಸಹಕಾರಿ ಒಕ್ಕೂಟದ ಅಧ್ಯಕ್ಷ ಎಚ್.ವಿ.ರಾಜೀವ್ ನಡುವಿನ ದುಶ್ಮನಿಯ ಸ್ಯಾಂಪಲ್ಲು.

ಹೌದು ಮಾಜಿ ಸಚಿವ ರಾಮದಾಸ್‌ನ ಚೇಲ ಸಾಗರ್ ಚಕ್ರವರ್ತಿ ಎಂಬಾತ ನಾಲ್ಕೈದು ಜನ ಗೂಂಡಾಗಳನ್ನು ಕಟ್ಟಿಕೊಂಡು ಮಂಗಳವಾರ ಮಧ್ಯರಾತ್ರಿ ರಾಜೀವ್ ಬೆಂಬಲಿಗ ರಂಗನಾಥ್ ಎಂಬಾತನ ಮನೆಗೆ ನುಗ್ಗಿ ರಂಗನಾಥನನ್ನು ಮನೆಯಿಂದ ಹೊರಗೆಳೆದು ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದಾನೆ. ಇನ್ನೇನು ರಂಗನಾಥನ ಮೇಲೆ ಕಲ್ಲು ಎತ್ತಿ ಹಾಕಿ ಆ ಚಾಪ್ಟರ್‌ಗೆ ಮಂಗಳ ಹಾಡುವ ಹಪಾಹಪಿಯಲ್ಲಿದ್ದವರಿಗೆ ಅಕ್ಕಪಕ್ಕದ ಮನೆಯವರು ಎದ್ದುಬಂದದ್ದು ವಿಘ್ನ ತಂದಿಟ್ಟಿತ್ತು. ಹಾಗಾಗಿ ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿದ್ದ ಅವನನ್ನು ಅರೆಜೀವಕ್ಕೇ ಬಿಟ್ಟು ಅಲ್ಲಿಂದ ಪರಾರಿಯಾಗಿದ್ದರು. ನಂತರ ತೀವ್ರ ಗಾಯಗೊಂಡಿದ್ದ ರಂಗನಾಥ್‌ನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ರಾಜೀವ್ ಇತ್ತೀಚೆಗೆ ಮೈಸೂರಿನಲ್ಲಿ ತನ್ನ ಛಾಪು ಮೂಡಿಸುತ್ತಿರುವ ಬಿಜೆಪಿ ಮುಖಂಡ. ಮೈಸೂರಿನಲ್ಲಿ ಒಂದು ಪ್ರತಿಷ್ಠಿತ ಇಂಗ್ಲಿಷ್ ಮಾಧ್ಯಮ ಶಾಲೆ, ರಿಯಲ್ ಎಸ್ಟೇಟ್ ಮುಂತಾದ ವ್ಯವಹಾರಗಳಿಂದ ಕೈತುಂಬ ಕಾಸು ಇಟ್ಟಿರುವ ರಾಜೀವ್‌ಗೆ ರಾಜಕೀಯ ರುಚಿ ನೋಡುವ ಆಸೆ ಸಹಜವಾಗೇ ಚಿಗುರಿತ್ತು. ತನ್ನ ಪೊಲಿಟಿಕಲ್ ಆರಂಗೇಟ್ರಂಗೆ ಅಖಾಡ ಸಿದ್ಧಗೊಳಿಸಿಕೊಳ್ಳಲು ಮೋದಿ ಹೆಸರಲ್ಲಿ ಸ್ವಚ್ಛಭಾರತ ಅಭಿಯಾನ ಶುರು ಮಾಡಿ ತಕ್ಕಮಟ್ಟಿಗೆ ಹೆಸರು ಮಾಡುತ್ತಿದ್ದಾನೆ. ಈ ಕಾರ್ಯ ಆತನನ್ನು ಮೈಸೂರಿನಿಂದ ದಿಲ್ಲಿಯವರೆಗೂ ಕರೆದೊಯ್ದಿದ್ದಲ್ಲದೆ ಬಿಜೆಪಿಯ ರಾಷ್ಟ್ರಮಟ್ಟದ ನಾಯಕರ ಪರಿಚಯವಾಗುವಂತೆ ಮಾಡಿತ್ತು, ಜಿಲ್ಲಾ ಸಹಕಾರಿ ಒಕ್ಕೂಟದ ಅಧ್ಯಕ್ಷ ಹುದ್ದೆಯೂ ಒಲಿದು ಬಂದಿತ್ತು. ಮೈಸೂರಿನ ಕೆ.ಆರ್.ವಿಧಾನ ಸಭಾಕ್ಷೇತ್ರ ಟಿಕೆಟ್ ಮೇಲೆ ಕಣ್ಣಿಟ್ಟಿರುವ ರಾಜೀವ ಮುಂದಿನ ಎಲೆಕ್ಷನ್ ವೇಳೆಗೆ ಬಿಜೆಪಿಯ ಟಿಕೆಟ್ ಗಿಟ್ಟಿಸಿಕೊಳ್ಳಲು ನವರಂಗಿ ಆಟ ಶುರು ಮಾಡಿದ್ದಾನೆ. ಕೆ.ಆರ್.ಕ್ಷೇತ್ರದ ಮಟ್ಟಿಗೆ ಬಿಜೆಪಿಯಲ್ಲಿ ಯಾವ ಪ್ರತಿಸ್ಪರ್ಧಿಯೂ ಇಲ್ಲ ಅಂತ ವಿಜೃಂಭಿಸುತ್ತಿದ್ದ ರಿಯಲ್ ಎಸ್ಟೇಟ್ ಕುಳ, ಮಾಜಿ ಸಚಿವ ರಾಮದಾಸ್ ಅಲಿಯಾಸ್ 'ಪ್ರೇಮ'ದಾಸ ಪಿತ್ತ ಸಹಜವಾಗಿಯೇ ನೆತ್ತಿಗಡರಿತ್ತು, ತನ್ನ ಸ್ವಕ್ಷೇತ್ರದಲ್ಲಿ ತನಗೆ ಪ್ರತಿಸ್ಪರ್ಧಿ ಹುಟ್ಟಿಕೊಂಡರೆ ಜಪ ಮಾಡುತ್ತಾ ಕೂರಲು ರಾಮದಾಸನೇನು ಬಾಲ ಬಿಟ್ಟ ಹನುಮಂತನೇ? ಒಟ್ಟಿನಲ್ಲಿ ಒಬ್ಬರ ಮುಖವನ್ನು ಕಂಡರೆ ಇನ್ನೊಬ್ಬರಿಗೆ ಆಗದಷ್ಟು ವೈಮನಸ್ಸು ಬಿಗಿದುಕೊಂಡಿತ್ತು.

ಮಾರಣಾಂತಿಕವಾಗಿ ಹಲ್ಲೆಗೊಳಗಾದ ರಂಗನಾಥ್




ಇದರಿಂದ ರಾಮದಾಸ್ ಮಾತ್ರವಲ್ಲ, ಆತನ ಹೆಸರೇಳಿಕೊಂಡು ಬದುಕಿಗೆ ದಾರಿ ಮಾಡಿಕೊಂಡಿದ್ದ ಅವನ ಚೇಲಗಳೂ ಕೆರಳುವಂತೆ ಮಾಡಿತ್ತು, ರಾಮದಾಸ್ ಬಳಿ ಸಕಲವನ್ನು ತಿಂದುಂಡು ಬೆಳೆದವರಿಗೆ ತಮ್ಮ ಬಾಸ್ ಪ್ರತಿನಿಧಿಸುವ ಕ್ಷೇತ್ರದಲ್ಲಿ ಪ್ರತಿಸ್ಪರ್ಧಿ ಹುಟ್ಟುಕೊಳ್ಳುತ್ತಾರೆಂದರೆ ಸುಮ್ಮನಿರುತ್ತಾರೆಯೆ. ಅದರ ರೂಪವೇ ಈ ಗೂಂಡಾಗಿರಿ. ಈ ಕೆಲಸವನ್ನು ರಾಮದಾಸ್ ಹೇಳಿ ಮಾಡಿಸಿದ್ದಾರೆಯೇ? ಇಲ್ಲವೆಂದುಕೊಳ್ಳೋಣವೆಂದರೆ ಅವರ ಚೇಲಾಗಳ ಗೂಂಡಾಗಿರಿಯನ್ನು ತಡೆಯಬೇಕಿತ್ತಲ್ಲವೆ? ತಡೆಯದೆ ಯಾಕೆ ಸುಮ್ಮನಿದ್ದರು? ಇತ್ತ ರಾಜೀವ್ ಇದೆಲ್ಲ ರಾಮದಾಸ್‌ಗೆ ಗೊತ್ತಿದ್ದೇ ನಡೆಯುತ್ತಿದೆ ಎಂದು ಸಿಟ್ಟು ಹೊರಹಾಕುತ್ತಿರೋದು ಬಿಜೆಪಿಯೊಳಗಿನ ಕಾದಾಟವನ್ನು ಬಯಲುಗೊಳಿಸಿದೆ.

ರಾಮದಾಸ್ ಅವರು ಯಾವ ತಪ್ಪುಗಳನ್ನೂ ಮಾಡದ ಸಾಚಾ ವ್ಯಕ್ತಿಯೇನಲ್ಲ, ಸ್ವಲ್ಪ ದಿನಗಳ ಹಿಂದೆಯಷ್ಟೇ ರಾಮದಾಸನ ಪ್ರಣಯ ಪ್ರಸಂಗ ಜಗಜ್ಜಾಹೀರಾಗಿ ಆತನನ್ನು ಬೀದಿಗೆ ತಂದು ನಿಲ್ಲಿಸಿದ್ದವು. ಕೊನೆಗೆ ಆತ್ಮಹತ್ಯೆಗೆ ಯತ್ನಿಸುವ ಹೈಡ್ರಾಮಾ ಮೂಲಕ ಸಿಂಪಥಿ ಕೋಟಾದಲ್ಲಿ ಜನರ ಕಣ್ಣಿಂದ ಸದ್ಯ ತಟಸ್ಥನಾಗುಳಿದ್ದಾನೆ. ಇಂಥಾ ರಾಮದಾಸ್ ರಾಜೀವ್‌ಗೆ ತನ್ನ ಕ್ಷೇತ್ರ ಬಿಟ್ಟುಕೊಡಲು ಸ್ವಾಗತಿಸಿ ಬರಮಾಡಿಕೊಳ್ಳುತ್ತಾನೆಯೆ? ಆಗ ಸಹಜವಾಗಿಯೇ ಇಂಥಾ ಗೂಂಡಾಗಿರಿ ಪ್ರಯತ್ನಗಳು ಘಟಿಸಿಬಿಡುತ್ತವೆ.

ಈಗ ಹಲ್ಲೆಗೊಳಗಾದ ರಂಗನಾಥ್‌ಗೆ ಈ ಹಿಂದೆಯೂ ರಾಮದಾಸ್ ಗೂಂಡಾಗಳು ರಾಜೀವ್ ಜೊತೆ ಕಾಣಿಸಿಕೊಂಡರೆ ಕೊಲೆ ಮಾಡುವುದಾಗಿ ಬೆದರಿಕೆ ಒಡ್ಡಿದ್ದರು ಎನ್ನಲಾಗುತ್ತಿದೆ. ಆಗ ರಂಗನಾಥ್ ರಾಜೀವ್‌ಗೆ ಸುದ್ದಿ ಮುಟ್ಟಿಸಿ ಪೊಲೀಸ್ ಕಮಿಷನರ್‌ಗೂ ದೂರು ನೀಡಿದ್ದರಂತೆ. ರಾಮದಾಸ್ ಚೇಲಾಗಳು ಈ ರೀತಿ ಒಬ್ಬೊಬ್ಬರಾಗಿ ರಾಜೀವ್ ಬೆಂಬಲಿಗರ ಮೇಲೆ ಹಲ್ಲೆ ಮಾಡಿ ಬೆದರಿಕೆ ಹುಟ್ಟಿಸಿ ರಾಜೀವ್‌ಗೆ ಹಿನ್ನಡೆ ಉಂಟುಮಾಡುವ ಇರಾದೆ ಇದ್ದರೂ ಇರಬಹುದು.

ಇದಕ್ಕೆ ಪುಷ್ಟಿ ನೀಡುವ ಘಟನೆಗಳು ಹಿಂದೆಯೂ ನಡೆದಿವೆ. ಯಡಿಯೂರಪ್ಪನ ಬೆಂಬಲಿಗನಾದ ರಾಜೀವ್ ಆತನನ್ನೇ ಅನುಸರಿಸಿ ಕೆಜೆಪಿ ಸೇರಿದ್ದ. ಯಡಿಯೂರಪ್ಪ ಮತ್ತೆ ಬಿಜೆಪಿ ಸೇರಿದಾಗ ರಾಜೀವ್ ಮತ್ತೆ ಯಡಿಯೂರಪ್ಪನನ್ನು ಹಿಂಬಾಲಿಸಿದ್ದ, ಆ ಸಂದರ್ಭದಲ್ಲಿ ರಾಮದಾಸ್ ಚೇಲಾಗಳಿಗೂ, ರಾಜೀವ್ ಹಿಂಬಾಲಕರಿಗೂ ಮಾತಿನ ಚಕಮಕಿಯಾಗಿತ್ತು, ರಾಮದಾಸ್ ಪ್ರತಿನಿಧಿಸುವ



ಎಚ್.ವಿ.ರಾಜೀವ್

ಕೆ.ಆರ್.ಕ್ಷೇತ್ರದಲ್ಲಿ ರಾಜೀವಾಗಲಿ, ಅವನ ಬೆಂಬಲಿಗರಾಗ... ಚುನಾವಣಾ ಪ್ರಚಾರದಲ್ಲಿ ಭಾಗವಹಿಸಬಾರದು ಎಂ... ಧಮಕಿ ಹಾಕಿದ್ದರು. ನೀವು ಕೆಜೆಪಿಯಿಂದ ಬಂದವ... ಬೇರೆ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಿ, ನಮ್ಮ ಬಾಸ್ ಕ್ಷೇತ್ರ... ತಲೆ ಹಾಕಬೇಡಿ ಎಂದು ರಾಮದಾಸ್ ಚೇಲಾಗಳ... ಎಗರಾಡಿದ್ದರು. ಆಗಿನ್ನೂ ರಾಜೀವ್ ಅಷ್ಟೊಂದು... ಪ್ರಭಾವಿಯಾಗಿ ಬೆಳೆದಿರಲಿಲ್ಲ, ಹಾಗಾಗಿ ಅದು ಮಾರಾಮಾ... ಹಂತ ತಲುಪಿರಲಿಲ್ಲ. ಆದರೆ ದಿನಕಳೆದಂತೆ ರಾಜೀವ... ಪೊರಕೆ ಹಿಡಿದು ಸ್ವಚ್ಛ ಭಾರತ ಅಭಿಯಾನದ ನೆಪದ... ಮಾಧ್ಯಮಗಳಲ್ಲಿ ಮಿಂಚುತ್ತಾ ಹೋದಂತೆ ರಾಮದಾ... ಹಾಗೂ ಅವನ ಚೇಲಾಗಳ ತಳ ಉರಿದುಹೋಗ... ಆರಂಭಿಸಿತ್ತು, ಹಾಗಾಗಿಯೇ ಸಮಯ ಸಿಕ್ಕಾಗೆಲ್ಲ ರಾಜೀ... ಬೆಂಬಲಿಗರ ಮೇಲೆ ಗುರ್ ಎನ್ನುತ್ತಿದ್ದರು. ಅದು ಬೆಳೆ... ರಕ್ತಪಾತಕ್ಕೆ ಬಂದು ನಿಂತಿದೆ.

ಏನೇಆಗಲಿ ಇಲ್ಲಿಯತನಕ ತೆರೆಮರೆಯಲ್ಲಿ ನಡೆಯು... ರಾಜೀವ್ ಹಾಗೂ ರಾಮದಾಸ್ ಅವರ ಜಗಳ ಬೀ... ಬಂದಂತಾಗಿದೆ. ರಾಮದಾಸ್‌ನ ಚೇಲಾಗಳ ಗೂಂಡಾ ಮ... ಹೆಚ್ಚಾಗುತ್ತಿದ್ದರೂ ಮಾತುಮಾತಿಗೂ ತಮ್ಮದು ಶಿಸ್ತಿನ ... ಎಂದು ಹೇಳಿಕೊಳ್ಳುವ ಬಿಜೆಪಿ ತೆಪ್ಪಗಿರೋದು ಅ... ಬೂಟಾಟಿಕೆ ಬಿಚ್ಚಿಡುತ್ತದೆ.

■ ಶ...

ಕೆಟ್ಟ ಕೆಲಸ ಮಾಡಿದ್ರಾ ಒಳ್ಳೆ ಹೆಸರು ಬರಾಕತ್ತೈತಿ

ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು ಎಂದು ಭಾವಿಸಿದ ಮೇಟಿ ಪ್ರಕರಣದಿಂದ ಮನೆಯೊಳಗಿನ ಟಿವಿಯೇ ಅಸಹ್ಯಕರವಾಗಿ ಕಾಣತೊಡಗಿತು. ಹಗಲು ಹಾದರಕ್ಕೆ ಹುಟ್ಟಿದಂತಹ ಟಿವಿ ಜನ ಆ ದಿನ ಕರ್ನಾಟಕದ ಮಾನವಂತ ಮಹಿಳೆಯರು ಮಕ್ಕಳಾದಿಯಾಗಿ ಎಲ್ಲರೂ ತಮ್ಮ ಮನೆಯ ಟಿವಿ ಸ್ವಿಚ್ ಆಫ್ ಮಾಡಿಕೊಂಡಿದ್ದು ಬಹುಶಃ ಅವರಿಗೆ ಗೊತ್ತೇ ಆಗಿಲ್ಲವಂತಲ್ಲಾ, ಇಷ್ಟಾದರೂ ಇದು ಖಂಡನೀಯ. ಸದರಿ ಪ್ರಕರಣ ಕುರಿತು ಕೆಲವು ಮಾನವಂತರನ್ನು ಮಾತನಾಡಿಸಬೇಕೆನಿಸಿತಲ್ಲಾ. ಆ ಬಗ್ಗೆ ಮೊದಲು ಹೊಳೆದ ಹೆಸರೇ ಶೋಭಾ ಕರಂದ್ಲಾಜೆಯದು. ಫೋನ್ ಮಾಡಲಾಗಿ ರಿಂಗಾಯ್ತು:

"ಹಲೋ ಮೇಡಂ ನಾನು ಪತ್ರಕರ್ತ ಯಾಹು. ಮೇಟಿ ಪ್ರಕರಣದ ಬಗ್ಗೆ ಏನೇಳ್ತಿರಿ?"

"ಇದೊಂದು ಹೇಯವಾದ ಕೆಲಸ. ಸಿದ್ದರಾಮಯ್ಯನ ಸರಕಾರದಲ್ಲಿ ಹೆಣ್ಣು ಮಕ್ಕಳನ್ನು ಆಫೀಸುಗಳಲ್ಲೇ ಅಂಗಾತ ಮಲಗಿಸಿ ದುರುಪಯೋಗ ಮಾಡಿಕೊಳ್ಳುವುದನ್ನು ನಾನು ತೀವ್ರವಾಗಿ ಖಂಡಿಸ್ತೇನೆ. ಮೇಟಿಯವರಿಗೆ ಹೆಂಡತಿ ಇಲ್ಲವ? ಅವರಿಗೆ ಹೆಂಡತಿ ಇಲ್ಲದಿದ್ದರೆ ಕ್ಷಮಿಸಬಹುದಿತ್ತು, ಅಷ್ಟಕ್ಕೂ ಅವರಿಗೆ ಅಷ್ಟೊಂದು ಚಪಲವಿದ್ದರೆ ಆಂಟಿ ಚೇಂಬರ್‌ಗಳಿಲ್ಲವ, ಐಷಾರಾಮಿ ಹೋಟೆಲುಗಳಿಲ್ಲವ, ಇಲ್ಲವಾದರೆ ರೈಲ್ವೆ ಬೋಗಿಯಲ್ಲಿ ಸ್ಪೆಷಲ್ ರೂಮುಗಳಿಲ್ಲವ? ಅದನ್ನು ಬಿಟ್ಟು ಹೀಗೆ ಮಾಡಿದರೆ ರಾಜಕಾರಣಿಗಳ ಮಾನ ಮರ್ಯಾದೆ ಬೀದಿಯಲ್ಲಿ ಹರಾಜಾಗುವುದುಂಟು. ನಾನು ಇದನ್ನು ಖಂಡಿಸ್ತೇನೆ."

"ಥ್ಯಾಂಕ್ಯೂ ಮೇಡಂ."

ಮತ್ತಾರಿಗೆ ಫೋನ್ ಮಾಡುವುದು ಎಂದು ಯೋಚಿಸುವಾಗ ಹೊಣ್ಣಾಳಿ ಹೋರಿ ಜ್ಞಾಪಕಕ್ಕೆ ಬಂತು. ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು,

"ಹಲೋ ಸಾರ್. ನಾನು ಯಾಹು, ಪತ್ರಕರ್ತ. ಈ ಮೇಟಿ ವಿಷಯದಲ್ಲಿ ಏನೇಳ್ತಿರಿ ಸಾರ್?"

"ಈ ವಿಷಯವನ್ನು ನಾನು ಬಲವಾಗಿ ಖಂಡಿಸ್ತಿನಿ. ಇಂತ ಖಾಸಗಿ ವಿಷಯ ಬಹಿರಂಗವಾಗದಂಗೆ ನೋಡಿಕಬೇಕಾದ್ದು ರಾಜಕಾರಣಿಗಳ ಕರ್ತವ್ಯ. ಮೇಟಿ ಕಿಸ್ ಕೊಡೊ ದೃಶ್ಯ ಪ್ರಸಾರವಾಗಿದ್ರೆ ಕ್ಷಮಿಸಬಹುದಿತ್ತು, ಆದ್ರೆ ಇಲ್ಲಿ ಆ ತರ ಆಗಿಲ್ಲ, ನಾವು ರಾಜಕಾರಣಿಗಳು ಮಾನಮರ್ಯಾದೆಗೆ ಅಂಜಿಕೊಂಡು ರಾಜಕಾರಣ ಮಾಡಬೇಕು. ಕೈಹಿಡಿದ ಧರ್ಮಪತ್ನಿಗೆ ಅನ್ಯಾಯ ಮಾಡ್ಬಾರ್ದು. ಅಂಗೇನಾದ್ರು ಮಾಡಿದ್ರೆ ಜನ ಚುನಾವಣೇಲಿ ಸೋಲಿಸಿಬುಡ್ತಾರೆ. ಕರ್ನಾಟಕದ ಜನ ಈ ಸಿದ್ದರಾಮಯ್ಯನ ಸರಕಾರ ಹೋಗಿ ಎಷ್ಟು ಬೇಗ ಮಾನ್ಯ ಯಡಿಯೂರಪ್ಪನ ಸರಕಾರ ಬರುತ್ತೋ ಅಂತ ಕಾಯ್ತಾ ಇದಾರೆ."

"ಥ್ಯಾಂಕ್ಯೂ ಸಾರ್."

ಆಮೇಲೆ ಮತ್ತಾರನ್ನಾದರೂ ಮಾತನಾಡಿಸಬೇಕೆನಿಸಿದಾಗ ಮೇಟಿ ಭಾಮೈದನಂತೆ ಕಾಣುವ ಹರತಾಳು ಹಾಲಪ್ಪನ ಹೆಸರು ಹೊಳೆಯಬೇಕೆ. ಕೂಡಲೇ ಫೋನ್ ಮಾಡಿದಾಗ ಒಂದೇ ರಿಂಗಿಗೆ ಫೋನೆತ್ತಿಕೊಂಡು "ಹಲೋ" ಎಂದರು.

"ನಾನು ಸಾರ್, ಯಾಹು, ಪತ್ರಕರ್ತ. ಮೇಟಿ ಪ್ರಕರಣದ ಬಗ್ಗೆ ನಿಮ್ಮ ಅಭಿಪ್ರಾಯ ಹೇಳಿ ಸಾರ್."

"ಇದೊಂದು ದುರದೃಷ್ಟ ಸಾರ್. ಅಂತ ಪ್ರಕರಣಗಳು ನೆಡೆದಂಗೆ ನಿಲ್ಲುಸಬೇಕಾಗ್ಯದೆ. ಪಾಪ ಮೇಟಿ ಹ್ಯಂಗೆ ತಲೆ ಎತ್ತಿಕೊಂಡು ತಿರುಗಾಡ್ತರೊ ಏನೋ. ಅಂತೂ ಇದು ರಾಜಕಾರಣಿಗಳಿಗೆ ಪಾಠ ಆಗಬೇಕು. ನಾನಂತೂ ಇದನ್ನು ಖಂಡುಸ್ತಿನಿ."

"ನಿಮ್ಮ ಕೇಸೆಲ್ಲಿಗೆ ಬಂತು ಸಾರ್?"

"ಯಾವುದು?"

"ಅದೇ ಮೇಟಿ ತರದ್ದೇ ಒಂದು ಕೇಸಾಗಿತ್ತಲ್ಲ ಸಾರ್."

"ಅದಿನ್ನೂ ಕೋರ್ಟಲ್ಲದೆ. ಕೋರ್ಟಲ್ಲಿ ಇರೋ ವಿಷಯ ಮಾತಾಡಬಾರ್ದು."



"ಯಾವುದ್ಕೂ ನೀವು ರಾಘವೇಶ್ವರನ ಲಾಯರ್... ನೇಮಿಸಿಕೊಳ್ಳಿ ಸಾರ್."

"ಥ್ಯಾಂಕ್ಸ್ ಇವ್ರುರೆ. ಒಳ್ಳೆ ಸಲಹೆ ಕೊಟ್ರಿ."

"ಥ್ಯಾಂಕ್ಯೂ ಸಾರ್."

ಇನ್ನ ಬಿಜೆಪಿ ಕಡೆಯಿಂದ ಭಾವಿ ಮುಖ್ಯಮಂ... ಎಂದು ಬಿಂಬಿತವಾಗಿರುವ ಯಡಿಯೂರಪ್ಪನವರನ್... ಮಾತನಾಡಿಸಿ ಅಭಿಪ್ರಾಯ ಕೇಳಬೇಕೆನಿಸಿತಲ್ಲಾ, ಅಳುಕುತ್ತಲೇ... ಫೋನ್ ಮಾಡಲಾಗಿ ರಿಂಗಾಯ್ತು.

"ಹಲೋ ಸಾರ್, ನಾನು ಯಾಹು. ಮೇಟಿಯವ... ಪ್ರಕರಣದ ಬಗ್ಗೆ ಏನೇಳ್ತಿರಿ ಸಾರ್?"


"ಇದೊಂದು ಮಾನಮರ್ಯಾದೆ ಇಲ್ದೆಯಿರೋನ... ಮಾಡಿರೊ ಕೆಲಸ. ಇವತ್ತೇ ಸಿದ್ದರಾಮಯ್ಯ ಜನರ ಕ್ಷ... ಕೇಳಿ ರಾಜಿನಾಮೆ ಕೊಡಬೇಕು. ಹಾಗೇನೇ ವಿಧಾನ... ವಿಸರ್ಜನೆ ಮಾಡಿ ಚುನಾವಣೆ ಎದುರಿಸಬೇಕು. ಆ ಧೈರ್ಯ... ಅವರಿಗಿಲ್ಲ. ಮದುವೆಯಾಗದೆಯಿರೊ ಹೆಣ್ಣು ಮಕ್ಕ... ಹಣಕಾಸು, ಅಧಿಕಾರದ ಆಸೆ ತೋರಿಸಿ ಎಲ್ಲೆಂದರ... ಮಲಗಿಸಿ ಶೋಷಣೆ ಮಾಡೋದು ಮೊದಲು ನಿಲ್ಲಬೇಕು... ಇದು ನಿಲ್ಲೋವರಿಗೂ ಈ ಯಡಿಯೂರಪ್ಪನ ಹೋರಾ... ನಿಲ್ಲೋದಿಲ್ಲ."

"ಥ್ಯಾಂಕ್ಯೂ ಸಾರ್. ಒಳ್ಳೆ ಮಾತೇಳಿದ್ರಿ."

ಆ ನಂತರ ಇನ್ಯಾರಿಗಾದರೂ ಫೋನ್ ಮಾಡಬೇಕೆಂದು... ಯೋಚಿಸುವಾಗ ತಟ್ಟನೆ ಹೊಳೆದ ಹೆಸರು... ಕುಮಾರಸ್ವಾಮಿಯದು. ಕೂಡಲೇ ಫೋನ್ ಮಾಡಲಾಗಿ... ರಿಂಗಾಯ್ತು.

"ಹಲೋ ಸಾರ್, ನಾನು ಯಾಹು. ಈ ಮೇಟಿ... ಪ್ರಕರಣದ ಬಗ್ಗೆ ನಿಮ್ಮ ಅಭಿಪ್ರಾಯ ಹೇಳಿ ಸಾರ್."

ಮೈಸೂರು: ಯಡ್ಡಿ ಪಡಸಾಲೆಯಲ್ಲಿ 'ಪ್ರಸಾದ್' ಗೇಮು!



ತಿಂತೂ ಸಂಪುಟ ಪರಿತ್ಯಕ್ತ ಶ್ರೀನಿವಾಸ್ ಪ್ರಸಾದ್ ಸೇರುವುದು ಭಾಗಶಃ ಖಾತ್ರಿಯಾದಂತಾಗಿದೆ. ನಗೂಡಿನಲ್ಲಿ ಮಂಗಳವಾರ ನಡೆದ ಬಿಜೆಪಿ ಕರ್ತರ ಸಮಾವೇಶದಲ್ಲಿ ಆ ಪಾರ್ಟಿಯ ರಾಜ್ಯಾಧ್ಯಕ್ಷ ತ್ ಯಡ್ಯೂರಪ್ಪನೇ ಎದುರಾಗಲಿರುವ ಚುನಾವಣೆಗೆ ಗೂಡಿನಿಂದ ನಾವು ಪ್ರಸಾದ್ ಹಕ್ಕಿಯನ್ನು ಬಿಡ್ತೀವಿ ಅಂತ ಘೋಷಿಸುವ ಮೂಲಕ ಶ್ರೀನಿವಾಸ್ ರ ಮೂರು ಸ್ವಾಭಿಮಾನಿ ಸಮಾವೇಶಗಳು ಬಿಚ್ಚಿಡದ ಂಗ ಸತ್ಯವೊಂದನ್ನು ತೆರೆದಿಟ್ಟಿದ್ದಾರೆ. ಶ್ರೀನಿವಾಸ್ ್ ಸಿದ್ದರಾಮಯ್ಯನ ಮೇಲೆ ಶ್ಯಾನೆ ಸಿಟ್ಟುಮಾಡಿಕೊಂಡು ಪ್ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಾಗಲೇ ಅವರ ಬಿಜೆಪಿಯಲ್ಲಿ ಕಾಯಂ ಅಂತ ಜನರೆಲ್ಲ ಸಿದ್ದರು. ಅದನ್ನು ಪುಷ್ಟೀಕರಿಸುವಂತಹ ಡ್ರಾಮಾಗಳೂ ದ್ದವು. ಆದರು ಅದ್ಯಾಕೋ ಪ್ರಸಾದ್‌ರೇ ಅಧಿಕೃತವಾಗಿ ಹೇಳಿಕೊಂಡಿರಲಿಲ್ಲ. ಈಗಲೂ ಸಹ ಯಡ್ಯೂರಪ್ಪ ಘೋಷಿಸಿದ ಮೇಲೂ ಪ್ರಸಾದ್ ತುಟಿ ಎರಡು ದೆ ಸುಮ್ಮನಿದ್ದಾರೆಯೇ ಹೊರತು ಅದು ನಿಜವೋ, ೇ ಅನ್ನೋದನ್ನು ಸಾಬೀತುಮಾಡುತ್ತಿಲ್ಲ. ಅಲ್ಲಿಗೆ ್‌ಗೆ ಬಿಜೆಪಿ ಸೇರುವುದಕ್ಕೆ ಸಂಪೂರ್ಣ ಸಮ್ಮತಿ ಎನ್ನುವುದು ದೃಢವಾಗಿದೆ.

ಭ್ರಷ್ಟಾಚಾರದ ಕಾರಣಕ್ಕೆ ಕುರ್ಚಿಯಿಂದ, ಆಮೇಲೆ ದಲೇ ಹೊರದಬ್ಬಿಸಿಕೊಂಡ ಯಡ್ಯೂರಪ್ಪನಿಗೆ ಈಗ ಮುಖ್ಯಮಂತ್ರಿಯಾಗುವ ಕನಸು ಬೀಳುತ್ತಿರುವಂತಿದೆ. ಗಿ ಬ್ರಿಗೇಡ್ ಕಟ್ಟಿಕೊಂಡು ಬಾಲ ಬಿಚ್ಚಲು ಹೊರಟಿದ್ದ ಸುರ ಈಶ್ವರಪ್ಪನ ಅಮಿತೋತ್ಸಾಹವನ್ನು ಜಗ್ಗನೆ ಹಾಕಿದ್ದಾರೆ. ಸದ್ಯ ಬಿಜೆಪಿಯಲ್ಲಿ ಯಡ್ಯೂರಪ್ಪನೇ ಣಿ. ಅಂತಹ ಯಡ್ಯೂರಪ್ಪನೇ ಸಾರ್ವಜನಿಕವಾಗಿ ವಾಸ್ ಪ್ರಸಾದ್ ಬಿಜೆಪಿ ಸೇರಿಕೊಳ್ಳುತ್ತಾರೆ ಅಂತ ಷಿಸಿರುವುದರಿಂದ ಅದಕ್ಕೆ ಪ್ರಸಾದ್ ಸಮ್ಮತಿಯೂ ಅಂತಲೇ ಅರ್ಥ. ಆದರೆ ಇಲ್ಲಿ ಪ್ರಶ್ನೆ ಕಾಡುತ್ತಿರುವುದು ವಾಸ್ ಪ್ರಸಾದ್ ಯಾಕೆ ಮುಂದೆಬಂದು ಈ ವನ್ನು ಹೇಳುತ್ತಿಲ್ಲ? ಕಡೇಪಕ್ಷ ತನ್ನ ಸ್ವಂತ ಕ್ಷೇತ್ರದಲ್ಲೇ ಯ ರಾಜ್ಯಾಧ್ಯಕ್ಷ ಸಮಾವೇಶ ನಡೆಸಿ ಸ್ಪರ್ಧಿಯನ್ನು ಸುವಾಗ ವೇದಿಕೆ ಹಂಚಿಕೊಂಡು ತನ್ನ ನಡೆಯನ್ನು ಹೀರು ಮಾಡಬಹುದಿತ್ತಲ್ಲವೇ?

ದಕ್ಕೆ ಕಾರಣವೂ ಇದೆ. ಎಲ್ಲರಿಗೂ ತಿಳಿದಿರುವಂತೆ ರಿನ ಬಹಳಷ್ಟು ಜನ ಪ್ರಗತಿಪರರು, ಸಾಹಿತಿಗಳು, ವಾದಿಗಳು, ದಲಿತ ಹೋರಾಟಗಾರರು, ಬೌದ್ಧ ಧರ್ಮಕ್ಕೆ ಸೇರ್ಪಡೆಗೊಳ್ಳುತ್ತಿರುವ ದೊಡ್ಡ ಪಡೆ, ಸಂಘಟನೆಗಳಿಗೆ ವಿ.ಶ್ರೀನಿವಾಸ ಪ್ರಸಾದ್ ಅವರ ಮೇಲೆ ಸ್ವಲ್ಪ ಒಲವು. ಅವರ ಬೆಂಬಲಿಗರಾದಿಯಾಗಿ ಈ ಎಲ್ಲರಿಗೂ ಬಿಜೆಪಿಯ ಬಗ್ಗೆ ಒಲವಿಲ್ಲ. ಅದು ಕೋಮುವಾದಿ, ಜಾತಿವಾದಿ ಮುಖಸ್ತುತಿಯ ಪಕ್ಷ ಎಂದು ಅವರೆಲ್ಲ ಅದನ್ನು ನಿರಾಕರಿಸಿದ್ದಾರೆ. ಅಂತದರಲ್ಲಿ ಪ್ರಸಾದ್ ಅವರು ಬಿಜೆಪಿಗೆ ಸೇರ್ಪಡೆಗೊಂಡರೆ ಇವರೆಲ್ಲರೂ ಪ್ರಸಾದ್‌ಗೆ ಬೆಂಬಲ ನೀಡುವುದಿರಲಿ ಅವರನ್ನು ವಿರೋಧಿಸಲು ಶುರುಮಾಡುತ್ತಾರೆ ಅಥವಾ ವಿರೋಧಿಗಳೇ ಆಗಿಬಿಡುತ್ತಾರೆ. ಹಾಗಾಗಿ ಶ್ರೀನಿವಾಸ ಪ್ರಸಾದ್ ಅವರಿಗೆ ಈ ಬಗ್ಗೆ ಕೊಂಚ ಅಳುಕು ಇದ್ದಂತಿದೆ. ಅಂದರೆ ನಾನೇ ಸ್ವ ಇಚ್ಛೆಯಿಂದ ಬಿಜೆಪಿಗೆ ಸೇರ್ಪಡೆಗೊಂಡರೆ ಅಥವಾ ಹೋಗಲು ಹಾತೊರೆದರೆ ನನ್ನನ್ನು ಬೆಂಬಲಿಸುತ್ತಿದ್ದ ಈ ವರ್ಗದ ದೃಷ್ಟಿಯಲ್ಲಿ ನಾನು ಸ್ವಾರ್ಥಿಯಾಗಿ, ಜಾತಿವಾದವನ್ನು, ಕೋಮುವಾದವನ್ನು ಒಪ್ಪಿಕೊಂಡ ಮನುಷ್ಯನಾಗಿ ಕಾಣತೊಡಗಿ ಪ್ರಗತಿಪರ ಹೋರಾಟಗಾರರ, ಪ್ರಗತಿಪರ ದಲಿತರ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಅದರ ಬದಲು ತನ್ನ ನಿಲುವನ್ನು ಬೇರೆಯವರಿಂದ ಹೇಳಿಸಿ ಅದಕ್ಕೆ ಪ್ರತಿಕ್ರಿಯೆ ಹೇಗೆ ಬರುತ್ತದೆಂಬುದನ್ನು ತಿಳಿದುಕೊಂಡು ಮುಂದುವರೆದರಾಯಿತು ಅನ್ನೋ ನಡೆ ಪ್ರಸಾದ್‌ರದ್ದು. ಎಷ್ಟೇ ಆದರೂ ಮನುಷ್ಯ ಸ್ವಾರ್ಥಿಯೇ ಅಲ್ಲವೆ. ಅಚ್ಚರಿಯ ಸಂಗತಿಯೆಂದರೆ, ಯಡ್ಯೂರಪ್ಪನಂತಹ ಗಂಟುಮೋರೆ ತಂತ್ರಗಾರನೇ ಶ್ರೀನಿವಾಸ್ ಪ್ರಸಾದ್‌ರ ತಾಳಕ್ಕೆ ತಕ್ಕಂತೆ ಕುಣಿಯುತ್ತಿರೋದು. ನಿಮಗೆ ಬಿಜೆಪಿ ಸೇರುವ ಮನಸ್ಸಿದ್ದರೆ ನೀವೇ ಘೋಷಣೆ ಮಾಡಿ ಅಂತ ಯಡ್ಯೂರಪ್ಪ ಕಡ್ಡಿತುಂಡು ಮಾಡಿದಂತೆ ಪ್ರಸಾದ್‌ಗೆ ಹೇಳಿಬಿಡಬಹುದಿತ್ತು. ಆದರೆ ಅದು ಯಡ್ಡಿಗೆ ಸಾಧ್ಯವಾಗದಿರುವುದಕ್ಕೆ ಈಶ್ವರಪ್ಪನೇ ಕಾರಣ ಎಂದರೂ ತಪ್ಪಾಗಲಿಕ್ಕಿಲ್ಲ. 'ಹಿಂದ' ಹೆಸರಲ್ಲಿ ಈಶ್ವರಪ್ಪ ಹಿಂದುಳಿದ ಮತ್ತು ದಲಿತರ ಸಂಘಟನೆ ಮಾಡಿ ಪಕ್ಷಕ್ಕೆ ಬಲ ತುಂಬುತ್ತೇನೆ ಅಂತ ಬ್ರಿಗೇಡ್ ಡ್ರಾಮಾ ನಡೆಸುತ್ತಿದ್ದಾರೆ. ರಾಷ್ಟ್ರೀಯ ನಾಯಕರಿಂದ ಹೇಳಿಸಿದರೂ ಆತ ಕೇಳಿದಂತೆ ಮಾಡಿ ಕೇಳದಂತೆ ವರ್ತಿಸುತ್ತಿದ್ದಾರೆ. ಇಂಥಾ ಸಮಯದಲ್ಲಿ ಈಶ್ವರಪ್ಪನನ್ನು ಹಣಿಯಲು ರಾಷ್ಟ್ರೀಯ ನಾಯಕರ ಮುಂದೆ ಯಡ್ಯೂರಪ್ಪನಿಗೆ ಒಂದು 'ಹಿಂದ' ಗುರಾಣಿಯ ಅವಶ್ಯಕತೆ ಇದೆ. ಶ್ರೀನಿವಾಸ್ ಪ್ರಸಾದ್‌ರನ್ನು ಪಕ್ಷಕ್ಕೆ ಕರೆತಂದರೆ ತನ್ನಿಂದಾಗಿ ದಲಿತರೂ ಬಿಜೆಪಿಯತ್ತ ಮುಖ ಮಾಡುತ್ತಿದ್ದಾರೆ, ಈ ಈಶ್ವರಪ್ಪ ಯಡವಟ್ಟು ಮಾಡಿ ಅದಕ್ಕೂ ಕಲ್ಲುಹಾಕುತ್ತಾನೆ ಇವನ ಮೇಲೆ ಮೊದಲು ಶಿಸ್ತುಕ್ರಮ ತಗೊಳ್ಳಿ ಅಂತ ಚಂಡಿ ಹಿಡಿದು ಈಶ್ವರಪ್ಪನ ರಾಜಕೀಯ ಬಯೋಗ್ರಫಿಗೇ ಫುಲ್‌ಸ್ಟಾಪ್ ಇಡಬಹುದೆನ್ನುವುದು ಯಡ್ಯೂರಪ್ಪನ ಪ್ಲಾನು. ಇಲ್ಲದೇ ಹೋಗಿದ್ದರೆ, 'ನಾನು ಸಾರ್ವಜನಿಕವಾಗಿ ಏನನ್ನೂ ಹೇಳುವುದಿಲ್ಲ; ನೀವೇ ಘೋಷಣೆ ಮಾಡಿ, ಆಮೇಲೆ ನಾನು ಬಂದು ಸೇರಿಕೊಳ್ತೀನಿ' ಅನ್ನೋ ಪ್ರಸಾದ್ ಗಿಲಿಗಿಲಿ ಮಾತಿಗೆ ಯಡ್ಯೂರಪ್ಪ ತಲೆಯಾಡಿಸುವ ಚಾನ್ಸೇ ಇಲ್ಲ.

ಅಸಲಿಗೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶ್ರೀನಿವಾಸ ಪ್ರಸಾದ್ 'ನನಗೆ ಈ ಚುನಾವಣೆಯೇ ಕೊನೆಯ ಚುನಾವಣೆ' ಎಂದಿದ್ದರು. ಇದನ್ನು ನಂಬಿ ಹಲವು ಯುವಕರು ತಮಗೆ ಅವಕಾಶ ಸಿಗುತ್ತದೆ ಎಂದು ನಂಬಿದ್ದರು. ಆದರೆ ಅದು ಹಾಗಾಗಲಿಲ್ಲ, ಅವರು ಅಧಿಕಾರದ ಮುಂದೆ ತತ್ವ ಸಿದ್ಧಾಂತಗಳು ಯಾವ ಲೆಕ್ಕ ಎಂದು ಅವುಗಳನ್ನು ಗಾಳಿಗೆ ತೂರಿ ಬಿಜೆಪಿಯನ್ನು ಆತುಕೊಂಡಿದ್ದಾರೆ. ಆದರೆ ಅವರನ್ನು ನಂಬಿದ್ದ ಹಿತೈಷಿಗಳ, ಪ್ರಗತಿಪರರ ಕಣ್ಣೊರೆಸಬೇಕಲ್ಲ ಅದಕ್ಕೆ ಬಿಜೆಪಿಯ ನೇರ ಸಭೆಗಳಲ್ಲಿ ಕಾಣಿಸಿಕೊಳ್ಳದೆ ತೆರೆಮರೆಯ ವ್ಯವಹಾರ ನಡೆಸುತ್ತಿದ್ದಾರೆ ಅನ್ನಿಸುತ್ತಿದೆ.

ಇತ್ತೀಚಿನ ಬೆಳವಣಿಗೆಯನ್ನೇ ನೋಡಿ: ಯಡಿಯೂರಪ್ಪ ಅವರು ಶ್ರೀನಿವಾಸ ಪ್ರಸಾದ್ ಅವರ ಅನುಪಸ್ಥಿತಿಯಲ್ಲಿ ಪ್ರಸಾದ್ ಅವರು ನಂಜನಗೂಡಿನಲ್ಲಿ ನಡೆಯುವ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಎಂದು ಘೋಷಿಸಿದ್ದಾರೆ. ಈ ಸಂದರ್ಭದಲ್ಲಿ ಪ್ರಸಾದ್ ಅವರು ಬೆಂಗಳೂರಿನಲ್ಲಿ ರಹಸ್ಯ ಸಭೆ ನಡೆಸಿ ಅಯ್ಯೋ ಈ ಬಗ್ಗೆ ನನಗೆ ಏನೂ ತಿಳಿದಿರಲಿಲ್ಲ, ನಾನು ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣೆಗೆ ನಿಲ್ಲಲು ತೀರ್ಮಾನಿಸಿದ್ದೆ. ಇವರು ಹೀಗೆ ಘೋಷಣೆ ಮಾಡಿಬಿಟ್ಟರು. ಆದ್ದರಿಂದ ಈಗ ಅನಿವಾರ್ಯವಾಗಿ ಬಿಜೆಪಿಯಿಂದ ಚುನಾವಣೆಗೆ ನಿಲ್ಲಬೇಕು ಎನ್ನುವಂತೆ ಮಾತನಾಡಿದ್ದಾರೆ. ಇದರರ್ಥ ಇಷ್ಟೆ, 'ನನಗೆ ಬಿಜೆಪಿ ಸೇರುವುದು ಇಷ್ಟವಿರಲಿಲ್ಲ. ಆದರೆ ಬಿಜೆಯುವರ ಬಲವಂತದಿಂದ ಹಾಗೂ ಮಾಜಿ ಮುಖ್ಯಮಂತ್ರಿ, ಪಕ್ಷದ ರಾಜ್ಯಾಧ್ಯಕ್ಷ ಯಡಿಯೂರಪ್ಪ ಅವರೇ ಇಕ್ಕಟ್ಟಿಗೆ ಸಿಲುಕಿಸಿ ಬಹಿರಂಗವಾಗಿ ಘೋಷಣೆ ಮಾಡಿದ್ದರಿಂದ ಬಿಜೆಪಿಗೆ ಸೇರ್ಪಡೆಗೊಂಡೆ. ಹಾಗಾಗಿ ನನ್ನ ಹಿತೈಷಿಗಳು, ಪ್ರಗತಿಪರರು, ಹೋರಾಟಗಾರರು ಇದನ್ನು ಅರ್ಥಮಾಡಿಕೊಂಡು ನನಗಾಗಿರುವ ಅನ್ಯಾಯಕ್ಕೆ ನನ್ನನ್ನು ಬೆಂಬಲಿಸಬೇಕು' ಅಂತ ಅಂಗಲಾಚುವ ತಂತ್ರ ಇದ್ದಂತಿದೆ.

ಇಲ್ಲದಿದ್ದರೆ ಅವರು ಒಪ್ಪಿಗೆ ಕೊಡದೆ ಅವರ ಅನುಪಸ್ಥಿತಿಯಲ್ಲಿ ಯಡಿಯೂರಪ್ಪ ಅವರು ಶ್ರೀನಿವಾಸ ಪ್ರಸಾದ್ ಅವರು ಬಿಜೆಪಿ ಅಭ್ಯರ್ಥಿ ಎಂದು ಘೋಷಿಸುತ್ತಿದ್ದರೆ? ಅದೇನೇ ಇರಲಿ ಪ್ರಸಾದ್ ಬಿಜೆಪಿ ಅಭ್ಯರ್ಥಿಯಾದರೆ ಅವರನ್ನು ತಮ್ಮ ಸರ್ಕಲ್‌ನಲ್ಲಿ ಸೇರಿಸಿಕೊಳ್ಳುತ್ತಿದ್ದ ಸಾಹಿತಿಗಳು, ಪ್ರಗತಿಪರರು, ದಲಿತಪರ ಹೋರಾಟಗಾರರು ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೊ ಕಾದು ನೋಡಬೇಕಿದೆ.

■ ಶರ

ತ್ತೇರಿ

▸ ಯಾಹೂ

ಕೇಳದಿಕ್ಕೆ ನಾಚಿಕೆ ಆಯ್ತಾ ಅದೆ ಯಾಹು ಅವರೆ. ಮಕ್ಕಳಿರತಕ್ಕಂತ ರಾಜಕಾರಣಿಗಳು ಇಂತ ಕೆಲಸ ೋದಿಕ್ಕೆ ತೀರ್ಮಾನ ತಗೊಂಡು ಕಾರ್ಯಾಚರಣೆಗೆ ಂತ ಕೃತ್ಯ ಏನಿದೆ ಇದನ್ನು ಆರು ಕೋಟಿ ಜನ ತಕ್ಕಂತ ಒಂದು ಪರಿಸ್ಥಿತಿನ ಮೇಟಿಯವರು ಣ ಮಾಡಿದಾರೆ. ನಮ್ಮ ತಂದೆ ಜೊತೆ ರಾಜಕಾರಣ ಅವರ ಸಂಪುಟದಲ್ಲಿ ಮಂತ್ರಿಯಾಗಿದ್ದಂತ ಮೇಟಿ ತಂದೆಯವರನ್ನಾದ್ರು ನೋಡಿ ಒಳ್ಳೆ ಬುದ್ಧಿ ಕಲಿತಕ್ಕಂತ ಮಾಡಬಹುದಿತ್ತು, ಆ ಪ್ರಯತ್ನಕ್ಕೆ ಕೈಹಾಕದೆ ರಿಂದ ಇವತ್ತು ಇಂತ ಪ್ರಸಂಗವನ್ನು ಸ್ತಾಯಿದಾರೆ. ಅಂಗೆ ನೋಡಿದ್ರೆ ಈ ಸಿದ್ದರಾಮಯ್ಯನ ದಲ್ಲಿ ಇಂತಹ ಭಾಳ ಜನ ಇದಾರೆ. ಸಂದರ್ಭ ಗ ಎಲ್ಲಾನು ಜನತೆ ಮುಂದಿಡತಿನಿ."

ಮುಖ ಹೇಗಿದಾಳೆ ಸಾರ್?"

ಳ ಚೂಟಿಯಾಗಿದಾಳೆ."

ಂಕ್ಯೂ ಸಾರ್."

ದೆಲ್ಲಾ ಆದಮೇಲೆ ಅಪರಾಧಿ ಸ್ಥಾನದಲ್ಲಿರುವ ರುವವರನ್ನೂ ಮಾತನಾಡಿಸೋಣ ಅನ್ನಿಸಿ ಫೋನ್ ರೆ. ಸುಮಾರು ಹೊತ್ತು ರಿಂಗ್‌ಟೋನ್ ಹೊಡೆದ

ಲೋ?"

ನಾನು ಯಾಹು ಅಂತರಿ ಪತ್ರಕರ್ತದಿನಿ."

ತ್ತಿರಿಯುವರೇನ್ರಿ?"

ದ್ರಿ, ಸರ."

ವ ಪತ್ರಿಕೆರಿ?"

"ಗೌರಿ ಲಂಕೇಶ್ ಪತ್ರಿಕೆ ಸರ."

"ಅಲ್ಲಿ ನಮ್ಮವರೊಬ್ಬರದಾರ, ಗುರುತೇನ?"

"ಅವ್ರರೆ ಫೋನ್ ಮಾಡಿ ಅಂದ್ರು ಸರ."

"ಹೌದನ?"

"ಇದ್ಯಂಗಾತ್ರಿ ಸರ?"

"ಇದು ಏನಾತಪಾ ಅಂದ್ರ ನನಿಗೆ ಬ್ಯಾಕ್‌ಪೇನಿತ್ರಿ. ಅದಕ್ಕ ಪಂಚಕರ್ಮ ಮಾಡಿಸಿಕೊಳ್ತಿದ್ದಿನ್ರಿ."

"ಪಂಚಕರ್ಮದಲ್ಲಿ ನಿಮ್ಮನ್ನು ಮಲಗಿಸಿ ಹೆಣ್ಣು ಮಸಾಜ್ ಮಾಡ್ತರೆ ಸರ. ಅದ್ರ ಇದರಾಗ ನೀವಾ ಮಾಡೋರನ್ನ ಮಲಗಿಸಿ ಎಣ್ಣೆ ತೀಡಿದಂಗೆ ಕಾಣ್ತದಲ್ರಿ."

"ಅದ ನಾನಲ್ರೀ. ಅದ ಏನೋ ಮಾಡ್ಯಾರೆ. ಒಟ್ಟು ನಾ ನಿರಪರಾಧಿ ಅದೀನಿ."

"ಸಾರಾಸಗಟು ಯಲ್ಲಾನು ತಿರಸ್ಕರಸಾಕ ಹತ್ತಿರಲ್ರಿ ಮತ್ತು ಸೀಡಿ ಹ್ಯಂಗ ಬಂತು?"

"ಒಟ್ಟು ಪ್ರಕರಣ ಏನೈತಿ ಅದ ನ್ಯಡದಿಲ್ಲ ಅಂದಮ್ಯಾಲ ಇನ್ನೇನು ಮಾಡುನ್ರಿ."

"ನೀವು ಖರೇವುರಿ ಸರ. ಇದು ನೆಡದೈತಿ ಅಂದ್ರಾ ಪ್ರಕರಣದ ರೂವಾರಿಗಳು ಸಿಗತಾರೌದಿಲ್ರೊ."

"ಅದು ಸಿಐಡಿ ಪೊಲೀಸರಿಗೆ ಬಿಟ್ಟದ್ರಿ."

"ಆಕೆ ಯಾರು ಸರ?"

"ಆ....ಕೆ ವಿಜಯಲಕ್ಷ್ಮಿ ಅಂತ್ರಿ. ನನಗ ಸಂಬಂಧಿಯಾಗಬೇಕು."

"ಮಂತ್ರಿಗಳಿಗೆ ಕೆಟ್ಟ ಹೆಸರು ಬರೂದು ಸಂಬಂಧಿಗಳಿಂದ್ಲೆ ಸರ."

"ಖರೆರಿ. ಆದ್ರ ನಮಗ ತಿಳಿಲಿಲ್ಲದು."

"ಇನ್ನು ಮ್ಯಾಲೆ ವೇಷ ಮರಿಸಿಕೊಂಡು ಹೋಗೋದು ಬೆಟರ್ ನೋಡ್ರಿ. ಒಂದೋ ರಾಮದೇವನ ವೇಷ ಹಾಕಬವುದು. ಅದು ಗುರುತಾಗುದಿಲ್ಲ, ಇಲ್ಲಾಂದ್ರ ರಾಘವನ ವೇಷ ಹಾಕಬೇಕ್ರಿ. ಆಗ ಯಾರಿಗೂ ಗೊತ್ತಾಗುದಿಲ್ಲ."

"ರಾಘವ ಯಾರ್ರಿ?"

"ಅವ ಒಬ್ಬ ಫೇಮಸ್ ಮಷಿನ್ ಮಾಸ್ತರರ್ರಿ. ಮದುವಿ ಆದವ್ರುರು, ಆಗದವ್ರುರು ಯಾರನೂ ಬಿಟ್ಟಿಲ್ಲವ. ಅವ್ನನ ಮ್ಯಾಲ ಕೇಸಾಗೇತಿ. ಆ ಕೇಸನ ನ್ಯಡಸೋದಿಲ್ಲಂತೇಳಿ ಐದು ಜನ ಜಡ್ಜ್‌ಗಳು ಹಿಂದ ಸರದಾರ್ರಿ. ಈಗ ಅರನೆತ್ತವ ನಮಗ ಬ್ಯಾಡಿತ್ತಿದು ಅಂತೇಳಿ ಅವ್ರನೂ ಹಿಂದ ಸರದಾರ. ಅಂತ ಅಂಗದಾನವ ರಾಘವ."

"ಅಂಗರ ಭಾಳ ಹಲಕಟ್ ಅದಾನವ."

"ಹೌದ್ರಿ ಸರ. ನೀವು ಒಂದೇ ಪ್ರಕರಣಕ್ಕ ಗಾಭರ್ಯಾದು ಮನಿ ಹಿಡದು ಕುಂದ್ರ ಬ್ಯಾಡ್ರಿ. ಈಗ ಕಾಲ ಬದ್ಲಾಗೇತಿ. ಒಳ್ಳೆ ಮನಸನ ಸನೇಕ್ಕ ಯಾರೂ ಹಾಯುದಿಲ್ಲ. ಕೆಟ್ಟ ಕೆಲಸ ಮಾಡಿ ಒಳ್ಳೆ ಹೆಸರು ಸಂಪಾದಸ್ತರಲ್ಲಾ ಅವ್ರುರಾ ಹೀರೋಗಳು. ಹಾಂಗ ನೀವು ಇವತ್ತು ಹೀರೊ ಆಗಿರಿ. ನಿಮಗೆ ಸ್ಫೂರ್ತಿ ಬರ್ಲಿ ಅಂತ್ಹೇಳಿ ಒಂದೀಟು ಹೆಸುರು ಹೇಳ್ಳೇನೆ?"

"ಹೇಳ್ರಿಪ್ಪ, ಅದ್ಯಾರು?"

"ಮೊದಲಕ್ಕ ನಮ್ಮ ಯಡಿಯೂರಪ್ಪನ ನೋಡ್ರಿ. ಶೋಭಕ್ಕನ ಕೂಡ ಹ್ಯಂಗ ಅದ್ಯಾದ್ತರ. ಆ ನಂತರ ನಮ್ಮ ಕುಮಾರಣ್ಣ ಸಿಎಂ ಆಗಿದ್ದಾಗ ಇದ್ಯಕ್ಕಿದ್ದಾಂಗ ಭೂಗತರಾಗತಿದ್ದರ್ರಿ. ಆದ್ರ ರಿಜಲ್ಟ್ ಏನೈತಿ ಅದನ ಮುಚ್ಚಕ್ಕಾಗಲಿಲ್ಲ."

"ಹೌದ್ರಾ?"

"ಹೌದ್ರಾ ಅಂತಿರಲ್ಲ, ನಿಮಗೊತ್ತಿಲೇನ? ಇನ್ನ ನಿಮ್ಮದೇ ಖಾತೆ ಮಂತ್ರಿಯಾಗಿದ್ದ ರೇಣುಕಾಚಾರಿ ಜಯಲಕ್ಷ್ಮಿಗೆ ಗಂಟು ಬಿದ್ದನ್ರಿ. ಆದ್ರು ಅವ ಹ್ಯಂಗ ಮೆರಿತನ ಗೊತ್ತದೇನು. ಅವ್ರುನ ಗೆಳೆಯ ಹರತಾಳು ಹಾಲಪ್ಪ ಅಂತ್ರಿ. ಆವನ ಕತಿ ಏನಪಾ ಅಂದ್ರ ನಿಮದು ಸಿಡಿ ಸಿಕ್ಕೈತಿ ಅವ್ರುನುದು ಅರಿವಿ ಸಿಕ್ಕವು. ಅರಿವಿ ಮೇಗ ಹಾಲಪ್ಪನ ರಗಳೆ ಐತಂತ. ಆದ್ರು ಇವರೆಲ್ಲರೂ ಹ್ಯಂಗ ಹೀರೋಗಳ ಗತಿ ಮೆರಿಯಾಕತ್ತಾರ ಗೊತ್ತೇನು. ನಮ್ಮ ಕರ್ನಾಟಕದಾಗೆ ಚೀಫ್ ಮಿನಿಸ್ಟರ್‌ಗಳ ರಾಸಲೀಲೇದೆ ಒಂದು ದೊಡ್ಡ ಕರೆ ಐತಿ. ಕೆಂಗಲ್ ಹನುಮಂತಯ್ಯನ ಮೇಲಿನ ಗುಮಾನಿ ಇದ್ದುವು. ಇನ್ನ ಅರಸು, ಗುಂಡೂರಾವ್, ರಾಮಕೃಷ್ಣ ಹೆಗಡೆ, ಪಟೇಲರಂತೂ ಸದನದಾಗ ಒಪ್ಪಿಗೊಂಡಿದ್ರು. ನಾವು ಕುರಿ ಮಂದ್ಯದಿವಿ. ಟಗರನ ಸಮಗ ಸ್ಫೂರ್ತಿ ಅನಕೋತ ಹೋಗಬೇಕು. ನೀವು ಅಂಗಿರತಿರೇನ?"

"ಹ್ಯಂಗಿರೋದ್ರಪ್ಪ? ನನಿಗೊಟ್ಟ ಏನೂ ಗುರುತಾಗುವುದಿಲ್ಲ. ಸಿದ್ದರಾಮಯ್ಯ ನನ್ನ ಮ್ಯಾಲ ವಿಶ್ವಾಸಿಟ್ಟು ಮಂತ್ರಿ ಮಾಡಿದ್ರೆ ಹಿಂಗಾತಲ್ಲಾ ಅಂತ ಅನಸಾಕತ್ತೈತಿ."

"ಸಿದ್ದರಾಮಯ್ಯ ನಿಮ್ಮ ತಗದಾತಿಲ್ರೊ, ಇನ್ನ ಕಾಂಗ್ರೆಸ್ ಪಾರ್ಟಿ ಸಸ್ಪೆಂಡ್ ಮಾಡೈತಿ. ಈಗ ನೀವು ಇಂಡಿಪೆಂಡೆಂಟಾಗಿ ಓಡಾಡಿ ಗೆಲ್ಲೊ ತರ ಕಾಣಿಸಿದ್ರ ದ್ಯಾವೇಗೌಡ್ರು ಬಂದು ಕೈ ಹಿಡಿತಾರ."

"ಹಾಂಗೇನ್ರಿ?"

"ಹೌದ್ರಿ, ಅವ್ರುರ ಸಂಪುಟದಾಗ ನೀವು ಮಂತ್ರಿಯಾಗಿದ್ರಿ. ಅವ್ರುರು ಹೇಳಿದಂಗ ಕೇಳತಿದ್ರಿ. ಬರೀ ವಾಚರ್ ಗಾರ್ಡ್, ಗುಮಾಸ್ತರ ವರ್ಗ ಅಷ್ಟ ನಿಮಗ ಬುಟ್ಟು, ಡಿಎಫ್‌ಓ, ರೇಂಜರು ಇಂತ ದೊಡ್ಡ ದೊಡ್ಡ ಪೋಸ್ಟಿನ ಟ್ರಾನ್ಸ್‌ಫರ್ ಅವರೇ ಮಾಡತಿದ್ರು."

"ಹೌದ್ರಿ, ಗೌಡ್ರು ಒಳ್ಳೆಯವರದಾರ."

"ಈಗ್ಲು ನಿಮಗ ಅವ್ರುರೇ ದಿಕ್ಕರಿ. ಕ್ಷೇತ್ರದ ತುಂಬ ಅಡ್ಯಾಡಿ ನಾ ನಿರಪರಾಧಿ ಆದೀನಿ, ಈ ಟಿವಿ ವಳಗಡೆ ಇರೋ ಹಾದರಕ್ಹುಟ್ಟಿದ ಮಂದಿ ನನ್ನ ಮಾನಾ ತಗದಾರ ಅಂತ ಹೇಳಿಕೊಂಡು ಅಡ್ಯಾಡ್ರಿ. ಮತ್ತ ಮನಿ ಹಿಡದು ಕುಂದ್ರ ಬ್ಯಾಡ್ರಿ, ತಿಳಿತಿಲ್ಲ."

"ಬ್ಯಾಕ್‌ಪೇಯಿನು ಜಾಸ್ತಿಯಾಗೇತಿ."

"ಸ್ಟಂಟ್ ಭಾಳ ಉಪಯೋಗಿಬೇನ"

"ಇಲ್ರಿಪ"

"ಥೂತ್ತೇರಿ!!!" ■

ಕೊಡಗು ಚಲೋ

ಹೋರಾಟದ ಹುಟಗಗಳನ್ನು ಸೇರುತ್ತಿರುವ ಕೊಡಗಿನ ದಿಡ್ಡಳ್ಳಿ ಈಗ ದಿಟ್ಟ ಹೋರಾಟದ ಪ್ರದೇಶವಾಗುತ್ತಿದೆ. ಕರ್ನಾಟಕ ರಾಜ್ಯದ ಗಮನ ಮಾತ್ರವಲ್ಲ, ಇಡೀ ದೇಶದ ಗಮನ ಸೆಳೆದ ಹೋರಾಟ ಇಲ್ಲಿ ನಡೆಯುತ್ತಿದೆ. 587 ಕುಟುಂಬಗಳನ್ನು ಅರಣ್ಯ ಇಲಾಖೆಯವರು ಅಮಾನವೀಯವಾಗಿ ಅರಣ್ಯವೋ, ಅಲ್ಲವೊ ಎಂಬ ಜಿಜ್ಞಾಸೆಯ ಸ್ಥಳದಿಂದ ಕಿತ್ತೆಸೆದು ಬೀದಿಪಾಲು ಮಾಡಿದ್ದಾರೆ. ಹೀಗೆ ಬೀದಿಪಾಲು ಮಾಡುವುದರಲ್ಲಿ ಹಲವರ ಕೈಗಳು ಇವೆ. ಇವರಲ್ಲಿ ಪರಿಸರದ ಹೆಸರಿನಲ್ಲಿ ಸೋಗು ಹಾಕಿಕೊಂಡಿರುವವರು ಇದ್ದಾರೆ. ಕರ್ನಲ್ ಮುತ್ತಣ್ಣ ಎಂಬ ಪರಿಸರವಾದಿ (?) ಅರಣ್ಯ ಇಲಾಖೆಯ ಕ್ರಮವನ್ನು ಬೆಂಬಲಿಸುವುದಾಗಿ ಹೇಳಿಕೊಂಡಿದ್ದಾರೆ. ದಿಡ್ಡಳ್ಳಿಯು ಅರಣ್ಯ ಪ್ರದೇಶವಾಗಿದ್ದು ಅರಣ್ಯ ಒತ್ತುವರಿ ಕಾಯ್ದೆಯ ಉಲ್ಲಂಘನೆಯಾಗಿದೆ ಎಂದು ಹೇಳಿದ್ದಾರೆ.

ದಿಡ್ಡಳ್ಳಿಯಲ್ಲಿ ಇರುವ ಪ್ರದೇಶ ಅರಣ್ಯವೇ ಇರಬಹುದು. ಆದರೆ ಅಲ್ಲಿ ನೆಲೆ ನಿಂತವರು 587 ಬಡ ಪರಿಶಿಷ್ಟ ಪಂಗಡಕ್ಕೆ ಸೇರಿದ ಕುಟುಂಬಗಳು. ಅಂದರೆ ಸುಮಾರು 3,000ಕ್ಕೂ ಹೆಚ್ಚು ಮಂದಿಗೆ ಆಶ್ರಯ ಈ ಭೂಮಿ ನೀಡಿದೆ. ಇದು ಕರ್ನಲ್ ಮುತ್ತಣ್ಣನವರಂತಹ ಪರಿಸರವಾದಿಗಳಿಗೆ ಸಹಿಸಲಾಗದ ವಿಚಾರವಾಗಿದೆ. ಜಿಲ್ಲೆಯಲ್ಲಿ ಅಭಿವೃದ್ಧಿಗೆ ನಿರಂತರವಾಗಿ ಪರಿಸರದ ಹೆಸರಿನಲ್ಲಿ ಅಡ್ಡಿಪಡಿಸುತ್ತಿರುವ ಇವರ ತಂಡ, ಕೇವಲ ಬಡ ವರ್ಗದವರ ಮೇಲೆ ಗದಾ ಪ್ರಹಾರ ಮಾಡುತ್ತಿರುವುದು ಗಮನಿಸಿದರೆ, ಪರಿಸರ ಇರುವುದು ಶ್ರೀಮಂತರ ಮೋಜಿಗಾಗಿ ಎಂದು ಅನಿಸುತ್ತದೆ.

ಕೊಡಗು ಜಿಲ್ಲೆಯಲ್ಲಿ ಸಾಕಷ್ಟು ಅರಣ್ಯ ಪ್ರದೇಶಗಳು ಇವೆ. ಬಹುತೇಕ ಅರಣ್ಯ ಪ್ರದೇಶದಲ್ಲಿ ಅರಣ್ಯ ಇಲಾಖೆ ತೇಗದ ಮರಗಳನ್ನು ನೆಟ್ಟು, ಅಲ್ಲಿ ಬೇರೆ ಯಾವುದೇ ರೀತಿಯ ಮರಗಳು ಇಲ್ಲದಂತೆ ಮಾಡಿ, ಕಾಡುಪ್ರಾಣಿಗಳಿಗೆ ಆಹಾರ, ನೀರು ಇಲ್ಲದಂತಹ ಪರಿಸ್ಥಿತಿಯನ್ನು ನಿರ್ಮಿಸಿದೆ. ಇದರಿಂದಾಗಿ ಆನೆಯೂ ಸೇರಿದಂತೆ ಹಲವು ಪ್ರಾಣಿಗಳು ಕಾಡನ್ನು ಬಿಟ್ಟು ಜಿಲ್ಲೆಯ ಕಾಫಿತೋಟಗಳಲ್ಲಿ ವಾಸಿಸುತ್ತಿವೆ. ಏಕೆಂದರೆ ಕಾಫಿ ತೋಟ ಹಚ್ಚ ಹಸಿರಾಗಿದ್ದು ಅಲ್ಲಿ ತೋಟದ ಮಾಲಿಕರು ಕೆರೆಗಳನ್ನು ತೋಡಿ, ನೀರು ಸಹ ಸಂಗ್ರಹಿಸಿದ್ದು ಕಾಡುಪ್ರಾಣಿಗಳಿಗೆ ಕಾಡಿನಲ್ಲಿ ದೊರೆಯದ ಸೌಲಭ್ಯಗಳು ನಾಡಿನಲ್ಲಿ ದೊರೆಯುತ್ತಿವೆ. ಆದರೆ ಈ ಪರಿಸರವಾದಿಗಳು ಅರಣ್ಯ ಇಲಾಖೆಯ ಇಂತಹ ವೈಫಲ್ಯಗಳ ಬಗ್ಗೆ ಮಾತನಾಡುವುದೇ ಇಲ್ಲ.

1904ರಲ್ಲಿ ಜಿಲ್ಲೆಯ ಗಡಿಭಾಗವಾದ ಮಾಕುಟ್ಟ ಪ್ರದೇಶದಲ್ಲಿ ಮತ್ತು ಸಂಪಾಜೆ ಪ್ರದೇಶದಲ್ಲಿ ಸುಮಾರು ನಾಲ್ಕು ಕಂಪೆನಿಗಳಿಗೆ 6,000 ಎಕ್ರೆ ಮೀಸಲು ಅರಣ್ಯವನ್ನು ರಬ್ಬರ್ ತೋಟಕ್ಕಾಗಿ ಗುತ್ತಿಗೆ ಆಧಾರದಲ್ಲಿ ನೀಡಿತ್ತು. ಗುತ್ತಿಗೆಯು 99 ವರ್ಷವೋ ಅಥವ 999 ವರ್ಷವೋ ಎಂಬ ಜಿಜ್ಞಾಸೆ ಇದೆ. ಆದರೆ ಕರ್ನಾಟಕ ರಾಜ್ಯ ಸರಕಾರ ಈ ಬಗ್ಗೆ ಸಂಪುಟ ಸಭೆಯಲ್ಲಿ ತೀರ್ಮಾನವನ್ನು ತೆಗೆದುಕೊಂಡು, ಎಲ್ಲವೂ 99 ವರ್ಷದ ಗುತ್ತಿಗೆ ಎಂದು ಹೇಳಿದ್ದು, ಇದನ್ನು ಹಿಂದಕ್ಕೆ ಪಡೆಯಬೇಕು ಎಂಬ ತೀರ್ಮಾನಕ್ಕೆ ಬಂದಿದೆ. ಆದರೆ ಅರಣ್ಯ ಇಲಾಖೆ ಇದನ್ನು ಹಿಂದಕ್ಕೆ ಪಡೆಯುವ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ. ಮೂಲ ದಾಖಲೆಯಲ್ಲಿ ಇದು ಮೀಸಲು ಅರಣ್ಯ ಎಂದು ಇದ್ದರೂ ಕೂಡ, ಕೆಲವು ಪ್ರದೇಶಗಳು ಮಾರಾಟವಾಗಿದೆ. ಹಾಗೆಯೇ ಕಂದಾಯ ಇಲಾಖೆ ಖರೀದಿದಾರರ ಹೆಸರಿಗೆ ಖಾತೆಯನ್ನು ವರ್ಗಾಯಿಸಿ ಕೊಟ್ಟಿದೆ. ಕೆಲವು ಕಡೆ ಬ್ಯಾಂಕುಗಳು ಮೀಸಲು ಅರಣ್ಯವಾದರೂ ಸಾಲ ನೀಡಿದೆ. ಸಾಲ ಮರುಪಾವತಿಯಾಗದೆ ಇದ್ದಾಗ ಹರಾಜು ಹಾಕಿದೆ. ಹರಾಜಿನಲ್ಲಿ ಖರೀದಿ ಮಾಡಿದವರ ಹೆಸರಿಗೆ ಖಾತೆಯನ್ನು ಮಾಡಿಕೊಟ್ಟಿದೆ. ಇವೆಲ್ಲವೂ ಕಾನೂನು ಬಾಹಿರವಾದ ಕ್ರಮಗಳು.

ಮತ್ತೊಂದು ಕಡೆ ನೀಲಂಬೂರು ರಬ್ಬರ್ ತೋಟದ ವಿಚಾರದಲ್ಲಿ ಈ ಪ್ರದೇಶವನ್ನು ಅರಣ್ಯ ಪ್ರದೇಶ ಎಂದು ಹೇಳಿಕೊಂಡು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ್ದ ಅರಣ್ಯ ಇಲಾಖೆ, ಈಗ ಆ ಪ್ರದೇಶ ಅರಣ್ಯ ಪ್ರದೇಶವಲ್ಲ ಎಂದು ಉಚ್ಚ ನ್ಯಾಯಾಲಯದಲ್ಲಿ ಅಫಿಡವಿಟ್ ಸಲ್ಲಿಸಿದೆ. ಈ ಹಿಂದೆ ಅದನ್ನು ಅರಣ್ಯ ಪ್ರದೇಶ ಎಂದು ಹೇಳಿ, ಅಫಿಡವಿಟ್ ಸಲ್ಲಿಸಿರುವುದನ್ನು ಬದಲಿಸಬೇಕೆಂಬ ನಿರ್ಣಯಕ್ಕೆ ಬಂದಿದೆ. ಇದು ಅರಣ್ಯ ಇಲಾಖೆಯ ಕಾರ್ಯವೈಖರಿಗೆ ಹಿಡಿದ ಕೈಗನ್ನಡಿಯಾಗಿದೆ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ 1904ರಲ್ಲಿ ಗುತ್ತಿಗೆಗೆ ನೀಡುವಾಗ, ವರ್ಷವೊಂದಕ್ಕೆ 0.25 ಪೈಸೆ ಎಕ್ರೆಗೆ ನಿಗದಿಯಾಗಿತ್ತು. 1976ರಲ್ಲಿ ಇದನ್ನು 2 ರೂಪಾಯಿಗೆ ಏರಿಸಲಾಯಿತು. 1996ರಲ್ಲಿ ಇದನ್ನು 6 ರೂಪಾಯಿಗೆ ಏರಿಸಲಾಯಿತು. 2001ರಲ್ಲಿ ಈ ಮೊತ್ತ ಒಟ್ಟು 7.25 ಕೋಟಿ ಆಗಿತ್ತು. ಆದರೆ 1904ರಿಂದ 2016ರವರೆಗೆ ಅರಣ್ಯ ಇಲಾಖೆಗೆ ಗುತ್ತಿಗೆ ಪಡೆದವರು ಒಂದು ಚಿಕ್ಕಾಸನ್ನೂ ಪಾವತಿಸಿಲ್ಲ. ಈ ಬಗ್ಗೆ ಪರಿಸರವಾದಿಗಳ ತಕರಾರು ಇಲ್ಲ. ಏಕೆಂದರೆ ಈ ಪ್ರದೇಶವೆಲ್ಲವೂ ಶ್ರೀಮಂತ ಕಂಪೆನಿಗಳ ಕೈಯಲ್ಲಿ ಇದೆ. ಪರಿಸರವಾಗಲಿ, ಅರಣ್ಯವಾಗಲಿ ಇರುವುದು ಶ್ರೀಮಂತರಿಗಾಗಿ ಮಾತ್ರ ಅಲ್ಲವೇ?



ಕೊಡಗು ಜಿಲ್ಲೆಯಲ್ಲಿ ಬೇಲೂರು ಬಸವನಹಳ್ಳಿ ಮಠಕ್ಕೆ ಸಂಬಂಧಪಟ್ಟಂತೆ ಸುಮಾರು 3000 ಎಕ್ರೆ ಜಮೀನು ಇದೆ. ಇದು ಚಿತ್ರದುರ್ಗದ ಮುರುಘಾ ಮಠದ ವ್ಯಾಪ್ತಿಗೆ ಬರುತ್ತದೆ. ವಾಸ್ತವದಲ್ಲಿ ಇನಾಂ ರದ್ಧತಿ ಕಾಯ್ದೆಯ ಅಡಿಯಲ್ಲಿ ಈ ಜಮೀನು ಸರಕಾರ ಹಿಂಪಡೆದುಕೊಂಡು, ಅಲ್ಲಿ ಕೃಷಿ ಮಾಡುತ್ತಿದ್ದವರಿಗೆ ನೀಡಬೇಕಾಗಿತ್ತು. ಆದರೆ ಅದನ್ನು ಹಿಂಬಾಗಿಲ ಮೂಲಕ ಮಠಕ್ಕೆ ನೀಡಿದೆ. ಈ ಜಮೀನಿನಲ್ಲಿ ಸುಮಾರು 150ರಿಂದ 200 ಎಕ್ರೆ ಪ್ರದೇಶ ಮೀಸಲು ಅರಣ್ಯ ಅಡಕವಾಗಿದೆ. ಇದನ್ನು ಅವರ ವಶದಲ್ಲಿಯೇ ಬಿಡಬೇಕು ಎಂದು ಅರಣ್ಯ ಇಲಾಖೆಯ ಕೊಡಗಿನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್ ಕುಮಾರ್ ಎಂಬವರು ಪ್ರಯತ್ನಿಸಿದ್ದರು. ಆದರೆ ಇಲ್ಲಿ ಡಿ.ಸಿ.ಎಫ್. ಆಗಿರುವ ಎಡುಕೊಂಡಲ ಎಂಬವರು ಬಡವರ ಪರವಾಗಿದ್ದು, ಅದನ್ನು ತೆರವುಗೊಳಿಸಲೇಬೇಕು ಎಂದು ಹಠ ಹಿಡಿದಿದ್ದಾರೆ. ಆದರೆ ಇದನ್ನು ತೆರವುಗೊಳಿಸದಿರಲು ರಾಜ್ಯ ಮಟ್ಟದ ಪ್ರಭಾವಿಗಳು ಒತ್ತಡ ತರುತ್ತಿದ್ದಾರೆ ಎನ್ನಲಾಗಿದ್ದು, ಕೊಡಗಿನಲ್ಲಿ ಮಾತ್ರವಲ್ಲ, ರಾಜ್ಯಮಟ್ಟದಲ್ಲಿಯೇ ಈ ವಿಚಾರಕ್ಕಾಗಿ ಅರಣ್ಯ ಇಲಾಖೆ ಇಬ್ಭಾಗವಾಗಿದೆ. ಇದು ಕೂಡ ಪರಿಸರವಾದಿಗಳಿಗೆ ಕಾಣುತ್ತಿಲ್ಲ.

ಇದೆಲ್ಲದಕ್ಕಿಂತಲೂ ಪ್ರಮುಖವಾದ ವಿಚಾರವೆಂದರೆ ದಿಡ್ಡಳ್ಳಿ ಸಮೀಪದ ದೇವಮಾಚ್ಚಿ ಮೀಸಲು ಅರಣ್ಯದಲ್ಲಿ ಅರಣ್ಯ ಇಲಾಖೆಯಲ್ಲಿ ಎ.ಸಿ.ಎಫ್. ಆಗಿರುವ ಒಬ್ಬ ಅಧಿಕಾರಿಯ ಕುಟುಂಬ ಸುಮಾರು 42 ಎಕ್ರೆ ಪ್ರದೇಶವನ್ನು ತನ್ನ ವಶದಲ್ಲಿ ಇರಿಸಿಕೊಂಡಿದೆ. ಇವರ ತಂದೆ ಅರಣ್ಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವೇಳೆಯಲ್ಲಿ ಈ ಜಮೀನನ್ನು ಅವರು ಒತ್ತುವರಿ ಮಾಡಿಕೊಂಡಿದ್ದರು. ಅವರ ಕುಟುಂಬದ ಬಹುತೇಕ ಸದಸ್ಯರು ಉದ್ಯೋಗದಲ್ಲಿ ಇದ್ದರೂ, ಅರಣ್ಯ ಹಕ್ಕು ಕಾಯ್ದೆಯಡಿಯಲ್ಲಿ ಮಂಜೂರಾತಿ ಮಾಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಈ ಸಂಬಂಧ ಖಾಸಗಿ ವ್ಯಕ್ತಿಯೊಬ್ಬರು ಮೊಕದ್ದಮೆಯನ್ನು ದಾಖಲಿಸಿದ್ದಾರೆ. ಇದರಲ್ಲಿ ಉನ್ನತಾಧಿಕಾರಿಗಳು ಶಾಮೀಲಾಗಿದ್ದಾರೆ. ಇವು ಯಾವುದೂ ಕೂಡ ಅರಣ್ಯ ಇಲಾಖೆಯವರಿಗೆ ಅಥವ ಪರಿಸರವಾದಿಗಳಿಗೆ ಪ್ರಶ್ನೆ ಅಲ್ಲ. ದಿಡ್ಡಳ್ಳಿಯಲ್ಲಿ ಬಡವರು, ಸೂರು ಇಲ್ಲದವರು ತಮಗೆ ನೆಲೆ ಕಲ್ಪಿಸಿಕೊಳ್ಳಲು ಗುಡಿಸಲು ಕಟ್ಟಿಕೊಂಡಿದ್ದು ಇವರಿಗೆ ಸಹಿಸಲು ಸಾಧ್ಯವಾಗುತ್ತಿಲ್ಲ.

ರಾಜ್ಯಮಟ್ಟದ ಪ್ರತಿಭಟನೆ

ಕಳೆದ ಸಂಚಿಕೆಯಲ್ಲಿ ಬರೆದಂತೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎಂ.ಆರ್. ಸೀತಾರಾಂ, ಕೊಡಗಿನಲ್ಲಿ ಇದ್ದಾಗಲೇ ಗಿರಿಜನರನ್ನು ಬೀದಿಪಾಲು ಮಾಡಲಾಗಿತ್ತು. ಆದರೆ ಅವರು ತನಗೆ ಇದು ತಿಳಿದೇ ಇಲ್ಲ ಎನ್ನುವಂತೆ ಕೊಡಗಿನಿಂದ ಹೊರಹೋಗಿದ್ದರು. ಅವರ ಈ ದಿವ್ಯ ನಿರ್ಲಕ್ಷ್ಯ ಅವರಿಗೆ ಈಗ ನುಂಗಲಾರದ ತುತ್ತಾಗಿದೆ. ಕಾಂಗ್ರೆಸ್ ಪಕ್ಷಕ್ಕೆ ಮತ್ತು ಸರಕಾರಕ್ಕೆ ಕಳಂಕವನ್ನು ತಂದಿದೆ.

ಎ.ಕೆ. ಸುಬ್ಬಯ್ಯ ಸ್ಥಳಕ್ಕೆ ಭೇಟಿ ನೀಡಿ, ರಾಜ್ಯಮಟ್ಟದಲ್ಲಿರುವ ಭೂಮಿ ಮತ್ತು ವಸತಿ ಹೋರಾಟ ಸಮಿತಿಯ ಗಮನಕ್ಕೆ ಈ ವಿಚಾರವನ್ನು ತಂದಿದ್ದರು. ಡಿಸೆಂಬರ್ 13ರಂದು ಬೆಂಗಳೂರಿನಲ್ಲಿ ನಡೆದ ಈ ಸಮಿತಿಯ ಸಭೆಯಲ್ಲಿ ವಿಚಾರವನ್ನು ಪ್ರಸ್ತಾಪಿಸಿದ್ದರು. ಜೊತೆಗೆ ಇದರ ವಿರುದ್ಧ ಸಂಘಟಿತ ಹೋರಾಟ ನಡೆಸುವುದು ತುರ್ತು ಅಗತ್ಯವಾಗಿದೆ ಎಂದು ಅವರು ಪ್ರತಿಪಾದಿಸಿದ್ದರು. ಇದರಿಂದಾಗಿ ಈ ಸಮಿತಿಯ ಪ್ರಮುಖರು ಜಿಲ್ಲೆಗೆ ಆಗಮಿಸಿ, ಅಧ್ಯಯನವನ್ನು ನಡೆಸಿದ್ದರು. ಜಿಲ್ಲೆಯಲ್ಲಿ ರೈತಸಂಘದ ಉಪಾಧ್ಯಕ್ಷರಾಗಿರುವ ಡಿ.ಎಸ್. ನಿರ್ವಾಣಪ್ಪ ಮತ್ತು ದಲಿತ ಹೋರಾಟಗಳಲ್ಲಿ ಸಕ್ರಿಯರಾಗಿರುವ ಕುಮಾರಿ ಕಾವೇರಿ ನೇತೃತ್ವದಲ್ಲಿ ಸಿರಿಮನೆ ನಾಗರಾಜು, ನೂರ್ ಶ್ರೀಧರ್, ಕಂದೆಗಾಲು ಶ್ರೀನಿವಾಸ್ ಮತ್ತು ಸ್ಥಳೀಯರಾದ ಶ್ರೀಮತಿ ಮುತ್ತಮ್ಮ ಹಾಗೂ ಅಪ್ಪಾಜಿ ಅವರ ನೇತೃತ್ವದಲ್ಲಿ ಪ್ರತಿಭಟನೆ ಗಟ್ಟಿಯಾಗಿ ನಡೆಯಿತು. ರಾಜ್ಯ ಮಟ್ಟದ ಸುದ್ದಿ ಆಯಿತು. ವ್ಯಾಪಕವಾಗಿ ಖಂಡನೆಗಳು ಆದವು. ರಾಜ್ಯ ಸರಕಾರದ ಮತ್ತು ಜಿಲ್ಲಾ ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತವಾಯಿತು. ಹಾಗಾಗಿ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರುಗಳು ದಿಡ್ಡಳ್ಳಿಗೆ ಧಾವಿಸುವಂತಾಯಿತು. 18ರಂದು ರಾಜ್ಯದಲ್ಲಿರುವ ಸಮಾನ ಮನಸ್ಕರ ಸಮಿತಿಗಳ ಸಭೆಯು ದಿಡ್ಡಳ್ಳಿಯಲ್ಲಿ ನಡೆದು, 23ರಂದು ಕೊಡಗು ಚಲೋ ಕಾರ್ಯಕ್ರಮವನ್ನು ನಡೆಸುವ ಬಗ್ಗೆ ಪ್ರಕಟಣೆಯನ್ನು ನೀಡಿತು. ಇದು ರಾಜ್ಯ ಸರಕಾರಕ್ಕೆ ನಡುಕವನ್ನು ಹುಟ್ಟಿಸಿತು ಎಂದು ಹೇಳಬಹುದು. 16ರಂದು ಕೊಡಗು ಜಿಲ್ಲೆಯ ಸೌಹಾರ್ದ ವೇದಿಕೆ ಸುಬ್ಬಯ್ಯನವರ ನೇತೃತ್ವದಲ್ಲಿ ಮುಖ್ಯಮಂತ್ರಿಗಳನ್ನು ಭೇಟಿಯಾಗಿದ್ದ ಸಂದರ್ಭದಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿ, ಅರಣ್ಯ ಇಲಾಖೆಯ ಅಕ್ರಮವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಿತ್ತು.

ಅಂದು ಕೊಡಗಿಗೆ ಬಂದಿದ್ದ ಸಂಪುಟ ಉಪಸಮಿತಿಯ ಮುಖ್ಯಸ್ಥರಾದ ಕಂದಾಯ ಸಚಿವರಾದ ಕಾಗೋಡು ತಿಮ್ಮಪ್ಪನವರು, ದಿಡ್ಡಳ್ಳಿ ನಿರಾಶ್ರಿತರಿಗೆ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಪ್ರಕಟಿಸಿದ್ದರು. ಆದರೆ ಅವರ ಹೇಳಿಕೆ ಬಂದ ಕೆಲವೇ ಕ್ಷಣಗಳಲ್ಲಿ ಕೊಡಗು ಜಿಲ್ಲಾಧಿಕಾರಿ ರಿಚರ್ಡ್ ವಿನ್ಸೆಂಟ್ ಡಿಸೋಜರವರು, ಜಮೀನು ನೀಡಲು ಸಾಧ್ಯವಿಲ್ಲ ಎಂಬ ಹೇಳಿಕೆಯನ್ನು ನೀಡಿದರು. ಇದು ಅಧಿಕಾರಿ ವರ್ಗದವರ ಮನೋಧರ್ಮವನ್ನು ತೋರಿಸಿತ್ತು. ಸರಕಾರಕ್ಕಿಂತಲೂ ತಾವೇ ಪ್ರಭಾವಿಗಳು ಎನ್ನುವಂತೆ ಅಧಿಕಾರಿಗಳು ವರ್ತಿಸಿದ್ದರು. 18ರಂದು ಪ್ರತಿಭಟನೆ ತೀವ್ರ ಸ್ವರೂಪವನ್ನು ಪಡೆದಾಗ, ಅಲ್ಲಿಯವರೆಗೆ ಸ್ಥಳಕ್ಕೆ ಆಗಮಿಸದೆ ಇದ್ದಂತಹ ಜಿಲ್ಲಾಡಳಿತದ ಅಧಿಕಾರಿಗಳು ಅಲ್ಲಿಗೆ ಆಗಮಿಸಿದ್ದರು. ಐ.ಟಿ.ಡಿ.ಪಿ. ಅಧಿಕಾರಿಯಾಗಿರುವ ಶ್ರೀಮತಿ ಮಾಯಾದೇವಿ ಗಲಿಗಲಿ ಎಂಬ ಮಹಿಳೆಯನ್ನು ಗಿರಿಜನರು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದರು. ಕಾರಣ ಅವರು ನಿರಾಶ್ರಿತ ಗಿರಿಜನರಿಗೆ ಆಹಾರ ಪದಾರ್ಥವನ್ನಾಗಲಿ, ಪೌಷ್ಟಿಕ ಆಹಾರವನ್ನಾಗಲಿ ನೀಡಲು ನಿರಾಕರಿಸಿದ್ದರು. ಮಾತ್ರವಲ್ಲ ಯಾವುದೇ ಸರಕಾರಿ ಸೌಲಭ್ಯವನ್ನು ನೀಡುವುದಿಲ್ಲ ಎಂದು ಹೇಳಿದ್ದರು. ಆ ಮಹಿಳೆ ತಮ್ಮ ಬಳಿ ಬರಬಾರದು ಎಂದು ಆದಿವಾಸಿಗಳು ಪಟ್ಟು ಹಿಡಿದಿದ್ದರು. ಹಾಗೆ ಮಾಡುವ ಮೂಲಕ ಅವರಿಗೆ ಪ್ರತಿಭಟನೆಯ ರುಚಿಯನ್ನು ತೋರಿಸಿದ್ದರು.

ಅರಣ್ಯ ಅಧಿಕಾರಿಗಳ ಮತ್ತು ಜಿಲ್ಲಾಡಳಿತದ ಕಾರ್ಯವೈಖರಿಯನ್ನು ಪ್ರತಿಭಟಿಸಿ, ಮಹಿಳೆಯರು ಬೆತ್ತಲೆ ಪ್ರತಿಭಟನೆಯನ್ನು ಕೂಡ ಮಾಡಿದ್ದರು. ಇದನ್ನು ಕಂಡು ಕೂಡ ಆಡಳಿತ ನಡೆಸುವವರಿಗೆ ಮರುಕ ಹುಟ್ಟಲಿಲ್ಲ. ಬದಲಿಗೆ ಹಾಗೆ ಪ್ರತಿಭಟನೆ ಮಾಡುವವರನ್ನು ಬಂಧಿಸಿ, ಜೈಲಿಗೆ ಅಟ್ಟಿದರು. ಆದರೆ ರಾಜ್ಯ ಮಟ್ಟದ ಹೋರಾಟವಾಗುತ್ತಿದ್ದಂತೆ, ಎಲ್ಲಾ ರಾಜಕೀಯ ಪಕ್ಷಗಳು ಎಚ್ಚೆತ್ತುಕೊಂಡವು. ರಾಜ್ಯ ಸರಕಾರವೂ ಎಚ್ಚೆತ್ತುಕೊಂಡಂತೆ ಕಂಡುಬಂತು. ಜಿಲ್ಲಾ ಉಸ್ತುವಾರಿ ಸಚಿವ ಎಂ.ಆರ್. ಸೀತಾರಾಂ ಸ್ಥಳಕ್ಕೆ ಭೇಟಿ ನೀಡಿದರು. ಇದಕ್ಕೂ ಮುನ್ನ ಸಂಸದ ಪ್ರತಾಪ ಸಿಂಹರವರು ಮಾಧ್ಯಮಗಳಿಗೆ ಸಂದರ್ಶನ ನೀಡಿ "ಆ ಪ್ರದೇಶವು ಅರಣ್ಯ ಪ್ರದೇಶವಾಗಿದೆ. ಹಾಗಾಗಿ ಅಲ್ಲಿ ಜಮೀನು ನೀಡಲು ಸಾಧ್ಯವಿಲ್ಲ. ಕೇಂದ್ರದ ಮಾಜಿ ಸಚಿವ ಪಿ. ಚಿದಂಬರರವರಿಗೆ ಪಕ್ಕದಲ್ಲಿಯೇ ಜಮೀನು ಇದೆ. ಅದರಲ್ಲಿ ಸಾಕಷ್ಟು ಪೈಸಾರಿ ಜಮೀನು ಸೇರಿಕೊಂಡಿದೆ. ಟಾಟಾ ಸಂಸ್ಥೆಯವರ ಜಮೀನು ಇದ್ದು, ಅಲ್ಲಿ ಕೂಡ ಪೈಸಾರಿ ಅತಿಕ್ರಮಣವಿದೆ. ಅದನ್ನು ಬಿಡಿಸಿಕೊಡಿ" ಎಂದು ಹೇಳುವ ಮೂಲಕ ತಾನು ಇನ್ನೂ ಕೂಡ ಜವಾಬ್ದಾರಿಯುತ ಸಂಸದನಾಗಿಲ್ಲ ಎಂಬುದನ್ನು ತೋರಿಸಿಕೊಂಡಿದ್ದಾರೆ. ಗಂಭೀರವಾದ ಸಮಸ್ಯೆಯನ್ನು ಪ್ರತಾಪ ಸಿಂಹ ತನ್ನ ಹುಡುಗಾಟಿಕೆಗೆ ಬಳಸಿಕೊಂಡಿದ್ದಾರೆ.

ಉಸ್ತುವಾರಿ ಸಚಿವರ ಕಷ್ಟದ ಭೇಟಿ

ಎಂ.ಆರ್. ಸೀತಾರಾಂ ದಿಡ್ಡಳ್ಳಿಗೆ ಭೇಟಿ ನೀಡುವ ಮುನ್ನ ತಿತಿಮತಿಯ ಅರಣ್ಯ ಗೆಸ್ಟ್‌ಹೌಸ್‌ನಲ್ಲಿ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು. ಅವರ ಜೊತೆಯಲ್ಲಿ ಶಾಸಕ ಕೆ.ಜಿ. ಬೋಪಯ್ಯ ಹಾಗೂ ಸಂಸದ ಪ್ರತಾಪ ಸಿಂಹ ಕೂಡ ಇದ್ದರು. ಅವರಿಂದ ಮಾಹಿತಿಯನ್ನು ಪಡೆದು, ಆ ನಂತರ ದಿಡ್ಡಳ್ಳಿಗೆ ಅಧಿಕಾರಿ ತಂಡದ ಜೊತೆಯಲ್ಲಿಯೇ ಬಂದರು. ಅವರಿಗೆ ಪ್ರತಿಭಟನೆಯ ಸ್ವಾಗತವೇ ದಿಡ್ಡಳ್ಳಿಯಲ್ಲಿ ಸಿಕ್ಕಿತ್ತು. ಜಿಲ್ಲಾಡಳಿತ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರನ್ನು ಪ್ರತಿಭಟನಾಕಾರರು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಸಚಿವರ ನಿರ್ಲಕ್ಷ್ಯ, ಜಿಲ್ಲಾಡಳಿತದ ಉಡಾಫೆತನವನ್ನು ಪ್ರತಿಭಟನಾಕಾರರು ಪ್ರಶ್ನಿಸಿದರು. ಅವರೊಂದಿಗೆ ಚರ್ಚೆಯೇ ಸಾಧ್ಯವಿಲ್ಲ ಎನ್ನುವಂತಹ ಸ್ಥಿತಿಗೆ ಸೀತಾರಾಂ ತಲುಪಿದ್ದರು. ಕೊಡಗಿನ ಜನತೆ ಮತ್ತು ಇಂತಹ ಬೇಡಿಕೆಗಳನ್ನು ಮುಂದಿಡುವ ಮಂದಿಗಳು, ತಮ್ಮ ಮಾಲಿಕತ್ವದ ರಾಮಯ್ಯ ಮೆಡಿಕಲ್ ಕಾಲೇಜಿನ ಸಿಬ್ಬಂದಿಗಳಂತೆ ಇರಬೇಕು ಎಂದು ಸೀತಾರಾಂ ಬಯಸುತ್ತಾರೆ. ಆದರೆ ಕೊಡಗಿನಲ್ಲಿ ಅವರಿಗೆ ಅದು ಸಾಧ್ಯವಿಲ್ಲ ಎಂಬುದು ತಿಳಿದಿಲ್ಲ. ಪ್ರತಿಭಟನಾನಿರತರ ಜೊತೆಯಲ್ಲಿ ಬಹಿರಂಗವಾಗಿ ಚರ್ಚೆಯನ್ನು ನಡೆಸಲು





ವಾಗದಾಗ, ಪ್ರಮುಖರನ್ನು ಕರೆದುಕೊಂಡು, ಪ್ರತ್ಯೇಕ ಯನ್ನು ಅವರು ನಡೆಸಿದರು. ಅಲ್ಲಿ ಮತ್ತೆ ಅವರು ಟನಾಕಾರರ ಮಾತುಗಳನ್ನು ಕೇಳಲು ಸಿದ್ಧರಿಲ್ಲದಾಗ ನಂತವಾಗಿ ಅವರನ್ನು ಆಸನದಲ್ಲಿ ಕೂರಿಸಿ, ಆ ಪ್ರದೇಶ ಪ್ರದೇಶ ಎಂಬುದನ್ನು ಮೊದಲು ನೀವು ಖಾತ್ರಿ ಕೊಳ್ಳಿ ಎಂದು ಹೇಳುವಷ್ಟರಮಟ್ಟಿಗೆ ಯಶಸ್ವಿಯಾದದ್ದು ವಲ್ಲ, ನಿರಾಶ್ರಿತರಿಗೆ ಎಲ್ಲಾ ಸೌಲಭ್ಯಗಳನ್ನು ವುದಾಗಿಯೂ, ಈಗ ಪ್ರತಿಭಟನೆ ನಡೆಸುತ್ತಿರುವ ಲ್ಲಿಯೇ ಮೂಲಸೌಕರ್ಯಗಳನ್ನು, ಬದಲಿ ವ್ಯವಸ್ಥೆ ವರೆಗೆ ಮಾಡಿಕೊಡುವುದಾಗಿ ಘೋಷಿಸಿಸುವಂತೆ ದರು. ಇದು ದಿಡ್ಡಳ್ಳಿಯ ಹೋರಾಟಕ್ಕೆ ಸಂದ ಮೊದಲ ವಾಗಿತ್ತು.

ಇದಾದನಂತರ ಸ್ಥಳಕ್ಕೆ ತಾವು ಭೇಟಿ ನೀಡದಿದ್ದರೆ ಮೇಲೆಯೂ ಪ್ರತಿಭಟನಾಕಾರರು ಗೂಬೆ ಸಬಹುದು ಎಂದು ಭಾವಿಸಿ ರಾಜ್ಯ ಬಿಜೆಪಿಯ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಹಲವು ಕರುಗಳು ಸ್ಥಳಕ್ಕೆ ಭೇಟಿ ನೀಡಿ ಸಾಂತ್ವಾನ ಹೇಳುವ ಕೆಲಸವನ್ನು ಮಾಡಿದರು.

ಎನ್‌ಜಿಓ ಸಂಸ್ಥೆಗಳಿಗೆ ತಳಮಳ

ದಿಡ್ಡಳ್ಳಿಯಲ್ಲಿ ಈ ಕುಟುಂಬಗಳು ವಾಸ ಮಾಡಲು ಕಾರಣ ಅರಣ್ಯ ಇಲಾಖೆಯ ನಿರ್ಲಕ್ಷ್ಯ. ಆನಂತರ ಅವರನ್ನು ತೆರವುಗೊಳಿಸಿ, ಬೀದಿಪಾಲು ಮಾಡಿದ್ದು ಕೂಡ ಅರಣ್ಯ ಇಲಾಖೆಯೇ ಆಗಿದೆ. ಆದರೆ ಇದರ ಹಿಂದೆ ಸಾಕಷ್ಟು ಮಂದಿಯ ಕೈವಾಡವಿದೆ ಎಂದು ಹೇಳಲಾಗಿದೆ. ಕೆಲವು ಕಾಫಿ ತೋಟದ ಮಾಲಿಕರುಗಳು ತಮ್ಮ ಲೈನ್‌ಮನೆಯಲ್ಲಿ ವಾಸವಿರುವ ಕೂಲಿ ಕಾರ್ಮಿಕರು ಸ್ವತಂತ್ರವಾಗುತ್ತಿದ್ದಾರೆ ಎಂಬ ಭಯದಿಂದ ಈ ರೀತಿ ಮಾಡುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಇದಕ್ಕೆ ಪೂರಕವಾಗಿ ಕೆಲವು ಸಂಘಟನೆಗಳು ಕೂಡ ವರ್ತಿಸುತ್ತಿವೆ. ಕೊಡಗು ಜಿಲ್ಲೆಯಲ್ಲಿ ಬುಡಕಟ್ಟು ಕೃಷಿಕರ ಸಂಘ ಎಂಬ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ. ಬುಡಕಟ್ಟು ಜನರ ಹೆಸರಿನಲ್ಲಿ ವಿದೇಶಿ ಪ್ರವಾಸಗಳನ್ನು ಮಾಡಿಕೊಂಡು, ಮೋಜು ಉಡಾಯಿಸಿ, ವಿದೇಶಿ ದೇಣಿಗೆಗಳನ್ನು ಪಡೆದುಕೊಂಡು, ಅಮಾಯಕ ಗಿರಿಜನರಿಗೆ ಯಾವುದೇ ಸೌಲಭ್ಯ ಸಿಗದಂತೆ ಮಾಡಿ, ತಮ್ಮ ಬದುಕನ್ನು ರೂಪಿಸಿಕೊಂಡ ಹಲವರು ಈ ಸಂಸ್ಥೆಯಲ್ಲಿ ಇದ್ದಾರೆ. ಅವರು ದಿಡ್ಡಳ್ಳಿಗೆ ಒಮ್ಮೆಯೂ ಹೋಗಿಲ್ಲ, ಈಗ ತಮ್ಮ ಕೈಮೀರಿ ಈ ಚಳವಳಿ ನಡೆಯುತ್ತಿದೆ ಎನ್ನುವ ಕಾರಣಕ್ಕಾಗಿ ಅವರು ಈ ಹೋರಾಟದ ಬಗ್ಗೆ ಕ್ಯಾತೆ ತೆಗೆದಿದ್ದಾರೆ ಮತ್ತು ಅವರುಗಳು ಸ್ಥಳೀಯರಲ್ಲ, ಗಿರಿಜನರಲ್ಲ ಎಂದೆಲ್ಲಾ ಆರೋಪ ಮಾಡುತ್ತಿದ್ದಾರೆ.

ಅದೇರೀತಿ ಕೊಡಗಿನ ಭೂಮಾಲಿಕರ ಪರವಾಗಿ ಇರುವ ಮತ್ತು ಕೊಡಗು ಪ್ರತ್ಯೇಕ ರಾಜ್ಯವಾಗಬೇಕು, ಕೊಡಗಿಗೆ ಸ್ವಾಯತ್ತತೆ ಸಿಗಬೇಕು, ಅತ್ಯಂತ ಶ್ರೀಮಂತ ಜನರುಳ್ಳ ಜನಾಂಗವಾದ ಕೊಡವ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟುಕೊಂಡು ಹೋರಾಟಗಳನ್ನು ನಡೆಸುತ್ತಿರುವ ಕೊಡವ ನ್ಯಾಷನಲ್ ಕೌನ್ಸಿಲ್‌ನ ಎನ್.ಯು. ನಾಚಪ್ಪ ಕೂಡ ಅಲ್ಲಿರುವವರು ಗಿರಿಜನರಲ್ಲ ಎಂದು ಹೇಳುತ್ತಿದ್ದಾರೆ. ಸರಕಾರದ ಜಮೀನು ಕೆಳವರ್ಗದವರ ಪಾಲು ಆಗಬಾರದು ಎನ್ನುವ ಹುನ್ನಾರ ಇದಾಗಿದೆ.

ಇಂತಹ ಸಂಸ್ಥೆಗಳು ಕೈಜೋಡಿಸಿ ಇಂದು ಪ್ರತಿಭಟನೆಯ ವಿರುದ್ಧ ಮಾತನಾಡುತ್ತಿವೆ. ಇವರಿಗೆ ಸಾಥ್ ನೀಡುತ್ತಿರುವವರು ಡೋಂಗಿ ಪರಿಸರವಾದಿಗಳು. ಈ ಗುಂಪಿನಲ್ಲಿ ಕೊಡಗಿನ ಪ್ರಮುಖ ಕಾಂಗ್ರೆಸಿಗರೂ ಇದ್ದಾರೆ. ಕೊಡಗು ಕಾಂಗ್ರೆಸ್, ಕೊಡಗು ಪರಿಸರವಾದಿಗಳು, ಕೊಡಗು ಪ್ರತ್ಯೇಕತಾವಾದಿಗಳು ಮತ್ತು ಕೊಡವ ಜನಾಂಗಕ್ಕೆ ಮಾತ್ರ ಅನ್ಯಾಯವಾಗಿದೆ; ಉಳಿದವರೆಲ್ಲರೂ ಕರ್ನಾಟಕ ರಾಜ್ಯದಲ್ಲಿ ಸುಭಿಕ್ಷವಾಗಿದ್ದಾರೆ ಎಂದು ಹೇಳುವವರೆಲ್ಲ ಒಂದೇ ಮನಸ್ಥಿತಿಯವರಾಗಿದ್ದು ತಮ್ಮ ಸ್ವಾರ್ಥ ಸಾಧನೆಗೆ ಬೇರೆ ಬೇರೆ ಕಡೆ ಇದ್ದಾರೆ. ಅವರೆಲ್ಲರೂ ಈಗ ಈ ಅಮಾಯಕ ಗಿರಿಜನರ ವಿಚಾರದಲ್ಲಿ ತಪ್ಪು ಸಂದೇಶವನ್ನು ನೀಡುವ ಕಾರ್ಯವನ್ನು ಮಾಡುತ್ತಿದ್ದಾರೆ. ಆದರೆ ಇವೆಲ್ಲದರ ನಡುವೆ ಭೂಮಿ ಮತ್ತು ವಸತಿ ಹೋರಾಟ ಸಮಿತಿಯು ಪ್ರತಿಭಟನೆಯನ್ನು ಗಟ್ಟಿಯಾಗಿಯೇ ಮುಂದುವರೆಸಿದೆ. ಈಗ ಕೊಡಗು ಚಲೋ ಕಾರ್ಯಕ್ರಮಕ್ಕೆ ಸಿದ್ಧತೆಗಳನ್ನು ಮಾಡುತ್ತಿದೆ.

■ ಬಿ.ಎನ್. ಮನು ಶೆಣೈ




ಜೆಡಿಎಸ್: ಅಳಿವು ಉಳಿವಿನ ಅಂತಿಮ ಕಾಳಗ?

ಮತತಂತ್ರ ನಿಪುಣ ಪ್ರಶಾಂತ್ ಕಿಶೋರ್ ಕೈಯಿಟ್ಟರೆಂದರೆ ಮುಗಿದೇ ಯಿತು. ಎಲ್ಲೋ ರಾಜಕೀಯದ ಗೋಲಿ ಆಡಿಕೊಂಡಿದ್ದ ಮೋದಿಯನ್ನು ಗಿಂತಲೂ ಸಮರ್ಥ ಸಾರಥಿಯನ್ನಾಗಿ ರೂಪಿಸಿದ್ದೂ ಅಲ್ಲದೆ ಪ್ರಧಾನಿ ತಂದೇ ತೀರಿದ poll strategist ಪ್ರಶಾಂತ್ ಕಿಶೋರ್. ತನ್ನ ತಂತ್ರ ಪ್ರಾವೀಣ್ಯತೆಯನ್ನು ನಿತೀಶ್‌ಕುಮಾರ್ ಪರವಾಗಿ ಮತ್ತೊಮ್ಮೆ ರದಲ್ಲೂ ಸಾಬೀತುಮಾಡಿದ ಮೇಲೆ ಬಿಜೆಪಿಯಂಥ ಪಕ್ಷಕ್ಕೂ ಪ್ರಶಾಂತ್ ತ್ರದ ಬಿಸಿ ಮುಟ್ಟಿರಲೇಬೇಕಲ್ಲ!

ಅಂಥಾ ಪ್ರಶಾಂತ್ ಕಿಶೋರ್‌ರನ್ನು ಹಿಡಿದು ತಂದು ಕರ್ನಾಟಕದಲ್ಲಿ ದರೆ ಕುಮಾರಣ್ಣನ ಲಕ್ಕು ಕುದುರಲು ಸಾಧ್ಯವೆ? ಮತ್ತೊಮ್ಮೆ ಮಂತ್ರಿಯಾಗುವ ಕುಮಾರಣ್ಣನ ಕನಸಿಗೆ ಎಷ್ಟೆಲ್ಲಾ ತೂತುಗಳೋ ಪಡಿಪಾಟಲೋ ಗೊತ್ತಿಲ್ಲ. ಹಾಗಂತ 'ಮಾಡು ಇಲ್ಲವೇ ಮಡಿ' ತೆ ಈ ಬಾರಿ ಹೆಣಗದೆ ಹೋದರೆ ಮತ್ತೆಂದೂ ಮುಖ್ಯಮಂತ್ರಿಯಾಗುವ ಶವೇ ಬರಲಿಕ್ಕಿಲ್ಲ. ಏಕೆಂದರೆ ಜೆಡಿಎಸ್ ಪಾಲಿಗಿದು ಕಟ್ಟಕೊನೆಯ ಶ. ಮುಂಬರುವ ವಿಧಾನಸಭಾ ಚುನಾವಣೆಯಲ್ಲೇನಾದರೂ ಬಿಜೆಪಿ ಕಾಂಗ್ರೆಸ್ ನೂರರ ಗಡಿ ದಾಟಿತೆಂದರೆ ಜೆಡಿಎಸ್ ಪಾಲಿಗದೇ ಶಾಸನವಾಗಲಿದೆ.

ದ್ಯ ಕಾಂಗ್ರೆಸ್ ತನ್ನದೇ ಏಳುಬೀಳುಗಳ ನಡುವೆಯೂ ಹೇಗೋ ದೆಯಾದರೂ ಇದೇ ಸ್ಥಿತಿ ಮುಂಬರುವ ಚುನಾವಣೆಯಲ್ಲಿರುತ್ತದೆ ಗದು. ಗಣಿ ಕಳ್ಳರ ಬಿಎಸ್‌ಆರ್ ಕಾಂಗ್ರೆಸ್, ಯಡಿಯೂರಿಯ ಕೆಜೆಪಿ ಈಗಿರುವ ಬಿಜೆಪಿ ಪರಸ್ಪರ ಸೇರಿಕೊಂಡವೆಂದರೆ ಸ್, ಜೆಡಿಎಸ್ ಎರಡೂ ಕೈಗೂಡಿಸಿದರೂ ಬಲವನ್ನು ಸರಿದೂಗುವುದು ಕಷ್ಟ. ಮತ್ತೊಮ್ಮೆ ಏನಾದರೂ ಬಹುಮತ ಗಳಿಸಿತೆಂದರೆ ಸ್‌ನ ಅರ್ಧದಷ್ಟು ನಾಯಕರಿಗೆ ಅಳಿವುಉಳಿವಿನ ಕಾಡಲೇಬೇಕು. ಒಂದೋ ಬಿಜೆಪಿ ಅಥವಾ ಸ್!



ಯತ್ನಾಳ್

ಡದೇ ಹೋದರೆ ಮಡಿ....?

ಈಗಿರುವ ನಲವತ್ತರ ಆಸುಪಾಸಿನ ಜೆಡಿಎಸ್ ಳ್ಯವೇನಾದರೂ ಇಪ್ಪತ್ತಕ್ಕೋ ಹದಿನೈದಕ್ಕೋ ದರೆ ಕತೆ ಮುಗಿದಹಾಗೆಯೇ. ದೇವೇಗೌಡರ ಬವೆಂಬುದು ಕರ್ನಾಟಕದ ರಾಜಕೀಯ ಭೂಪಟದಲ್ಲೊಂದು ಬೆದರು ಯಾಗಷ್ಟೇ ಉಳಿಯುತ್ತದೆ. ಅವರ ಬೆಂಬಲಿಗ ಅಧಿಕಾರಿಗಳು, ಜೆಡಿಎಸ್ ದಲ್ಲಿದ್ದಾಗ ಉಪಕೃತರಾದವರು, ಆಯಕಟ್ಟಿನ ಹುದ್ದೆಗೆ ಬಂದವರೆಲ್ಲ ದಿನಗಳ ಕಾಲ ದೇವೇಗೌಡರ ಫ್ಯಾಮಿಲಿಗೆ ನಿಯತ್ತಾಗಿರುವುದು ಕಷ್ಟವೇ. ಅಧಿಕಾರಿಗಳಿಂದ ಬರುತ್ತಿದ್ದ ಮಾಹಿತಿ ಬಳಸಿ ತಾನೇ ಗೌಡ-ಕುಮಾರಣ್ಣ ಯಾವ ಸರ್ಕಾರ ಬಂದರೂ ಬಿಸಿ ಮುಟ್ಟಿಸುತ್ತಿದ್ದದ್ದು, ಪಕ್ಷದಿಂದ ದುಡ್ಡುಕಾಸಿನ ನೆರವಾಗುತ್ತಿದ್ದವರು ಕೂಡ ಅಧಿಕಾರವಿಲ್ಲದೆ ದಿನ ಅಂತ ನೆರವಾದಾರು?

ದು ಜೆಡಿಎಸ್ ಎಂಬ ಮಣ್ಣಿನ ಮಕ್ಕಳ ಅಪ್ಪಟ ಪ್ರಾದೇಶಿಕ ಪಕ್ಷದ ವು ಹೌದು ಅನಿವಾರ್ಯತೆ ಕೂಡ. ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಬಿಜೆಪಿಗಳಿಗೇ ಸತತ ಹತ್ತು ವರ್ಷಗಳ ಕಾಲ ಅಧಿಕಾರವಿಲ್ಲದೆ ದಿಗುವುದು ಅಂಥಾದ್ದರಲ್ಲಿ ಜೆಡಿಎಸ್‌ನಂಥ ಕರ್ನಾಟಕದ ಪ್ರಾದೇಶಿಕ ಪಕ್ಷವೊಂದಕ್ಕೆ ವರ್ಷದ ಅಧಿಕಾರಹೀನತೆಯೆಂಬುದು ಅಳಿವುಉಳಿವಿನ ಪ್ರಶ್ನೆಯಲ್ಲದೆ ಗಲು ತಾನೇ ಸಾಧ್ಯ? ಅಂಥಾದ್ದೊಂದು ಸಂದಿಗ್ಧತೆಗ ದೇವೇಗೌಡ ಳಲ್ಲ ವಡ ತಲೆಕೊಡಬೇಕಿದೆ. ಒಂದಿಗಂತೆ ಜನತಾ ಪರಿವಾರದ



ದಿಗ್ಗಜರ್‍ಯಾರೂ ಪಕ್ಷದಲ್ಲಿಲ್ಲ. ಅಳಿದುಳಿದ ಚಲುವರಾಯ, ಜಮೀರ್, ಬಾಲಕೃಷ್ಣರಂಥವರೇ ಪಕ್ಷದಿಂದಾಚೆಗೆ ಕಾಲಿಟ್ಟಾಗಿದೆ. ಬಲಾಢ್ಯ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿಯ ಮುಂದೆ ತನ್ನ ಅಸ್ತಿತ್ವಕ್ಕಾಗಿ ಅಳಿವು ಉಳಿವಿನ ಸೆಣಸಾಟಕ್ಕಿಳಿಯಬೇಕಾದ ಸಂದಿಗ್ಧವೇ ಜೆಡಿಎಸ್ ಎಂಬ ಕೂಟವೊಂದನ್ನು ಚಿತ್ರವಿಚಿತ್ರ ತಿರುವುಗಳತ್ತ ಎಳೆದೊಯ್ಯುತ್ತಿದೆ.

ಇದರ ಮೊದಲ ಹೆಜ್ಜೆಯಾಗಿ ಕುಮಾರಸ್ವಾಮಿ ಮಾಡಿದ್ದು ಬೆಂಗಳೂರಿನ ತನ್ನ ವಾಸ್ತವ್ಯವನ್ನು ಹುಬ್ಬಳ್ಳಿಗೆ ಬದಲಾಯಿಸಿದ್ದು. ಇಲ್ಲಿಗೆ ತಿಂಗಳ ಹಿಂದೆಯೇ ಹುಬ್ಬಳ್ಳಿಯ ಮಾಯ್ಕರ್ ಕಾಲೋನಿಯ ಶಿವಪಾರ್ವತಿ ನಗರದ ಮನೆಯೊಂದಕ್ಕೆ ಕುಮಾರಣ್ಣ ತನ್ನ ವಾಸ್ತವ್ಯ ಬದಲಿಸಿದ್ದೇನೆಂದು ಹೇಳಿಕೊಂಡಾಗ ಆ ಭಾಗದ ಬಹುತೇಕರು ಅದನ್ನು ಜೋಕ್ ಆಗಿಯೇ ಪರಿಗಣಿಸಿದ್ದರು. ಹೆಚ್ಚೆಂದರೆ ಒಂದೆರಡು ತಿಂಗಳಷ್ಟೇ ಇಲ್ಲಿರಬಹುದು ಆನಂತರ ಬೆಂಗಳೂರು ಚಲೇಜಾವ್ ಎಂದೇ ಗೇಲಿ ಮಾಡಿದ್ದರು. ಅದನ್ನೊಂದು ಪೊಲಿಟಿಕಲ್ ಗಿಮ್ಮಿಕ್ ಎಂದೂ ಆಡಿಕೊಂಡವರುಂಟು.

ಕಳಸಾ ಬಂಡೂರಿ

ಆದರೆ ಕುಮಾರಣ್ಣ ತನ್ನ ಹುಬ್ಬಳ್ಳಿಯ ಮನೆಯಲ್ಲಿ ಕೇವಲ ಕಾಟಾಚಾರಕ್ಕಷ್ಟೇ ಕೂರಲಿಲ್ಲ. ಸದ್ದಿಲ್ಲದೆ ಬಿಜಾಪುರಕ್ಕೂ ಹೋಗಿಬಂದರು. ರಾತ್ರೋರಾತ್ರಿ ಅದೇನು ಕೈಚಳಕ ಮೆರೆದರೋ! ದೇವರ ಹಿಪ್ಪರಗಿಯ ಅತೃಪ್ತ ಕಾಂಗ್ರೆಸ್ ಆತ್ಮದಂತಿದ್ದ ಶಾಸಕ ನಡಹಳ್ಳಿ ಕುಮಾರಣ್ಣ ಬಲೆಗೆ ಬಿದ್ದರು. ಅದು ಒಂದೇ ತಿಂಗಳಲ್ಲಿ ಕುಮಾರಸ್ವಾಮಿಯ ಕಾರ್ಯಾಚರಣೆಯ ಗಾಂಭೀರ್ಯವೇನೆಂಬುದನ್ನು ಸಾಬೀತು ಮಾಡಿತ್ತು. ಸದ್ಯ ಕಾಂಗ್ರೆಸ್ ಸರ್ಕಾರದ ಮತ್ತೊಬ್ಬ ಅತೃಪ್ತ ಮಂತ್ರಿ, ಸತೀಶ್ ಜಾರಕಿಹೊಳಿಯನ್ನೂ ಕುಮಾರಣ್ಣ ಪಳಗಿಸಿದ್ದಾರೆಂಬ ಗುಲ್ಲೆದ್ದಿದೆ. ಬಿಜೆಪಿಯಲ್ಲಿದ್ದೂ ಅತಂತ್ರ ಸ್ಥಿತಿಯಲ್ಲಿದ್ದ ಉಮೇಶ್ ಕತ್ತಿಗೂ ಕುಮಾರಸ್ವಾಮಿ ಗಾಳ ಹಾಕಿದ್ದಾರಂತೆ. ಜೊತೆಗೆ ಬಿಜೆಪಿಗೂ ಸಲ್ಲದೆ ಬೇರೆಲ್ಲೂ ನೆಲೆ ಕಾಣದೆ ತ್ರಿಶಂಕುಸ್ಥಿತಿಯಲ್ಲಿದ್ದ ಬಸನಗೌಡ ಪಾಟೀಲ್ ಯತ್ನಾಳರಿಗೂ ಕುಮಾರಣ್ಣ ಬಲೆ ಬೀಸಿದ್ದಾರೆಂಬ ವದಂತಿದೆ. ಕುಂತ ಜಾಗದಲ್ಲಿ ಕೂರುತ್ತಿಲ್ಲ, ನಿಂತ ಜಾಗದಲ್ಲಿ ನಿಲ್ಲುತ್ತಿಲ್ಲ, ನಿನ್ನೆ ಹಾವೇರಿ ಜಿಲ್ಲೆಯಲ್ಲಿದ್ದರೆ ಇವತ್ತು ಕುಮಾರಣ್ಣನ ಸವಾರಿ ರಾಯಚೂರಿನತ್ತ, ಬೀದರ್, ಗುಲ್ಬರ್ಗಾ, ಬಳ್ಳಾರಿ, ಬಿಜಾಪುರ, ಕೊಪ್ಪಳ- ಹೀಗೆ ಉತ್ತರ ಕರ್ನಾಟಕದ ಹಳ್ಳಿಹಳ್ಳಿಗಳನ್ನೂ ಬಿಡದೆ ಕಾಲಿಗೆ ಚಕ್ರ ಕಟ್ಟಿಕೊಂಡು ಸುತ್ತಾಡುತ್ತಿರುವ ಕುಮಾರಣ್ಣನ ಹೆಣಗಾಟವೇ ಆತನ ಅಳಿವು ಉಳಿವಿನ ಸೆಣಸಾಟದ ಪ್ರತಿಬಿಂಬವಾಗಿ ಕಾಣಿಸುತ್ತಿದೆ.

ಹಿಂದಿದ್ದ ಇಕ್ಬಾಲ್ ಅನ್ಸಾರಿ ಈಗಿಲ್ಲ, ಅದು ಕೊಪ್ಪಳ ಜಿಲ್ಲೆಯ ಮಟ್ಟಿಗೆ ಜೆಡಿಎಸ್‌ಗಾದ ದೊಡ್ಡನಷ್ಟನಾದರೂ ರಾಯಚೂರಿನಲ್ಲಿ ಡಾ. ಶಿವರಾಜ ಪಾಟೀಲ್, ಲಿಂಗಸುಗೂರಿನಲ್ಲಿ ಮಾನಪ್ಪ ವಜ್ಜಲ, ಬಸವ ಕಲ್ಯಾಣದಲ್ಲಿ ಖೂಬಾ; ಹೀಗೆ ಉತ್ತರ ಕರ್ನಾಟಕದಿಂದಲೇ ನಾಲ್ವರು ಜೆಡಿಎಸ್ ಶಾಸಕರಿದ್ದ ಕಾಲವೂ ಇತ್ತು, ಅದೀಗ ಎರಡಕ್ಕೆ ಬಂದು ನಿಂತಿದೆ. ಅಧಿಕಾರವಿಲ್ಲದೆ ಹೋದರೆ ನೊಣ ಕೂಡ ಇಣುಕುವುದು ಕಷ್ಟವಾಗಿರುವಾಗ ಇನ್ನು ಎಮ್ಮೆಲ್ಲೆಗಳು ಉಳಿಯುವುದುಂಟೆ?

ಟಾರ್ಗೆಟ್ 70....

ಇದನ್ನು ಚೆನ್ನಾಗಿಯೇ ಅರ್ಥಮಾಡಿಕೊಂಡ ಕುಮಾರಸ್ವಾಮಿಗೆ ಈಗ ಉತ್ತರ ಕರ್ನಾಟಕ ವಾಸಿ. ಮುಂಬರುವ ಚುನಾವಣೆಯಲ್ಲಿ ಬಿಜೆಪಿ ನಾಯಕ ಜಗದೀಶ್ ಶೆಟ್ಟರ್ ವಿರುದ್ಧ ಕುಮಾರಸ್ವಾಮಿ ಸ್ಪರ್ಧಿಸುವ ಮೂಲಕ ತನ್ನ ಉ.ಕ. ಅಶ್ವಮೇದ ಯಾಗಕ್ಕೆ ಜೆಡಿಎಸ್ ಚಾಲನೆ ನೀಡಲಿದೆಯಂತೆ. ಉತ್ತರ ಕರ್ನಾಟಕ ಭಾಗದಿಂದಲೇ ಇಪ್ಪತ್ತು ಮಂದಿ ಜೆಡಿಎಸ್ ಎಮ್ಮೆಲ್ಲೆಗಳನ್ನು ಗೆಲ್ಲಿಸಿ ತರುತ್ತೇನೆಂದು ಕುಮಾರಣ್ಣ ಪಣ ತೊಟ್ಟಾಗಿದೆಯಂತೆ. ಹೇಗೂ ಹಳೇ ಮೈಸೂರು ಭಾಗದ ಒಕ್ಕಲಿಗರಿಗೆ ದೇವೇಗೌಡರನ್ನು ಬಿಟ್ಟರೆ ಬೇರೆ ನಾಯಕನಿಲ್ಲ. ಸದ್ಯ ಕಾಂಗ್ರೆಸ್ ಆಳ್ವಿಕೆಯ ಭ್ರಮನಿರಸನ ಮತ್ತು ಮೋದಿ ಮಾಡುತ್ತಿರುವ ಅನಾಹುತಗಳೆಲ್ಲವನ್ನೂ ಲೆಕ್ಕ ಹಾಕಿದರೆ ಜನಕ್ಕೆ ಜೆಡಿಎಸ್ ಮಾತ್ರವೇ ಪರ್ಯಾಯ ಮಾರ್ಗವಾಗಿ ಕಾಣಿಸಲೇಬೇಕು.

ಹಳೇ ಮೈಸೂರು ಪ್ರಾಂತ್ಯದಲ್ಲಿ ಕಮ್ಮಿಯೆಂದರೂ ಐವತ್ತು ಸೀಟು ಗೆದ್ದು ಉತ್ತರ ಕರ್ನಾಟಕದಲ್ಲಿ ಕನಿಷ್ಠ ಇಪ್ಪತ್ತು ಸೀಟು ಗೆದ್ದರೆ ಸಾಕು ತಾನು ಮುಖ್ಯಮಂತ್ರಿಯಾಗುವುದು ಶತಸ್ಸಿದ್ಧ ಎಂಬ ನಂಬಿಕೆ ಕುಮಾರಣ್ಣನಿಗಿದೆ. ಕನಿಷ್ಠ ಐವತ್ತು ಬಂದರೂ ಒಂದು ಕೈ ನೋಡೇಬಿಡಬಹುದೆಂಬ ಆಸೆಯೂ ದೇವೇಗೌಡರಲ್ಲಿ ಚಿಗುರೊಡೆದಿದೆ. ಏಕೆಂದರೆ ಇದು ಅಪ್ಪ-ಮಕ್ಕಳ ಪಾಲಿಗೆ ಕೊನೆಯ ಅವಕಾಶ. ಬಿಜೆಪಿ, ಆರೆಸ್ಸೆಸ್, ಸಂಘ ಪರಿವಾರದ ಹಾಗೆ ಪಕ್ಕಾ ಕೇಡರ್ ಆಧಾರಿತ ಸಂಘಟನಾ ದೌಲಗಳ್ಯಾವುದೂ ಜೆಡಿಎಸ್‌ಗಿಲ್ಲ. ಇಂಥ ಕೇಡರ್ based ಜಾಲಕ್ಕೆ ಪೂರಕವಾದ 'ಇಸಂ' ಅಥವಾ ವಾದದ ಬೆಂಬಲವೂ ಇಲ್ಲ. ಅಖಿಲ ಭಾರತ ಮಟ್ಟದ ಉದ್ದಿಮೆಪತಿಗಳಾಗಲಿ, ಮಾರ್ವಾಡಿಗಳಾಗಲಿ, ಕಾರ್ಪೊರೇಟ್ ಕಂಪೆನಿಗಳಾಗಲಿ ಕೈಜೋಡಿಸದೆ ಹೋದರೆ ದುಡ್ಡೂ ಕಾಸೂ ಹುಟ್ಟುವುದಿಲ್ಲ. ಜೆಡಿಎಸ್‌ನಂಥ ಪಕ್ಷವೊಂದಕ್ಕೆ ದೈತ್ಯ ಕಾರ್ಪೊರೇಟ್ ಕಂಪೆನಿಗಳಾಗಲಿ, ರೊಕ್ಕಸ್ಥರಾಗಲಿ ಮೇಲೆ ಬಿದ್ದು ಕಾಸು ಬಿಚ್ಚುವುದಿಲ್ಲ.



ಕಾಸು ಹುಟ್ಟುತ್ತದೆಯೆಂದರೆ ಪಕ್ಷ, ಜಾತಿ, ನಿಷ್ಠೆ ಯಾವುದನ್ನೂ ಲೆಕ್ಕ ಹಾಕದೆ ಉಲ್ಟಾ ಹೊಡೆಯುವ ಚಲುವರಾಯ, ಜಮೀರ್, ಬಾಲಕೃಷ್ಣರಂಥವರೇ ಬುದ್ಧಿ ತೋರಿಸಿದ ಮೇಲೆ ಇನ್ನು ಯಾರನ್ನೆಂದು ನಂಬುವುದು?

ಇಂಥಾದ್ದೊಂದು ಅನಿವಾರ್ಯ, ಆತಂಕ, ಅನಿಶ್ಚಿತತೆಯಲ್ಲೇ ತನ್ನ ಅಳಿವು ಉಳಿವಿನ ಸೆಣಸಾಟಕ್ಕಿಳಿದ ಜೆಡಿಎಸ್ ಸೇನಾನಿಗಳಾದ ಕುಮಾರಸ್ವಾಮಿ, ದೇವೇಗೌಡರ ಹೆಣಗಾಟ ನಿಜಕ್ಕೂ ಕುತೂಹಲಕರ ಮತ್ತು ರೋಚಕ. ಕನ್ನಡಿಗರ ಏಕಮಾತ್ರ ಪ್ರಾದೇಶಿಕ ಪಕ್ಷವಾದ ಜೆಡಿಎಸ್ ತನ್ನ ಕಾರ್ಯತಂತ್ರ ರೂಪಿಸಲೆಂದು ಪ್ರಶಾಂತ್ ಕಿಶೋರ್‌ರಂಥವರನ್ನು ನಂಬಿಕೂತಿದೆಯೆಂದರೆ ಅದರ ಅನಿವಾರ್ಯತೆ ಇನ್ನೆಂಥದ್ದಿರಬೇಡ?

■ ರಾ. ಸೋಮನಾಥ್

ಗುಲಾಮ ರಾಷ್ಟ್ರವನ್ನು ಕಟ್ಟುತ್ತಿರುವ ಫ್ಯಾಸಿಸ್ಟ್ ಪ್ರಭುತ್ವ

"ನೀನು ಶ್ರೇಷ್ಠನಾಗುವುದು ಮಹತ್ವಾಕಾಂಕ್ಷೆಯಿದ್ದಾಗ. ಅದರ ಜೊತೆಗೆ ಬರುವ ಕಾಯಿಲೆಗಳಿಂದ ಮುಕ್ತನಾದಾಗ. ಮಾಡುವ ಕೆಲಸಗಳು ಪವಿತ್ರವಾಗಿರಬೇಕೆಂದು ಅರಿವಾದಾಗ."


\- ಲೇಡಿ ಮ್ಯಾಕ್‌ಬೆತ್

ಸರ್ವಾಧಿಕಾರಿ ಮೋದಿ ಜಾರಿಗೊಳಿಸಿದ ಅನಾಣ್ಯೀಕರಣದ ಅರಾಜಕತೆಯ ಕುರಿತಂತೆ ಸರ್ವೇಸಾಮಾನ್ಯವಾಗಿ ಕೇಳಿಬರುವ ಹೋಲಿಕೆಯೆಂದರೆ ಮೂಗಿನ ಮೇಲೆ ಕುಳಿತಿರುವ ನೊಣವನ್ನು ಓಡಿಸಲು ಮುಠ್ಠಾಳನೊಬ್ಬ ಕತ್ತಿಯನ್ನು ಆ ನೊಣದ ಮೇಲೆ ಬೀಸಿದ, ಆದರೆ ನೊಣ ಹಾರಿಹೋಯಿತು, ಹಾಗೆಯೇ ಮೂಗು ತುಂಡು ತುಂಡಾಯಿತು. ಈ ಮೋದಿ ತನ್ನ ಸ್ವಪ್ರತಿಷ್ಠೆಯನ್ನು ಮೆರೆಸಲು ಮತ್ತು ತನ್ನ ಎರಡೂವರೆ ವರ್ಷಗಳ ಆಡಳಿತದ ಗುರುತರವಾದ ವೈಫಲ್ಯಗಳಾದ ಆರ್ಥಿಕ ಹಿನ್ನಡೆ, ನಿರುದ್ಯೋಗ ಸಮಸ್ಯೆ ಕೃಷಿ ಬಿಕ್ಕಟ್ಟಿನ ಉಲ್ಬಣ, ದೇಶದ ಅನೇಕ ಭಾಗಗಳಲ್ಲಿ ಬರಗಾಲ ಪರಿಸ್ಥಿತಿ, ನಿರಂತರವಾಗಿ ಚಲಾವಣೆಯಲ್ಲಿರುವ ಕೋಮು ಗಲಭೆಗಳು, ತೀವ್ರವಾಗುತ್ತಿರುವ ಪರಿಸರ ನಾಶ ಎಲ್ಲವನ್ನು ಮುಚ್ಚಿಹಾಕಲು ಶೇಕಡಾ 86 ಪ್ರಮಾಣದಲ್ಲಿ ಚಲಾವಣೆಯಲ್ಲಿರುವ ನೋಟುಗಳನ್ನು ಏಕಪಕ್ಷೀಯವಾಗಿ ಅನಾಣ್ಯೀಕರಣಗೊಳಿಸಿ ದರ ಫಲವಾಗಿ ಇಂದು ದೇಶದಲ್ಲಿ ಆರ್ಥಿಕ ತುರ್ತುಪರಿಸ್ಥಿತಿ ನಿರ್ಮಾಣವಾಗಿದೆ. ಕಪ್ಪು ಸಂಪತ್ತನ್ನು ಹೊಂದಿದ ಬಂಡವಾಳಶಾಹಿಗಳು ನೊಣದಂತೆ ತಪ್ಪಿಸಿಕೊಂಡು ಹಾರಿಹೋದರೆ ಬಡಜನತೆ ಈ ತುಘಲಕ್ ದರ್ಬಾರಿನ ಕತ್ತಿ ಬೀಸುವಿಕೆಯಿಂದ ಬದುಕು ಕಳೆದುಕೊಂಡು ಅತಂತ್ರರಾಗಿ. ತತ್ತರಿಸುತ್ತಿದ್ದಾರೆ.

ಕಳೆದ ಈ ಐವತ್ತು ದಿನಗಳಲ್ಲಿ ಮೋದಿಯ ಸ್ವನಾಶಕಾರಿ ಭಸ್ಮಾಸುರ ಕುಣಿತದಿಂದ ಇಲ್ಲಿನ ಬಡಜನತೆಯ ಬದುಕಿನ ಮೇಲೆ ಮಾಡಿದ ಗಾಯಗಳು ಇನ್ನೂ ಹಸಿಹಸಿಯಾಗಿವೆ. ಕಳೆದ ಎರಡೂವರೆ ವರ್ಷಗಳಲ್ಲಿ ಏನನ್ನೂ ಸಾಧಿಸದೆ ಬೊಗಳೆ ಬಿಟ್ಟುಕೊಂಡು ಓಡಾಡುತ್ತಿದ್ದ ಬಿಜೆಪಿ ಮತ್ತು ಮೋದಿ ತಮ್ಮ ಮೇಲಿನ ಟೀಕೆಗಳಿಂದ ಗಮನ ತಪ್ಪಿಸಲು ಈ ಅನಾಣ್ಯೀಕರಣ ಎನ್ನುವ ವಿಧ್ವಂಸಕ ಕೃತ್ಯಕ್ಕೆ ಕೈಹಾಕಿದರು. ಅದಕ್ಕೆ ಆರಂಭದಲ್ಲಿ ಕಪ್ಪು ಹಣ ನಿರ್ಮೂಲನೆ ಮತ್ತು ಭಯೋತ್ಪಾದನೆಯ ನಿಗ್ರಹ ಎನ್ನುವ ಕೆನೆಪದರವನ್ನು ಸವರಿದರು. ಆದರೆ ಈ ಕೆನೆಪದರ ಹತ್ತೇ ದಿನಗಳಲ್ಲಿ ಕೊಳೆಯತೊಡಗಿದಾಗ ಕಪ್ಪು ಹಣ ಸಕ್ರಮಗೊಳಿಸುತ್ತೇವೆ ಎಂದು ಪ್ರಲೋಭನೆಯ ಬಿಡ್ಡಾವನ್ನು ಉದುರಿಸುತ್ತಿದ್ದಾರೆ. ಆದರೆ ಇಲ್ಲಿಯೂ ಅದು ನಿರೀಕ್ಷಿತ ಫಲ ಕೊಡದಿದ್ದಾಗ ನಗದುರಹಿತ ಆರ್ಥಿಕ ವಹಿವಾಟನ್ನು ಜಪಿಸುತ್ತಿದ್ದಾರೆ. ಆದರೆ ಈ ಅನಿಶ್ಚಿತ, ದುಡುಕು ನಿರ್ಧಾರಗಳು ಸಂಪೂರ್ಣವಾಗಿ ದೇಶವನ್ನು ಕತ್ತಲಿನ ದಾರಿಗೆ ತಂದು ನಿಲ್ಲಿಸುತ್ತಿದೆ. ಯಾವುದೇ ಪೂರ್ವ ತಯಾರಿ ಇಲ್ಲದೆ ಚಲಾವಣೆಯಲ್ಲಿರುವ ಸುಮಾರು 14.2 ಲಕ್ಷ ಕೋಟಿ ಮೊತ್ತದ ಕರೆನ್ಸಿಯನ್ನು ಏಕಾಏಕಿ ಅಮಾನ್ಯ ಮಾಡಿದಾಗ ಇಡೀ ದೇಶದಾದ್ಯಂತ ಹಣದ ಕೊರತೆಯ ಹಾಹಾಕಾರ ಸೃಷ್ಟಿಯಾಯಿತು. ಆದರೆ ಮೋದಿ ಮತ್ತು ಅವರ ಪಕ್ಷ ಆರಂಭದಲ್ಲಿ ಕೃತಕ ಹಿಂಜರಿತವೆಂದರು, ನಂತರ ಇದು ಕ್ಷಣಿಕವೆಂದರು. ಇಂದು ಅಮಾನ್ಯ ಮಾಡಿದ್ದ ಈ ಮೊತ್ತದಲ್ಲಿ ಈಗಾಗಲೇ ಸುಮಾರು 13.5 ಲಕ್ಷ ಬೊಕ್ಕಸಕ್ಕೆ ಬಂದಾಗಿದೆ. ಅಂದರೆ ಅದೆಲ್ಲವೂ ಬಿಳಿಯಾಗಿದೆ. ಇನ್ನು ಉಳಿದಿರುವ ಅಣುವಿನಷ್ಟು ಹಣವೂ ಮುಂದಿನ ದಿನಗಳಲ್ಲಿ ಬೊಕ್ಕಸಕ್ಕೆ ಸೇರಲಿದೆ. ಕಡೆಗೆ ಉಳಿದುಕೊಂಡ ಕಪ್ಪು ಹಣವೆಷ್ಟು? ಶೇಕಡಾ 2 ಕ್ಕಿಂತಲೂ ಕಡಿಮೆ. ಅಂದರೆ ಸುಮಾರು 50 ಸಾವಿರ ಕೋಟಿಯಷ್ಟು ಕಪ್ಪುಹಣ ಮಾತ್ರ ಬೊಕ್ಕಸಕ್ಕೆ ಸೇರಲಿಲ್ಲ. ಇದನ್ನು ಸಾಧಿಸಲು ಕಳೆದ ಐವತ್ತು ದಿನಗಳಲ್ಲಿ ಸುಮಾರು 4 ಲಕ್ಷ ಕೋಟಿ ಖರ್ಚಾಗಿದೆ!!

ಆದರೆ ಮೋದಿಯ ಈ ದುಷ್ಕೃತ್ಯದಿಂದ ಕೋಟ್ಯಾಂತರ ಜನರ ಬದುಕು ಧ್ವಂಸಗೊಂಡಿತು. ಅಸಂಘಟಿತ ವಲಯದಲ್ಲಿ ಗುತ್ತಿಗೆ ಕಾರ್ಮಿಕರಾಗಿ, ಕೂಲಿಗಳಾಗಿ ದುಡಿಯುತ್ತಿರುವ, ಸರಾಸರಿ 250 ರೂ. ದಿನಗೂಲಿ ಗಳಿಸುವ ಇಲ್ಲಿನ ಶೇಕಡಾ 40 ಪ್ರಮಾಣದ ಶ್ರಮಿಕವರ್ಗದ ಬದುಕು ಅನಾಮತ್ತಾಗಿ ದೇಶದ ವ್ಯವಸ್ಥೆಯೊಂದಿಗೆ ಕೊಂಡಿ ಕಳಚಿಕೊಂಡಿದೆ. ಇಲ್ಲಿನ ಶೇಕಡಾ 15 ಪ್ರಮಾಣದಲ್ಲಿರುವ ಮೇಲ್ವರ್ಗ ಮತ್ತು ಮಧ್ಯಮವರ್ಗದ ಒಂದು ವ್ಯವಸ್ಥೆ ಹಾಗೂ ಉಳಿದ ಬಡಜನರ, ರೈತರ ಶೇಕಡಾ 70 ಪ್ರಮಾಣದ ಮತ್ತೊಂದು ವ್ಯವಸ್ಥೆ ಎರಡೂ ಪರಸ್ಪರ ಸಂಪೂರ್ಣವಾಗಿ ಬೇರ್ಪಟ್ಟು ದೇಶವೇ ವ್ಯವಸ್ಥಿತವಾಗಿ ಇಬ್ಭಾಗವಾಗಿದೆ. ಇದುವರೆಗೂ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬೇರ್ಪಟ್ಟಿದ್ದ ಈ ಎರಡೂ ಜಗತ್ತು ಇಂದು ದೇಶದ ನಾಗರಿಕರಾಗಿಯೂ ಬೇರ್ಪಟ್ಟಿದ್ದಾರೆ.

ಪ್ರತಿ ಹೆಜ್ಜೆಯಲ್ಲಿಯೂ ಮುಗ್ಗರಿಸುತ್ತಿರುವ ಮೋದಿಯಂತಹ ಸ್ವಪ್ರತಿಷ್ಠ ದುರಹಂಕಾರ ವ್ಯಕ್ತಿತ್ವದ ಪ್ರಧಾನಿಗೆ ತನ್ನ ತಪ್ಪು ನಡೆಗಳನ್ನೂ ಸಹ ಒಪ್ಪಿಕೊಳ್ಳಲು ಸಾಧ್ಯವಾಗುತ್ತಿಲ್ಲ,



ಇದು ಒಂದು ಬಗೆಯಲ್ಲಿ ಮಾನಸಿಕ ಅಸ್ವಸ್ಥತೆ. ಇಡೀ ಅಧಿಕಾರವನ್ನು ತನ್ನಲ್ಲಿ ಕೇಂದ್ರೀಕರಿಸಿಕೊಂಡ ದೇಶದ ಪ್ರಧಾನಿಯೊಬ್ಬ ಈ ರೀತಿ ಮಾನಸಿಕ ಅನಾರೋಗ್ಯಕ್ಕೆ ತುತ್ತಾದರೆ ಆ ಕಾರಣಕ್ಕೆ ಇಡೀ ದೇಶವೇ ಅಭದ್ರತೆಗೆ ತುತ್ತಾಗುತ್ತದೆ.

ನಮ್ಮ ನಡುವಿನ ವೈರುಧ್ಯಗಳು ಮತ್ತು ಮುಂದಿನ ಹೆಜ್ಜೆಗಳು

ಆದರೆ ಈ ಎಲ್ಲಾ ಬಿಕ್ಕಟ್ಟುಗಳ ನಡುವೆ ಅನೇಕ ವೈರುಧ್ಯಗಳು ಜರುಗುತ್ತಿವೆ. ಈ ಅನಾಣ್ಯೀಕರಣದ ಫಲವಾಗಿ ದೇಶವೇ ತತ್ತರಿಸುತ್ತಿದ್ದರೂ ಮಹಾರಾಷ್ಟ್ರ, ಗುಜರಾತ್, ಹರ್‍ಯಾಣದಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ಪಕ್ಷ ಗೆಲುವು ಸಾಧಿಸಿದೆ. ಈ ವಿಪರ್ಯಾಸಕ್ಕೆ ಹೇಗೆ ಪ್ರತಿಕ್ರಿಯಿಸಬೇಕು ಎಂದು ಗೊಂದಲ ಉಂಟಾದರೆ ಅದು ಸಹಜವೇ. ಏಕೆಂದರೆ ಇಂದು ಪ್ರಜಾಪ್ರಭುತ್ವದ ಜೀವಂತಿಕೆಯನ್ನು, ಸಂಸದೀಯ ಪ್ರಜಾಪ್ರಭುತ್ವವನ್ನು ಚುನಾವಣಾ ಫಲಿತಾಂಶದ ಆಧಾರದಲ್ಲಿ ಆ ಮೂಲಕ ಸಂಸದರ, ಶಾಸಕರ ಸಂಖ್ಯಾಬಲದ ಆಧಾರದ ಮೇಲೆ, ಬಹುಮತದ ಮೇಲೆ ನಿರ್ಧರಿಸಲಾಗುತ್ತಿದೆ. ಇಲ್ಲಿ ಪ್ರಜಾಪ್ರಭುತ್ವದ ಆರೋಗ್ಯವನ್ನು ಅಳೆಯಲು ಸಾಮಾಜಿಕ-ಆರ್ಥಿಕ ಹಿಂಜರಿತದಂತಹ ಬೆಳವಣಿಗೆಯನ್ನು ಒಂದು ಮಾನದಂಡವಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಇದೇ ಕಾರಣಕ್ಕೆ ಫ್ಯಾಸಿಸ್ಟ್ ಪಕ್ಷವಾದ ಬಿಜೆಪಿ ಡೆಮಾಕ್ರಟಿಕ್ ಆಗಿ ಚುನಾಯಿತಗೊಂಡು ಮತ್ತೆ ಮತ್ತೆ ಮಾನ್ಯತೆ ಗಳಿಸುತ್ತದೆ. ತುರ್ತು ಪರಿಸ್ಥಿತಿಯ ಕರಾಳವರ್ಷಗಳ ನಂತರವೂ ಇಂದಿರಾ ಗಾಂಧಿ ಮತ್ತೆ ಅಧಿಕಾರಕ್ಕೆ ಬರುತ್ತಾರೆ.

ಚಿಂತಕ ಜಿ.ಸಂಪತ್ ಅವರು "ಇಟಲಿಯ ಫ್ಯಾಸಿಸ್ಟ್ ಪಕ್ಷದ ನಾಯಕ ಮುಸಲೋನಿ 1935ರಲ್ಲಿ ಬರೆದ ಫ್ಯಾಸಿಸಂ ತತ್ವಗಳಲ್ಲಿ ಒಂದು ಪ್ರಮುಖವಾದ ತತ್ವವೆಂದರೆ ಪ್ರಜಾಪ್ರಭುತ್ವವನ್ನು ತಿರಸ್ಕರಿಸುವುದು. ಫ್ಯಾಸಿಸಂ ರಾಜಕೀಯ ಸಮಚಿತ್ತತೆಯ, ಸಮತೂಕದ, ಸಮತೋಲನವನ್ನು ಒಂದು ಅಸಂಗತವೆಂದು ಜರೆದು ತಿರಸ್ಕರಿಸುತ್ತದೆ. ಮುಸಲೋನಿಯ ಪ್ರಕಾರ ಪ್ರಭುತ್ವವು ರಾಷ್ಟ್ರವನ್ನು ಕಟ್ಟುತ್ತದೆ ಹೊರತಾಗಿ ರಾಷ್ಟ್ರವು ಪ್ರಭುತ್ವವನ್ನು ಕಟ್ಟುವುದಿಲ್ಲ, ಪ್ರಭುತ್ವವು ರಾಷ್ಟ್ರದ ಅಂತಃಸಾಕ್ಷಿ" ಎಂದು ಹೇಳುತ್ತಾರೆ. ಇಂದು ಭಾರತದ ಮಟ್ಟಿಗೆ ಈ ಮಾತುಗಳು ನಿಜವಾಗುತ್ತಿದೆ.

ಇಲ್ಲಿ ಶೇಕಡಾ 70 ಪ್ರಮಾಣದ ಜನತೆ ಈ ಅನಾಣ್ಯೀಕರಣದಿಂದ ನಲಗುತ್ತಿದ್ದರೂ ಮೋದಿಯ ನಾಯಕತ್ವವನ್ನು ಹೊಗಳಲಾಗುತ್ತಿದೆ. ಇದರ ಕುರಿತಾಗಿ ಆರ್ಥಿಕ ತಜ್ಞ ಪ್ರಭಾತ್ ಪಟ್ನಾಯಕ್ ಅವರು "ಒಂದು ಆರ್ಥಿಕ ನೀತಿಯನ್ನು ಬೆಲೆಕಟ್ಟಲು ಅದು ಜನರಿಗೆ ಎಷ್ಟರಮಟ್ಟಿಗೆ ಸಹಕಾರಿಯಾಗಿದೆ ಎನ್ನುವುದರ ಮೇಲೆ ಅವಲಂಬಿತವಾಗಿರುತ್ತದೆ. ಜನರಿಗೆ ದುಃಖವನ್ನು ತಂದೊಡ್ಡುವ ಆರ್ಥಿಕ ನಿರ್ಧಾರಗಳನ್ನು ಅಪಹಾಸ್ಯದ ಮೂಲಕ ತಿರಸ್ಕರಿಸಲಾಗುತ್ತದೆ. ಆದರೆ ಇಂದಿನ ಸಂದರ್ಭದಲ್ಲಿ ಇದು ವಿರುದ್ಧವಾಗಿದೆ. ಜನತೆಗೆ ಬಿಕ್ಕಟ್ಟು, ಅತಂತ್ರ ಹೆಚ್ಚಿದಷ್ಟೂ ಅದಕ್ಕೆ ಕಾರಣರಾದ ವ್ಯಕ್ತಿಯ ಧೈರ್ಯ ಮತ್ತು ಜಾಣತನವನ್ನು ಹೊಗಳಲಾಗುತ್ತಿದೆ. ಇದನ್ನು ಕೇವಲ ಬಿಜೆಪಿ ಮಂದಿ ಮಾತ್ರ ಮಾಡುತ್ತಿಲ್ಲ, ಆರ್ಥಿಕ ತಜ್ಞರೂ ಮತ್ತು ವ್ಯಾಖ್ಯಾನಕಾರರೂ ಹೊಗಳುತ್ತಿದ್ದಾರೆ. ಈ ಅನಾಣ್ಯೀಕರಣ ಯಾರಿಗೂ ಲಾಭ ತಂದುಕೊಡುತ್ತಿಲ್ಲ ಮತ್ತು ಅದನ್ನು ಹೇರಿದವರೂ ಹೇಳಿದ ಗುರಿಯನ್ನೂ ಸಾಧಿಸುವುದಿಲ್ಲ, ವರ್ಷಗಳ ನಂತರ ಅದು ಬದಲಾವಣೆಯನ್ನು ತಂದುಕೊಡುತ್ತದೆ ಎನ್ನುವ ಮಾತುಗಳನ್ನೂ ಸಹ ಇಂದು ಯಾರೂ ಮಾನ್ಯ ಮಾಡುತ್ತಿಲ್ಲ, ಆದರೆ ಇಲ್ಲಿ ಸರ್ಕಾರವು ಜನರಿಗೆ ದುಃಖದುಮ್ಮಾನಗಳನ್ನು ತಂದೊಡ್ಡುತ್ತಿದೆ ಮತ್ತು ಅದೇ ಕಾರಣಕ್ಕಾಗಿ ಪ್ರಶಂಶಿಸಲ್ಪಡುತ್ತಿದೆ. ಈ ಪ್ರತಿಗಾಮಿ ನಿಲುವುಗಳು ಪ್ರಜಾಪ್ರಭುತ್ವ ವಿರೋಧಿ. ಇದು ನಮ್ಮ ಕೇಂದ್ರೀಕರಣವು ಜನರ ಮೇಲಿಂದ ಪಲ್ಲಟಗೊಂಡು ನಾಯಕನ ಮೇಲೆ ಕೇಂದ್ರೀಕೃತವಾಗಿರುವುದೇ ಮುಖ್ಯ ಕಾರಣ. ಹೀಗಾಗಿಯೇ ಈ ನಾಯಕನು ಸ್ವತಃ ತಾನು ಕೇಂದ್ರೀಕೃತನಾದ ಮೇಲೆ ತನ್ನ ಹೀರೋಯಿಸಂ ಪ್ರದರ್ಶಿಸಲು ಹಾತೊರೆಯುತ್ತಾನೆ. ಅದಕ್ಕಾಗಿ ಜನರ ಮೇಲೆ 'ಷಾಕ್ ಮತ್ತು ದಿಗ್ಭ್ರಮೆ' ಯನ್ನು ಹುಟ್ಟಿಸಲೂ ಹಿಂಜರಿಯಲಾರ. ಈ ರೀತಿಯಾಗಿ 'ಜನರಿಂದ' 'ನಾಯಕ' ನಡೆಗೆ ಪಲ್ಲಟಗೊಳ್ಳುವ ದೃಷ್ಟಿಕೋನದಿಂದಾಗಿ 'ನಿರ್ಧಾರ ತೆಗದುಕೊಳ್ಳುವ' ವ್ಯವಹಾರವು ತನ್ನ ಕಾಮನ್‌ಸೆನ್ಸ್ ಮತ್ತು ತರ್ಕಬದ್ಧವಾದವನ್ನು ಕಳೆದುಕೊಂಡಿರುತ್ತದೆ.

ತರ್ಕಬದ್ಧವಾದ ನಿರ್ಧಾರಗಳು ಎಚ್ಚರಿಕೆಯ ಲೆಕ್ಕಾಚಾರಗಳ ಮೂಲಕ ತನಗೆ ಎದುರಾಗುವ ಅನೇಕ ಮಿತಿಗಳು ಮತ್ತು ಅಡೆತಡೆಗಳ ನಡುವೆಯೇ ತನ್ನ ಉದ್ದೇಶಗಳನ್ನು ಗರಿಷ್ಠ ಮಟ್ಟದಲ್ಲಿ ಸಾಧಿಸಲು ಪ್ರಯತ್ನಿಸುತ್ತವೆ. ತರ್ಕಬದ್ಧವಾದ ನಿರ್ಧಾರಗಳು ಮತ್ತು ಮುಂದಾಗುವ ಸಾಧ್ಯತೆಗಳ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು ತನ್ನ ತೊಡಗಿಸಿಕೊಳ್ಳುತ್ತಾ ಹೋಗುತ್ತಾನೆ ಮತ್ತು ತೊಡಗಿಸಿಕೊಳ್ಳುವಿಕೆಯ ಊಹಾಪೋಹಗಳು ಸಹಜವಾಗಿವೇ ಪ್ರತಿಯೊಬ್ಬರ ಆಶಯಕ್ಕೆ ಅನುಗುಣವಾಗಿರಬೇಕಾಗಿಲ್ಲ, ಆದರೆ ಕೇಂದ್ರೀಕೃತಗೊಂಡ ಕೇಂದ್ರ ನಾಯಕ ತನ್ನ ಹೀರೋಯಿಸಂ ಅನ್ನು ಸ್ಥಾಪಿಸಲು 'ಷಾಕ್ ಮತ್ತು ದಿಗಿಲು' ಹುಟ್ಟಿಸುವ ನಿರ್ಧಾರ ತೆಗೆದುಕೊಳ್ಳುತ್ತಾನೆ. ತಾನು ಇತರೆ ಹೇಡಿಗಳಂತೆ ಲೆಕ್ಕಾಚಾರದ ನಿರ್ಧಾರಗಳನ್ನು ತೆಗೆದುಕೊಳ್ಳುವುದಿಲ್ಲ, ಈ ಹೇಡಿಗಳು ಮುಟ್ಟಲು ಹಿಂಜರಿಯುವಂತಹ 'ಧೈರ್ಯಶಾಲಿ' ನಿರ್ಧಾರಗಳನ್ನು ತೆಗೆದುಕೊಳ್ಳುವಷ್ಟು ಧೀರ ಎಂದು ಈ ಮಾದರಿಯ ನಾಯಕ ಅಹಂನಿಂದ ಬೀಗುತ್ತಾನೆ. ತನ್ನದು ತರ್ಕರಹಿತವಾದದ್ದು ಎಂದು ಹೇಳಿಕೊಳ್ಳಲೂ ಹಿಂಜರಿಯುವುದಿಲ್ಲ" ಎಂದು ಬರೆಯುತ್ತಾರೆ.

ಅಲ್ಲದೆ ಈ ಅನಾಣ್ಯೀಕರಣದ ಬೆಂಬಲಿಗರು "ಮೋದಿಯವರ ನಿರ್ಧಾರ ತರ್ಕರಹಿತವಾಗಿದ್ದರೆ ಅದು ಶೇಕಡಾ 70 ಪ್ರಮಾಣದ ಜನಸಂಖ್ಯೆಯ ಮೇಲೆ ದುಷ್ಪರಿಣಾಮ ಬೀರುವಂತಿದ್ದರೆ ತನ್ನ ರಾಜಕೀಯ ಲೆಕ್ಕಾಚಾರಕ್ಕೆ ಅಡ್ಡಿಯಾಗುವಂತಹ ನಿರ್ಧಾರವನ್ನೇತಕ್ಕೆ ತೆಗೆದುಕೊಳ್ಳುತ್ತಿದ್ದರು" ಎಂದು ಪ್ರಶ್ನಿಸುತ್ತಾರೆ. ಇದಕ್ಕೆ ಉತ್ತರವೇನೂ ಎಂಬಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಬಿಜೆಪಿ ಜಯಗಳಿಸುತ್ತಿದೆ. ಇದನ್ನು ಅರ್ಥೈಸುವುದು ನಮಗೆ ಕಷ್ಟವಾಗಬಾರದು. ಆದರೆ ನಾವು ಪ್ರಜಾಪ್ರಭುತ್ವದ ಜೀವಂತಿಕೆಯನ್ನು ಚುನಾವಣಾ ಫಲಿತಾಂಶದ ಮೇಲೆ ನಿರ್ಧರಿಸುತ್ತಿರುವುದರಿಂದ ಇದು ಇಷ್ಟೊಂದು ಸಂಕೀರ್ಣಗೊಳ್ಳಲು ಕಾರಣ. ಭಾರತವು ಸೈದ್ಧಾಂತಿಕ ನೆಲೆಯಲ್ಲಿ, ಆಧ್ಯಾತ್ಮದ ನೆಲೆಯಲ್ಲಿ, ವೈಚಾರಿಕ ನೆಲೆಯಲ್ಲಿ ಎರಡು ಭಾರತಗಳಾಗಿ ಇಬ್ಭಾಗವಾಗಿದೆ. ಇಲ್ಲಿ ಒಂದು ಭಾರತದ ಪ್ರಜ್ಞಾವಂತರು ಎಲ್ಲಾ ಬಗೆಯ ಮೂಲಭೂತವಾದದ, ಕೋಮುವಾದದ, ಜಾತಿಪದ್ಧತಿಯ ವಿರುದ್ಧ ಸಂಘಟಿತರಾಗುತ್ತ ಜಾತ್ಯತೀತ, ಧರ್ಮ ನಿರಪೇಕ್ಷಿತ ಭಾರತದ ಕನಸು ಕಾಣುತ್ತಿದ್ದರೆ ಇನ್ನೊಂದು ಭಾರತದ ಪ್ರಜೆಗಳು ಜಾತಿವಾದದ, ಮತೀಯವಾದದ ಪರವಾದ ಒಲುಮೆಯಿಂದ, ಅನೇಕ ಬಾರಿ ಅಪಾರ ಮುಗ್ಧತೆಯಿಂದ ಫ್ಯಾಸಿಸ್ಟ್ ಸಂಘ ಪರಿವಾರವನ್ನು ಆಯ್ಕೆ ಮಾಡಿಕೊಳ್ಳುತ್ತಿದೆ. ಈ ಇನ್ನೊಂದು ಭಾರತವನ್ನು ನೆಚ್ಚಿಕೊಂಡೇ ಸಂಘ ಪರಿವಾರ ತನ್ನ ಫ್ಯಾಸಿಸ್ಟ್ ಐಡಿಯಾಲಜಿಯನ್ನು ಎಗ್ಗಿಲ್ಲದೆ ಜಾರಿಗೊಳಿಸು ತ್ತಿದೆ. ಹೀಗಾಗಿಯೇ ಈ ಮೋದಿ ಬೆಂಬಲಿಗರು "ನೋಡಿ ನೀವು ಉದಾಹರಿಸುತ್ತಿರುವ ಜನಸಾಮಾನ್ಯರು ಈ ಅನಾಣ್ಯೀಕರಣವನ್ನು ವಿರೋಧಿಸಿ ಪ್ರತಿಭಟಿಸುತ್ತಿದ್ದಾರೆಯೇ? ಮೌನವಾಗಿ ಸಮ್ಮತಿಸುತ್ತಿಲ್ಲವೇ" ಎಂದು ಪ್ರಚಾರ ಮಾಡುತ್ತಿರುವುದೂ ಸಹ ಇಲ್ಲಿನ ದ್ವಂದ್ವ ಮತ್ತು ಕ್ಲೀಷೆಯ ಭಾರತವನ್ನು ತೆರೆದಿಡುತ್ತದೆ. ಆದರೆ ಸಾವಿರಾರು ವರ್ಷಗಳಿಂದ ಶೋಷಿತರೂ ದೌರ್ಜನ್ಯವನ್ನು ಸಹಿಸಿಕೊಂಡಿದ್ದರು ಅಂದರೆ ಇದರ ಅರ್ಥ ಅವರು ದಬ್ಬಾಳಿಕೆಯನ್ನು ಬೆಂಬಲಿಸುತ್ತಿದ್ದರು ಎಂದರ್ಥವಲ್ಲ, ಬದಲಾಗಿ ಪ್ರತಿರೋಧಕ್ಕೆ ಸೂಕ್ತ ಮಾರ್ಗಗಳ ಹುಡುಕಾಟದಲ್ಲಿದ್ದರು ಎಂದರ್ಥ. ಇಂದಿನ ಬಿಕ್ಕಟ್ಟಿನಿಂದ ಹೊರಬರಲು ಅವಶ್ಯಕವಾದ ಈ ಹೊಸ ಮಾರ್ಗಗಳಿಗಾಗಿ ಪ್ರಜ್ಞಾವಂತರು ನುಡಿಯನ್ನು ಕಡಿಮೆ ಮಾಡುತ್ತಾ ನಡೆಗಳ ಮೂಲಕ ಮಾತನಾಡಬೇಕಾಗಿದೆ. ಚುನಾವಣಾ ಫಲಿತಾಂಶದಿಂದ ಪ್ರಜಾಪ್ರಭುತ್ವದ ಮೌಲ್ಯಮಾಪನ ಮಾಡುವುದನ್ನು ವಿಮುಖಗೊಳಿಸಿ ಸಾಮಾಜಿಕ-ಆರ್ಥಿಕ ಚೈತನ್ಯಗಳು ಮತ್ತು ವಿರಳಿತಗಳು ಸಹ ಪ್ರಜಾಪ್ರಭುತ್ವದ ಜೀವಂತಿಕೆಯನ್ನು ಅಳೆಯುವ ಪ್ರಮುಖ ಮಾನದಂಡಗಳು ಎನ್ನುವುದನ್ನು ಸಾಧಿಸಿ ತೋರಿಸಲೇಬೇಕಾಂದಂತಹ ಸ್ಥಿತ್ಯಂತರದಲ್ಲಿ ನಾವಿದ್ದೇವೆ. ಆಗಲೇ ನಮ್ಮ ಕೇಂದ್ರೀಕರಣವು 'ನಾಯಕ'ನಿಂದ ಪಲ್ಲಟಗೊಂಡು 'ಜನರ' ಕಡೆಗೆ ತಿರುಗುತ್ತದೆ.

ಕಡೆಗೆ ಸಂವಿಧಾನ ಸಮರ್ಪಣ ದಿನದಂದು ಭಾಷಣ ಮಾಡಿದ ಅಂಬೇಡ್ಕರ್ "ಆದರೆ ಕೇವಲ ರಾಜಕೀಯ ಪ್ರಜಾಪ್ರಭುತ್ವದಿಂದ ನಾವು ತೃಪ್ತರಾಗಬಾರದು, ನಮ್ಮ ರಾಜಕೀಯ ಪ್ರಜಾಪ್ರಭುತ್ವವನ್ನು ಸಾಮಾಜಿಕ ಪ್ರಜಾಪ್ರಭುತ್ವವನ್ನಾಗಿಯೂ ರೂಪಿಸಬೇಕು. ಇಂದು ನಾವು ರಾಜಕೀಯ ಸಮಾನತೆಯನ್ನು ಸಾಧಿಸಿರಬಹುದು, ಆದರೆ ಸಾಮಾಜಿಕ ಸಮಾನತೆ ಇಲ್ಲದೆ ರಾಜಕೀಯ ಸಮಾನತೆ ಬಹುದಿನಗಳ ಕಾಲ ಉಳಿಯಲಾರದು. ಸಾಮಾಜಿಕ ಸಮಾನತೆ ಎಂದರೇನು? ಅದು ಸ್ವಾತಂತ್ರ, ಸಮಾನತೆ, ಬಂಧುತ್ವವನ್ನು ಗುರುತಿಸುತ್ತದೆ, ಮಾನ್ಯ ಮಾಡುತ್ತದೆ, ಗೌರವಿಸುತ್ತದೆ. ಸ್ವಾತಂತ್ರ್ಯ ಸಮಾನತೆ, ಬಂಧುತ್ವವನ್ನು ಬೇರೆಯಾಗಿ ಪರಿಗಣಿಸಲೇಬಾರದು. ಇವು ಬೇರ್ಪಟ್ಟರೆ ಪ್ರಜಾಪ್ರಭುತ್ವದ ಆಶಯಗಳೇ ಮಣ್ಣುಗೂಡಿದಂತೆ. ರಾಜಕೀಯದಲ್ಲಿ ಒಬ್ಬ ವ್ಯಕ್ತಿ ಒಂದು ವೋಟು, ಒಂದು ಮೌಲ್ಯ ಎನ್ನುವ ಆದರ್ಶವನ್ನು ಗೌರವಿಸುತ್ತೇವೆ. ಆದರೆ ಸಾಮಾಜಿಕ-ಆರ್ಥಿಕ ಚೌಕಟ್ಟಿನಲ್ಲಿ ಒಬ್ಬ ವ್ಯಕ್ತಿ ಒಂದು ಮೌಲ್ಯದ ಆದರ್ಶವನ್ನು ನಿರಾಕರಿಸುತ್ತೇವೆ. ಎಷ್ಟು ದಿನಗಳ ಕಾಲ ನಾವು ಸಾಮಾಜಿಕ-ಆರ್ಥಿಕ ವಲಯಗಳಲ್ಲಿ ಸಮಾನತೆಯನ್ನು ನಿರಾಕರಿಸುತ್ತೇವೆ? ಇದನ್ನು ನಾವು ನಿರಾಕರಿಸಿದಷ್ಟೂ ರಾಜಕೀಯ ಪ್ರಜಾಪ್ರಭುತ್ವವು ಕಂಟಕದಲ್ಲಿರುತ್ತದೆ" ಎನ್ನುವ ಮಾತುಗಳಿಗೆ ಮತ್ತೆ ಜೀವ ತುಂಬುವ ಕಾಲ ಬಂದಿದೆ.

■ ಬಿ.ಶ್ರೀಪಾದ ಭಟ್

ರಾಜ್-ಲೀಲಾ 'ವಿನೋದ'ವಲ್ಲ

ಗರ್ಭ ಕಟ್ಟಿದ ಸದ್ದು ಕೇಳಿ ಬೆಚ್ಚಿದ ಶೂರ!



ಆಕೆ ಥಟ್ಟನೆ "ನಾನು ಗರ್ಭವತಿ ಕಣ್ರೀ.." ಅಂದ ಕೂಡ್ಲೆ ಜಗತ್ತಿನ ಅನೇಕ ಗಂಡಸರಂತೆ, ಹಾವು ತುಳಿದರೇನೋ ಎಂಬಂತೆ ಬೆಚ್ಚಿ ಅಣ್ಣಾವ್ರು ಹಿಂದಕ್ಕೆ ಸರಿದುಕೊಳ್ಳುತ್ತಾರೆ. ಲೀಲಾ ಮಾತೇ ಇಲ್ಲ, ಎಷ್ಟೋ ವರ್ಷಗಳಾದರೂ ಮಗೂನ ಎತ್ತಿದು ತಲೆ ಸವರೋದು ಇಲ್ಲ. ಅಂಥ ನಿರ್ದಯತೆ ಏಕೋ!

ಡಿಸೆಂಬರ್ 25, 2016ರ ಸಂಜೆ ಬಿಡುಗಡೆಯಾಗುತ್ತಿರುವ ರವಿ ಬೆಳಗೆರೆ ವಿರಚಿತ ನಟಿ ಲೀಲಾವತಿಯವರ ಆತ್ಮಕಥನ 'ರಾಜ್ ಲೀಲಾ ವಿನೋದ' ಪುಸ್ತಕದ ಆಯ್ದಭಾಗವನ್ನು ಡಿಸೆಂಬರ್ 15, 2016ರ 'ಹಾಯ್ ಬೆಂಗಳೂರ್' ಪತ್ರಿಕೆಯ 2ನೇ ಪುಟದಲ್ಲಿ ಪ್ರಕಟಿಸಲಾಗಿದೆ. ರವಿ ಬೆಳಗೆರೆಯವರಿಗೆ ಶುಭಾಶಯಗಳು.

"ಒಬ್ಬ ವ್ಯಕ್ತಿಯನ್ನು ದೂರದಿಂದ ದೇವರಂತೆ ಆರಾಧಿಸುವ ಒಬ್ಬ ಭಕ್ತನಿಗೆ ಕೆಲವು ಕಾಲ ಆ ಆರಾಧನಾ ಮೂರ್ತಿಯ ಸಾಮೀಪ್ಯ ದೊರಕಿಬಿಟ್ಟರೆ ಕಾಲ ಕಳೆದಂತೆ ಆ ಆರಾಧನಾ ಮೂರ್ತಿಯ ಧನಾತ್ಮಕ ಅಂಶಗಳು ದೂರ ಸರಿದು ಬರೀ ಋಣಾತ್ಮಕ ಅಂಶಗಳೇ ಗೋಚರಿಸತೊಡಗುತ್ತವೆ, ಮಾತ್ರವಲ್ಲ ಆ ಮೂರ್ತಿ ದೇವರ ಸ್ಥಾನದಿಂದ ದೆವ್ವದ ಸ್ಥಾನಕ್ಕೆ ವರ್ಗಾವಣೆಗೊಳ್ಳುತ್ತಾನೆ" ಎಂದು ಇಂಗ್ಲಿಷ್‌ನಲ್ಲಿ ಒಂದು ಹೇಳಿಕೆಯಿದೆ. ಡಾ.ರಾಜ್‌ಕುಮಾರ್ ಅವರ ಬದುಕಿನ ಕಡೆಯ ಹತ್ತು ವರ್ಷಗಳ ಒಡನಾಡಿಯಾದ ನನ್ನ ಪ್ರಕಾರ ಈ ಮೇಲಿನ ಹೇಳಿಕೆ ರಾಜ್‌ಕುಮಾರವರ ವಿಷಯದಲ್ಲಿ ತದ್ವಿರುದ್ಧ. ಅವರನ್ನು ನಾನು ದೂರದಿಂದ ಎಷ್ಟು ಒಳ್ಳೆಯವರು ಎಂದುಕೊಂಡಿದ್ದೆನೋ ಅವರು ಅದಕ್ಕಿಂತ ಒಳ್ಳೆಯ ಮನುಷ್ಯ ಎನ್ನುವುದು ಅವರ ಸಾಮೀಪ್ಯದಿಂದ ಅರ್ಥವಾದ ಸತ್ಯ. ದೇವರಲ್ಲಿ ನಂಬಿಕೆ ಇಲ್ಲದ ನಾನು, ಬಹುಶಃ ದೇವರು ಎನ್ನುವವನು ನಿಜವಾಗಲೂ ಇದ್ದಿದ್ದರೆ ಅವನು ರಾಜ್‌ಕುಮಾರ್‌ರವರ ತರಹ ಇರುತ್ತಿದ್ದನೇನೋ ಎಂದು ಬಹಳ ಸಲ ಅಂದುಕೊಂಡಿದ್ದೇನೆ. 'ಬಂಗಾರದ ಮನುಷ್ಯ' ಎನ್ನುವುದು ರಾಜ್‌ಕುಮಾರ್ ಅವರ ವ್ಯಕ್ತಿತ್ವಕ್ಕೆ ಅನ್ವರ್ಥನಾಮವೇ ಸರಿ.

'ಜನುಮದ ಜೋಡಿ' ಸಿನಿಮಾದಿಂದ 'ಅರಸು' ಸಿನಿಮಾದವರೆಗೂ – ಅಂದರೆ ರಾಜ್‌ಕುಮಾರ್ ಮತ್ತು ವರದಪ್ಪ ಅವರು ಬದುಕಿರುವವರೆಗೂ – ಸತತ ಹತ್ತು ವರ್ಷಗಳ ಕಾಲ ವಜ್ರೇಶ್ವರಿಯ ಬಹುತೇಕ ಸಿನಿಮಾಗಳಿಗೆ ನಾನು ಸಹನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ. ರಾಜ್‌ಕುಮಾರ್ ಸಮೀಪವರ್ತಿಯಾಗಿ, ಒಡನಾಡಿಯಾಗಿ, ಅವರ ಮೇಲೆ ಭಕ್ತಿ, ಗೌರವಗಳನ್ನು ಇಟ್ಟುಕೊಂಡೇ ವಿಮರ್ಶಾತ್ಮಕ ದೃಷ್ಟಿಯಲ್ಲಿ ಅವರನ್ನು ಗ್ರಹಿಸಲೆತ್ನಿಸಿದ್ದೇನೆ. ಹಲವಾರು ಸಂದರ್ಭಗಳಲ್ಲಿ ಸಹಸ್ರಾರು ಸಂಗತಿಗಳ ಬಗ್ಗೆ ರಾಜ್‌ಕುಮಾರ್ ಅವರು ಆಡಿರುವ ಮಾತುಗಳಿಗೆ ಕಿವಿಯಾಗಿದ್ದೇನೆ, ಅವರ ಚಿಂತನ-ಮಂಥನಗಳಲ್ಲಿ ಭಾಗಿಯಾಗಿದ್ದೇನೆ. ಅವರ ಮುಗ್ಧತೆಯೊಳಗಿನ ಜಾಣನನ್ನು, ನಾಸ್ತಿಕನೊಳಗಿನ ವಿಚಾರವಂತನನ್ನು, ನಿರ್ಲಿಪ್ತನೊಳಗಿನ ಮುತ್ಸದ್ಧಿಯನ್ನು ಗುರುತಿಸಿದ್ದೇನೆ. ಈ ಎಲ್ಲಾ ಸಂಗತಿಗಳ ಬಗ್ಗೆ ಮುಂದೊಂದುದಿನ ಒಂದು ಪುಸ್ತಕವನ್ನು ಬರೆಯುವ ಉದ್ದೇಶ ಇದ್ದೇ ಇದೆ. ಆ ಪುಸ್ತಕದಲ್ಲಿ ಬರೆಯಲೇಬೇಕಿದ್ದ ಒಂದು ಮುಖ್ಯವಾದ ವಿಷಯವನ್ನು ಈಗ ಹೇಳಲೇಬೇಕಾದ ಜರೂರತ್ತು ಬಂದೊದಗಿದೆ.

'ರಾಜ್ ಲೀಲಾ ವಿನೋದ' ಪುಸ್ತಕದಲ್ಲಿ ವಿನೋದ್‌ರಾಜ್ ಅವರು ರಾಜ್‌ಕುಮಾರ್ ಅವರ ಮಗ ಎನ್ನುವ ಅರ್ಧ ಸತ್ಯವನ್ನು ಲೀಲಾವತಿಯವರು ಹೇಳಿಕೊಂಡಿದ್ದಾರೆ. ಈ ವಿಷಯದಲ್ಲಿ ರಾಜ್‌ಕುಮಾರ್ ಅವರು ನನ್ನೊಡನೆ ಹೇಳಿದ್ದ ಉಳಿದರ್ಧ ಸತ್ಯವನ್ನು ಈಗ ನಾನು ಸಮಸ್ತ ಕನ್ನಡ ಜಗತ್ತಿಗೆ ಹೇಳಲೇಬೇಕಾದ ಸನ್ನಿವೇಶ ಉದ್ಭವವಾಗಿದೆ.

ಎರಡು ಸಾವಿರನೇ ಇಸವಿ. ರಾಜ್‌ಕುಮಾರ್ ಅವರನ್ನು ವೀರಪ್ಪನ್ ಅಪಹರಿಸಿದ ಸ್ವಲ್ಪದಿನಗಳ ಮುಂಚೆ. 'ಭಕ್ತ ಅಂಬರೀಶ' ಸಿನಿಮಾದ ಕಥೆಯ ಚರ್ಚಾ ಸಂದರ್ಭ. ಬಿಡುವಿನ ವೇಳೆಯಲ್ಲಿ ಟಿ.ವಿ.ಯಲ್ಲಿ ಒಂದು ಹಳೆಯ ತಮಿಳು ಸಿನಿಮಾ ಬರುತ್ತಿದೆ. ಅದನ್ನು ರಾಜ್‌ಕುಮಾರ್ ಮತ್ತು ವರದಪ್ಪ ನೋಡುತ್ತಿದ್ದಾರೆ. ನಾನೂ ಸಹ ಇದ್ದೇನೆ. ರಾಜ್‌ಕುಮಾರ್‌ರವರು ಆ ಚಿತ್ರದ ನಾಯಕನನ್ನು ಕುರಿತು ವರದಪ್ಪನವರ ಜೊತೆ "ನೋಡಪ್ಪ ಥೇಟ್ ಅಪ್ಪ ಥರಾನೆ ಇದ್ದಾನಲ್ಲ ಮನುಷ್ಯ, ಏನೂ ವ್ಯತ್ಯಾಸಾನೇ ಇಲ್ಲ, ಅಪ್ಪನ್ನೇ ಹೋಲ್ತಾಂಗಾಗ್ತಿದೆ" ಎನ್ನುತ್ತಾರೆ. ಅದಕ್ಕೆ ವರದಪ್ಪ "ಹೌದಪ್ಪ ಅಪ್ಪ ಮಗಾನೇ. ಅನುಮಾನಾನೇ ಇಲ್ಲ, ತಮಿಳುನಾಡಲ್ಲಿ ಎಲ್ಲರಿಗೂ ಗೊತ್ತು, ಇದು ಅಲ್ಲಿ ಓಪನ್ ಸೀಕ್ರೇಟ್" ಎನ್ನುತ್ತಾರೆ. ಸ್ವಲ್ಪ ಸಮಯದ ನಂತರ ವರದಪ್ಪ ಅವರು ಯಾವುದೋ ಕೆಲಸದ ಮೇಲೆ ಹೊರಡುತ್ತಾರೆ. ನಾನು ಮತ್ತು ರಾಜ್‌ಕುಮಾರ್ ಇಬ್ಬರೇ. ರಾಜ್‌ಕುಮಾರ್‌ರವರು ಎಲೆಅಡಿಕೆ ಮೆಲ್ಲುತ್ತ ಆ ಚಿತ್ರವನ್ನು ನೋಡುತ್ತಿದ್ದಾರೆ. ನಾನು ಕುತೂಹಲ ತಡೆಯಲಾಗದೆ "ಅದೇನಣ್ಣಾ ವಿಷಯ" ಎಂದು ಕೇಳುತ್ತೇನೆ. ಅದಕ್ಕೆ ಅವರು "ಈ ಮನುಷ್ಯ ಆ ಸೂಪರ್‌ಸ್ಟಾರ್‌ರವರು ಯಾವುದೋ ಹೆಂಗಸಿನ ಜೊತೆಗೆ ಅಫೇರ್ ಹೊಂದಿದ್ದು ಅವರಿಗೆ ಹುಟ್ಟಿದ ಮಗ ಎನ್ನುವುದು ವಿಷಯ. ಅವರ ಇಬ್ಬರು ಮಕ್ಕಳಿಗಿಂತಲೂ ಅವರನ್ನು ಹೆಚ್ಚು ಹೋಲುತ್ತಾನಲ್ವ ಈ ಮನುಷ್ಯ" ಎಂದು ಹೇಳಿದರು (ಆ ಹೆಸರುಗಳನ್ನು ಇಲ್ಲಿ ಹೇಳುವುದು ಇನ್ನೊಂದು ವಿವಾದಕ್ಕೆ ಎಡೆಮಾಡಿದಂತಾಗುತ್ತದೆ ಮತ್ತು ಅದು ಈಗ ಅಪ್ರಸ್ತುತ).

ಆ ನಟನನ್ನು ನೋಡಿದಾಗ ನಿಜವಿರಬಹುದು ಎನಿಸಿತು ಮತ್ತು ನನ್ನ ತಲೆಯಲ್ಲಿ ತಾನೇತಾನಾಗಿ ರಾಜ್‌ಕುಮಾರ್, ಲೀಲಾವತಿ ಮತ್ತು ವಿನೋದ್‌ರಾಜ್ ಅವರ ಬಗೆಗಿನ ಅದೇ ತೆರನಾದ ಕಥೆ ಓಡಲಾರಂಭಿಸಿತು. ಬಹಳ ವರ್ಷಗಳಿಂದ ಈ ಒಂದು ವಿಷಯದಲ್ಲಿ ರಾಜ್‌ಕುಮಾರ್ ಅವರು ನನಗೆ ಅರ್ಥವಾಗದ ಒಗಟಾಗಿದ್ದರು.. ಅವರ ಗುಣ ಸ್ವಭಾವಕ್ಕೂ, ಈ ವರ್ತನೆಗೂ ಎಲ್ಲೂ ಹೊಂದಾಣಿಕೆಯಾಗುತ್ತಿರಲಿಲ್ಲ. ಇವರು ತಮ್ಮ ಕಡೆಯ ದಿನಗಳಲ್ಲಿ ವಯಸ್ಸು ಮಾಗಿದ ಮೇಲಾದರೂ, ತನ್ನ ಸ್ವಂತಮಗನನ್ನು ಒಂದು ದಿನ ಭೇಟಿಯಾಗಿ ಅವನ ಮೈದಡವದೆ, ತಲೆ ಸವರದೆ, ನನ್ನನ್ನು ಕ್ಷಮಿಸು ಮಗನೇ ಎಂದು ಅವನನ್ನು ಬಿಗಿದಪ್ಪಿ ಒಂದೆರಡು ಹನಿ ಕಣ್ಣೀರು ಹಾಕದೆ ಇರಲು ಹೇಗೆ ಸಾಧ್ಯ? ಆ ಮಗುವಿನಂಥಾ ಮನಸ್ಸು ಈ ಒಂದು ವಿಷಯದಲ್ಲಿ ಮಾತ್ರ ಕಠಿಣವಾಗಲು ಹೇಗೆ ಸಾಧ್ಯ? ಅಥವಾ ಇದಕ್ಕೆ ಸಂಬಂಧಪಟ್ಟಂತೆ ಅವರ ಮನಸ್ಸು ಒಳಗೊಳಗೇ ಎಷ್ಟು ನೊಂದುಕೊಂಡಿರಬಹುದು, ಇತ್ಯಾದಿ ಪ್ರಶ್ನೆಗಳ ಮಹಾಪೂರ ನನ್ನೊಳಗೆ ಭೋರ್ಗರೆಯತೊಡಗಿದವು.

ಇದೇ ಸರಿಯಾದ ಸುಸಂದರ್ಭ ಎಂದುಕೊಂಡು "ಅಣ್ಣಾ ನಿಮ್ಗೆ ಹರ್ಟ್ ಮಾಡೋಕಾಗ್ಲೀ ಅಥವಾ ಇನ್ನಾವುದೇ ಕೆಟ್ಟ ಉದ್ದೇಶದಿಂದಾಗಲೀ ನಾನು ನಿಮ್ಮನ್ನು ಈ ಪ್ರಶ್ನೆ ಕೇಳುತ್ತಿಲ್ಲ, ತಪ್ಪಿದ್ರೆ ಕ್ಷಮಿಸಿ. ಲೀಲಾವತಿಯವರು ಎಲ್ಲಾ ಕಡೇ ವಿನೋದ್‌ರಾಜ್ ನಿಮ್ಮ ಮಗ ಎಂದು ಹೇಳಿಕೊಂಡು ಬರುತ್ತಿದ್ದಾರೆ. ಬಹಳ ಜನ ಅದನ್ನು ನಂಬಿದ್ದಾರೆ. ಇದು ನಿಜವೇ?" ಎಂದು ಕೇಳಿದೆ. ನನ್ನ ಅನಿರೀಕ್ಷಿತ ಪ್ರಶ್ನೆಗೆ ವಿಕಾರಗೊಳ್ಳದ ಅವರ ಮುಖಭಾವ ಒಂದು ನಿರುಮ್ಮಳ ನೋಟವನ್ನು ನನ್ನೆಡೆಗೆ ಬೀರಿ ಮತ್ತೆ ಟಿ.ವಿ. ಕಡೆ ನೋಡತೊಡಗಿತು...

ನನಗೆ ಆ ಕ್ಷಣ ಒಂದು ರೀತಿಯಲ್ಲಿ ತುಂಬಾ ಕಸಿವಿಸಿಯಾಯಿತು. ಅಯ್ಯೋ ಯಾಕಾದರೂ ನಾನು ಈ ಪ್ರಶ್ನೆ ಕೇಳಿದೆನೋ... ಅವರಿಗೆ ಮುಜುಗರವಾಗುವಂತೆ ಮಾಡಿದೆನೋ? ಛೇ, ನಾನು ಈ ಪ್ರಶ್ನೆ ಕೇಳಬಾರದಿತ್ತು, ಕೇಳಿ ತಪ್ಪುಮಾಡಿದೆ ಎಂದೆಲ್ಲಾ ಯೋಚಿಸತೊಡಗಿದೆ. ಎರಡು ನಿಮಿಷಗಳ ನಂತರ ನನ್ನೆಡೆಗೆ ತಿರುಗಿದ ಅಣ್ಣಾವ್ರು "ವಯಸ್ಸು ಬಡ್ಡಿಮಗಂದು ಎಂಥಾವ್ರನ್ನು ತಪ್ಪು ಮಾಡುಸ್ತೆ" ಎಂದು ಹೇಳಿ ಮತ್ತೆ ಟಿ.ವಿ.ಯತ್ತ ನೋಡಲಾರಂಭಿಸಿದರು. ಆ ಮಾತು ಕೇಳಿ ನನಗೆ ಸ್ವಲ್ಪ ಸಮಾಧಾನವಾಯಿತು ಮಾತ್ರವಲ್ಲ ರಾಜ್‌ಕುಮಾರ್ ಅವರು ಒಪ್ಪಿಕೊಂಡರು ಎಂದುಕೊಂಡೆ. ಮತ್ತೊಂದು ನಿಮಿಷವಾದ ಮೇಲೆ "ಆದ್ರೆ ಆ ಮಗು ಹುಟ್ಟಿದಾಗ ನಮ್ಮಿಬ್ಬರ ಸಂಬಂಧ ಕಡಿದು ಸುಮಾರು ಎರಡು-ಮೂರು ವರ್ಷಗಳ ಮೇಲಾಗಿತ್ತು" ಎಂದು ಟಿ.ವಿ.ಯತ್ತ ನೋಡುತ್ತಲೇ ನುಡಿದರು. ಮುಂದುವರೆದು "ಒಬ್ಬರು ರಂಗಭೂಮಿ ಕಲಾವಿದರನ್ನು ಇವ್ರು ಮದುವೆಯಾಗಿ ಅವರಿಗೆ ಹುಟ್ಟಿದ ಮಗು ಅದು ಅನ್ನೋದು ನಮಗಿರುವ ಮಾಹಿತಿ" ಎಂದು ಹೇಳಿ ಮತ್ತೆರಡು ನಿಮಿಷ ಮೌನವಾದರು. ಮತ್ತೆ ನನ್ನ ಕಡೆ ತಿರುಗಿ "ಅವ್ರು ಹಾಗೆ ಹೇಳಿಕೊಳ್ಳುವುದರಿಂದ ಅವರಿಗೋ, ಅವರ ಮಗುವಿಗೋ ಒಳ್ಳೇದಾಗೋದಾದ್ರೇ ಅದನ್ನು ಇಲ್ಲಾ ಅಂತ ಹೇಳಿ ನಾನ್ಯಾಕೆ ವಿಲ್ಲನ್ ಆಗ್ಲಿ" ಎಂದು ಮಾತು ಮುಗಿಸಿ ಮತ್ತೆ ಸಿನಿಮಾ ನೋಡತೊಡಗಿದರು.

ನಿಜವಾಗಲೂ ಸಿನಿಮಾ ನೋಡುತ್ತಿದ್ದಾರೋ ಅಥವ ಬಾಲಣ್ಣ, ನರಸಿಂಹರಾಜು, ಉದಯಶಂಕರ್, ಕಮೆಡಿಯನ್ ಗುಗ್ಗು ಮುಂತಾದ ಆಪ್ತ ಸ್ನೇಹಿತರಿಗೆ ಗೊತ್ತಿದ್ದ ಒಂದು ನಿಗೂಢ ಸತ್ಯವನ್ನು ಹೊಸತಲೆಮಾರಿನ ಒಬ್ಬ ಹುಡುಗನಿಗೆ ದಾಟಿಸಿದ್ದು ಸರಿಯೋ ತಪ್ಪೋ ಎಂದು ವಿಮರ್ಶಿಸುತ್ತಿದ್ದರೋ ಏನೋ ಅಂದು ನನಗೆ ತಿಳಿಯಲಿಲ್ಲ.

ರಾಜ್‌ಕುಮಾರ್ ಅವರ ಮೇಲಿನ ಹೇಳಿಕೆಗೆ ಪುರಾವೆ ಎನ್ನುವಂತೆ ಸ್ವತಃ ಲೀಲಾವತಿಯವರೇ ಆ ಕಾಲದಲ್ಲಿ ಅವರ ಆಪ್ತೇಷ್ಟರ ಜೊತೆಗೆ ಹೇಳಿಕೊಂಡಿರುವ ಈ ಹೇಳಿಕೆ ರಾಜ್‌ಕುಮಾರ್ ಅವರ ಹೇಳಿಕೆಗೆ ಸ್ಪಷ್ಟನೆ ಕೊಡುತ್ತದೆ. ಆ ಮಾತೇನೆಂದರೆ "ರಾಜ್‌ಕುಮಾರ್ ಅವ್ರು ನನ್ನನ್ನ ಮದ್ವೆ ಮಾಡ್ಕೋಬೇಕು ಅಂಥ ತೀರ್ಮಾನಿಸಿದ್ದಕ್ಕೆ ಮುಖ್ಯಕಾರಣ, ಮದುವೆಯಾಗಿ ಹತ್ತು ವರ್ಷಗಳು ಕಳೆದಿದ್ದರೂ ಪಾರ್ವತಮ್ಮನವರಿಗೆ ಮಕ್ಕಳಾಗಿರಲಿಲ್ಲ ಎನ್ನುವುದಾಗಿತ್ತು. ಅದೊಂದು ದಿನ ರಾಜ್‌ಕುಮಾರವ್ರು ನನ್‌ಹತ್ರ ಬಂದು 'ಪಾರ್ವತಿ ಈಗ ಗರ್ಭಿಣಿ' ಎನ್ನುವ ವಿಷಯ ತಿಳಿಸಿದರು. ಆಗ ನಾನು ಯೋಚಿಸಿದೆ ಆಕೆಯೂ ನನ್ನಹಾಗೆ ಒಂದು ಹೆಣ್ಣು, ಅವರದೂ ಒಂದು ಸುಂದರ ಸಂಸಾರ. ಆ ಸಂಸಾರವನ್ನು ನಾನು ಒಡೆಯುವುದು ಬೇಡ ಎಂದು ತೀರ್ಮಾನಿಸಿ ರಾಜ್‌ಕುಮಾರ್ ಅವರ ಜೊತೆ ನನ್ನ ಸಂಬಂಧ ಕಡಿದುಕೊಂಡೆ" ಎನ್ನುವ ಮೂಲಕ ಉದಾರತೆ ಮೆರೆದಿದ್ದರು ಲೀಲಾವತಮ್ಮನವರು.

ಜುಲೈ 12, 1962 ಶಿವರಾಜ್‌ಕುಮಾರ್ ಅವರ ಜನ್ಮದಿನ. ಜುಲೈ 5, 1967 ವಿನೋದ್‌ರಾಜ್‌ರವರ ಜನ್ಮದಿನ. ಇವರಿಬ್ಬರ ನಡುವಿನ ವಯಸ್ಸಿನ ಅಂತರ ಬರೋಬರೀ ಐದು ವರ್ಷಗಳು. "ನಮ್ಮ ಸಂಬಂಧ ಕಡಿದು ಎರಡು-ಮೂರು ವರ್ಷಗಳಾದಮೇಲೆ ಆ ಮಗು ಹುಟ್ಟಿತು" ಎಂದು ರಾಜ್‌ಕುಮಾರ್ ಹೇಳಿದರೆ, "ಶಿವರಾಜ್‌ಕುಮರ್‌ರವರಿಗೆ ಪಾರ್ವತಮ್ಮನವರು ಗರ್ಭಿಣಿ ಎಂದು ಗೊತ್ತಾಗುತ್ತಿದ್ದ ಹಾಗೆ ನಾನು ಸಂಬಂಧ ಕಡಿದುಕೊಂಡೆ" ಎಂದು ಲೀಲಾವತಮ್ಮನವರು ಹೇಳಿದ್ದಾರೆ. ಅಷ್ಟರಲ್ಲಾಗಲೇ ಲೀಲಾವತಿಯವರೂ ಗರ್ಭಿಣಿಯಾಗಿದ್ದರು ಎಂದು ಭಾವಿಸಿದರೂ ಆ ಮಗು ಶಿವರಾಜ್‌ಕುಮಾರ್ ಅವರ ವಾರಗೆಯದಾಗಿರಬೇಕಿತ್ತು. ಅದುಬಿಟ್ಟು ಐದು ವರ್ಷಗಳ ನಂತರ ಹುಟ್ಟಿದ ವಿನೋದ್‌ರಾಜರನ್ನು ರಾಜ್‌ಕುಮಾರ್ ಅವರ ಮಗ ಎಂದು ಸುಳ್ಳು ಹೇಳುತ್ತಿದ್ದಾರೆ ಲೀಲಾವತಮ್ಮನವರು. ನಿಜ ಹೇಳಿ ಅಮ್ಮ, ರಾಜ್‌ಕುಮಾರ್‌ರ ಆ ಮಗುವನ್ನು ನೀವು ಏನು ಮಾಡಿದ್ದೀರಿ?


1972ರಲ್ಲಿ 'ಸಿಪಾಯಿರಾಮು', 1974ರಲ್ಲಿ 'ಭಕ್ತ ಕುಂಬಾರ' ಈ ಎರಡೂ ಚಿತ್ರಗಳಲ್ಲಿ ರಾಜ್‌ಕುಮಾರ್-ಲೀಲಾವತಿಯವರು ಗಂಡ-ಹೆಂಡತಿಯರಾಗಿ ಅಭಿನಯಿಸುತ್ತಾರೆ. ಆ ವೇಳೆಗೆ ಕ್ರಮವಾಗಿ ವಿನೋದ್‌ರಾಜ್ ಅವರಿಗೆ 7 ಮತ್ತು ಶಿವರಾಜ್‌ಕುಮಾರ್ ಅವರಿಗೆ 12 ವರ್ಷಗಳಾಗಿರುತ್ತದೆ. ಇಪ್ಪತ್ತನೇ ಶತಮಾನದ 60-70ರ ದಶಕದ ಭಾರತೀಯ ಸಂದರ್ಭದಲ್ಲಿ ಗಂಡನಿಲ್ಲದೆ ಮಗುವನ್ನು ಪಡೆದ ಒಬ್ಬಳು ತಾಯಿ, ಸಾಮಾಜಿಕವಾಗಿ ಆ ಮಗು ನನ್ನದು ಎಂದು ಹೇಳಿಕೊಳ್ಳದ ಒಬ್ಬ ನಿರ್ದಯಿ ತಂದೆ ಮುಖಾಮುಖಿಯಾಗಲು, ಒಟ್ಟೊಟ್ಟಿಗೆ ಅಭಿನಯಿಸಲು ಸಾಧ್ಯವೇ? ಆ ನಂತರವೂ ಹಲವಾರು ರಾಜ್‌ಕುಮಾರ್ ಚಿತ್ರಗಳಲ್ಲಿ ಲೀಲಾವತಿಯವರು ಪೋಷಕ ಪಾತ್ರಗಳಲ್ಲಿ ('ನಾ ನಿನ್ನ ಮರೆಯಲಾರೆ', 'ಎರಡು ನಕ್ಷತ್ರಗಳು', 'ಜ್ವಾಲಾಮುಖಿ', 'ಶ್ರಾವಣ ಬಂತು' ಮುಂತಾದ ಚಿತ್ರಗಳಲ್ಲಿ) ಅಭಿನಯಿಸಿದ್ದಾರೆ. ಆವಾಗ ಎಲ್ಲೂ ಈ ವಿಷಯ ಪ್ರಸ್ತಾಪವೇ ಆಗುವುದಿಲ್ಲ, 1987ರಲ್ಲಿ, ಅಂದರೆ ವಿನೋದ್‌ರಾಜ್‌ಗೆ 20 ವರ್ಷಗಳು ತುಂಬಿ ಅವರು ನಾಯಕನಾಗಿ ಅಭಿನಯಿಸಿದ 'ಡ್ಯಾನ್ಸ್ ರಾಜಾ ಡ್ಯಾನ್ಸ್' ಸಿನಿಮಾ ಬಿಡುಗಡೆಯಾಗುವ ಸಂದರ್ಭದಲ್ಲಿ, ಆ ಚಿತ್ರದ ನಿರ್ಮಾಪಕರಾದ ದ್ವಾರಕೀಶ್‌ರವರು ಆ ಚಿತ್ರದ ಪ್ರಮೋಶನ್‌ನ ಒಂದು ಭಾಗವಾಗಿ ಈ ಕಟ್ಟುಕಥೆಯನ್ನು ಹೆಣೆಯುತ್ತಾರೆ ಮತ್ತು ಅದನ್ನು ಕರ್ನಾಟಕದ ತುಂಬ ಯಶಸ್ವಿಯಾಗಿ ಪ್ರಚಾರಪಡಿಸುತ್ತಾರೆ. ಇದಾದ ತರುವಾಯ ಈ ಅಂಶವನ್ನೇ ಬಂಡವಾಳ ಮಾಡಿಕೊಂಡ ಲೀಲಾವತಮ್ಮನವರು 'ಕ್ಯಾಪ್ಟನ್', 'ನಂಜುಂಡ', 'ರಾಜಣ್ಣ' ಮುಂತಾದ ಚಿತ್ರಗಳಲ್ಲಿ ವಿನೋದ್‌ರಾಜ್, ರಾಜ್‌ಕುಮಾರರ ಮಗ, ಆದರೆ ಅವರು ತನ್ನ ಮಗನನ್ನು ತಿರಸ್ಕರಿಸಿ ಅವನಿಗೆ ಅನ್ಯಾಯ ಮಾಡಿಬಿಟ್ಟರು ಎನ್ನುವ ಅರ್ಥ ಬರುವ ಹಾಗೆ ಚಿತ್ರಕಥೆಗಳನ್ನು ಬರೆಸಿ ಕರ್ನಾಟಕ ಜನತೆಯ ಕರುಣೆಯನ್ನು ಸಂಪಾದಿಸಲೆತ್ನಿಸಿ ಆ ಮೂಲಕ ತಮ್ಮ ಚಿತ್ರಗಳನ್ನು ಗೆಲ್ಲಿಸಿಕೊಳ್ಳುವ ಪ್ರಯತ್ನವನ್ನು ಮಾಡಿದರು. ಇದರ ಮುಂದುವರಿದ ಭಾಗವೆನ್ನುವಂತೆ ರಾಜ್‌ಕುಮಾರ್‌ರವರು ನಿಧನರಾದ ದಿನ ಅಮ್ಮ-ಮಗ ಇಬ್ಬರೂ ತಲೆಬೋಳಿಸಿಕೊಂಡು ಪ್ರತ್ಯಕ್ಷರಾದರು. ಆ ತರುವಾಯ ಹಲವಾರು ವೇದಿಕೆಗಳಲ್ಲಿ, ಟಿ.ವಿ.ಕಾರ್ಯಕ್ರಮಗಳಲ್ಲಿ ರಾಜ್‌ಕುಮಾರ್‌ರವರು ತನಗೂ, ತನ್ನ ಮಗನಿಗೂ ಅನ್ಯಾಯ ಮಾಡಿದರು ಎನ್ನುವ ವಿಷಯವನ್ನು ಮತ್ತೇ ಮತ್ತೇ ಹೇಳಿದರೂ ನೇರವಾಗಿ "ರಾಜ್‌ಕುಮಾರ್" ಎನ್ನುವ ಹೆಸರನ್ನು ಮಾತ್ರ ಎಲ್ಲೂ ಹೇಳುವ ಧೈರ್ಯ ಮಾಡಿರಲೇ ಇಲ್ಲಾ. ಆದರೆ ರಾಜ್‌ಕುಮಾರರವರು ನಿಧನರಾಗಿ ಹತ್ತು ವರ್ಷಗಳು ಕಳೆದಮೇಲೆ ಆ 'ಕಟ್ಟು' ಕಥೆಗೆ ಅಧಿಕೃತ ಮುದ್ರೆ ಒತ್ತಿ ಕರ್ನಾಟಕ ಸಾರ್ವಭೌಮನನ್ನು ಖಳನಾಯಕನನ್ನಾಗಿಸುವ ವ್ಯರ್ಥ ಪ್ರಯತ್ನವನ್ನೇಕೆ ಮಾಡುತ್ತಿದ್ದೀರಿ ಅಮ್ಮ?

ಪುಸ್ತಕದ ಮೂಲಕ ನೀವು ಹೇಳುತ್ತಿರುವ ಅರ್ಧಸತ್ಯಕ್ಕೆ ರಾಜ್‌ಕುಮಾರ್ ಅವರು ನನಗೆ ಹೇಳಿದ್ದ ಇನ್ನರ್ಧ ಸತ್ಯವನ್ನು ಹೇಳಲೇಬೇಕಾದ ಸಂದರ್ಭವನ್ನು ನೀವು ಸೃಷ್ಟಿಸಿದ್ದರಿಂದ ನಾನೂ ಸಹ ಹೇಳಲೇಬೇಕಾಗಿದೆ, ಹೇಳಿದ್ದೇನೆ. ಈ ಎರಡೂ ಅರ್ಧ ಸತ್ಯಗಳ ನಡುವಿನ ನಿಜದ ಸತ್ಯವನ್ನು ಸಹೃದಯ ಓದುಗರ ವಿವೇಚನೆಗೆ ಬಿಟ್ಟು ನಾನು ಮಾಡಲೇಬೇಕಾಗಿದ್ದ ಕೆಲಸವೊಂದನ್ನು ಮಾಡಿಮುಗಿಸಿದ್ದೇನೆ, ಧನ್ಯವಾದಗಳು.


■ ಪ್ರಕಾಶರಾಜ್ ಮೇಹು

ಮಿಸ್ಸಿಂಗ್ ರಿಪೋರ್ಟ್

(ಅಫ್ಶಾ ಶಾಹಿದ್ ಅಲಿಗಾಗಿ)



ಮೊದಲು ನಮ್ಮ ಮಗನಿಗಾಗಿ ಹುಡುಕಾಡಿದೆವು.
ಹದಿನೇಳು ವಸಂತಗಳನು ಕಂಡವನು.
ಐದೂವರೆ ಅಡಿ. ಗಡ್ಡಮೂಡಿರಲಿಲ್ಲ ಇನ್ನೂ.
ಬಲಗೈಯಲ್ಲಿ ಅರ್ಧ ಗಂಟೆ
ತಡವಾಗಿ ನಡೆಯುವ ವಾಚು.
ಬೆರಳಲ್ಲಿ ಗುಂಡು ಬೆಸೆದ ಉಂಗುರ.
ಕಾಮಾಚಿ ಸ್ಪೋರ್ಟ್ ಶೂ. ಕಪ್ಪು ಬಿಳುಪು.
ಆಮೇಲೆ ನಾವು ದೇಹಕ್ಕಾಗಿ ಹುಡುಕಾಡಿದೆವು.
ಶ್ರೀನಗರ ಟೈಮ್ಸ್‌ನ ಮುಖಪುಟದಲ್ಲಿ
ರೇಡಿಯೋ ಕಾಶ್ಮೀರದ
ಸಂಜೆಯ ಪ್ರಕಟಣೆಗಳಲ್ಲಿ,
ಜೀಲಂ ನದಿ ದಡದಲ್ಲಿ,
ರಾಷ್ಟ್ರೀಯ ಹೆದ್ದಾರಿಯಾಚೆ ಈಚೆ
ಇರುವ ನಿರ್ಜನ ಭೂಪ್ರದೇಶದಲ್ಲಿ,
ಇರುಳಿನ ಹಿಮದಲ್ಲಿ ತೇಲಿಬಿಟ್ಟ
ಮುಂಜಾವಿನ ಹೊತ್ತು
ಚಹಾದಂಗಡಿಯಲ್ಲಿ ಸಿಗುವ
ಗಾಳಿಸುದ್ದಿಯಲ್ಲೂ,
ಆ ಬಳಿಕ ದೇಹದ ಭಾಗಗಳಿಗೆ
ಹುಡುಕಲಾರಂಭಿಸಿದೆವು.
ಮುರಿದ ಕೈ
ಇಲ್ಲಾ ಬೆರಳಿಲ್ಲದ ಕಾಲು
ಅಥವಾ ಮೂಗಿಲ್ಲದ ಮೊಗ
ಹೀಗೆ.
ಈಗ ಕಾಯುತ್ತಿದ್ದೇವೆ
ಡಿ.ಎನ್.ಎ. ಸ್ಯಾಂಪಲ್ಲಿಗಾಗಿ
ಕೂದಲ ಎಳೆ. ಮೂಳೆಯ ಚೂರು.
ಇಲ್ಲಾ ಕಲ್ಲ ಮೇಲೆ ಚಿಮ್ಮಿದ ರಕ್ತದ ಹನಿ.
ಅಫ್ಶಾ, ನೀನು ನಿನ್ನಮ್ಮನ
ಶಾಹಿದ್, ಅರಬಿಯಲ್ಲಿ ಸಾಕ್ಷಿ.
ನಮ್ಮವನೂ ಆಗುನೀ. ನಮ್ಮ ಸಾಕ್ಷಿಯಾಗುನೀ
ಒಂದುವೇಳೆ ಪೊಲೀಸರು ಕೇಳಿದರೆ
ಕಳೆದುಹೋದ ಮಿಸ್ಸಿಂಗ್ ರಿಪೋರ್ಟನ್ನು.




■ ಬಸಂತ್ ರಥ್

ಕನ್ನಡಾನುವಾದ:
ಸಂವರ್ತ 'ಸಾಹಿಲ್'

ಮಾತಂಗ ಸಾಹಿತ್ಯ ಪರಿಷತ್ತು

ಜಾತಿಯ ಹೆಸರಿನಲ್ಲಿ ಸಾಹಿತ್ಯದ ಕೇರೀಕರಣ



ಮಾದಿಗ ಜನಾಂಗದ ಹೊಸ ತಲೆಮಾರಿನ ಲೇಖಕರಿಗೆ ಸೂಕ್ತ ಸಾಹಿತ್ಯ ವೇದಿಕೆಗಳಿಲ್ಲದೆ ಅವರಿಗೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು ಅವಕಾಶಗಳು ಸಿಕ್ಕುತ್ತಿಲ್ಲ ಎಂಬ ಅಭಿಪ್ರಾಯದೊಂದಿಗೆ 'ಮಾತಂಗ ಸಾಹಿತ್ಯ ಪರಿಷತ್ತು' ಎಂಬ ಹೊಸ ಸಂಸ್ಥೆಯೊಂದು ಇತ್ತೀಚೆಗಷ್ಟೇ ಹುಟ್ಟಿಕೊಂಡಿದೆ. ದಲಿತ ಸಂಘರ್ಷ ಸಮಿತಿಯು ವಿಘಟನೆಗೊಂಡು ದಲಿತ ಸಂವೇದನೆ ಮತ್ತು ಚಳವಳಿಗಳನ್ನು ಜಾತಿಪತ್ರದ ಗುರುತಿಗೆ ತಂದು ನಿಲ್ಲಿಸಿರುವ ಕುರೂಪ ನಡಿಗೆಯ ಫಲಿತವೆಂಬಂತೆ ಬಲಪಂಥೀಯ ರಾಜಕೀಯ ಧೋರಣೆ ಇರುವ ಮಾದಿಗ ಸಾಹಿತಿಗಳಾದ ಪ್ರೊ.ಎ.ಕೆ.ಹಂಪಣ್ಣ ಕುವೆಂಪು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಡಾ.ಶಿವಾನಂದ ಕೆಳಗಿನಮನಿ, ಮೈಸೂರು ವಿಶ್ವವಿದ್ಯಾಲಯದ ಬಾಬೂ ಜಗಜೀವನರಾಂ ಅಧ್ಯಯನ ಕೇಂದ್ರದ ಸಂಶೋಧನಾಧಿಕಾರಿ ಡಾ.ಎಂ.ಶ್ರೀನಿವಾಸಮೂರ್ತಿ ಹಾಗೂ ಕೆಲವು ಎನ್.ಜಿ.ಓ ಏಜೆಂಟ್ ಸಿ.ಎಸ್.ಪಾರ್ಥ ಸಾರಥಿ ಮುಂತಾದವರು ಮಾದಿಗ ಲೇಖಕರಿಗಾಗಿಯೇ ಒಂದು ಪ್ರತ್ಯೇಕ ವೇದಿಕೆಯನ್ನಾಗಿ ಮಾತಂಗ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದ್ದಾರೆ.

2016ರ ಅಕ್ಟೋಬರ್ 23ರಂದು ಚಿತ್ರದುರ್ಗ ನಗರದಲ್ಲಿ ಜಿಲ್ಲಾ ಘಟಕವನ್ನು ಉದ್ಘಾಟನೆ ಮಾಡಿದ್ದು ಸದ್ಯದಲ್ಲಿಯೇ ರಾಜ್ಯ ಘಟಕವನ್ನು ರೂಪಿಸಿ ಉದ್ಘಾಟಿಸುವ ಸನ್ನಾಹ ನಡೆದಿದೆ. ರಾಜ್ಯ ಘಟಕವನ್ನು ಪೂರ್ಣಪ್ರಮಾಣದಲ್ಲಿ ಈವರೆಗೂ ಸ್ಥಾಪಿಸದಿರುವ ಮಾತಂಗ ಸಾಹಿತ್ಯ ಪರಿಷತ್, ತನ್ನ ರಾಜ್ಯ ಘಟಕದ ಅಧಿಕೃತ ಉದ್ಘಾಟನೆಗೂ ಪೂರ್ವದಲ್ಲಿಯೇ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಪರಿಶಿಷ್ಟ ಜಾತಿ ವಿಶೇಷ ಘಟಕ ಯೋಜನೆಯ ಮುಕ್ಕಾಲು ಲಕ್ಷ ರೂಪಾಯಿಗಳ ಅನುದಾನ ಪಡೆದು ಚಿತ್ರದುರ್ಗ ನಗರದ ಮಯೂರಿ ಯಾತ್ರಿನಿವಾಸ ಸಭಾಂಗಣದಲ್ಲಿ **18-03-2016** ಹಾಗೂ **19-03-2016** ಎರಡು ದಿನಗಳ ರಾಜ್ಯ ಮಟ್ಟದ ಕಾವ್ಯ ಕಮ್ಮಟವನ್ನು ನಡೆಸಿರುತ್ತದೆ ಹಾಗೂ ಬಾಗಲಕೋಟೆ, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಜಿಲ್ಲಾ ಘಟಕಗಳನ್ನು ರೂಪಿಸಿರುವ ಇದರ ರೂವಾರಿಗಳು, ಈಗ ರಾಜ್ಯಾದ್ಯಂತ ಪರಿಷತ್ತಿನ ಅಂಗಡಿ ಮಳಿಗೆಗಳನ್ನು ತೆರೆಯಲು ಪ್ರಯತ್ನ ನಡೆಸಿದ್ದಾರೆ.

ಮಾತಂಗ ಎಂಬ ಶಬ್ದವೇ ಮಾದಿಗ ಎಂಬ ಅರ್ಥವನ್ನು ಸೂಚಿಸುತ್ತದೆ. ಕನ್ನಡ ಸಾಹಿತ್ಯ ಲೋಕದಲ್ಲಿ ದಲಿತ ಎಂಬ ಪದಕ್ಕೆ ಎಲ್ಲಾ ಕೆಳಜಾತಿಗಳನ್ನು ಮತ್ತು ಎಲ್ಲಾ ಸಾಮಾಜಿಕ ವಲಯಗಳಲ್ಲಿರುವ ಶೋಷಿತರನ್ನು ಒಳಗೊಳ್ಳುವ ವಿಶಾಲ ಅರ್ಥವ್ಯಾಪ್ತಿ ಇದೆ. ಮಾತಂಗ ಎಂಬುದು ಹೀಗೆ ಎಲ್ಲಾ ತಬ್ಬಲಿ ಜಾತಿಗಳನ್ನು ಮತ್ತು ಬೆಂದ ಮನಸ್ಸುಗಳನ್ನು ಒಳಗೊಳ್ಳುವ ಸಾಂಸ್ಕೃತಿಕ ಅರ್ಥವ್ಯಾಪ್ತಿಯನ್ನು ಪಡೆದುಕೊಂಡಿಲ್ಲ. ಅಷ್ಟರಮಟ್ಟಿಗೆ ಅರ್ಥವ್ಯಾಪ್ತಿಯನ್ನು ಕುಗ್ಗಿಸಲಾಗಿದೆ. ಮಾತಂಗ ಎಂಬುದು ಆದಿಜಾಂಬವ ಪರಂಪರೆಯ ಅರ್ವಾಚೀನ ದಾರ್ಶನಿಕನ ಹೆಸರಾಗಿ ಮಾದಿಗರನ್ನು ಈಗಲೂ ಜಾತಿಕೇಂದ್ರದಲ್ಲಿಯೇ ಮಾತಂಗ ಬ್ರಾಹ್ಮಣರು ಅಥವಾ ಮಾತಂಗಿ ಮಕ್ಕಳು ಎಂದು ಕರೆದುಕೊಳ್ಳುವ ಹೆಮ್ಮೆಯ ಹೆಸರಾಗಿದೆ. ಮಾತಂಗ ಸಾಹಿತ್ಯ ಪರಿಷತ್ತು ಎಂದು ಮಾತಂಗಮುನಿಯ ಹೆಸರಿನಲ್ಲಿ ಸಾಹಿತ್ಯ ಸಂಸ್ಥೆಯನ್ನು ಕರೆದುಕೊಳ್ಳುವುದು ಮಾದಿಗರು ಹೆಮ್ಮೆಯ ಸಂಗತಿಯೆಂದೇ ಭಾವಿಸಿದ್ದಾರೆ. ಮಾತಂಗ ಸಾಹಿತ್ಯ ಪರಿಷತ್ತು ಎಂದರೆ ನೇರವಾಗಿ ಮಾದಿಗ ಸಾಹಿತ್ಯ ಪರಿಷತ್ತು ಎಂದಾಯಿತು. ದಲಿತ ಅಸ್ಮಿತೆಗೆ ಬಹಳ ಡೇಂಜರಸ್ ಆಗಿ ಪರಿಣಮಿಸುವ ಬಲಪಂಥೀಯ ರಾಷ್ಟ್ರೋತ್ಥಾನ ಸಾಹಿತ್ಯ ಕೃತಿಗಳನ್ನು ಮತ್ತು ಚಿಂತನೆಗಳನ್ನು ಬಿತ್ತರಿಸುತ್ತಿರುವ ಕೆಲವು ಮಾದಿಗರು ಮಾದಿಗರಿಗಾಗಿಯೇ ಸಾಹಿತ್ಯ ಪರಿಷತ್ ಹುಟ್ಟುಹಾಕಿ ಅದರ ಶಾಖೆಗಳನ್ನು ಕರ್ನಾಟಕಾದ್ಯಂತ ಕಟ್ಟುವ ಉಮೇದಿನಲ್ಲಿದ್ದಾರೆ. ಎಲ್ಲಾ ತಳಸ್ತರ ಸಾಮಾಜಿಕ ವಲಯಗಳ ಸಾಹಿತಿಗಳಿಗೆಂದೇ ವೇದಿಕೆ ಕಲ್ಪಿಸುವ ದೃಷ್ಟಿಯಿಂದ ಸ್ಥಾಪಿಸಲಾಗಿರುವ ದಲಿತ ಸಾಹಿತ್ಯ ಪರಿಷತ್ ಅಸ್ತಿತ್ವದಲ್ಲಿರುವಾಗಲೇ ಕೇವಲ ಮಾದಿಗ ಜನಾಂಗದ ಲೇಖಕರಿಗೆ ಮಾತ್ರ ಮಾತಂಗ ಸಾಹಿತ್ಯ ಪರಿಷತ್ತಿನ ಸ್ಥಾಪನೆಯ ಅಗತ್ಯವಾದರೂ ಏನು? ಎಂಬ ಪ್ರಶ್ನೆಯೊಂದು ಸಹಜವಾಗಿ ಮೂಡುತ್ತದೆ. ಅಂತೆಯೇ ಮಾತಂಗ - ಕನಕದಾಸ - ಬಸವಣ್ಣ - ಕುವೆಂಪು ಮುಂತಾದ ದಾರ್ಶನಿಕ ಪ್ರತಿಭೆಗಳನ್ನು ಜಾತಿ ಗುರುತುಗಳಿಗೆ ನಿರ್ದಿಷ್ಟಪಡಿಸಿ ಜಾತಿಯ ಹೆಸರೇಳಿಕೊಂಡು ಆಯಾ ಜಾತಿಮಂದಿಗರು ಮಾತ್ರ ಸಾಹಿತ್ಯ ಸಂಸ್ಥೆಗಳನ್ನು ಹುಟ್ಟುಹಾಕುವ ಇಂತಹ ನಡಿಗೆಗಳು ಎಷ್ಟರಮಟ್ಟಿಗೆ ಸ್ವೀಕಾರಾರ್ಹ? ಎಂಬ ಪ್ರಶ್ನೆಯೂ ಮೂಡುತ್ತದೆ. ತಳಸ್ತರರು ಜಾತಿಯ ಹೆಸರಿನಲ್ಲಿ ಸಾಹಿತ್ಯದ ಕೇರೀಕರಣ ಮತ್ತು ಅಗ್ರಹಾರೀಕರಣವನ್ನು ಸೃಷ್ಟಿಸಿ ಪರಸ್ಪರ ಮತ್ತಷ್ಟು ಸೀಳಿಕೊಳ್ಳುವುದರ ಹಿಂದಿರುವ ಅಸಲಿ ಕಾರಣವಾದರೂ ಏನು?

ಮೇಲ್ನೋಟಕ್ಕೆ ದಲಿತ ಸಾಹಿತ್ಯ ಪರಿಷತ್ ಕೇವಲ ಹೊಲೆಮಾದಿಗರಿಗೆ ಮಾತ್ರ ಸೀಮಿತವಲ್ಲದ ಸಂಸ್ಥೆಯಾದರೂ ಸಹ ಅದರ ಮೂಲ ಜನಕರು ಹೊಲೆಯ ಜಾತಿಯವರೇ ಆಗಿದ್ದಾರೆ. ದಲಿತ ಸಾಹಿತ್ಯ ಪರಿಷತ್ ರೂಪುಗೊಂಡಾಗಿನಿಂದಲೂ ಬಲಗೈ ಹೊಲೆಯರೇ ಅದರ ಸಾರಥ್ಯವನ್ನು ವಹಿಸಿಕೊಂಡು, ಕೇಂದ್ರ ಘಟಕದಿಂದ ಹಿಡಿದು ಹೋಬಳಿ ಘಟಕಗಳವರೆಗೂ ಶಾಖೆಗಳನ್ನು ತೆರೆದು ಅಲ್ಲೆಲ್ಲಾ ಹೊಲೆಯರದ್ದೇ ಪ್ರಾಬಲ್ಯ ಇರುವಂತೆ ಪದಾಧಿಕಾರಿಗಳನ್ನು ನೇಮಿಸಿ ನೋಡಿಕೊಳ್ಳಲಾಗುತ್ತಿದೆ. ಎರಡು ದಶಕಗಳು ಕಳೆದರೂ ದಲಿತ ಸಾಹಿತ್ಯ ಪರಿಷತ್‌ನ ರಾಜ್ಯಾಧ್ಯಕ್ಷರ ಪದವಿಯಲ್ಲಿ ಒಬ್ಬನೇ ವ್ಯಕ್ತಿ ಪ್ರತಿಷ್ಠಾಪನೆಗೊಂಡು ಮುಂದುವರೆದಿರುವುದು ಅಸಾಂವಿಧಾನಿಕ ಕ್ರಮವಾಗಿದೆ. ದಸಾಪ ರೂಪಿಸುತ್ತಿರುವ ಸಾಹಿತ್ಯ ಕಾರ್ಯಕ್ರಮಗಳಲ್ಲಿಯೂ ಇದೇ ಗೋಳು. ಹೊಲೆಯ ಜಾತಿಯ ಲೇಖಕರಿಗೆ ಹೆಚ್ಚು ಅವಕಾಶ ಕಲ್ಪಿಸಿಕೊಡಲು ಮಮಕಾರ ತೋರಿಸುತ್ತಾ ಮಾದಿಗ ಲೇಖಕರೂ ಸೇರಿದಂತೆ ಇತರೆ ಇನ್ನುಳಿದ ದಲಿತ ಜಾತಿಗಳ ಲೇಖಕರಿಗೆ ಅಷ್ಟಾಗಿ ಅವಕಾಶಗಳನ್ನು ನೀಡದೆ ಉಪೇಕ್ಷಿಸಿಕೊಂಡು ಬರುತ್ತಿರುವುದು ಸುಳ್ಳಲ್ಲ. ಇಂತಹ ಮಮಕಾರ - ತಿರಸ್ಕಾರಗಳಂತಹ ಭೇದನ್ಯಾಯದ ಕ್ರಮಗಳೇ ದಲಿತ-ಬಂಡಾಯ ಸಾಹಿತ್ಯ ಮತ್ತು ಚಳವಳಿಗಳು ಗಟ್ಟಿಗೊಳ್ಳಲು ಕಾರಣವಾಗಿರುವುದನ್ನು ಚರಿತ್ರೆಯಲ್ಲಿ ನಾವು ಮರೆಯುವಂತಿಲ್ಲ.

ದಲಿತ-ಬಂಡಾಯ ಚಳವಳಿಗೆ ಜನ್ಮ ನೀಡಿದ್ದೇ ಸಾಹಿತ್ಯ. ಎಂ. ಗೋಪಾಲಕೃಷ್ಣ ಅಡಿಗರ ಅಧ್ಯಕ್ಷತೆಯಲ್ಲಿ **1979**ರಲ್ಲಿ ಧರ್ಮಸ್ಥಳದಲ್ಲಿ ನಡೆದ **51**ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಚೆನ್ನಣ್ಣ ವಾಲೀಕಾರ ಅವರು ದಲಿತ ಸಾಹಿತ್ಯದ ಪ್ರತ್ಯೇಕ ಗೋಷ್ಠಿಯ ಅವಕಾಶಕ್ಕಾಗಿ ಕೇಳಿ, ನಿರಾಕರಣೆಗೊಳಗಾದ ನಂತರ ದಲಿತ-ಬಂಡಾಯ ಸಾಹಿತ್ಯ ಚಳವಳಿ ತೀವ್ರವಾಗಿ ಅರಳುಗಟ್ಟಿಕೊಂಡದ್ದು ಈಗ ಇತಿಹಾಸ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಬಹುತೇಕ ಮೇಲ್ವರ್ಗದ ಸಾಹಿತಿಗಳೇ ಅವಕಾಶ ಪಡೆಯುತ್ತಾ ತಮ್ಮದೇ ಯಜಮಾನತ್ವವಾದೀ ಸಾಹಿತ್ಯವನ್ನು ಪ್ರಚಾರ ಮಾಡುತ್ತಿದ್ದುದನ್ನು ಕಣ್ತೆರೆದು ನೋಡಿದ ದಲಿತ ಬರಹಗಾರರು ತಮ್ಮ ಹಟ್ಟಿಕೇರಿಗಳ ತಾಜಾ ಅನುಭವಗಳನ್ನು ದಾಖಲಿಸಿ ಮುಖ್ಯವಾಹಿನಿಯ ಲೇಖಕರಲ್ಲಿ ತಲ್ಲಣ ಉಂಟುಮಾಡಿದರು. ಗ್ರಾಮೀಣ ಲೋಕದ ದಲಿತ ಬದುಕಿನ ಅನನ್ಯ ಸಾಂಸ್ಕೃತಿಕ ನೇಯ್ಗೆಗಳು ಎಳೆಎಳೆಯಾಗಿ ಸಾಹಿತ್ಯ ಕೃತಿಗಳ ಮೂಲಕ ಅನಾವರಣಗೊಂಡವು. **1979**ರಲ್ಲಿ ಹುಟ್ಟಿದ ಬಂಡಾಯ ಸಾಹಿತ್ಯ ಚಳವಳಿಯನ್ನು ರೂಪಿಸುವಲ್ಲಿ ದಲಿತ ಲೇಖಕರು ವಹಿಸಿದ ಪಾತ್ರ ಬಹಳ ದೊಡ್ಡದು. ಆದರೆ ಬರಬರುತ್ತಾ ಬಂಡಾಯ ಸಾಹಿತ್ಯ ಪರಿಷತ್, ಕನ್ನಡ ಸಾಹಿತ್ಯ ಪರಿಷತ್ ಮುಂತಾದ ಅನೇಕ ಸಾಹಿತ್ಯ ಸಂಸ್ಥೆಗಳಲ್ಲಿ ದಲಿತ ಲೇಖಕರಿಗೆ ಅಷ್ಟಾಗಿ ಅವಕಾಶಗಳನ್ನು ನೀಡದೆ ಮೇಲ್ವರ್ಗದ ಸಾಹಿತಿಗಳ ಸಾಹಿತ್ಯವನ್ನಷ್ಟೇ ಮುತುವರ್ಜಿಯಿಂದ ಪ್ರಚಾರ ಮಾಡುವ ಧೋರಣೆಯನ್ನು ವಿರೋಧಿಸಿ ದಲಿತ ಸಾಹಿತ್ಯ ಪರಿಷತ್ತನ್ನು ರೂಪಿಸಲಾಯಿತು. ಈಗ ದಲಿತ ಸಾಹಿತ್ಯ ಪರಿಷತ್‌ನ ಸಾಹಿತ್ಯ ವೇದಿಕೆಗಳಲ್ಲಿ ಮಾದಿಗ ಲೇಖಕರಿಗೆ ಅವಕಾಶ ನೀಡಲಾಗುತ್ತಿಲ್ಲವೆಂಬ ಧೋರಣೆಯಿಂದ ಮಾತಂಗ ಸಾಹಿತ್ಯ ಪರಿಷತ್ತನ್ನು ರೂಪಿಸಲಾಗಿದೆ. ದಲಿತ ಸಾಹಿತ್ಯ ಪರಿಷತ್‌ಗೆ ಮಾತಂಗ ಸಾಹಿತ್ಯ ಪರಿಷತ್ ಯಾವ ರೀತಿಯಿಂದಲೂ ಪ್ರತಿಸ್ಪರ್ಧಿಯಲ್ಲ ಮತ್ತು ಪರ್ಯಾಯವೂ ಅಲ್ಲ ಎಂದು ಬಾಯುಪಚಾರಕ್ಕೆ ಹೇಳುತ್ತಿರುವವರಾದರೂ ಇದು ಜಾತಿವ್ಯಸನದ ಹುಟ್ಟುವಳಿ ಎಂಬುದನ್ನು ಯಾರೂ ನಿರಾಕರಿಸಲಾರರು.

"ಬ್ರಾಹ್ಮಣರು ತಮಗೆಂದೇ 'ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್' ಕಟ್ಟಿಕೊಂಡಿದ್ದಾರೆ. ಲಿಂಗಾಯತರು ತಮಗೆಂದೇ ವಚನ ಸಾಹಿತ್ಯ ಪರಿಷತ್ ಕಟ್ಟಿಕೊಂಡಿದ್ದಾರೆ; ಇದು ತಪ್ಪಲ್ಲವೇ?" ಎಂದು ಯಾರೇ ಪ್ರಶ್ನಿಸಬಹುದು. ಬ್ರಾಹ್ಮಣರ ಮಾತು ಪಕ್ಕಕ್ಕಿರಲಿ, ಅವರು ಎಂದಿಗೂ ತಮ್ಮದೇ ಬ್ರಾಹ್ಮಣ ಸಾಹಿತಿಗಳ ಸಾಹಿತ್ಯವನ್ನು ಮಾತ್ರ ನಿಜವಾದ ಸಾಹಿತ್ಯವೆಂದು ತಿಳಿದು ಮಿಕ್ಕೆಲ್ಲರನ್ನೂ ಚರಿತ್ರೆಯಿಂದಲೂ ಹೊರಗಿಟ್ಟಿದ್ದಾರೆ, ಪ್ರತ್ಯೇಕವಾಗಿಯೇ ಇರಿಸಿದ್ದಾರೆ. ಆದರೆ ವಚನ ಸಾಹಿತ್ಯ ಹಾಗಲ್ಲ, ಬಸವಣ್ಣನವರು ರೂಪಿಸಿದ ವಚನ ಚಳವಳಿಯು ಮೂಲದಲ್ಲಿ ತಳಸ್ತರ ಜಾತಿಗಳ ಮೂಲದ ಮಾದಾರ ಚೆನ್ನಯ್ಯ, ಮಾದಾರ ಧೂಳಯ್ಯ, ಮಡಿವಾಳ ಮಾಚಯ್ಯ, ಕುಂಬಾರ ಗುಂಡಯ್ಯ, ಸಮಗಾರ ಭೀಮವ್ವ, ಅಂಬಿಗರ ಚೌಡಯ್ಯ, ಉರಿಲಿಂಗ ಪೆದ್ದಿ, ಕಾಳವ್ವೆ, ಸೂಳೆ ಸಂಕವ್ವೆ, ಅಕ್ಕಮಹಾದೇವಿ ಮುಂತಾದ ವಚನಕಾರರಿಂದ ರೂಪಿಸಲ್ಪಟ್ಟದ್ದು. ಲಿಂಗಾಯತ ಧರ್ಮವು ಸಾಂಸ್ಥೀಕರಣಗೊಂಡು ಜಾತಿಯಾಗಿ ಹಿಂದೂ ಧರ್ಮದಲ್ಲಿ ಗುರುತಿಸಿಕೊಂಡಿತು. ಬ್ರಾಹ್ಮಣರನ್ನು ಮೀರಿಸುವಷ್ಟು ಬ್ರಾಹ್ಮಣ್ಯವನ್ನು ಅಳವಡಿಸಿಕೊಂಡು ಲಿಂಗಿಬ್ರಾಹ್ಮಣರೆನ್ನಿಸಿಕೊಂಡು, ವಚನ ಸಾಹಿತ್ಯ ಪರಿಷತ್ತನ್ನು ರೂಪಿಸಿಕೊಂಡ ಈಗಿನ ಲಿಂಗಾಯತರು ಬಸವಣ್ಣನ ಯಾವ ಜಾತ್ಯತೀತ ತತ್ವಗಳನ್ನೂ ಉಸಿರಾಡಲು ಸಾಧ್ಯವಾಗದೆ ಕೇವಲ ಕಣ್ಣೊರೆಸುವ ತಂತ್ರವಾಗಿ ಅನೇಕ ಜಾತಿಗಳ ಬಸವಪ್ರೇಮಿಗಳನ್ನು ತಮ್ಮ ಜತೆ ಸೇರಿಸಿಕೊಂಡು ವಚನಗಾಯನ ಸ್ಪರ್ಧೆ, ವಚನ ಸಾಹಿತ್ಯ ಪ್ರಬಂಧ ಸ್ಪರ್ಧೆ, ವಚನಕಾರರ ಜಯಂತಿ ಮುಂತಾದ ಮೇಲ್ನೋರೆಯ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಕೇಂದ್ರ ಶಾಖೆಯಿಂದ ಹಿಡಿದು ವಚನ ಸಾಹಿತ್ಯ ಪರಿಷತ್ತಿನ ಎಲ್ಲಾ ಘಟಕಗಳಲ್ಲಿಯೂ ಲಿಂಗಾಯತರ ಪ್ರಬಲ ಪ್ರಾತಿನಿಧೀಕರಣ ಇರುವಂತೆ ನೋಡಿಕೊಳ್ಳುತ್ತಿದ್ದಾರೆ. ವಚನ ಸಾಹಿತ್ಯ ಪರಿಷತ್ತನ್ನು ಲಿಂಗಾಯತರ ಶಕ್ತಿರಾಜಕಾರಣಕ್ಕೆ ಬಲ ತುಂಬಲು ಬಳಸುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಇದೇ ಹಾದಿಯಲ್ಲಿರುವ ಮಾತಂಗ ಸಾಹಿತ್ಯ ಪರಿಷತ್ತು ತನ್ನ ಹುಟ್ಟಿನೊಂದಿಗೇ ಒಳಮೀಸಲಾತಿ ವರ್ಗೀಕರಣ ಹೋರಾಟವನ್ನು ಬೆಂಬಲಿಸುವ ರಾಜಕೀಯ ಒತ್ತಡ ಕೇಂದ್ರವನ್ನಾಗಿ ಪರಿಷತ್ತನ್ನು ರೂಪಿಸುವುದಾಗಿ ಘೋಷಿಸಿಕೊಂಡಿದೆ. ಮಾದಿಗ ದಂಡೋರ ಮತ್ತು ಮಾದಿಗ ರಿಜರ್ವೇಷನ್ ಹೋರಾಟ ಸಮಿತಿಯ ಅಂಗವಾಗಿ ತಾನು ಕೆಲಸ ಮಾಡುವುದಾಗಿ ಸಾರ್ವಜನಿಕವಾಗಿಯೇ ಸ್ಪಷ್ಟಪಡಿಸಿದೆ.

ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ರೂಪಿಸಿದ ವಚನ ಚಳವಳಿಯಾಗಲೀ, ಇಪ್ಪತ್ತನೇ ಶತಮಾನದಲ್ಲಿ ಪ್ರೊ.ಬಿ.ಕೃಷ್ಣಪ್ಪ ಕೋಟಿಗಾನಹಳ್ಳಿ ರಾಮಯ್ಯ ದೇವನೂರ ಮಹಾದೇವ ಮುಂತಾದ ನಾಯಕರು ರೂಪಿಸಿದ ದಲಿತ ಚಳವಳಿಯಾಗಲೀ ತಳಸಮುದಾಯಗಳ ಜನರ ಸಾಂಸ್ಕೃತಿಕ ಮನೋಭೂಮಿಕೆಯನ್ನು ತಲುಪುವ ಮೂಲಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಳವಳಿಗಳೂ ಆಗಿ ರೂಪುಗೊಂಡವು. ಕೇವಲ ಕೆಳಜಾತಿಗಳಿಂದಷ್ಟೇ ಅಲ್ಲದೆ ಶೋಷಿತರ ಪರವಾಗಿ ಚಿಂತಿಸುವ ಎಲ್ಲಾ ಮಾನವಪರ ಚಿಂತಕರನ್ನು ತನ್ನತ್ತ ಸೆಳೆಯಿತು. ಹಾಗಾಗಿ ದಲಿತರಿಗಿಂತಲೂ ದಲಿತೇತರ ಸಾಹಿತಿಗಳು ತಮ್ಮ ಆತ್ಮನಿರೀಕ್ಷಣೆಗಾಗಿ ದಲಿತ ಸಾಹಿತ್ಯವನ್ನು ಹಾಗೂ ದಲಿತ ಸಾಹಿತಿಗಳನ್ನು ಎದೆಗೆ ತೆಗೆದುಕೊಂಡರು. ಈಗಿನ ವಿಘಟಿತ ದಲಿತ ಚಳವಳಿ ಮತ್ತು ದಲಿತ ಸಾಹಿತ್ಯ ಪರಿಷತ್‌ಗಳು ಸಮಸ್ತ ಶೋಷಿತರ ಬಿಡುಗಡೆಯ ಸಾಂಸ್ಕೃತಿಕ ಮನೋಭೂಮಿಕೆಯನ್ನಾಗಲೀ, ಬಲಪಂಥೀಯ ರಾಜಕಾರಣದ ಕಾರ್ಯಸೂಚಿಯನ್ನಾಗಲೀ ಅರ್ಥಮಾಡಿಕೊಳ್ಳುವಲ್ಲಿ ಸೋತಿವೆ. ಬಸವಣ್ಣನವರ ವಚನ ಚಳವಳಿಯ ಹಾಗೂ ದಲಿತ ಚಳವಳಿಯ ಆಶಯಗಳನ್ನು ಇವುಗಳು ಪ್ರತಿನಿಧಿಸಲೇ ಇಲ್ಲ, ದಲಿತರೊಳಗಿನ ಜಾತಿಯ ಮತ್ತು ಉಪಜಾತಿಯ ಪ್ರಭೇದ ಪ್ರಜ್ಞೆಗೆ ಕಟ್ಟುಬಿದ್ದು ಇಂದಿನ ಚಳವಳಿಗಳು ಮತ್ತು ಸಾಹಿತ್ಯ ಸಂಘಟನೆಗಳು ಜಾತಿ ಸಂಘಟನೆಯ ಮಟ್ಟಕ್ಕೆ ಇಳಿದಿವೆ. ಪ್ರತಿಯೊಂದು ಜಾತಿಗಳೂ ತಂತಮ್ಮ ಜಾತಿಗೊಂದರಂತೆ ಸಾಹಿತ್ಯ ಸಂಸ್ಥೆಗಳನ್ನು ಹುಟ್ಟುಹಾಕುತ್ತಾ ಹೋದರೆ ಸಾಹಿತ್ಯ ಸಂಸ್ಥೆಗಳು ಜಾತೀಕರಣಗೊಳ್ಳುತ್ತವೆ. ಆಗಲೂ ಮಾತಂಗ ಸಾಹಿತ್ಯ ಪರಿಷತ್ ಅಸ್ಪೃಶ್ಯ ನೆಲೆಗೇ ಬಂದು ನಿಲ್ಲುತ್ತದೆ.

ತನ್ನ ಹುಟ್ಟಿನ ಪ್ರಾರಂಭಿಕ ಹಂತದಲ್ಲಿಯೇ ಜಾತಿಸಂಘಟನೆಯ ಮಟ್ಟಕ್ಕೆ ಇಳಿದಿರುವ ಮಾತಂಗ ಸಾಹಿತ್ಯ ಪರಿಷತ್ ನೇರಾನೇರ ಮಾದಿಗ ದಂಡೋರ ಮತ್ತು ಮಾದಿಗ ರಿಜರ್ವೇಷನ್ ಹೋರಾಟ ಸಮಿತಿಗಳೊಂದಿಗೆ ಹೊಂದಾಣಿಕೆಯತ್ತ ಸಾಗುತ್ತಿದೆ. ಬುದ್ಧಗುರು - ಬಸವಣ್ಣ - ಅಂಬೇಡ್ಕರ್ - ಕುವೆಂಪು ಅವರ ಬೌದ್ಧಿಕತೆಯಲ್ಲಿನ ಹೊಸ ಆಯಾಮ ಹಾಗೂ ಆಲೋಚನೆಗಳನ್ನು ದಕ್ಕಿಸಿಕೊಳ್ಳುವುದಕ್ಕೆ ಸಾಧ್ಯವಾಗದ ಬೇಜವಾಬ್ದಾರಿಯುತ ಮತ್ತು ಅಷ್ಟೇ ಹೊಣೆಗೇಡಿ ಮನಸ್ಸುಗಳು ಈ ಸಂಸ್ಥೆಯನ್ನು ಹುಟ್ಟುಹಾಕಿವೆ.

ಮಾತಂಗ ಸಾಹಿತ್ಯ ಪರಿಷತ್ತನ್ನು ರೂಪಿಸುವುದರಲ್ಲಿ ಮುಖ್ಯ ಪಾತ್ರವಹಿಸಿರುವ ಪ್ರೊ.ಎ.ಕೆ.ಹಂಪಣ್ಣ ಅವರು ಬಲಪಂಥೀಯ ಆರೆಸ್ಸೆಸ್‌ನೊಂದಿಗೆ ಕೈಜೋಡಿಸಿದವರೇ ಹೊರತು ದಲಿತ ಚಳವಳಿಯೊಂದಿಗೆ ಅವರ ಪಾತ್ರ ಅಷ್ಟಕ್ಕಷ್ಟೇ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿದ್ದಾಗಲೂ ಬಲಪಂಥೀಯ ಸಂಘಪರಿವಾರ ಬೆಂಬಲಿತ ಬಿ.ವಿ.ವಸಂತಕುಮಾರ್, ಪ್ರೊ.ಟಿ.ಲಿಂಗಪ್ಪ ಮುಂತಾದ ಸದಸ್ಯರೊಂದಿಗೆ ಕೈಜೋಡಿಸಿ ನಿಜವಾದ ದಲಿತಪರ ಕಾಳಜಿಗಳುಳ್ಳ ಜನರಿಗೆ ವಿರುದ್ಧವಾಗಿಯೇ ನಡೆದುಕೊಂಡವರು. ಇನ್ನು ಸಾಹಿತ್ಯ ಸೃಜನೆಯಲ್ಲಿಯೂ ಅವರನ್ನು ಈವರೆಗೆ ಯಾರೂ ಗಂಭೀರವಾಗಿ ಪರಿಗಣಿಸಿಲ್ಲ. ವಿಶ್ವೇಶ್ವರ ಹೆಗಡೆ ಕಾಗೇರಿಯವರು ಯಡಿಯೂರಪ್ಪ ನಾಯಕತ್ವದ ಬಿಜೆಪಿ ಸರ್ಕಾರದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾಗಿದ್ದಾಗ ಪ್ರೊ.ಎ.ಕೆ.ಹಂಪಣ್ಣ ಅವರನ್ನು ಶಾಲಾ ಗ್ರಂಥಾಲಯ ಪುಸ್ತಕ ಸಗಟು ಖರೀದಿ ಆಯ್ಕೆ ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಿಸಿದ್ದರು. ಕಾಗೇರಿಯವರ ಋಣಭಾರ ತೀರಿಸಲು ಈ ಹಂಪಣ್ಣ ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ ಪ್ರಕಟಣೆಯ ಪುಸ್ತಕಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿ ಎಳೆಯ ಮಕ್ಕಳ ಮೆದುಳುಗಳಿಗೆ ಕೇಸರಿ ವೈರಸ್ ಇಂಜೆಕ್ಟ್ ಮಾಡಿದವರು. ಶಿಕ್ಷಣ ಕ್ಷೇತ್ರದ ಬೌದ್ಧಿಕ ವಲಯವನ್ನು ಕೇರೀಕರಣಗೊಳಿಸುವ ಸಂಘಪರಿವಾರದ ಕಾರ್ಯಸೂಚಿಯನ್ನು ಈಡೇರಿಸುವಲ್ಲಿ ಹಂಪಣ್ಣನವರ ಪಾತ್ರ ದೊಡ್ಡದಿದೆ. ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ ಪ್ರಕಟಣೆಯ ಪುಸ್ತಕಗಳನ್ನು ಮಾತ್ರವಲ್ಲದೇ ತಮಗೆ ಬೇಕಾದ ಬಲಪಂಥೀಯ ಲೇಖಕರ ಪುಸ್ತಕಗಳನ್ನು ಖರೀದಿಸಿ ಕಮೀಷನ್ ಹಣ ಸಂಪಾದನೆ ಮಾಡಿಕೊಂಡ ಆರೋಪಗಳೂ ಕೇಳಿಬಂದಿವೆ. ಚಿತ್ರದುರ್ಗದಲ್ಲಿ ನಡೆದ ಈ ಕಾವ್ಯಕಮ್ಮಟದ ಖರ್ಚು ಬಾಬತ್ತುಗಳಿಗೆಂದು ಚಿತ್ರದುರ್ಗ ಜಿಲ್ಲಾ ಶಿಕ್ಷಣಾಧಿಕಾರಿಗಳಾದ ರೇವಣಸಿದ್ದಪ್ಪ, ಜಿಲ್ಲಾ ಮಾದಿಗ ನೌಕರರ ಸಂಘದ ಕೆ.ಜಿ.ಜಗದೀಶ್, ಇಂಜಿನಿಯರ್ ಜಿ.ಎಸ್.ಕುಮಾರ್, ನಿವೃತ್ತ ಅಧಿಕಾರಿ ಎಂ.ಮಲ್ಲಯ್ಯ, ಕೆಎಎಸ್ ಅಧಿಕಾರಿ ಬಿ.ಟಿ.ನಂದೀಶ್, ಚಿತ್ರದುರ್ಗ ಉಪವಿಭಾಗಾಧಿಕಾರಿ ತಿಪ್ಪೇಸ್ವಾಮಿ (ಕೆಎಎಸ್), ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಡಾ.ವೆಂಕಟರಾಜು, ತಹಸೀಲ್ದಾರ್ ಮಲ್ಲಿಕಾರ್ಜುನ, ಜಿಲ್ಲಾಧಿಕಾರಿ ಎಂ.ಕೆ.ಶ್ರೀರಂಗಯ್ಯ, ಪೌರಕಾರ್ಮಿಕರ ಒಕ್ಕೂಟದ ಜಿ.ಬಿ.ಸಿ.ಮಂಜುನಾಥ್ ಮುಂತಾದ ನೂರಾರು ಜನರಿಂದ ಲಕ್ಷಾಂತರ ರೂಪಾಯಿಗಳ ಎತ್ತುವಳಿ ಮಾಡಿರುತ್ತಾರೆ. ಇದಾವುದೇ ಲೆಕ್ಕಬುಕ್ಕುಗಳನ್ನು ಪ್ರೊ.ಎ.ಕೆ.ಹಂಪಣ್ಣ ಮತ್ತು ಪಾರ್ಥಸಾರಥಿ ಇವರಿಬ್ಬರೇ ತೆರೆದು ನೋಡುತ್ತಿರುವರೇ ಹೊರತು ಇಲ್ಲಿಯವರೆಗೆ ಯಾರ ಮುಂದೆಯೂ ತೆರೆದು ತೋರಿಸಿರುವುದಿಲ್ಲ.


ಈ ಪರಿಷತ್ತು ರೂಪಿಸುವಲ್ಲಿ ಹಂಪಣ್ಣನವರೊಂದಿಗೆ ಕೈಜೋಡಿಸಿರುವ ಪ್ರಮುಖ ವ್ಯಕ್ತಿಗಳೆಂದರೆ ಪಾರ್ಥಸಾರಥಿ, ಡಾ.ಶಿವಾನಂದ ಕೆಳಗಿನಮನಿ ಹಾಗೂ ಡಾ.ಎಂ.ಶ್ರೀನಿವಾಸಮೂರ್ತಿ. ಪಾರ್ಥಸಾರಥಿ ಹುಲ್ಲು ಕಂಡಲ್ಲಿ ಮೇಯುವ ಹಾಗೂ ನೀರು-ಬುರುಜೆ ಕಂಡಲ್ಲಿ ಮಲಗುವ ಎನ್‌ಜಿಓ ಪೋಷಿತ ಒಬ್ಬ ಸಣ್ಣಮಟ್ಟದ ಸಾಮಾಜಿಕ ಕಾರ್ಯಕರ್ತನೇ ಹೊರತು ಕರ್ನಾಟಕದ ಯಾವುದೇ ಜನಪರ ಚಳವಳಿಗಳಲ್ಲಿ ಪ್ರಮುಖ ಪಾತ್ರ ವಹಿಸಿದವರಲ್ಲ, ಇನ್ನು ಯಾವುದೇ ಜನಪರ ಹೋರಾಟಗಳಲ್ಲಿ ಗುರುತಿಸಿಕೊಳ್ಳದ ಸದಾ ಬಲಪಂಥೀಯ ಧೋರಣೆಗಳನ್ನೇ ಉಸಿರಾಡುವ ಡಾ.ಶಿವಾನಂದ ಕೆಳಗಿನಮನಿ ಅವರೂ ಸಹ ಗಂಭೀರ ಸಾಹಿತಿಯಾಗಿ ಈವರೆಗೆ ಗುರುತಿಸಿಕೊಳ್ಳಲಾಗಿಲ್ಲ. ಮೈಸೂರು ವಿಶ್ವವಿದ್ಯಾಲಯದ ಬಾಬೂ ಜಗಜೀವನರಾಂ ಅಧ್ಯಯನ ಕೇಂದ್ರದ ಡಾ.ಎಂ.ಶ್ರೀನಿವಾಸಮೂರ್ತಿ ಅವರಿಗೆ ಸಂಶೋಧನಾಧಿಕಾರಿ ಎಂಬ ಪಟ್ಟವೊಂದನ್ನು ಹೊರತುಪಡಿಸಿ ಸಾಹಿತ್ಯಕ್ಕೆ ಅವರ ಮಹತ್ವದ ಕೊಡುಗೆ ಯಾವುದೂ ಇಲ್ಲ. ಹಾಗಾಗಿ ತಮ್ಮ ಅಸ್ತಿತ್ವದ ಗುರುತು ಮೂಡಿಸಲಾಗದೆ ಐಡೆಂಟಿಟಿ ಕ್ರೈಸಿಸ್‌ನಿಂದ ಬಳಲುತ್ತಿರುವ ಈ ಸಾಹಿತಿಗಳು ಹೇಗಾದರೂ ಮಾಡಿ ಸಾಹಿತ್ಯ ವಲಯದಲ್ಲಿ ತಮ್ಮ ಛಾಪು ಮೂಡಿಸಬೇಕೆಂಬ ದುರಾಸೆಯಿಂದ ಮಾತಂಗ ಸಾಹಿತ್ಯ

...ಸ್ ಸ್ಥಾಪನೆಯ ಹೀನನಡೆಯನ್ನು ಪ್ರಾರಂಭಿಸಿದ್ದಾರೆ. ...ಇವರೆಲ್ಲರ ಹಿಂದೆ ಮಾಸ್ಟರ್ ಬ್ರೈನ್ ಆಗಿ ಕೆಲಸ ...ಡುತ್ತಿರುವುದು ಬಸವಮೂರ್ತಿ ಮಾದಾರ ಚೆನ್ನಯ್ಯ ...ಮೀಜಿ ಎಂಬ ಮಾದಿಗ ಜನಾಂಗದ ಆರ್‌ಎಸ್‌ಎಸ್ ...ಳು. ಪೇಜಾವರ ವಿಶ್ವೇಶತೀರ್ಥ ಸ್ವಾಮೀಜಿಯವರ ...ದಾಸನನ್ನಾಗಿ ತನ್ನನ್ನು ನಿಯೋಜಿಸಿಕೊಂಡಿರುವ ಈ ...ಮೀಜಿ, ಆದಿಜಾಂಬವ ಮುನಿ ಪರಂಪರೆಗೆ ಸೇರಿದವರಲ್ಲ. 1139ನೇ ಇಸವಿಯಿಂದ ಚಾಲ್ತಿಯಲ್ಲಿರುವ ...ಜಾಂಬವ ಮಾತಂಗಮುನಿ ಪರಂಪರೆಗೆ ಸೇರಿದ ...ಮಠಗಳ ವ್ಯವಸ್ಥೆಗೆ ವಿರುದ್ಧವಾಗಿ ಚಿತ್ರದುರ್ಗದ ...ಘರಾಜೇಂದ್ರ ಶರಣರು, ಕೃಷ್ಣಮೂರ್ತಿ ಎಂಬ ಪಡ್ಡೆ ...ಗನನ್ನು ಎಳೆತಂದು ಮಾದಾರ ಚೆನ್ನಯ್ಯ ಸ್ವಾಮೀಜಿ ...ಮರು ನಾಮಕರಣಮಾಡಿ ಮಾದಿಗರಿಗೆ ಗುರುವಾಗಿ ...ಸ್ಥಾಪಿಸಿದರು. ಪುರುಷರನ್ನು ಮುನಿ ಎಂದೂ ...ಳೆಯರನ್ನು ಜಾಂಬವತಿ ಎಂದೂ ಕರೆಯಲಾಗುವ ...ವಗುರು ಪರಂಪರೆಯ ಮುನಿ ಮತ್ತು ಜಾಂಬವತಿ ...ಉದರ ಸಂಜಾತನಾಗಲೀ ಕರಸಂಜಾತನಾಗಲೀ ಹೀಗೆ ...ವುದೇ ಅರ್ಹತೆ ಇಲ್ಲದ ಕೃಷ್ಣಮೂರ್ತಿಯನ್ನು ...ದಿಗರಿಗೆ ಗುರುವನ್ನಾಗಿ ಮುರುಘಾಶರಣರು ...ಸ್ಥಾಪಿಸಿದಾಗ ಆದಿಜಾಂಬವರು ಬಲವಾಗಿ ...ರೋಧಿಸಿದ್ದುಂಟು. ಆದಿಜಾಂಬವಮುನಿ, ಜಲಜಾಂಬವ ... ಮಾತಂಗಮುನಿ, ಮಾಂಡವ್ಯಮುನಿ, ಹೆಪ್ಪುಮುನಿ, ...ಮುನಿ, ಯುಗಮುನಿ, ದಕ್ಕದ ಮಹಾಮುನಿ, ...ಮುನಿ, ಸಾಂಖ್ಯಮುನಿ, ಶಕ್ತಿಮುನಿ, ಮಲ್ಲಮುನಿ ...ಾದ ಅರ್ವಾಚೀನ ಮುನಿಪರಂಪರೆಯನ್ನು ಹೊಂದಿದ ...ಜಾಂಬವ ಜನಾಂಗದ ಮಠ ವ್ಯವಸ್ಥೆಯ ಚರಿತ್ರೆಯು ...ನೇ ಶತಮಾನಕ್ಕೂ ಹಿಂದಕ್ಕೆ ಸರಿಯುತ್ತದೆ. ಆದರೆ 1139ರ ಕಾಲ ನಮೂನೆಯ ದಾಖಲೆಗಳು ...ತಿರುವಂತೆ ಈಗ್ಗೆ ಒಂಭತ್ತು ಶತಮಾನಗಳಿಂದಲೂ ... ಪರಂಪರೆಯ ಆದಿಜಾಂಬವ ಮಠ ವ್ಯವಸ್ಥೆ ತನ್ನ ...ಪಾರಂಪರ್ಯ ಜಾಂಬವಮುನಿ ಗುರುಗಳಿಂದ ...ಮುವರೆದಿದ್ದು ಅಖಿಲಾಂಡಮುನಿ, ಸಾಮವೇದಿಮುನಿ, ...ಮುನಿ, ಜಲರತ್ನಮುನಿ, ರುದ್ರಾಕ್ಷಿಮುನಿ, ...ಸ್ವಾಮಿಮುನಿ, ಆದಿನಾರಾಯಣ ಮುನಿ ಮುಂತಾದ ...ಗಳು ಆಗಿಹೋಗಿದ್ದಾರೆ. ಈಗ ವಂಶಪಾರಂಪರ್ಯ ...ವಮುನಿ ಸಂತಾನಗಳಾದ ಮಾರ್ಕಂಡೇಯಮುನಿ, ...ಮುನಿ, ಓಂಕಾರಮುನಿ ಎಂಬುವವರಿದ್ದಾರೆ. ಇಂತಹ ...ಪರಂಪರೆಗೆ ಎರವಾಗುವಂತೆ ಬಸವಮೂರ್ತಿ ಮಾದಾರ ...ನೂ ಸೇರಿದಂತೆ ಅನೇಕ ಸ್ವಯಂಘೋಷಿತ ಮಾದಿಗ ...ಳೂ ಹಾಗೂ ಗುರುಪೀಠಗಳೂ ಹುಟ್ಟಿಕೊಂಡಿವೆ. ... ಚೆನ್ನಯ್ಯ ಅಲಿಯಾಸ್ ಕೃಷ್ಣಮೂರ್ತಿಯ ಮಿದುಳು ...ಗ ಸಾಹಿತ್ಯ ಪರಿಷತ್ ರಚನೆಯ ಹಿಂದಿದೆ.

...ತ್ರದುರ್ಗದಲ್ಲಿ ರಾಜ್ಯ ಮಟ್ಟದ ಕಾವ್ಯಕಮ್ಮಟ ...ಸಿದ್ದ ನಂತರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ...ಸು ನೆರವಿನಿಂದ ಬಾಗಲಕೋಟೆ ಜಿಲ್ಲೆಯ ...ಂದದಲ್ಲಿ ಜಾನಪದ ರಸಸಂಜೆ, ಚೌಡಿಕಿ ಪದ, ...ದ, ಜೋಗತಿ ಪದ, ಹಲಗೆ ಮೇಳ ಮಾಡಿಸಿ, ...ಕೋಟೆ ಜಿಲ್ಲಾ ಘಟಕವನ್ನು ಸ್ಥಾಪಿಸಿ ಸ್ಥಳೀಯ ...ಳಿಂದ ಕಾಸು ಗಿಲುಬಿದ್ದಾರೆ. ಇವುಗಳಿಂದ ಚೈತನ್ಯ ... ನಂತರದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ...ಗಲಕ್ಕೆ ಲಗ್ಗೆ ಹಾಕಿದರು. ಪಾರ್ಥಸಾರಥಿ ಮತ್ತು ... ಅಲ್ಲಿನ ರಂಗ ಶಿಕ್ಷಣ ಕೇಂದ್ರದ ಸಹಾಯದಿಂದ ...ಜಾಂಬವ ಕುಲತೇಜ ಕುರಂಗರಾಜ ವೈಭವ' ಎಂಬ ...ನಾಗರಾಜು ಅವರ ಐತಿಹಾಸಿಕ ಕಾದಂಬರಿಯ ...ಮನ್ನೂ ಏರ್ಪಡಿಸಿದರು. ಮಾದಿಗರ ಅರಸನನ್ನು ...ವ ಆ ಕಾದಂಬರಿಯಲ್ಲಿರುವ ರಂಗಸಾಧ್ಯತೆಗಳನ್ನು ...ಸಿದ ರಂಗ ಶಿಕ್ಷಣ ಕೇಂದ್ರದ ರಂಗಕರ್ಮಿಗಳಾದ ...ಬು, ದಿನೇಶ್, ಮಧುಚಂದ್ರ ಮುಂತಾದವರು, ...ಜಾಂಬವರ ಅರಸ ಕುರಂಗರಾಜನನ್ನು ಕುರಿತು ನಾಟಕ ...ವನ್ನು ಬರೆದು ಕೊಡುವಂತೆ ನಾಗರಾಜು ಅವರನ್ನು ...ಕೊಂಡಿದ್ದಾರೆ. ಇಷ್ಟಕ್ಕೇ ತೇಲಿಹೋದ ಎ.ಕೆ.ಹಂಪಣ್ಣ ... ಪಾರ್ಥಸಾರಥಿಯವರು, ಈಗಾಗಲೇ ಮಾತಂಗ ... ಪರಿಷತ್ತಿನ ತುಮಕೂರು ಜಿಲ್ಲಾ ಶಾಖೆಗೆ ಅಧ್ಯಕ್ಷ ...ನೇಮಿಸಿಕೊಳ್ಳಲಾಗಿದ್ದ ಡಾ.ಓ.ನಾಗರಾಜು ಅವರನ್ನು ..., "ಮಾದಿಗ ಪ್ರತಿಭೆಗಳನ್ನು ಗುರುತಿಸುವ ...ಸಿಂದ ಪರಿಷತ್ತು ಹುಟ್ಟಿಕೊಂಡ ಕಾರಣ ...ನಾಗರಾಜು ಅವರನ್ನು ನಾವೇ ಗುರುತಿಸಿ ಮುನ್ನೆಲೆಗೆ ...' ಎಂದು ಬೀಗತೊಡಗಿದರು. ನಾಗರಾಜ್ ಅವರನ್ನು ... ತಂದೆವೆಂದು ಹೀಗೆ ಯಾರೊಬ್ಬರೂ ಬೀಗಬೇಕಾದ ...ತೆ ಇಲ್ಲ, ಹಾಗೆ ನೋಡಿದರೆ ಅವರು ತನ್ನದೇ ...ಸಾಮರ್ಥ್ಯದಿಂದ ಸಾಹಿತ್ಯ ಕ್ಷೇತ್ರದಲ್ಲಿ ಕಾಲೂರಿ ...ಹೊಂದಿರುವ ಏಕಲವ್ಯ ಪ್ರತಿಭೆ. ಈಗಿರುವ ಮಾತಂಗ ... ಪರಿಷತ್ತಿನಲ್ಲಿ ಚಲಾವಣೆಯಾಗಬಲ್ಲ ಏಕೈಕ ನಾಣ್ಯ ...ಜ್ ಮಾತ್ರ. ಇನ್ನುಳಿದವರೆಲ್ಲರೂ ಅವನಾಣ್ಯಗಳೇ ... ನಾಣ್ಯಗಳಲ್ಲ. ಹಾಗಾಗಿಯೇ ಡಾ.ಓ.ನಾಗರಾಜ್ ... ಮಾತಂಗ ಸಾಹಿತ್ಯ ಪರಿಷತ್ತಿನಲ್ಲಿ ಒಂದು ಪೋಸ್ಟ್ ... ಅವರನ್ನು ಹಾಲು ಕರೆಯುವ ಒಂದು ಪವಿತ್ರ ...ನ ರೀತಿಯಲ್ಲಿ ಬಳಸಲಾಗಿದೆ. ಇದು ನಾಗರಾಜ್ ಅವರಿಗೂ ಅರ್ಥವಾಗಿದೆ. ನಾಗರಾಜ್ ಅವರ ಸಾಹಿತ್ಯ ಕೃತಿಯನ್ನು ರಂಗಕ್ಕೆ ಅಳವಡಿಸುವ ಚಿಂತನೆ ನೆಲಮಂಗಲದ ರಂಗ ಶಿಕ್ಷಣ ಕೇಂದ್ರದ ಚಿಂತನೆಯೇ ಹೊರತು ಅದು ಮಾತಂಗ ಸಾಹಿತ್ಯ ಪರಿಷತ್ತಿನ ಸ್ವತಂತ್ರ ಚಿಂತನೆಯಲ್ಲ. ನಾಗರಾಜ್ ಈ ಪರಿಷತ್ತಿನ ಒಬ್ಬ ಪದಾಧಿಕಾರಿಯಾದ ಕಾರಣದಿಂದಲೇ ಅವರ ಕೃತಿಯ ಚರ್ಚೆಗೆ ಮಾತಂಗ ಸಾಹಿತ್ಯ ಪರಿಷತ್ ಮುಂದಾಯಿತೆಂಬುದು ಎಲ್ಲರಿಗೂ ಅರ್ಥವಾಗಿದೆ. ಇವತ್ತು ಲಾಭಕ್ಕಾಗಿ ನಾಗರಾಜ್ ಅವರ ಹೆಸರು ಹೇಳುವ ಇದೇ ಮಂದಿ, ತುಮಕೂರು ವಿಶ್ವವಿದ್ಯಾಲಯದ ಭಾಷಾಭಿವೃದ್ಧಿ ಯೋಜನೆಯಲ್ಲಿ ಅಕ್ಷರ ಕಳ್ಳರು ನಾಗರಾಜ್ ಅವರ 'ತುಮಕೂರು ಜಿಲ್ಲೆಯ ಗ್ರಾಮ ದೇವತೆಗಳು' ಎಂಬ ಪಿಎಚ್.ಡಿ ಮಹಾಪ್ರಬಂಧವನ್ನು ಇಡಿಯಾಗಿ 'ತುಮಕೂರು ಜಿಲ್ಲೆಯ ಶಕ್ತಿ ದೇವತೆಗಳು' ಎಂಬ ಹೆಸರಿನಲ್ಲಿ ಕೃತಿಚೌರ್ಯ ಮಾಡಿ ಪ್ರಕಟಿಸಿದಾಗ ಮಾತನಾಡದೆ ಎಲ್ಲಿಗೆ ಹೋಗಿದ್ದರು? 'ಆದಿಜಾಂಬವ ಕುಲತೇಜ ಕುರಂಗರಾಜ ವೈಭವ' ಕೃತಿಗೆ ಮುನ್ನುಡಿ ಬರೆದುಕೊಟ್ಟಿರುವ ಪ್ರೊ.ಎಚ್.ಗೋವಿಂದಯ್ಯ ಮೊದಲುಗೊಂಡು ಯಾರೇ ಪ್ರಮುಖ ಮಾದಿಗ ಸಾಹಿತಿಗಳು ಓ.ನಾಗರಾಜ್ ಅವರನ್ನು ತಮ್ಮ ಹತ್ತಿರಕ್ಕೂ ಸೇರಿಸಿಕೊಳ್ಳಲಿಲ್ಲ ಯಾಕೆ? ಅಂಥವರಿಗೆ ಈಗ ಓ.ನಾಗರಾಜ್ ಏಕೆ ಬೇಕಾಗುತ್ತಿದ್ದಾರೆ?

ಬಲಪಂಥೀಯ ರಾಜಕಾರಣದ ಪ್ರಚೋದನೆಗಳನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿ ಹೇಳಬೇಕಾದ ಮಾದಿಗ ಜಾತಿಯ ಬಹುಮುಖ್ಯ ಸಾಹಿತಿಗಳೇ ಕೆಲವರು ಈ ಸಂಸ್ಥೆಯೊಂದಿಗೆ ಯಾವುದೇ ಎಗ್ಗಿಲ್ಲದೆ ಗುರುತಿಸಿಕೊಂಡಿದ್ದಾರೆ ಮತ್ತೆ ಕೆಲವರು ಜಾತಿಯ ವ್ಯಸನಕ್ಕೆ ಸಿಲುಕಿ ನುಣುಚಿಕೊಳ್ಳುತ್ತಿದ್ದಾರೆ. ಪ್ರೊ.ಎಚ್.ಗೋವಿಂದಯ್ಯ, ಕೆ.ಬಿ.ಸಿದ್ದಯ್ಯ ಹಾಗೂ ಡಾ.ಎಲ್.ಹನುಮಂತಯ್ಯನವರು ಮಾತಂಗ ಸಾಹಿತ್ಯ ಪರಿಷತ್ತಿನೊಂದಿಗೆ ನೇರವಾಗಿ ಗುರುತಿಸಿಕೊಂಡಿರುವ ಪ್ರಮುಖ ಸಾಹಿತಿಗಳು. ಡಾ. ಎಲ್.ಹನುಮಂತಯ್ಯ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಇನ್ನೂ ಉದ್ಘಾಟನೆಯಾಗದಿದ್ದ ಈ ಮಾತಂಗ ಸಾಹಿತ್ಯ ಪರಿಷತ್ತಿಗೆ ಪರಿಶಿಷ್ಟ ಜಾತಿ ವಿಶೇಷ ಘಟಕ ಯೋಜನೆಯ ಮುಕ್ಕಾಲು ಲಕ್ಷ ರೂಪಾಯಿಗಳ ಅನುದಾನ ಒದಗಿಸಿ ಎರಡು ದಿನಗಳ ರಾಜ್ಯಮಟ್ಟದ ಕಾವ್ಯ ಕಮ್ಮಟವನ್ನು ನಡೆಸಲು ನೆರವು ನೀಡಿದರು. ಪ್ರೊ.ಎಚ್.ಗೋವಿಂದಯ್ಯ ಕರ್ನಾಟಕದ ಸಾಕ್ಷಿಪ್ರಜ್ಞೆಯೆಂದು ಗುರುತಿಸಲಾಗಿರುವ ದೇವನೂರ ಮಹಾದೇವ ಅವರೊಂದಿಗೆ ದಲಿತ ಚಳವಳಿ ಕಟ್ಟುವ ಕಾಲದಲ್ಲಿ ಹೆಗಲುಕೊಟ್ಟು ದುಡಿದವರು ಎಂಬುದರಲ್ಲಿ ಎರಡು ಮಾತಿಲ್ಲ. ಬರಬರುತ್ತಾ ಅವರ ಸ್ನೇಹದಲ್ಲಿ ಬಿರುಕು ಮೂಡಿದ ನಂತರದಲ್ಲಿ ದಲಿತರ ಒಳಗೊಳಗೇ ಪಿಸುಗುಡುವ ಮಾತುಗಳಲ್ಲಿದ್ದ ಎಡ-ಬಲದ ಪ್ರಶ್ನೆಯನ್ನು ತುಂಬಾ ಸ್ಪಷ್ಟವಾಗಿಯೇ ಎಸ್ಟಾಬ್ಲಿಶ್ ಮಾಡುವ ಪ್ರಯತ್ನಗಳಿಗೆ ತೊಡಗಿ ಸಾರ್ವಜನಿಕವಾಗಿ ಘೋಷಣೆ ಮಾಡುವ ಮಟ್ಟಕ್ಕೆ ಬಂದು ನಿಂತರು. "ದಲಿತ ಚಳವಳಿಯ ವಿಘಟನೆಗೆ ದೇವನೂರ ಮಹಾದೇವ ಕಾರಣ" ಎಂದು ದೂಷಿಸತೊಡಗಿದರು. ಚಿತ್ರದುರ್ಗ ನಗರದಲ್ಲಿ ಮಾತಂಗ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಕಾವ್ಯ ಕಮ್ಮಟದ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಆಡಿದ ತಮ್ಮ ಸಮಾರೋಪ ಮಾತುಗಳಲ್ಲಿ "ದೇವನೂರ ಮಹಾದೇವ ಅವರ ಸಾಹಿತ್ಯ ಹಾಗೂ ಡಾ.ಸಿದ್ದಲಿಂಗಯ್ಯ ಅವರ ಕಾವ್ಯ ನಿಜವಾದ ದಲಿತ ಸಾಹಿತ್ಯ ಸಂವೇದನೆಯ ಪ್ರತೀಕವಲ್ಲ, ಮಾದರಿಯೂ ಅಲ್ಲ, ದಲಿತ ಸಾಹಿತ್ಯದ ಅಭಿವ್ಯಕ್ತಿಯೇ ಅಲ್ಲ, ದೇವನೂರರ ಕುಸುಮಬಾಲೆ ವ್ಯಸನದಿಂದ ಕೂಡಿದೆ. ಸಿದ್ದಲಿಂಗಯ್ಯನವರ ಕಾವ್ಯ ನಿಜಾರ್ಥದಲ್ಲಿ ಕಾವ್ಯವೇ ಅಲ್ಲ, ಮಂಟೇಸ್ವಾಮಿ ಮತ್ತು ಮಲೆಮಹದೇಶ್ವರನ ಕಾವ್ಯಗಳೇ ದಲಿತ ಸಾಹಿತ್ಯದ ಮಾದರಿಗಳು ಮತ್ತು ನಿಜಾರ್ಥದಲ್ಲಿ ದಲಿತ ಸಂವೇದನೆಯ ನೈಜ ಕಾವ್ಯಗಳು. ಆ ಕಾಲದಲ್ಲಿ ದಲಿತರನ್ನು ಓಲೈಸುವುದಕ್ಕಾಗಿ ಮೇಲ್ಜಾತಿಯವರು ಸಿದ್ದಲಿಂಗಯ್ಯ ಅವರ ಕಾವ್ಯವನ್ನು ಹೊತ್ತು ಮೆರೆಸಿದರು. ಅದಕ್ಕೆ ಅವರು ಕವಿಯಾದರು. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆದರು. ಇವೆಲ್ಲಾ ದೇವನೂರು ಅವರಿಗೆ ಬಂದ ಅವಕಾಶಗಳು. ಆದರೆ, ಅದರು ಕಣ್ಣು ಹೊರಳಿಸಿದ್ದಕ್ಕಾಗಿ ಪಕ್ಕದಲ್ಲಿದ್ದ ಸಿದ್ದಲಿಂಗಯ್ಯನವರಿಗೆ ಅವಕಾಶ ಸಿಕ್ಕಿತು. ನಂತರ ಇದೇ ಮಾದರಿಯಲ್ಲಿ ಬೇರೆ ಅವಕಾಶಗಳು ದೊರೆತವು" (ಪ್ರಜಾವಾಣಿ 20-03-2016) ಎಂದು ವ್ಯಂಗ್ಯವಾಡಿದ್ದಾರೆ.

ಇತ್ತೀಚೆಗಷ್ಟೇ ನಾವು ಒಂದಷ್ಟು ಜನ ದಲಿತ ಯುವ ಪ್ರಗತಿಪರ ಸಾಮಾಜಿಕ ಕಾರ್ಯಕರ್ತರು ಒಗ್ಗೂಡಿ, ನಮ್ಮೊಂದಿಗೆ ಇತರೆ ನೂರೈವತ್ತಕ್ಕೂ ಹೆಚ್ಚು ಪ್ರಗತಿಪರ ಸಂಘಟನೆಗಳನ್ನು ಸೇರಿಸಿಕೊಂಡು 'ಭೂಮಿ ನಮ್ಮ ಹಕ್ಕು - ಆಹಾರ ನಮ್ಮ ಆಯ್ಕೆ' ಎಂಬ ಕೇಂದ್ರ ಆಶಯದ ಧ್ಯೇಯವಾಕ್ಯದೊಂದಿಗೆ 'ಉಡುಪಿ ಚಲೋ' ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೆವು. ದೇವನೂರ ಮಹಾದೇವ ಅವರು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಈ ಜಾಥಾವನ್ನು ಉದ್ಘಾಟಿಸಿ ಮಾತನಾಡುತ್ತಾ "ಎಲ್ಲಾ ಪ್ರಗತಿಪರ ಸಂಘಟನೆಗಳು ಇಲ್ಲಿ ಒಗ್ಗೂಡಿರುವುದು ಒಂದು ಮಹಾಮೈತ್ರಿ" ಎಂದರು. ದಲಿತ ಮತ್ತು ರೈತ ಚಳವಳಿಗಳು ವಿಘಟನೆಯಾಗಿರುವ ಬಿಕ್ಕಟ್ಟಿನ ಹೊತ್ತಿನಲ್ಲಿ ಅವರ ಈ ಮಾತು ಉತ್ಪ್ರೇಕ್ಷೆಯ ಮಾತಾಗದೆ ಸಹಜವಾದುದಾಗಿತ್ತು. ಮಹಾದೇವ ಅವರ ಮಾತನ್ನೇ ತಪ್ಪಾಗಿ ಗ್ರಹಿಸಿಕೊಂಡ ಗೋವಿಂದಯ್ಯ "ಚರಾಚರ ಜೀವಿಗಳೆಲ್ಲವೂ ಜ್ಞಾನದ ಉತ್ತುಂಗದಲ್ಲಿ ಏಕಗೊಳ್ಳುವ ಕಾಲವನ್ನು ಬುದ್ಧ 'ಮಹಾಮೈತ್ರಿ' ಎಂದು ಕರೆದಿದ್ದಾರೆ. ಆದರೆ ನಮ್ಮ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಸಾಹಿತಿ ದೇವನೂರ ಮಹಾದೇವ ಅವರು 160 ಸಂಘಟನೆಗಳು ಸೇರಿ ಹಮ್ಮಿಕೊಂಡಿರುವ 'ಉಡುಪಿ ಚಲೋ' ಹೋರಾಟವನ್ನು ಮಹಾಮೈತ್ರಿ ಎಂದು ಕರೆಯುವ ಮೂಲಕ ಬುದ್ಧನ ಚಿಂತನೆಗಳಿಗೆ ಅಪಚಾರ ಎಸಗಿದ್ದಾರೆ" ಎಂದು 14 ಅಕ್ಟೋಬರ್ 2016 ರಂದು ಚಾಮರಾಜನಗರದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರವು ಆಯೋಜಿಸಿದ್ದ ರಾಜ್ಯಮಟ್ಟದ ವಿಚಾರಸಂಕಿರಣ ಹಾಗೂ ಯುವ ಕವಿಗೋಷ್ಠಿಯ ಸಮಾರೋಪ ಸಮಾರಂಭದ ತಮ್ಮ ಭಾಷಣದಲ್ಲಿ ಟೀಕೆ ಮಾಡುವ ಜತೆಗೆ "ರಾಜ್ಯದಲ್ಲಿ ದಲಿತ ಸಂಘರ್ಷ ಸಮಿತಿಯು ಛಿದ್ರಗೊಳ್ಳಲು ದೇವನೂರ ಮಹಾದೇವ ಅವರೇ ನೇರ ಕಾರಣರಾಗಿದ್ದಾರೆ. ಒಡೆದುಹೋಗಿರುವ ದಲಿತ ಸಂಘಟನೆಗಳನ್ನು ಒಗ್ಗೂಡಿಸಲು ಅವರು ಮುಂದಾಗಿಲ್ಲ, ಆದರೆ, ಅದನ್ನು ತಾತ್ವೀಕರಿಸಿ ದಲಿತ ಸಂಘಟನೆಗಳನ್ನು ಒಡೆದು ಛಿದ್ರಗೊಳಿಸಿದ್ದಾರೆ. ಅವರೊಬ್ಬ ಸೃಜನಶೀಲ ಬರಹಗಾರ. ಆದರೆ, ಅವರ ಮಾತು ಮತ್ತು ನಡೆವಳಿಕೆಯಲ್ಲಿ ಸ್ಥಿಮಿತ ಇಲ್ಲದಿರುವುದೇ ದಲಿತ ಸಂಘಟನೆಗಳ ವಿಘಟನೆಯಾಗಲು ಕಾರಣವಾಗಿದೆ" (ಪ್ರಜಾವಾಣಿ 15-10-2016) ಎಂದೆಲ್ಲಾ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹೀಗೆಲ್ಲಾ ಹೋದಬಂದ ಕಡೆಗೆಲ್ಲಾ ಛೇಡಿಸಿ ಮಾತನಾಡುವ ಬದಲು ಸೈದ್ಧಾಂತಿಕವಾಗಿ ಲೇಖನ ಬರೆದು ಪ್ರಕಟಿಸಲಿ. ಅದು ಸಾಹಿತಿಯೊಬ್ಬನ ವಿವೇಕಯುತ ಲಕ್ಷಣ. ಗೋವಿಂದಯ್ಯನವರಿಗೆ ಕುಸುಮಬಾಲೆ ಕಾದಂಬರಿಯಲ್ಲಿ ಕಾಣಿಸಿರುವ ವ್ಯಸನ ಕನ್ನಡ ಪ್ರಜ್ಞೆಯ ಬೇರೆ ಯಾರಿಗಾದರೂ ಕಾಣಿಸಬೇಕಿತ್ತಲ್ಲ?!



ಕೆ.ಬಿ.ಸಿದ್ದಯ್ಯನವರು ಆಧುನಿಕ ಕನ್ನಡ ದಲಿತ ಕಾವ್ಯದ ಪ್ರಮುಖ ದನಿಯಾಗಿ ದಲಿತ ಸಂಘರ್ಷ ಸಮಿತಿಯನ್ನು ರೂಪಿಸುವ ಹೊತ್ತಿನಿಂದಲೂ ಚಳವಳಿಗಳಲ್ಲಿ ಹೆಗಲು ಕೊಟ್ಟವರು. ದಲಿತ ಕಲಾಮಂಡಲಿಯ ಹಾಡುಗಾರರೊಂದಿಗೆ ತಾನೂ ಹಾಡುತ್ತಾ 'ಒಂದು ದಹನದ ಕಥೆ' ಹೋರಾಟದ ಹಾಡು ಬರೆದುಕೊಟ್ಟವರು. ಹಿಂದೊಮ್ಮೆ ಉಡುಪಿಯ ಪೇಜಾವರ ವಿಶ್ವೇಶತೀರ್ಥ ಸ್ವಾಮೀಜಿಯವರನ್ನು ತಮ್ಮ ಮನೆಗೆ ಕರೆದು ಗೌರವಿಸುವ ಮೂಲಕ ಸಾರ್ವಜನಿಕವಾಗಿ ನಗೆಪಾಟಲಿಗೆ ಗುರಿಯಾದಂತಹ ಸಿದ್ದಯ್ಯನವರು, ಮಾತಂಗ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಕಾವ್ಯ ಕಮ್ಮಟದಲ್ಲಿ ಮಾತನಾಡುತ್ತಾ "ಡಾ.ಸಿದ್ದಲಿಂಗಯ್ಯ ಕನ್ನಡ ಕಾವ್ಯದ ಬೀಚಿ" ಎಂದು ಅಪಹಾಸ್ಯ ಮಾಡುವ ಜತೆಗೆ ದೇವನೂರ ಮಹಾದೇವ ಅವರ 'ಎದೆಗೆ ಬಿದ್ದ ಅಕ್ಷರ' ಕೃತಿಯನ್ನು ಕುರಿತು "ಅದು ಎದೆಗೆ ಬಿದ್ದ ಅಕ್ಷರವಲ್ಲ; ಎದೆಗೆ ಬಿದ್ದ ಬೆಂಕಿ" ಎಂದು ಕುಹಕವಾಡಿದ್ದಾರೆ. ರಘೋತ್ತಮ ಹೊ.ಬ ಅವರೂ 'ಎದೆಗೆ ಬಿದ್ದ ಗಾಂಧಿ' ಎಂದು ಲೇವಡಿ ಮಾಡಿ ಲೇಖನ ಬರೆದದ್ದೂ ಉಂಟು. ಇದೇ ಕಾವ್ಯಕಮ್ಮಟದ ಕವಿಗೋಷ್ಠಿಯ ಅಧ್ಯಕ್ಷರಾಗಿ ಪಾಲ್ಗೊಂಡಿದ್ದ ಪ್ರೊ.ಎಸ್.ಜಿ.ಸಿದ್ದರಾಮಯ್ಯ "ಮಾತಂಗ ಸಾಹಿತ್ಯ ಪರಿಷತ್ತಿನ ಸ್ಥಾಪನೆಯು ಇಲ್ಲಿಯವರೆಗೆ ದಲಿತ ಚಳವಳಿಯು ರೂಪಿಸಿಕೊಂಡುಬಂದ ತಾತ್ವಿಕತೆ ಮತ್ತು ವೈಚಾರಿಕ ನಡಿಗೆಗೆ ಹೊಂದಾಣಿಕೆಯಾಗಲಾರದು. ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಾಗುತ್ತಿರುವ ಈ ಅಘಾತಕಾರಿ ಬದಲಾವಣೆಯನ್ನು ನೋಡಿದರೆ ವಿಷಾದವಾಗುತ್ತದೆ" ಎಂದು ಎಚ್ಚರಿಸಿದ್ದಾರೆ ಸಿದ್ದರಾಮಯ್ಯನವರ ಮಾತುಗಳಿಂದ ಮುನಿದ ಸಂಘಟಕರು, ಸಿದ್ದರಾಮಯ್ಯನವರ ಊಟ ವಸತಿ ಸಾರಿಗೆ ಸೌಲಭ್ಯ ಯಾವುದನ್ನೂ ವಿಚಾರಿಸದೆ ತುಚ್ಛವಾಗಿ ನಡೆಸಿಕೊಂಡು ಕಾರು ಹತ್ತಲೂ ಬಿಡದೆ ಕೆಳಗಿಳಿಸಿ ಕಳಿಸಿದ್ದಾರೆ. ಇಂತಹ ಸಾಹಿತ್ಯಕ ಮತ್ತು ಸಾಂಸ್ಕೃತಿಕ ವಿಕೃತಿಗಳ ಹುಟ್ಟುವಳಿಗೆ ಕೇವಲ ಗೋವಿಂದಯ್ಯ, ಕೆ.ಬಿ.ಸಿದ್ದಯ್ಯ, ಎಲ್.ಹನುಮಂತಯ್ಯ ಮುಂತಾದವರು ಮಾತ್ರ ಹೊಣೆಯಲ್ಲ.

ದಲಿತ ಸಾಹಿತ್ಯ ಪರಿಷತ್‌ನ ಸಾಹಿತ್ಯ ವೇದಿಕೆಗಳಲ್ಲಿ ಮಾದಿಗ ಲೇಖಕರಿಗೆ ಅವಕಾಶ ನೀಡಲಾಗುತ್ತಿಲ್ಲದ ಧೋರಣೆಯನ್ನು ದೇವನೂರ ಮಹಾದೇವ ಅವರಾಗಲೀ, ಸಿದ್ದಲಿಂಗಯ್ಯನವರಾಗಲೀ ಇನ್ನಾವುದೇ ಬಲಗೈ ಛಲವಾದಿ ಸಮುದಾಯದ ಲೇಖಕರು ಪ್ರಶ್ನಿಸಿದಂತೆ ಕಾಣುತ್ತಿಲ್ಲ. ದಲಿತ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಪದವಿಯಲ್ಲಿ ಡಾ. ಅರ್ಜುನ ಗೊಳಸಂಗಿ ಕಳೆದ ಇಪ್ಪತ್ತು ವರ್ಷಗಳಿಂದಲೂ ತಾನೊಬ್ಬನೇ ಆಜೀವ ಅಧ್ಯಕ್ಷನಂತೆ ಪ್ರತಿಷ್ಠಾಪನೆಗೊಂಡಿದ್ದಾರೆ. ಆ ಪದವಿಗೆ ಬೇರಾರನ್ನೂ ನೇಮಕ ಮಾಡದಿರುವುದನ್ನು ಇಲ್ಲಿಯವರೆಗೂ ಯಾರೂ ಪ್ರಶ್ನಿಸಿರುವುದಿಲ್ಲ. ಈ ಮಾತು ದಲಿತ ಸಂಘಟನೆಗಳಿಗೂ ಅನ್ವಯಿಸುತ್ತದೆ. ವಾಸ್ತವವಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಹುಟ್ಟಿದಾಗಲೇ ಅದು ತನ್ನದೇ ಅಂತರ್ ಸಂವಿಧಾನದನ್ವಯ ಹಾಗೂ ತಾನು ಅಳವಡಿಸಿಕೊಂಡ ಪ್ರಣಾಳಿಕೆಯನ್ವಯ ಕೇಂದ್ರ ಶಾಖೆಯೂ ಸೇರಿದಂತೆ ಎಲ್ಲಾ ವಲಯಗಳ ಶಾಖೆಗಳ ಪದಾಧಿಕಾರಿಗಳನ್ನು ಪ್ರಜಾಸತ್ತಾತ್ಮಕವಾಗಿಯೇ ಚುನಾಯಿಸಿ ಬಹುಮತದ ಆಧಾರದಲ್ಲಿ ನೇಮಕ ಮಾಡಿಕೊಳ್ಳುವ ಸೂತ್ರವನ್ನು ಒಪ್ಪಿಕೊಂಡಿತು. ಅಂತೆಯೇ ಮುಂದುವರೆದುಕೊಂಡು ಬರಲಾಯಿತು. ಆದರೆ ಇಂತಹ ಪ್ರಜಾಪ್ರಭುತ್ವವಾದೀ ಧೋರಣೆಯ ದಲಿತ ಚಳವಳಿ ವಿಘಟನೆಗೊಂಡ ಬಳಿಕ ದಲಿತ ಸಂಘಟನೆಗಳು ಆಯಾ ಸಂಘಟನೆಗಳನ್ನು ಸ್ಥಾಪಿಸಿದ ವ್ಯಕ್ತಿಗಳ ಏಕಸ್ವಾಮಿತ್ವಕ್ಕೆ ಒಳಪಟ್ಟವು. ಈಗಲೂ ಬಹುತೇಕ ದಲಿತ ಬಣಗಳ ನಾಯಕತ್ವವು ಬಲಗೈ ಛಲವಾದಿಗಳ ಹಸ್ತಕೇಂದ್ರಿತವಾಗಿದ್ದು ಅವರೆಲ್ಲರೂ ಆಜೀವ ರಾಜ್ಯ ಸಂಚಾಲಕರಾಗಿ ಪ್ರತಿಷ್ಠಾಪನೆಯಾಗಿದ್ದಾರೆ. ಇದು ಪ್ರಜಾಪ್ರಭುತ್ವ ವಿರೋಧಿ ನಡೆಯಲ್ಲದೆ ಬೇರಲ್ಲ. ಮಾವಳ್ಳಿ ಶಂಕರ್, ಎಂ.ವೆಂಕಟಸ್ವಾಮಿ, ಹೆಚ್.ಅಣ್ಣಯ್ಯ, ಲಕ್ಷ್ಮೀನಾರಾಯಣ ನಾಗವಾರ, ಮೋಹನರಾಜ್, ಡಿ.ಜಿ.ಸಾಗರ್, ವಿ.ನಾಗರಾಜ್ ಮುಂತಾದವರು ಬಲಗೈ ಹೊಲೆಯರಾಗಿದ್ದು ತಮ್ಮದೇ ನಾಯಕತ್ವದಲ್ಲಿ ಪ್ರತ್ಯೇಕ ಬಣಗಳನ್ನು ಕಟ್ಟಿಕೊಂಡಿದ್ದಾರೆ. ಅವು ಸ್ಥಾಪನೆಯಾದ ಕಾಲದಿಂದಲೂ ಅವರೇ ರಾಜ್ಯ ಸಂಚಾಲಕರಾಗಿ ಮುಂದುವರೆದಿದ್ದಾರೆ. ಇಂತಹ ಅಸಾಂವಿಧಾನಿಕ ನಡೆಯನ್ನು ಹೊಲೆಯ ಸಮುದಾಯದ ಲೇಖಕರಾಗಲೀ, ಸಾಮಾಜಿಕ ಕಾರ್ಯಕರ್ತರಾಗಲೀ ಪ್ರಶ್ನಿಸುತ್ತಿಲ್ಲವೇಕೆ?

ದಲಿತ ಸಾಹಿತ್ಯ ಪರಿಷತ್ ಮತ್ತು ಬಲಗೈ ಹೊಲೆಯರ ರಾಜಕಾರಣ ಹಾಗೂ ಸ್ಪೃಶ್ಯ ದಲಿತ ಜನರ ಕುತ್ಸಿತ ಮೌನಗಳನ್ನು ನೋಡಿಕೊಂಡು ತುಟಿಬಿಚ್ಚದ ಬಲಗೈ ಹೊಲೆಯ ಸಮುದಾಯದ ಲೇಖಕರು/ಸಾಮಾಜಿಕ ಕಾರ್ಯಕರ್ತರು ಈ ಪ್ರಶ್ನೆಯನ್ನು ಈಗ ಎದುರುಗೊಳ್ಳಬೇಕಿದೆ. ಯಾಕೆಂದರೆ ಮಾದಿಗರಿಗೆ ಆಗುತ್ತಿರುವ ಮೀಸಲಾತಿ ಹಂಚಿಕೆಯ ತಾರತಮ್ಯ ಮತ್ತು ಸಾಹಿತ್ಯ ಅವಕಾಶ ವಂಚನೆಗಳಿಗೆ ಕೇವಲ ಹೊಲೆಯರಷ್ಟೇ ಬಾಧ್ಯರಲ್ಲ, ಬಲಪಂಥೀಯ ಗುಪ್ತ ರಾಜಕೀಯ ಅಜೆಂಡಾದ ವಿನ್ಯಾಸಗಳು ತಳಸ್ತರರನ್ನು ಹೀಗೆ ಛಿದ್ರೀಕರಿಸುತ್ತಿರುವುದು ದಲಿತ ಸಾಹಿತ್ಯ ಪರಿಷತ್- ಮಾದಿಗ ದಂಡೋರ - ಮಾದಿಗ ರಿಜರ್ವೇಷನ್ ಹೋರಾಟ ಸಮಿತಿ - ಮಾತಂಗ ಸಾಹಿತ್ಯ ಪರಿಷತ್ - ಸಂಘ ಪರಿವಾರಗಳ ಅಡ್ಜಸ್ಟ್‌ಮೆಂಟ್ ಪಾಲಿಟಿಕ್ಸ್‌ಗಳಿಂದ ಈಗ ಢಾಳಾಗಿ ವ್ಯಕ್ತವಾಗುತ್ತಿದೆ.

ಒಂದು ಕಾಲದಲ್ಲಿ ಸಮಾನ ಕಳ್ಳುಬಳ್ಳಿಗಳಾಗಿ ಪರಸ್ಪರ ಹೆಗಲುಕೊಟ್ಟು ದಲಿತ ಚಳವಳಿ ಮತ್ತು ದಲಿತ ಸಾಹಿತ್ಯವನ್ನು ರೂಪಿಸಿದ ಮನಸ್ಸುಗಳೇ ಇಂದು ಪರಸ್ಪರ ದೂಷಿಸಿಕೊಳ್ಳುವ ವಿಲಕ್ಷಣ ನಡಿಗೆಗಳನ್ನು ಮೈಗೂಡಿಸಿಕೊಂಡು ಎದುರೆದುರು ನಿಂತು ಕಿತ್ತಾಡುತ್ತಿದ್ದಾರೆ. ಮುಖ್ಯವಾಹಿನಿ ದಲಿತರ ಪರಿಸ್ಥಿತಿ ಹೀಗಿರುವಾಗಲೇ, ಸಾಮಾಜಿಕ ಸ್ವಾತಂತ್ರ್ಯದ ಮಾತಿರಲಿ ಇಂದಿಗೂ ಸಾಮಾಜಿಕ ಅಸ್ತಿತ್ವದ ಸ್ಪಷ್ಟ ಗುರುತುಗಳೂ ಖಚಿತಗೊಳ್ಳದ ತೃತೀಯ ಅಲೆಮಾರಿ ಜಗತ್ತು ಸಂವಿಧಾನದತ್ತ ನಾಗರಿಕ ಹಕ್ಕುಬಾಧ್ಯತೆ ಮತ್ತು ಸವಲತ್ತುಗಳನ್ನು ಪಡೆಯುವ ದಿಕ್ಕಿನಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಬಿಕ್ಕುತ್ತಾ ನಮ್ಮೆದುರು ದೈನೇಸಿಯಾಗಿ ನಿಂತುಕೊಂಡಿದೆ. ಅಲೆಮಾರಿ ಜನಾಂಗಗಳು ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತವಾಗಿದ್ದು ಸಮೃದ್ಧ ಮೌಖಿಕ ಸಾಹಿತ್ಯದ ಭಂಡಾರವನ್ನೇ ಪೋಷಿಸಿಕೊಂಡು ಬಂದಿವೆ. ಆಧುನಿಕ ಕಂಪ್ಯೂಟರ್ ವಿದ್ಯುನ್ಮಾನ ಸಾಕ್ಷರತೆಯ ಮಾತಿರಲಿ ಇಂದಿಗೂ ಕನಿಷ್ಠ 'ಕಕಾಕಿಕೀ' ಸಾಕ್ಷರತೆಯೂ ಇವರಿಗೆ ದೊರೆತಿಲ್ಲ. ಮಾತಂಗ ಸಾಹಿತ್ಯ ಪರಿಷತ್ತನ್ನು ರೂಪಿಸಿರುವ ಈ ಯಾರೊಬ್ಬರೂ ಮಾದಿಗರಿಗಿಂತ ಕೆಳಗೆ ಮಾದಿಗ ಉಪಕುಲಗಳಾಗಿ ಅಲೆಮಾರಿ/ಅರೆಅಲೆಮಾರಿ ಹಂತದಲ್ಲೇ ಉಳಿದಿರುವ ದಕ್ಕಲರು, ಗೋಸಂಗಿಗಳು, ಮಾಷ್ಟೀಕರು, ಬಾಲಬಸವರು, ಸಿಂದೋಳ್ಳು (ಸಿಂದ್

⏭ 16

ನೋಟು ರದ್ದತಿಯ ಕೋಲಾಹಲದ ನಡುವೆ ಸದ್ದಿಲ್ಲದೆ ಜಾರಿಯಲ್ಲಿರುವ ಆರೆಸ್ಸೆಸ್ ಕಾರ್ಯಸೂಚಿ

ದೇಶಾದ್ಯಂತ ಅಲ್ಲೋಲಕಲ್ಲೋಲ ಸೃಷ್ಟಿಸುವುದರೊಂದಿಗೆ ನೂರಾರು ಸಾವು. ನೋವುಗಳಿಗೆ ಕಾರಣವಾದ ನೋಟು ರದ್ದತಿಯಿಂದ ಸಂಘ ಪರಿವಾರದ ಗುಪ್ತ ಕಾರ್ಯಸೂಚಿಯ ಜಾರಿಗಂತೂ ಯಾವುದೇ ಅಡೆತಡೆಗಳಾಗಿರುವಂತಿಲ್ಲ. ಭಾರತವನ್ನು ಶತಾಯಗತಾಯ ಒಂದು ಧರ್ಮಾಧಾರಿತ ಹಿಂದೂ ರಾಷ್ಟ್ರವಾಗಿ ಬದಲಾಯಿಸುವ ಸಂಘ ಪರಿವಾರದ ಕಾರ್ಯಕ್ರಮ ಎಂದಿನಂತೆ ಮುಂದುವರಿದಿದೆ. ಮೇ 2014ರ ತರುವಾಯ ಯಾವ ಮುಚ್ಚುಮರೆಯೂ ಇಲ್ಲದೆ ನಡೆಯುತ್ತಿರುವ ಕೇಸರೀಕರಣ ಪ್ರಕ್ರಿಯೆಗೆ ಹೆಚ್ಚಿನ ರಾಷ್ಟ್ರೀಯ ಮಟ್ಟದ ಸಂಘಸಂಸ್ಥೆಗಳು ಈಗಾಗಲೆ ಬಲಿಯಾಗಿವೆ. ಕಲೆ, ಸಂಸ್ಕೃತಿ, ಶಿಕ್ಷಣ, ಇತಿಹಾಸ ಮುಂತಾದವುಗಳಿಗೆ ಸಂಬಂಧಿಸಿದ ಸಂಸ್ಥೆ ಗಳನ್ನು ಕೈವಶ ಮಾಡಿಕೊಂಡಿರುವ ಸಂಘಿಗಳು ಎಲ್ಲವನ್ನೂ ತಮ್ಮ ಮೂಗಿನ ನೇರಕ್ಕೆ ತಿರುಚುವ ಕೆಲಸವನ್ನು ಪ್ರಾರಂಭಿಸಿದ್ದಾರೆ.



ಸಂಘ ಪರಿವಾರದ ವಿಚಾರಧಾರೆಗಳನ್ನು ಹಬ್ಬಿಸುವ ಕಾರ್ಯದಲ್ಲಿ ಆರೆಸ್ಸೆಸ್‌ನ ಕಟ್ಟಾಳುವಾದ ನರೇಂದ್ರ ಮೋದಿಯೂ ಹಿಂದೆ ಬಿದ್ದಿಲ್ಲ. ಆತನ ಆಡಳಿತದಡಿ ಪುಷ್ಪಕ ವಿಮಾನ, ಗಣೇಶನ ಆನೆ ರುಂಡ ಮುಂತಾದ ಚಂದಮಾಮ ಕತೆಗಳಿಗೆ ಮೇಲ್ಪಡತಿ ದೊರಕಿದೆ. 2014ರ ಅಕ್ಟೋಬರ್ 25ರಂದು ಮುಂಬಯಿನಲ್ಲಿ ನೂತನ ಸರ್ ಎಚ್.ಎನ್. ರಿಲಾಯನ್ಸ್ ಆಸ್ಪತ್ರೆಯ ಉದ್ಘಾಟನೆಯ ವೇಳೆ ಮಾತನಾಡಿದ ಮೋದಿ ಮಹಾಭಾರತದ ಕತೆಗಳನ್ನು ಉಲ್ಲೇಖಿಸುತ್ತಾ ಪ್ರಾಚೀನ ಕಾಲದ ಭಾರತೀಯರಿಗೆ ಪ್ರಣಾಳಶಿಶು ತಂತ್ರಜ್ಞಾನ ಮತ್ತು ಪ್ಲಾಸ್ಟಿಕ್ ಸರ್ಜರಿ ಎರಡೂ ತಿಳಿದಿತ್ತೆಂದು ಬೂಸಿ ಬಿಟ್ಟ: "ಕರ್ಣ ಹುಟ್ಟಿದ್ದು ತಾಯಿಯ ಹೊಟ್ಟೆಯಿಂದಲ್ಲ ಎಂದು ಮಹಾಭಾರತದಲ್ಲಿ ಹೇಳಲಾಗಿದೆ. ಇದರರ್ಥ ಏನೆಂದರೆ ಆ ಕಾಲದಲ್ಲಿ ತಳಿವಿಜ್ಞಾನ (ಜೆನೆಟಿಕ್ ಸಾಯನ್ಸ್) ಇತ್ತು ......ನಾವು ಗಣೇಶನನ್ನು ಪೂಜಿಸುತ್ತೇವೆ. ಮನುಷ್ಯ ಶರೀರದ ಮೇಲೆ ಆನೆಯ ತಲೆಯನ್ನು ಕಸಿ ಮಾಡುವ ಮೂಲಕ ಪ್ಲಾಸ್ಟಿಕ್ ಸರ್ಜರಿಯನ್ನು ಪ್ರಾರಂಭಿಸಿದ ಯಾರಾದರೂ ಆ ಕಾಲದಲ್ಲಿ ಇದ್ದಿರಬೇಕು"!! ಆದರೆ ಅಚ್ಚರಿಯ ವಿಷಯ ಏನೆಂದರೆ ಬಹುತೇಕವಾಗಿ ವೈದ್ಯರು, ವಿಜ್ಞಾನಿಗಳಂತಹ ಸುಶಿಕ್ಷಿತ ಜನರಿಂದಲೆ ಕೂಡಿದ್ದ ಪ್ರೇಕ್ಷಕವರ್ಗದಲ್ಲಿ ಯಾರೊಬ್ಬನೂ ಎದ್ದು ಮೋದಿಯ ಈ ವಿಲಕ್ಷಣ, ಆಧಾರರಹಿತ, ಅಸಾಧ್ಯ ಪ್ರತಿಪಾದನೆಗಳಿಗೆ ಆಕ್ಷೇಪಿಸಲಿಲ್ಲ, ಬದಲು ಎಲ್ಲರೂ ಬಾಯಿ ಮುಚ್ಚಿಕೊಂಡು ಆತನ ಮಾತುಗಳನ್ನು ಕೇಳಿಸಿಕೊಂಡರು. ಒಂದು ವಿಧದಲ್ಲಿ ಇದು ಮುಂಬರುವ ದುರ್ದಿನಗಳ ಮುನ್ಸೂಚನೆಯಾಗಿತ್ತು.

ಇತಿಹಾಸದ ವಿಷಯಕ್ಕೆ ಬಂದರೆ ಭಾರತದಲ್ಲಿ ವಸಾಹತುಶಾಹಿ ಆಡಳಿತ ಕೊನೆಗೊಂಡ ಬಳಿಕ ಮುನ್ನೆಲೆಗೆ ಬಂದ ಎಡಪಂಥೀಯ ಮತ್ತು ನಿಷ್ಪಕ್ಷಪಾತಿ ಇತಿಹಾಸಜ್ಞರು ದೇಶದ ಜ್ಞಾನಾಭಿವೃದ್ಧಿಯ ಯತ್ನಕ್ಕೆ ಅಪಾರ ಕೊಡುಗೆ ನೀಡಿರುವುದರಲ್ಲಿ ಸಂದೇಹವೇ ಇಲ್ಲ, ಆದರೆ ಇಂದು ಅವರ ಕೃತಿಗಳೆಲ್ಲ ಕೆಸರೆರಚಾಟಕ್ಕೆ ತುತ್ತಾಗಿ ಬಾಮಿಯಾನ್ ಬುದ್ಧನ ಸಾಲಿನಲ್ಲಿ ನಿಂತಿವೆ. ಪರ್ಯಾಯ ಇತಿಹಾಸದ ಕಥನಗಳು ಮುನ್ನೆಲೆಗೆ ಬರುತ್ತಿವೆ. ಕಳೆದ ವರ್ಷ ದಿಲ್ಲಿ ವಿಶ್ವವಿದ್ಯಾನಿಲಯದಲ್ಲಿ ನಡೆದ ಇತಿಹಾಸ ಶೃಂಗಸಭೆಯಲ್ಲಿ ಗಗನದಲ್ಲಿ ಹಾರಾಡುವ ರಥಗಳ ಬಗ್ಗೆ, ಮಹಾಭಾರತ ಕಾಲದಲ್ಲಿ ಟಿವಿ ಇದ್ದ ಬಗ್ಗೆ ಭಾರಿ ಗಹನವಾದ ಚರ್ಚೆಗಳು ನಡೆದಿದ್ದವು! ಸಂಘಪರಿವಾರದ ವ್ಯವಸ್ಥಿತ ಕಾರ್ಯಾಚರಣೆಯ ಫಲವಾಗಿ ವಿಶ್ವವಿದ್ಯಾನಿಲಯಗಳ ಸ್ವಾತಂತ್ರ್ಯ, ಸ್ವಾಯತ್ತತೆಗಳು ಕರಗತೊಡಗಿವೆ. ಅವು ಹಿಂದೂತ್ವ ಸಿದ್ಧಾಂತದ ತುತ್ತೂರಿಗಳಾಗಿ ಮಾರ್ಪಡುತ್ತಿವೆ. ಕ್ಯಾಂಪಸ್ ರಾಜಕಾರಣದ ಶಿಬಿರದೊಳಗೆ ನುಸುಳಲಾರಂಭಿಸಿರುವ ಬಲಪಂಥೀಯ ಒಂಟೆ ಅಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಲೆತ್ನಿಸುತ್ತಿದೆ.

ಮತ್ತೊಂದು ಕಡೆ ಪ್ರಗತಿಪರ ಹಾಗೂ ಜನಪರ ವಿಚಾರಧಾರೆಗಳು ಮತ್ತು ಸಂಘಟನೆಗಳ ದಮನ ಕಾರ್ಯ ಎಗ್ಗಿಲ್ಲದೆ ಸಾಗಿದೆ. ಹಲವಾರು ಸಂಘಟನೆಗಳ ವಿದೇಶೀ ದೇಣಿಗೆ ಸ್ವೀಕಾರದ ಲೈಸೆನ್ಸ್‌ಗಳನ್ನು ರದ್ದುಗೊಳಿಸಲಾಗಿದೆ. ಚಿಂತನಾಕೂಟಗಳು, ಸಮಾಲೋಚನಾಸಭೆಗಳು, ಸಾಹಿತ್ಯ ಸಮ್ಮೇಳನಗಳು ಇವೇ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಂಘಿಗಳ ಪ್ರಭಾವ ಬೆಳೆಯುತ್ತಿದೆ. 2016ರ ನವಂಬರ್‌ನಲ್ಲಿ ಗೋವಾ, ರಾಜಸ್ಥಾನ ಮತ್ತು ಮಧ್ಯ ಪ್ರದೇಶಗಳಲ್ಲಿ ಇಂತಹ ಮೂರು ಸಭೆಗಳನ್ನು ಆಯೋಜಿಸಲಾಗಿತ್ತು. ಗೋವಾ ಮತ್ತು ಮಧ್ಯ ಪ್ರದೇಶಗಳಲ್ಲಿನ ಅದ್ದೂರಿ ಕಾರ್ಯಕ್ರಮಗಳನ್ನು ಖುದ್ದು ರಾಜ್ಯ ಸರ್ಕಾರಗಳೆ ಆಯೋಜಿಸಿ ವೆಚ್ಚವನ್ನೆಲ್ಲ ಭರಿಸಿದ್ದವು. ಬಲಪಂಥೀಯ ಚಿಂತನೆಗಳಿಗೆ ಪ್ರಾಮುಖ್ಯತೆ ನೀಡಲಾಗಿದ್ದ ಮೂರೂ ಕಾರ್ಯಕ್ರಮಗಳಿಗೆ ಅಮೆರಿಕದ ಡೇವಿಡ್ ಫ್ರಾಲಿ ಎಂಬ ಹಿಂದೂತ್ವವಾದಿಯನ್ನು ವಿಶೇಷ ಆಹ್ವಾನಿತನಾಗಿ ಕರೆಸಲಾಗಿತ್ತು.

ಗೋವಾದಲ್ಲಿ "ಇಂಡಿಯ ಐಡಿಯಾಸ್" ಹೆಸರಿನ ಸಮ್ಮೇಳನವೊಂದನ್ನು ನಡೆಸಲಾಯಿತು. ಅದರ ಗುರಿ "ನಾಗರಿಕತೆಗಳಿಂದ ಇನ್ನಷ್ಟು ಕಲಿತುಕೊಳ್ಳುವುದು". ಅದನ್ನು ಆಯೋಜಿಸಿದ ಇಂಡಿಯಾ ಫೌಂಡೇಷನ್ ಒಂದು ಬಲಪಂಥೀಯ ಚಿಂತನಾಕೂಟವಾಗಿದೆ. ಅದರ ಸದಸ್ಯರಲ್ಲಿ ಅನೇಕರು ಮೋದಿ ಸರ್ಕಾರದ ನಿಕಟವರ್ತಿಗಳು. ಉದಾಹರಣೆಗೆ ಅದರ ಮುಖ್ಯಸ್ಥನಾದ ಶೌರ್ಯ ದೋವಲ್ ಎಂಬಾತ ಪ್ರಸಕ್ತ ರಾಷ್ಟ್ರೀಯ ಭದ್ರತಾ ಸಲಹೆಗಾರನಾಗಿರುವ ಅಜಿತ್ ದೋವಲ್‌ನ ಮಗ. ಅದರ ನಿರ್ದೇಶಕ ಮಂಡಳಿಯಲ್ಲಿ ನಾಲ್ವರು ಕೇಂದ್ರ ಸಚಿವರಿದ್ದಾರೆ. ಹೀಗಾಗಿ ಆ ಸಭೆಗೆ ಬಂದವರಲ್ಲಿ ಹೆಚ್ಚಿನವರು ಹಿಂದೂತ್ವವಾದಿ ಸಂಘಿಗಳೆ ಆಗಿದ್ದರು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಲೇಖಕರ ಮಟ್ಟಿಗೆ ಹೇಳುವುದಾದರೆ ಡೇವಿಡ್ ಫ್ರಾಲಿಯನ್ನು ಹೊರತುಪಡಿಸಿದರೆ ಹಿಂದೂತ್ವ ಸಿದ್ಧಾಂತದೊಂದಿಗೆ ಗುರುತಿಸಿಕೊಳ್ಳುವ ಲೇಖಕರ ಸಂಖ್ಯೆ ಕಡಮೆ ಇತ್ತು. ಗೋವಾ ಕಾರ್ಯಕ್ರಮದಲ್ಲಿ ಬಿಜೆಪಿ ಅಧ್ಯಕ್ಷ ಅಮಿತ್ ಶಾ ಕೂಡಾ ಭಾಗವಹಿಸಿದ್ದ. ಗೋವಾ ಸಮ್ಮೇಳನಕ್ಕೆ ಬಂದಿದ್ದ ಸುಪ್ರಸಿದ್ಧ ಕಾದಂಬರಿಕಾರ ಆತಿಷ್ ತಸೀರ್ ಅಭಿಪ್ರಾಯದಲ್ಲಿ "ಅದು ಅಂತರ್ಜಾಲದ ಟ್ರೋಲ್‌ಗಳು ಮತ್ತು ಖೊಟ್ಟಿ ಇತಿಹಾಸಜ್ಞರಿಂದ ಕೂಡಿದ ಕಾಕಪೋಕರ ಗುಂಪಾಗಿತ್ತು. ವಾಸ್ತವದಲ್ಲಿ ಅದೊಂದು ತಿಕ್ಕಲು ಕಾರ್ಯಕ್ರಮವಾಗಿತ್ತು. ಅವರ ಬಳಿ ಇದ್ದುದು ಒಂದೇ ಐಡಿಯ: ಕಾಲ್ಪನಿಕ ಚರಿತ್ರೆಯ ಮೂಲಕ ಭಾರತದ ಪುನರ್‌ನಿರ್ಮಾಣ. ಅಲ್ಲಿ ಬೌದ್ಧಿಕ ವಾತಾವರಣ ಇರಲಿಲ್ಲ, ಬೌದ್ಧಿಕ ಅಸಮಾಧಾನಗಳಿದ್ದವು." ಅಮಿತ್ ಶಾ ಉಪಸ್ಥಿತಿಯನ್ನು ಟೀಕಿಸಿದ ಆತಿಷ್, "ಘಾತುಕ ರಾಜಕಾರಣಿಯೊಬ್ಬನಿಗೆ ಇತಿಹಾಸದ ಕುರಿತು ಚರ್ಚಿಸುವ ಅವಶ್ಯಕತೆ ಉಂಟಾದುದು ವಿಚಿತ್ರವಾಗಿದೆ. ಆತ ತನ್ನ ಒಂದೇ ಒಂದು ಮಾತಿನ ಮೂಲಕ ವಸಾಹತುಶಾಹಿ ಮತ್ತು ಮುಸ್ಲಿಂ ಆಡಳಿತಗಳ 800 ವರ್ಷಗಳ ಇತಿಹಾಸವನ್ನೆ ಅಳಿಸಿಹಾಕಿದ" ಎಂದು ಹೇಳಿದ್ದಾರೆ.

ನವಂಬರ್ ತಿಂಗಳಲ್ಲಿ ನಡೆದಿರುವ ಇಂತಹ ಇನ್ನೊಂದು ಸಮಾರಂಭವೆಂದರೆ "ಲೋಕ ಮಂಥನ". ಮಧ್ಯ ಪ್ರದೇಶದಲ್ಲಿ ನಡೆದ ಆ ಕಾರ್ಯಕ್ರಮವನ್ನು "ಪ್ರಜ್ಞಾ ಪ್ರವಾಹ" ಹೆಸರಿನ ಸಂಘಟನೆಯೊಂದು ಆಯೋಜಿಸಿತ್ತು. ಇದೊಂದು ಸಂಘ ಪರಿವಾರದ ಜತೆ ನಿಕಟಸಂಪರ್ಕದಲ್ಲಿರುವ ಸಂಘಟನೆ. ರಾಜ್ಯದ ಬಿಜೆಪಿ ಸರ್ಕಾರ ಪ್ರಸ್ತುತ ಕಾರ್ಯಕ್ರಮದ ಸಹ ಸಂಯೋಜಕನಾಗಿತ್ತು. "ಲೋಕ ಮಂಥನ"ದ ಜಾಲತಾಣದಲ್ಲಿ ಪ್ರಕಟಿಸಿರುವಂತೆ ಭಾರತ ಕಳೆದ ಕೆಲವು ಶತಮಾನಗಳಿಂದ ಒಂದು ದ್ವೀಪದಂತಾಗಿದ್ದು ರಾಜಕೀಯವಾಗಿ, ಸಾಮಾಜಿಕ ವಾಗಿ ಅಭದ್ರತೆ ಎದುರಿಸುತ್ತಾ ಇತ್ತಂತೆ. ಇದರ ಪರಿಣಾಮ ಸಾಮಾಜಿಕ ಧಾರ್ಮಿಕ ಮೌಲ್ಯಗಳ ಮೇಲಷ್ಟೆ ಅಲ್ಲದೆ ಜ್ಞಾನಾಭಿವೃದ್ಧಿ ಮತ್ತು ಆರ್ಥಿಕ ಏಳಿಗೆಯ ಮೇಲೂ ಆಗಿದೆ ಯಂತೆ. ಹೀಗಿರುವಾಗ ಸದರಿ "ಲೋಕ ಮಂಥನ"ದ ವೇಳೆ ಮಂದಿರಗಳಲ್ಲಿ ಸ್ತ್ರೀಯರಿಗೆ ಪ್ರವೇಶಂಹಿತೆ ವಿಧಿಸುವ ಮಾತುಗಳು ಕೇಳಿಬಂದಿರುವುದರಲ್ಲಿ ಆಶ್ಚರ್ಯವೇನು ಬಂತು!


ರಾಜಸ್ತಾನದಲ್ಲಿ ಆಯೋಜಿಸಲಾದ "ಜೈಪುರ ಡಯಲಾಗ್ಸ್" ಕಾರ್ಯಕ್ರಮಕ್ಕೆ ರಾಜ್ಯ ಸರ್ಕಾರದ ಜತೆ ನೇರ ಸಂಬಂಧ ಇರದಿದ್ದರೂ ಅದರ ಪ್ರಧಾನ ಆಯೋಜಕನಾಗಿದ್ದುದು ಹಿರಿಯ ಸರ್ಕಾರಿ ಅಧಿಕಾರಿಯೂ ಸಕ್ರಿಯ ಟ್ವಿಟರಿಗನೂ ಆಗಿರುವ ಸಂಜಯ ದೀಕ್ಷಿತ್. ಡೇವಿಡ್ ಫ್ರಾಲಿ ಮತ್ತಿತರ ಕೆಲವು ಬಲಪಂಥೀಯ ಲೇಖಕರು "ಜೈಪುರ ಡಯಲಾಗ್ಸ್"ನಲ್ಲಿಯೂ ಭಾಗವಹಿಸಿದ್ದಾರೆ.

ಈ ಮೂರೂ ಕಾರ್ಯಕ್ರಮಗಳಲ್ಲಿ ಬಲಪಂಥೀಯ ಲೇಖಕರ ಸಂಖ್ಯೆ ಹೇಳಿಕೊಳ್ಳುವಷ್ಟು ದೊಡ್ಡದಿರಲಿಲ್ಲ. ಆದರೂ ಅಲ್ಲೆಲ್ಲಾ ಸಂಘಿಗಳ ಹಿಂದೂತ್ವವಾದಿ ಚಿಂತನೆಗಳನ್ನು ಮುಖ್ಯವಾಹಿನಿಗೆ ತರುವ ಕೆಲಸ ಆಗಿದೆ. ಬಲಪಂಥೀಯರ ಪರವಾಗಿರುವ ಅರ್ಥಶಾಸ್ತ್ರಜ್ಞೆ ಹಾಗೂ ವ್ಯಾಖ್ಯಾನಕಾರ್ತಿ ರೂಪಾ ಸುಬ್ರಮಣ್ಯಂ ಪ್ರಕಾರ ಬಲಪಂಥೀಯರು ವಿಷಯದ ಆಳಕ್ಕಿಳಿಯುವಲ್ಲಿ ವಿಫಲರಾಗಿದ್ದಾರಂತೆ. ಇದಕ್ಕೆ ಇದುವರೆಗೆ ಬೌದ್ಧಿಕ ವಿಚಾರಗಳಲ್ಲಿ ಎಡಪಂಥೀಯರು ಹೊಂದಿರುವ ಪ್ರಾಬಲ್ಯವೆ ಕಾರಣವಂತೆ. ಮುಂದುವರಿದು ಆಕೆ "ಬಲಪಂಥೀಯರಿಗೆ ವಿಶ್ವವಿದ್ಯಾನಿಲಯಗಳಲ್ಲಿ ಪ್ರಾತಿನಿಧ್ಯ ಸಿಗುತ್ತಿಲ್ಲ, ಅತ್ತ ಆರ್ಥಿಕವಾಗಿ ದುರ್ಬಲರಾಗಿರುವವರಿಗೆ ಸ್ವತಂತ್ರವಾಗಿ ಕೆಲಸ ಮಾಡಲೂ ಆಗುತ್ತಿಲ್ಲ, ಇನ್ನು ಅನೇಕ ಮಂದಿ ಉದ್ಯೋಗಸ್ಥರಾದ ಕಾರಣ ಬರವಣಿಗೆ, ಚಿಂತನೆಗಳಿಗೆ ಸಮಯ ಸಿಗುತ್ತಿಲ್ಲ, ಪರಿಣಾಮವಾಗಿ ಅವರಿಗೆ ಬೌದ್ಧಿಕವಾಗಿ ದೇಶವನ್ನು ಬೇರೊಂದು ದಿಕ್ಕಿನಲ್ಲಿ ಕೊಂಡೊಯ್ಯಲಾಗುತ್ತಿಲ್ಲ" ಎಂದು ಅಲವತ್ತುಕೊಂಡಿದ್ದಾರೆ.

ಆದರೆ ವಾಸ್ತವ ಭಿನ್ನವಾಗಿದೆ. ಬಿಜೆಪಿ ಸರ್ಕಾರಗಳು ಇರುವ ರಾಜ್ಯಗಳಲ್ಲಿ ಮಂತ್ರಿಗಳು, ಶಾಸಕರು ಮತ್ತು ಸರ್ಕಾರದ ವತಿಯಿಂದ ಸಂಘಿಗಳ ನಾನಾ ಕಾರ್ಯಕ್ರಮಗಳಿಗೆ ಉದಾರ ನೆರವು ದೊರೆಯುತ್ತಿದೆ. ಆ ರಾಜ್ಯಗಳಲ್ಲಿ ಪಠ್ಯಪುಸ್ತಕಗಳೂ ಸೇರಿದಂತೆ ವಿವಿಧ ಕ್ಷೇತ್ರಗಳ ಕೇಸರೀಕರಣ ಹೆಚ್ಚುಕಡಿಮೆ ಮುಗಿದುಹೋಗಿದೆ. ಇದಲ್ಲದೆ ಕಳೆದ ಹಲವು ವರ್ಷಗಳಿಂದ ಸಾಮಾಜಿಕ ಮಾಧ್ಯಮಗಳನ್ನು ಸಕ್ರಿಯವಾಗಿ ಬಳಸುತ್ತಿರುವ ಸಂಘಿಗಳು ತಮ್ಮ ಬೌದ್ಧಿಕ ವಿಚಾರಗಳನ್ನು ಪ್ರತಿಪಾದಿಸಲು ಅದೊಂದು ಅತ್ಯುತ್ತಮ ವೇದಿಕೆ ಎಂದು ಕಂಡುಕೊಂಡಿದ್ದಾರೆ. ಗಣನೀಯ ಸಂಖ್ಯೆಯಲ್ಲಿರುವ ಮೋದಿ ಕೃಪಾಪೋಷಿತ ಜಾಲತಾಣಗಳೂ ತಮ್ಮ ನಾಯಕನನ್ನು ವೈಭವೀಕರಿಸುವುದರೊಂದಿಗೆ ಹಿಂದೂತ್ವವಾದಿ ವಿಚಾರಗಳನ್ನು ಹರಿಯ ಬಿಡುತ್ತಿವೆ. ಕೃತಿಚೌರ್ಯದ ಆರೋಪ ಹೊತ್ತಿರುವ ಬಲಪಂಥೀಯ ಎನ್ನಾರೈ ಲೇಖಕ ರಾಜೀವ್ ಮಲ್ಹೋತ್ರ ಅಮೆರಿಕದ ನೆಲದಿಂದ Sulekha.com ಹೆಸರಿನ ಜಾಲತಾಣವೊಂದನ್ನು ನಡೆಸುತ್ತಿದ್ದಾನೆ. ಕೇಂದ್ರದಲ್ಲಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದನಂತರದಲ್ಲಿ ಆರೆಸ್ಸೆಸ್ ಚಿಂತನೆಗಳ ಪ್ರಸಾರ ಮತ್ತು ಅದರ ಕಾರ್ಯಸೂಚಿಯ ಅನುಷ್ಠಾನಕ್ಕೆ ಬುಲೆಟ್ ರೈಲಿನ ವೇಗ ಬಂದಿದೆ.

■ ಸುರೇಶ್ ಭಟ್ ಬಾಕ್ರಬೈಲ್

(ಆಧಾರ: *scroll.in*ನಲ್ಲಿ ಶೊಐಬ್ ದಾನಿಯಲ್‌ರ ಲೇಖನ *From social media to summits: How India's right wing is trying to create its own intellectual space*)



15 ◀◀

.....ಸಾಹಿತ್ಯದ ಕೇಸರೀಕರಣ

ಮಾದಿಗರು), ಮಾಚಾಳರು ಮುಂತಾದವರಿಗೆ ಸಾಮಾಜಿಕ ಅಸ್ತಿತ್ವದ ಗುರುತು ಕಟ್ಟಲು ಕೊಂಚವಾತ್ರವೂ ಆಲೋಚಿಸಿದವರಲ್ಲ, ಅವರಿಗೆ ಸಂವಿಧಾನದತ್ತ ನಾಗರಿಕ ಸವಲತ್ತುಗಳನ್ನು ದೊರಕಿಸಿಕೊಡಲು ಪ್ರಯತ್ನಿಸಿದವರಲ್ಲ, ಅಲೆಮಾರಿಗಳು ಪರಿಶಿಷ್ಟ ಜಾತಿಪಟ್ಟಿಯಲ್ಲಿ ಮೀಸಲಾತಿ ಪಡೆದುಕೊಳ್ಳುವುದನ್ನೂ ಕೆಲ ಹೊಲೆಮಾದಿಗರು ತಮ್ಮ ಪಾಲಿನ ಮೀಸಲಾತಿಗೆ ಸಂಚಕಾರ ಒದಗುತ್ತದೆಂದು ತಿಳಿದು ಇಬ್ಬರೂ ಸಮಾನವಾಗಿಯೇ ವಿರೋಧಿಸುತ್ತಿದ್ದಾರೆ. ಹೊಲೆಯರಿಗಿಂತಲೂ ಕೆಳಗಿನ ಸಾಮಾಜಿಕ ಸ್ತರದಲ್ಲಿ ಚೆನ್ನದಾಸರ್, ಅರವ ಹೊಲೆಯ, ಮಾಲಮಾಷ್ಟೀಕ, ಮಾಲದಾಸರಿ ಮುಂತಾದ ಅಲೆಮಾರಿ ಕುಲಗಳಿವೆ. ದಲಿತ ಸಾಹಿತ್ಯ ಪರಿಷತ್ತಾಗಲೀ, ಈಗ ಮಾತಂಗಮುನಿಯ ಭಜನೆಮಾಡುತ್ತಿರುವವರಾಗಲೀ ಈ ಅಲೆಮಾರಿಗಳ ಬೆಂಟುಗಳಲ್ಲಿರುವ ಸಾಹಿತ್ಯ ಹಾಗೂ ಸಾಮಾಜಿಕ ಸಂಕಟವನ್ನು ಅರಿಯಲು ಈವರೆಗೆ ಪ್ರಯತ್ನಿಸಲಿಲ್ಲವೇಕೆ? ಇಂಥವರಿಗೆ ದಲಿತ ಸಾಹಿತ್ಯ ಪರಿಷತ್/ಮಾತಂಗ ಸಾಹಿತ್ಯ ಪರಿಷತ್ ಎಂದು ಹೇಳಿಕೊಳ್ಳಲು ನೈತಿಕವಾಗಿ ಏನು ಹಕ್ಕಿದೆ? ಅಂದರೆ ಇಂದಿನ ಚಳವಳಿ ಮತ್ತು ಸಾಹಿತ್ಯ ಸರಿಯಾದ ಸೈದ್ಧಾಂತಿಕ ದಿಕ್ಕಿನಲ್ಲಿ ಸಾಗುತ್ತಿಲ್ಲ ಎಂದಾಯಿತು.

ಆಂಧ್ರಪ್ರದೇಶದಲ್ಲಿ ದಲಿತರ ಆತ್ಮಗೌರವದ ಪ್ರತೀಕವಾಗಿ 1985ರ ನಂತರದಲ್ಲಿ ದಲಿತ ಸಾಹಿತ್ಯ ಪ್ರಕಾರವು ಸ್ಪಷ್ಟವಾದ ಪ್ರಣಾಳಿಕೆಯೊಂದಿಗೆ ಒಡಮೂಡಿತು. ನಂತರದ ಕಾಲದಲ್ಲಿ ಅಲ್ಲಿನ ಮಾಲ ಸಮುದಾಯದ ಪ್ರಾಬಲ್ಯವನ್ನು ಒಪ್ಪದ ಕೆಲವು ಮಾದಿಗ ಸಾಹಿತಿಗಳು 'ಮಾಕೊದ್ದು ಈ ಮಾಲ ದೊರತನಂ' ಎಂಬ ಕವಿತೆಯ ಪ್ರಕಟಣೆಯೊಂದಿಗೆ ದಲಿತ ಸಾಹಿತ್ಯ ಚಳವಳಿಯಿಂದ ಸಿಡಿದುಹೋದರು. ಹೀಗೆ ಸಿಡಿದುಹೋದ ಮಾದಿಗ ಸಾಹಿತಿಗಳು, ಹೋರಾಟಗಾರರು, ಕಲಾವಿದರು ಮುಂತಾದವರು ಮಾದಿಗ ಸಾಹಿತ್ಯ ಚಳವಳಿಯನ್ನು ತಮ್ಮದೇ ಜಾತಿನಿಷ್ಠ ಪ್ರಣಾಳಿಕೆಯೊಂದಿಗೆ ಅಧಿಕೃತವಾಗಿ ಪ್ರಾರಂಭಿಸಿದರು. ಆಂಧ್ರ ಪ್ರದೇಶದಲ್ಲಿ ಮಾದಿಗ ದಂಡೋರ, ಮಾದಿಗ ರಿಜರ್ವೇಷನ್ ಪೋರಾಟ ಸಮಿತಿ ಮತ್ತು ಮಾದಿಗ ಸಾಹಿತ್ಯ ಚಳವಳಿಗಳು ಜೊತೆಗೂಡಿ ಕಾರ್ಯನಿರ್ವಹಿಸತೊಡಗಿದವು. ನಾಗಪ್ಪಗಾರಿ ಸುಂದರರಾಜು ಎಂಬ ರಾಯಲಸೀಮಾ ಕಥೆಗಾರ 'ಮಾದಿಗೋಡು' ಕಥಾಸಂಕಲನ ಪ್ರಕಟಿಸಿದರೆ, ಎಂಡ್ಲೂರಿ ಸುಧಾಕರ್ 'ದಂಡೋರ' ಎಂಬ ಕವಿತೆಯನ್ನು ಹಾಗೂ ಮೀಸಲಾತಿ ವರ್ಗೀಕರಣ ಪ್ರಶ್ನೆಯನ್ನು ಕುರಿತು 'ವರ್ಗೀಕರಣೀಯಂ' ಎಂಬ ಖಂಡಕಾವ್ಯವನ್ನೂ ಪ್ರಕಟಿಸಿದರು. ಮಾದಿಗ ಸಾಹಿತಿಗಳು ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಮಾದಿಗ ದಂಡೋರ ಚಳವಳಿಯೊಂದಿಗೆ ಕ್ರಿಯಾಶೀಲರಾದರು. ಇದರ ತೀವ್ರತೆಯ ಬಿಸಿ ಎಷ್ಟೊಂದು ವಿರಿತ್ತೆಂದರೆ 1997ರಲ್ಲಿ ಅನೇಕ ಮಾದಿಗ ಕವಿಗಳು ಸೇರಿ 'ಮಾದಿಗ ಚೈತನ್ಯಂ' ಎಂಬ ಕವನ ಸಂಕಲನವನ್ನು ಹೈದ್ರಾಬಾದ್‌ನ ಸೆಂಟ್ರಲ್ ಯೂನಿವರ್ಸಿಟಿಯ ಮಾದಿಗ ಸಾಹಿತ್ಯ ವೇದಿಕೆಯಿಂದ ಪ್ರಕಟಿಸಿದರು. ಹೀಗೆ ವಿಶ್ವವಿದ್ಯಾಲಯಕ್ಕೂ ಜಾತಿ ರೋಗ ಹಬ್ಬಿಕೊಂಡಿತು. ಅಲ್ಲಿನ ಮಾದಿಗ ಸಾಹಿತಿಗಳ ಪೈಕಿ ಡಾ.ಎಂಡ್ಲೂರಿ ಸುಧಾಕರ್, ಗೋಗು ಶಾಮಲ, ಜಾಜುಲ ಗೌರಿ, ಕದಿರಿ ಕೃಷ್ಣ, ಪರಿಮಳ, ಬನಾಲ ಸೈದುಲು, ಕೊಲಕಲೂರಿ ಇನಾಕ್, ಪಸುನೂರಿ ರವೀಂದರ್, ಡಾ. ದಾರ್ಲಾ ವೆಂಕಟೇಶ್ವರ ರಾವು, ಡಾ.ಚಿಲ್ಕೂರಿ ಶ್ರೀನಿವಾಸರಾವು ಮುಂತಾದವರು ಪ್ರಮುಖರಾಗಿ ಗುರುತಿಸಿಕೊಂಡಿದ್ದಾರೆ. ಆದರೆ ಮಾಲ ಸಮುದಾಯದೊಂದಿಗೆ ಇನ್ನೆಂದಿಗೂ ಬೆಸುಗೆ ಹಾಕಲಾರದಮಟ್ಟಿಗೆ ಸೀಳಿಕೊಂಡಿದ್ದಾರೆ.

ಅದೃಷ್ಟವಶಾತ್ 'ಸಂಬಂಜ ಅನ್ನೋದು ದೊಡ್ಡದು ಕಣ' ಎಂದು ಹೇಳಿದ ದೇವನೂರ ಮಹಾದೇವ ಅವರ ಮಾತು ಹಾಗೂ ಕಲಾವಿದ ಎಸ್.ಚಂದ್ರಶೇಖರ್ ಅವರ 'ದಿ ಸ್ಟಿಚ್' ಕಲಾಕೃತಿಯ ಅರ್ಥವನ್ನು ಅಘೋಷಿತವಾಗಿ ಪಾಲಿಸಲು ಬದ್ಧರಾಗಿರುವಂತೆ ನಡೆದುಕೊಂಡ ಕರ್ನಾಟಕದ ಯಾವೊಬ್ಬ ಸಾಹಿತಿಯೂ ಆಂಧ್ರದ 'ಮಾದಿದ ಸಾಹಿತ್ಯ ಚೈತನ್ಯಂ' ಮಾದರಿಯನ್ನು ಅನುಸರಿಸಲು ಇಲ್ಲಿಯವರೆಗೆ ಮುಂದಾಗಿರಲಿಲ್ಲ, ಆದರೆ, ಸಾಹಿತ್ಯ ಸಂವೇದನೆ ಎಂದರೇನೆಂದು ಅರಿಯದ ಎನ್‌ಜಿಓ ಏಜೆಂಟ್ ಪಾರ್ಥಸಾರಥಿಯಂತಹ ಹೊಣೆಗೇಡಿಯಿಂದಾಗಿ ಹಾಗೂ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಲಾಗದೆ ಐಡೆಂಟಿಟಿ ಕ್ರೈಸಿಸ್‌ನಿಂದ ಬಳಲುತ್ತಿರುವ ಕೆಲವೇ ಬೆರಳೆಣಿಕೆಯ ಸಾಹಿತಿಗಳ ಕಾರಣದಿಂದಾಗಿ ಇತ್ತೀಚೆಗೆ ಕರ್ನಾಟಕದ ಮಾದಿಗರು ಅನುಸರಣ ಯೋಗ್ಯವಲ್ಲದ ದಾರಿಯನ್ನು ತುಳಿಯಲು ಹೊರಟಿದ್ದಾರೆ. ಹೊಲೆಯರು, ಮಾದಿಗರು ಮತ್ತಿತರ ಕೆಳಜಾತಿಗಳು ತಮ್ಮ ತಮ್ಮಲ್ಲೇ ಇರುವ ಬಿರುಕುಗಳ ಕಂದರವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲಾಗಲೀ ಅಥವಾ ಇರುವ ಪರಸ್ಪರ ಶಂಕೆಯನ್ನು ಇನ್ನಷ್ಟು ತೀವ್ರಗೊಳಿಸಲಾಗಲೀ ಇಂತಹ ಅಸಾಂಸ್ಕೃತಿಕ ನಡೆಗಳನ್ನು ದಲಿತರು ಅಳವಡಿಸಿಕೊಳ್ಳುವ ಪರಿಸ್ಥಿತಿಯನ್ನು ನಿರ್ಮಿಸಿಕೊಳ್ಳಬಾರದು. ಹೀಗೆ ತಳಸ್ತರ ಸಾಮಾಜಿಕ ವಲಯಗಳು ಜಾತಿ ಘಟಕಗಳಾಗಿ ಸೀಳಿಕೊಳ್ಳುತ್ತಿರುವ ಹೊತ್ತಿನಲ್ಲಿ ಮತ್ತೊಮ್ಮೆ ದಲಿತ ಚಳವಳಿಯು ಎಲ್ಲಾ ಜಾತಿಗಳ ಬಡವರು ಮತ್ತು ಶೋಷಿತರನ್ನು ದಲಿತರೆಂದೇ ತಬ್ಬಿಕೊಳ್ಳುವ ಹಾಗೂ ಅವರ ಸಂಕಟಗಳಿಗೆ ಮಿಡಿಯುವ ತನ್ನ ಮೂಲದ ತಾಯ್ತನದ ವೈಶಾಲ್ಯತೆಯನ್ನು ಉದ್ದೀಪಿಸಿಕೊಳ್ಳುವ ತಾತ್ವಿಕತೆ ಮತ್ತು ವೈಚಾರಿಕತೆಯನ್ನು ತುಂಬಿಕೊಳ್ಳಬೇಕಾಗಿದೆ. ಮಾದಿಗರು ಈಗ ಸ್ಥಾಪಿಸಿರುವ ಮಾತಂಗ ಸಾಹಿತ್ಯ ಪರಿಷತ್ತನ್ನು ವಿಸರ್ಜಿಸಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಿದೆ. ಆ ಮೂಲಕ ಶ್ರೇಷ್ಠ ದಾರ್ಶನಿಕ ಮಾತಂಗಮುನಿಗೆ ಅಂಟಿಸಹೊರಟಿರುವ ಜಾತಿ ಸೂತಕವನ್ನು ನೀಗಿಕೊಳ್ಳಬೇಕಿದೆ.

■ ಡಾ. ವಡ್ಡಗೆರೆ ನಾಗರಾಜಯ್ಯ


ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಗುರುತಿಗೆ ಜಾತಿ, ಸಂಕೇತಕ್ಕೆ ಪ್ರತಿಮೆ







ರಾಣದ ಸಮಯ

ಒಂದೊಂದು ಪುರಾಣದಲ್ಲೂ ಒಂದೊಂದು ಯಕ್ಕೆ ಒತ್ತುಕೊಟ್ಟು ಅನೇಕ ಕಥೆಗಳನ್ನು ಯುತ್ತಾ ಹೋಗುವಂತಹ ಒಂದು ಸ್ವರೂಪವನ್ನು ಧ ಪುರಾಣಗಳನ್ನು ಓದುವಾಗ ನಿಸಬಹುದಾಗಿದೆ. ನಮ್ಮ ಭಾರತದ ಪುರಾಣಗಳೇ ಿ ಅಥವಾ ವಿಶ್ವದ ಇನ್ನಿತರ ಭಾಗಗಳಲ್ಲೂ ಸಹ ಣ ರಚನೆಯ ಕಾಲಗಳನ್ನು ಸರಿಯಾಗಿ ೂದಿಸಿರುವುದಿಲ್ಲ. ಆದರೆ, ಅವುಗಳಲ್ಲಿರುವ ಯಗಳನ್ನು ಮತ್ತು ಕಥನಗಳಲ್ಲಿರುವ ವಿಚಾರಗಳನ್ನು ನಿಸಿಕೊಂಡು, ಸೈದ್ಧಾಂತಿಕ ವಿಶ್ಲೇಷಣೆಗಳನ್ನು ಂತಿಸಿಕೊಂಡು ಅವುಗಳ ಕಾಲನಿರ್ಣಯವನ್ನು ಣಪಂಡಿತರು ಮಾಡಬೇಕಾಗುತ್ತದೆ.

ದಕ್ಷನ ಜೊತೆಗೆ ವಾಗ್ವಾದವನ್ನು ಮಾಡಿ, ತನ್ನ ನಿಗೆ ಯಜ್ಞದಲ್ಲಿ ಹವಿಸ್ಸು ಸಿಗಲಿಲ್ಲವೆಂದು ೀಮಕುಂಡದಲ್ಲಿ ಬೀಳುವ ದಾಕ್ಷಾಯಿಣಿಯ ಯನ್ನು ನೋಡಿದರೆ ವಿವಿಧ ಪುರಾಣಗಳಲ್ಲಿ ಹಲವು ರಗಳನ್ನು ಪಡೆಯುತ್ತಾ ಹೋಗುತ್ತದೆ. ದಕ್ಷನು ಂದನೆ ಮಾಡುವುದು, ದಾಕ್ಷಾಯಣಿ ನೂನಿತಳಾಗಿ ಆತ್ಮಾಹುತಿ ಮಾಡಿಕೊಳ್ಳು ವುದು, ಭದ್ರನು ದಕ್ಷನ ಮೇಲೆ ದಂಡೆತ್ತಿ ಬಂದು ಅವನ ುಳ್ಳುವುದು ಇತ್ಯಾದಿಗಳು ಮೂಲ ಕಥೆಯ ನಾಗಿ ಉಳಿದಿದ್ದು, ವಿವಿಧ ಪುರಾಣಗಳಲ್ಲಿ ವಿವಿಧ ಯ ನಿರೂಪಣೆಗಳನ್ನು ಕಾಣುತ್ತೇವೆ.

ಆದಿಪುರಾಣವು (ಜಿನ ಧರ್ಮದ ಆದಿಪುರಾಣವಲ್ಲ) ಗೆ ಆದಿಯನ್ನು ಹೊಂದಿದ್ದರೂ ಹೇಗೆ ಪ್ರಾಯಶಃ ಣಗಳ ರಚನೆಯ ಕೊನೆಯ ಭಾಗದಲ್ಲಿ ವಾಗಿರಬಹುದಾಗಿರುವುದೋ ಅಂತೆಯೇ ಸ್ಕಂದ ಣವು ಕೂಡ ತೀರಾ ಕೊನೆಯ ಸಾಲಲ್ಲಿ ವಂತಹ ಪುರಾಣವೇ ಆಗಿದೆ.

ಮಹಾಭಾರತ ಮತ್ತು ರಾಮಾಯಣಗಳಲ್ಲಿ ಮತ್ತು ಂತ ಪೂರ್ವದ ಕೃತಿಗಳಲ್ಲಿ, ವೇದಗಳಲ್ಲಿ ವಂತಹ ಬ್ರಾಹ್ಮಣರು ಮಾಂಸವನ್ನು ತಿನ್ನುವಂತಹ ಖಗಳು ಬಹಳಷ್ಟು ಪುರಾಣಗಳಲ್ಲಿ ಇಲ್ಲ. ಸ್ಕಂದ ಣದಲ್ಲಿ ದಕ್ಷನ ಕೊಂದ ನಂತರ ವೀರಭದ್ರನು ಅಣತಿಯ ಪ್ರಕಾರವೇ ದಕ್ಷನಿಗೆ ಜೀವ ುವ ಸಂದರ್ಭ ಬರುತ್ತದೆ. ದಕ್ಷನ ಕತ್ತರಿಸಿದ ನ್ನು ಬೆಂಕಿಗೆ ಹಾಕಿ ಸುಟ್ಟು ಹಾಕಿದ್ದರಿಂದ ಭದ್ರನು ದಕ್ಷನ ಮುಂಡಕ್ಕೆ ಯಾವ ತಲೆಯನ್ನು ಡಿಸುವುದು ಎಂದು ಆಲೋಚಿಸುತ್ತಾನೆ. ಆಗ ಕಣ್ಣಿಗೆ ಬೀಳುವುದು ಹುಲ್ಲಿನಲ್ಲಿ ಮಾಡಿರುವ ಯ ತಲೆ! ಹೋಮಕ್ಕೆ ಅರ್ಪಿಸಲು ದರ್ಬೆಯಲ್ಲಿ ಿದ ಮೇಕೆಯ ಶಿರವನ್ನು ಮಾಡಿ ಇಟ್ಟಿರುತ್ತಾರೆ. ನ್ನು ದಕ್ಷನ ಮುಂಡಕ್ಕೆ ಜೋಡಿಸಿ ಜೀವದಾನ ಲಾಗುತ್ತದೆ. ಇಲ್ಲಿ ಗಮನಿಸಬೇಕಾದ ್ಯಾಂಶವೆಂದರೆ, ಸ್ಕಂದಪುರಾಣವನ್ನು ಬರೆಯುವ ್ಕ ಹೋಮಕ್ಕೆ ಜೀವಂತ ಪ್ರಾಣಿಗಳನ್ನು ೂಡುವುದು ನಿಂತಿತ್ತು, ಆದರೆ ಸಾಂಕೇತಿಕವಾಗಿ ರು ಸಂಪ್ರದಾಯವನ್ನು ಮುಂದುವರಿಸಲು ಯಲ್ಲಿ ಮಾಡಿರುವಂತಹ ಹೋತದ ಶಿರವನ್ನು ಅರ್ಪಿಸುತ್ತಿದ್ದರು ಎಂದು ತಿಳಿದುಬರುತ್ತದೆ.

ಮತ್ತು ವೈಷ್ಣವ ಪ್ರಾಧಾನ್ಯಗಳು

ಶೈವ ಪರಂಪರೆಯವರು ಬರೆಯುವಂತಹ ಣಗಳಲ್ಲಿ ಇತರ ದೇವತೆಗಳ ನಡುವೆ ಶಿವನು ಭಿಸಿದರೆ, ವೈಷ್ಣವ ಪರಂಪರೆಯವರು ುವಂತಹ ಪುರಾಣಗಳಲ್ಲಿ ಹರಿಯೇ ೀತ್ತಮ. ಇನ್ನು ಶೈವ ಮತ್ತು ವೈಷ್ಣವರ ನ ಘನವಾದ ತಿಕ್ಕಾಟಗಳು ಬಹುದೀರ್ಘ ಕಾಲ ಂ ನಂತರ ಒಂದು ಹಂತಕ್ಕೆ ಆ ಸಂಘರ್ಷವು ದ ಅಥವಾ ತಹಬಂದಿಗೆ ಬರುವಂತಹ ರ್ಭದಲ್ಲಿ ಹರಿ ಮತ್ತು ಹರ ಇಬ್ಬರಿಗೂ ಾನ್ಯತೆಗಳನ್ನು ಕೊಡುವಂತಹ ಕಥೆಗಳನ್ನು ತ್ತೇವೆ. ಸ್ಕಂದಪುರಾಣವೂ ಕೂಡ ಶೈವ ಾವೇ ಆಗಿದ್ದು ಶಿವನದೇ ಅಲ್ಲಿ ಆಧಿಪತ್ಯ, ಶಿವನ ಮೆಗೇ ಅಲ್ಲಿ ಪ್ರಾಶಸ್ತ್ಯ. ಶಿವನಿಂದನೆ ಮಾಡುವ ಣವಾದ ದಕ್ಷನನ್ನು ವಿಷ್ಣುವು ಖಂಡಿಸುತ್ತಾನೆ. ಹೆಬ್ಬಗಾರಿಕೆಯನ್ನು ಹೊಗಳುತ್ತಾನೆ. ಆದರೆ ದ್ರನು ಬಂದಾಗ ಅದೇ ವಿಷ್ಣುವು ದಕ್ಷನ ಗಿ ಹೋರಾಟವನ್ನೂ ಮಾಡುತ್ತಾನೆ. ಇಲ್ಲಿ ಇಬ್ಬಗೆಯ ನೀತಿಯನ್ನು ತೋರುವ ವಿಷ್ಣು ಮಹಾಭಾರತದ ಭೀಷ್ಮನ ರೀತಿಯಲ್ಲಿ ಕಾಣುತ್ತಾನೆ. ಪಾಂಡವರು ಧರ್ಮವಂತರೆಂದು ಭೀಷ್ಮನು ಅವರ ಪಕ್ಷಪಾತಿಯಾಗಿದ್ದರೂ, ತಾನು ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಮತ್ತು ಸಿಂಹಾಸನದ ಕಾವಲು ಕರ್ತವ್ಯವಾಗಿ ಮತ್ತು ಉಂಡ ಋಣದ ಪ್ರಕಾರ ಕೌರವರ ಪರವಾಗಿ ಹೋರಾಡುತ್ತಾನೆ. ಅದೇ ರೀತಿಯಲ್ಲಿ ವಿಷ್ಣುವನ್ನು ಸ್ಕಂದಪುರಾಣದಲ್ಲಿ ವೀರಭದ್ರನೊಡನೆ ಹೋರಾಡುವಾಗ ಬಿಂಬಿಸುತ್ತಾರೆ. ಆದರೆ ಭೀಷ್ಮನಂತೆ ಹೋರಾಡಿ ಮಡಿಯು ವುದಿಲ್ಲ, ಬದಲಾಗಿ ಸ್ವರ್ಗಕ್ಕೆ ಪಲಾಯನ ಮಾಡುತ್ತಾನೆ. ಹರಿ ಹರ ಬ್ರಹ್ಮ ಮತ್ತು ಇಂದ್ರಾದಿ ದೇವತೆಗಳನ್ನು ಪುರಾಣಗಳನ್ನು ತೋರಿಸುವ ರೀತಿಯೇ ವಿಚಿತ್ರ. ಕಾರ್ಟೂನ್ ಗಳಲ್ಲಿ ಮಿಕ್ಕಿ ಮೌಸ್ ಅಥವಾ ಟಾಂ ಅಂಡ್ ಜೆರ್ರಿಯಲ್ಲಿನ ಪ್ರಕರಣಗಳಂತೆ ಯಾರಿಗೂ ಸಾವೇ ಬರುವುದಿಲ್ಲ, ಮರಣಾಂತಕ ಗಲಾಟೆಗಳಾದರೂ, ಪ್ರಪಾತಕ್ಕೇ ಬಿದ್ದರೂ; ದವಡೆಗಳು ಪುಡಿಗುಟ್ಟಿ ತಿಕ ಸುಟ್ಟರೂ ಟಾಂ ಮತ್ತು ಜೆರ್ರಿಗಳಿಗೆ ಏನೂ ಆಗದೆ ಸಾಯದೇ ಇರುವಂತೆ ಈ ದೇವರುಗಳೂ, ದೇವತೆಗಳೂ ಇರುತ್ತಾರೆ. ವಿಷ್ಣು ಮತ್ತು ಶಿವ; ಇವರಿಬ್ಬರಿಗೆ ಯುದ್ಧವಾಗುವ ಸಂದರ್ಭವೊದಗಿ ತೆಂದಿಟ್ಟುಕೊಳ್ಳಿ. ಅಲ್ಲಿ ಶಿವ ಅಥವಾ ವಿಷ್ಣು ಯಾರಾದರೂ ಒಬ್ಬರು ಸತ್ತು ಹೋಗುತ್ತಾರೆ ಎಂಬ ಭಯ ಯಾರಿಗೂ ಬೇಡ. ಏಕೆಂದರೆ ವೈಷ್ಣವರು ರಚಿಸಿರುವ ಪುರಾಣವಾದರೆ ವಿಷ್ಣು ಗೆಲ್ಲುತ್ತಾನೆ. ಶೈವರು ರಚಿಸಿರುವ ಪುರಾಣವಾದರೆ ಶಿವ ಗೆಲ್ಲುತ್ತಾನೆ. ಒಟ್ಟಾರೆ ಸಾಯುವುದಿಲ್ಲ, ಒಬ್ಬರ ಗೆಲುವನ್ನು ಮತ್ತೊಬ್ಬರು ಒಪ್ಪುತ್ತಾರೆ ಮತ್ತು ಶ್ಲಾಘಿಸುತ್ತಾರೆ.

ಹಾಗೆಯೇ ಉಪನಿಷತ್ತುಗಳ ವಿಚಾರಗಳನ್ನು ಉಲ್ಲೇಖಗಳನ್ನು ನೇರವಾಗಿ ತೆಗೆದುಕೊಳ್ಳದಿದ್ದರೂ ಪುರಾಣಗಳಲ್ಲಿ ಉಪನಿಷತ್ತುಗಳ ಪ್ರಸ್ತಾಪ ಬರುತ್ತವೆ. ಹೀಗೆ ಅನೇಕ ಪುರಾಣಗಳನ್ನು ಉಪನಿಷತ್ತುಗಳ ನಂತರದ್ದು ಎಂದು ಧಾರಾಳವಾಗಿ ಊಹಿಸಬಹುದು. ಇನ್ನು ಭಗವದ್ಗೀತೆಯಂತೂ ಅತ್ಯಂತ ಹೆಚ್ಚು ಬಾರಿ ಪರಿಷ್ಕೃತಗೊಂಡಿರುವ ಕೃತಿ. ಅದರ ಧ್ಯಾನ ಶ್ಲೋಕದಲ್ಲಿ "ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನ" ಎಂಬ ಸಾಲನ್ನು ನೋಡಿ, ಎಲ್ಲಾ ಉಪನಿಷತ್ತುಗಳೆಂಬ ಹಸುಗಳ ಹಾಲನ್ನು ಕೃಷ್ಣ ಕರೆದು ಭಗವದ್ಗೀತೆಯ ರೂಪದಲ್ಲಿ ಕೊಟ್ಟಿದ್ದಾನೆ ಎಂದು ಹೇಳುತ್ತಾರೆ. ಅಂದರೆ ಮಹಾಭಾರತದ ರಚನೆಯು ಯಾವಾಗಲೇ ಆಗಿದ್ದರೂ, ಭಗವದ್ಗೀತೆಯಂತೂ ಕಾಲದಿಂದ ಕಾಲಕ್ಕೆ ಪರಿಷ್ಕಾರಕ್ಕೆ ಒಳಗಾಗುತ್ತಾ ಬಂದಿದೆ ಎಂದು ಸ್ಪಷ್ಟವಾಗುತ್ತದೆ.

ಬದಲಾಗಿರುವ ಭಾಷೆಗಳಲ್ಲಿ ಹಳೆಯ ನಿರೂಪಣೆಗಳು

ಕನ್ನಡವೇ ಆಗಲಿ, ಸಂಸ್ಕೃತವೇ ಆಗಲಿ ಅಥವಾ ಇನ್ನಾವುದೇ ಭಾಷೆಗಳೇ ಆಗಲಿ ಬೆಳವಣಿಗೆಗೆ ಒಳಗಾಗಿರುತ್ತವೆ. ಭಾಷಾಸಂಪತ್ತು, ಪದಬಳಕೆ, ನಿರೂಪಣಾ ಶೈಲಿಗಳು, ರಚನೆಯ ವಿಧಾನಗಳೆಲ್ಲವೂ ಕೂಡಾ ಬದಲಾವಣೆಗೆ ಒಳಗಾಗಿರುವಂತವೇ ಆಗಿರುತ್ತವೆ. ಹಾಗೆಯೇ ಅವುಗಳ ಅಲ್ಪ ವಿರಾಮ, ಪೂರ್ಣವಿರಾಮಾದಿ ಚಿಹ್ನೆಗಳೇ ಮೊದಲಾಗಿ ಅನೇಕ ಸಂಕೇತಗಳೂ ಸೇರಿದಂತೆ ವ್ಯಾಕರಣವೂ ಕೂಡ ಬದಲಾಗಿರುತ್ತದೆ. ಅದರಲ್ಲೂ ಜನರ ಬಾಯಲ್ಲಿ ಹರಿದಾಡುವಂತಹ ಭಾಷೆಗಳಾದರೆ ಅವಕ್ಕೆ ಬಹಳ ವೈವಿಧ್ಯತೆ ಲಭಿಸುವುದಲ್ಲದೇ ಬದಲಾವಣೆಯಂತೂ ಖಂಡಿತವೇ. ಸಾಮಾನ್ಯ ಜನರ ಬಾಯಿಗೆ ದೊರಕಿಸದಂತೆ ಕಟ್ಟಿಹಾಕಿಕೊಂಡ ಸಂಸ್ಕೃತವು ಕನ್ನಡವೇ ಇತರ ಆಡು ಭಾಷೆಗಳು ಬದಲಾದಷ್ಟು ಬದಲಾಗಿರಲಿಕ್ಕಿಲ್ಲವಾದರೂ ಒಂದು ಹಂತದ ಬದಲಾವಣೆಯನ್ನಂತೂ ಕಂಡಿರುತ್ತದೆ. ಹಾಗಾಗಿ ಎಷ್ಟೋ ಪುರಾತನ ಮಾತುಗಳು ಮತ್ತು ಸಾಹಿತ್ಯ ಕೃತಿಗಳು ಹೇಳುವಂತಹ ವಿಚಾರಗಳನ್ನು ನಿರ್ದಿಷ್ಟವಾಗಿ ಕಡ್ಡಿ ತುಂಡು ಮಾಡಿದಂತೆ ಹೇಳಲಾಗುವುದೂ ಇಲ್ಲ. ಆದರೆ ಒಂದು ಹಂತಕ್ಕೆ ಗ್ರಹಿಸಬಹುದಾಗಿರುತ್ತದೆ. ಬಹುಪಾಲು ವಿಷಯಗಳನ್ನು ವಿಶ್ಲೇಷಿಸಬಹುದಾಗಿರುತ್ತದೆ. ಆದರೆ ಅದಕ್ಕೆ ಇತರ ಸಂಪನ್ಮೂಲಗಳ ಅಧ್ಯಯನ ಬೇಕು. ಸಾಹಿತ್ಯವನ್ನಷ್ಟೇ ಆಧರಿಸಿಕೊಂಡರೆ ನಿಜಕ್ಕೂ ಅರೆ ಅಧ್ಯಯನವೇ ಆಗುತ್ತದೆ. ಸಂಪ್ರದಾಯಗಳು, ಹಬ್ಬಗಳು, ಕೃಷಿಯೇ ಮೊದಲಾದ ಪುರಾತನ ವೃತ್ತಿಗಳು, ಕಸುಬುಗಳು, ಗಾದೆಗಳು, ಸಾಂಸ್ಕೃತಿಕ ಅಭಿವ್ಯಕ್ತಿಗಳು; ಹೀಗೆ ಹತ್ತು ಹಲವು ವಿಷಯಗಳನ್ನು ಆಧರಿಸಿದರೆ ಮಾತ್ರವೇ ಪುರಾಣಗಳನ್ನೂ ಒಂದು ಹಂತಕ್ಕೆ ವಿವೇಚಿಸಬಹುದು.


ಹರಿಕಥೆ ದಾಸರು ಅಥವಾ ಕೀರ್ತನಾಕಾರರು, ಪುರಾಣಿಕರು, ದೈವಭಕ್ತರು, ಕ್ಷೇತ್ರ ಮಹಿಮೆಯನ್ನು ಹೇಳುವಂತಹ ಕ್ಷೇತ್ರವಾಸಿಗಳು ಹೇಳುವಂತಹ ಕಥೆಗಳನ್ನು ಮಾತ್ರವೇ ಕೇಳಿ, ಇದೇ ಪುರಾಣದ ಕತೆಯಂತೆ ಎಂದು ಇತಿಹಾಸವನ್ನಾಗಿಸಹೊರಟರೆ ಅದಕ್ಕಿಂತ ಮೂರ್ಖತನ ಇನ್ನೊಂದಿರಲಾರದು. ಪುರಾಣಗಳಿಂದ ಇತಿಹಾಸವನ್ನು ಹೆಕ್ಕ ಬಹುದು. ಆದರೆ ಅದರಲ್ಲಿ ಬಹಳಷ್ಟು ಗೊಂದಲಗಳುಂಟಾ ಗುತ್ತವೆ. ಸ್ಪಷ್ಟತೆ ಇರುವುದಿಲ್ಲ. ಆದರೆ ಇತಿಹಾಸದ ಅಧ್ಯಯನವೂ ಜೊತೆಗಿದ್ದು, ಪುರಾಣಗಳನ್ನೂ ಅಧ್ಯಯನ ಮಾಡಿದರೆ ಒಂದಿಷ್ಟು ಸಂಶೋಧನೆಗೆ ಸಹಾಯಕವಾಗ ಬಹುದು. ಇತಿಹಾಸದ ಅಧ್ಯಯನ ಇಲ್ಲದ ಪುರಾಣಾಧ್ಯಯನ ಶುಷ್ಕ ಮತ್ತು ಅಪಾಯಕರ. ಅದು ಜನರ ಮನಸ್ಸಿಗೆ ಅಸ್ವಾಭಾವಿಕವಾದಂತಹ ಚಿತ್ರಣಗಳನ್ನು ಕಟ್ಟಿಕೊಡುವುದೇ ಅಲ್ಲದೇ ಅವೈಜ್ಞಾನಿಕವಾದಂತಹ ಧೋರಣೆಗಳನ್ನು ಹೊಂದುವಂತಾಗುತ್ತದೆ.

ಜಾತಿ ಸಾಮಾಜಿಕ ಗುರುತು?

ಚಲನಚಿತ್ರದ ವಿಷಯವಾಗಿ ನನಗೆ ಸಹಾಯಕನಾಗಿರುವ ಒಬ್ಬ ಯುವಕನ ಹೆಸರಿನ ಗುರುತು ಹಚ್ಚಿ ಲಿಂಗಾಯತರಾ? ಎಂದು ಕೇಳಿದೆ. ಹೌದೆಂದು ಉತ್ತರಿಸಿದ. ಬಸವಣ್ಣನವರ ವಚನಗಳನ್ನು ಓದಿದ್ದೀಯಾ? ಎಂದು ಕೇಳಿದೆ. ಬಸವಣ್ಣನವರೇನೂ ಲಿಂಗಾಯತರ ಸೊತ್ತಲ್ಲ ಹಾಗೆಯೇ ಸ್ಥಾವರ ಧರ್ಮದ ಸಂಸ್ಥಾಪಕನೂ ಅಲ್ಲ, ಅದು ಬೇರೆ ವಿಷಯ. ಆದರೆ ಲಿಂಗಾಯತರೆಂದು ಗುರುತಿಸಿಕೊಳ್ಳುವವರಿಗೆ ಆ ಗುರುತಿನ ಬುನಾದಿಯ ಪರಿಚಯವಿದ್ದಿರಬೇಕು. ಅಲ್ಲದೇ ತನ್ನ ಗುರುತು ಎಲ್ಲಿಂದ ಹುಟ್ಟಿದೆ ಎಂದೂ, ಅದನ್ನು ತಾನು ಪಾಲಿಸುತ್ತಿದ್ದೇನೋ ಇಲ್ಲವೋ, ಆ ಅರಿವನ್ನು, ವಿಚಾರಗಳನ್ನು ಅಳವಡಿಸಿಕೊಳ್ಳುತ್ತಿದ್ದೇನೋ ಇಲ್ಲವೋ ಎಂದು ತಿಳಿಯಲಾದರೂ ಯಾವುದೇ ಲಿಂಗಾಯತನಿಗೆ ಒಂದು ಹಂತದ ಬಸವಣ್ಣನೇ ಮೊದಲಾದ ಇತರ ಶರಣ ಅನುಭಾವದ ವಚನಗಳು ತಿಳಿದಿರಲೇಬೇಕು. ಇಲ್ಲದಿದ್ದರೆ ಮೂಲ ಆಶಯಕ್ಕೇ ವ್ಯತಿರಿಕ್ತವಾಗಿ ನಡೆಯುತ್ತಾ ಬರೀ ಲಿಂಗಾಯತನೆಂಬ ಗುರುತನ್ನು ಮಾತ್ರವೇ ಹಚ್ಚಿಕೊಂಡಿರು ವಂತಹ ಪ್ರಮಾದ ಸಮಾಜದಲ್ಲಿ ಅನೇಕ ಗೊಂದಲಗಳಿಗೆ ಕಾರಣವಾಗುತ್ತದೆ. ಹಾಗಾಗಿಯೇ ಹಿಂದೂ ಧರ್ಮದ ಭಾಗವಾಗಿ ಲಿಂಗಾಯತ ಜಾತಿಯವರೆಂದು ಗುರುತಿಸಲ್ಪಡು ವವರೇ ಹೆಚ್ಚಿನ ಮಂದಿ.

ಇನ್ನು ನಮ್ಮ ಹುಡುಗನಿಗೆ ಶಾಲಾದಿನಗಳಲ್ಲಿ ಪಠ್ಯದಲ್ಲಿ ಅಳವಡಿಸಲಾಗಿದ್ದ ವಚನಗಳನ್ನು ಬಿಟ್ಟರೆ ಬೇರೆ ವಚನಗಳ ಪರಿಚಯವಿಲ್ಲ. ಬಸವಣ್ಣನವರ ಸಾವಿರಾರು ವಚನಗಳಿರುವಲ್ಲಿ ಲಿಂಗಾಯತರೆನಿಸಿಕೊಂಡವರೂ ಕೂಡ ಉಳ್ಳವರು ಶಿವಾಲಯ ಮಾಡುವರು, ದಯವಿಲ್ಲದ ಧರ್ಮ ಯಾವುದಯ್ಯಾ, ಕಳಬೇಡ ಕೊಲಬೇಡದಂತಹ ಕೆಲವೇ ಜನಪ್ರಿಯ ವಚನಗಳನ್ನು ಅಥವಾ ಸಾರ್ವತ್ರಿಕವಾಗಿರುವಂತಹ ವಚನಗಳನ್ನಷ್ಟೇ ತಿಳಿದಿರುತ್ತಾರೆ. ಜೊತೆಗೆ ಸಾಮಾನ್ಯ ಜನರು ಬೇರೆ ವಚನಗಳ ಗೊಡವೆಗೂ ಹೋಗುವುದಿಲ್ಲ, ಇತರ ಶರಣರ ವಚನಗಳನ್ನೂ ಅರಿತಿರುವುದಿಲ್ಲ. ಹಾಗಾಗಿಯೇ ಲಿಂಗಾಯತರೆಂದು ಇಂದು ಕರೆಯಿಸಿಕೊಳ್ಳುವವರು ಬಹುಪಾಲು ಮಂದಿಗೆ ಶರಣ ಪರಂಪರೆಯಾಗಲಿ, ವಚನ ಚಳವಳಿಯ ಮಹತ್ವವಾಗಲಿ, ತಮ್ಮದೇ ಧರ್ಮದ ಧೋರಣೆ ಮತ್ತು ನಡಾವಳಿಗಳಾಗಲಿ ಗೊತ್ತಿರುವುದಿಲ್ಲ. ಜೊತೆಗೆ ಜಾತಿ ಕಾಲಂ ಇರುವುದರಿಂದ ಲಿಂಗಾಯತ ಎಂದು ನಮೂದಿಸು ತ್ತಾರೆ. ಶಿವ, ವಿಷ್ಣು ಮುಂತಾದ ದೇವರುಗಳಿಗೆ ನಮಸ್ಕರಿಸುವುದಕ್ಕೆ ಹಿಂದೂ ಎಂದು ಧರ್ಮವನ್ನು ಗುರುತು ಹಾಕುತ್ತಾರೆ.

ಆ ಹುಡುಗನಿಗೆ ಕೇಳಿದೆ, "ದೇವರನ್ನು ನಂಬುತ್ತೀಯಾ?" ಎಂದು. ಹೌದೆಂದು ಉತ್ತರಿಸಿದ ಆತ ಹೇಳಿದ್ದೇನೆಂದರೆ, ಪ್ರತೀದಿನ ನಮ್ಮನೆಗೆ ಬರುವ ಮುನ್ನ ದಾರಿಯಲ್ಲಿ ಸಿಗುವ ಶನೀಶ್ವರ ದೇವಸ್ಥಾನಕ್ಕೆ ಹೋಗಿ ನಮಸ್ಕರಿಸಿಕೊಂಡು ಬರುತ್ತಾನೆಂದು. ಲಿಂಗಧಾರಣೆಯಾಗಿದೆಯಾ ಎಂದು ಕೇಳಿದರೆ, ಇಲ್ಲವೆಂದು ಹೇಳಿದ್ದಲ್ಲದೇ ನಮ್ಮ ಹಿರಿಯ ತಲೆಮಾರಿನವರು ಹಿಂದೆ ಪೂಜೋಪಚಾರಗಳನ್ನು ಮಾಡುತ್ತಿದ್ದರು. ಆದರೆ ನಮ್ಮ ಕಾಲಕ್ಕೆ ಅವೆಲ್ಲಾ ಅಷ್ಟೆಲ್ಲಾ ಕಟ್ಟುಪಾಡಿಗೆ ಒಳಗಾಗಿಲ್ಲ ಎಂದ. ಹೀಗೆ ಲಿಂಗಾಯತ ವೆಂಬುದು ಜಾತಿ ಕಾಲಂಗೆ ಬರೆಯುವಂತಹ ಹೆಸರಾಗಿ ಅಥವಾ ಬರಿದೇ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಅನಿವಾರ್ಯವೇನೋ ಎಂದು ಭ್ರಮಿಸುವ ಕಾರಣದಿಂದ ಜಾತಿಯಲ್ಲಿ ಗುರುತಿಸಿಕೊಳ್ಳುವುದಕ್ಕೆ ಲಿಂಗಾಯತವೇ ಆಗಲಿ, ಈ ಹುಡುಗನ ರೀತಿಯಲ್ಲಿ ಅಸಂಖ್ಯಾತ ಜನರು ತಮ್ಮ ತಮ್ಮ ಜಾತಿಯ ಹೆಸರುಗಳನ್ನು, ಧರ್ಮಗಳನ್ನು ಗುರುತಿಸಿಕೊಳ್ಳುತ್ತಿದ್ದಾರೆ. ಅದೇ ರೀತಿಯಲ್ಲಿ ಪುರಾಣದ ಕತೆಗಳಲ್ಲಿರುವ ರೂಪಕಗಳೂ, ಪ್ರತಿಮೆಗಳೂ, ಪಾತ್ರಗಳೂ ಇಂದು ಹರಿಕತೆ ಹೇಳುವವರ ಬಾಯಲ್ಲಿ ಬರಿದೇ ಕತೆಗಳಾಗಿ ಉಳಿದಿದ್ದರೆ ಪರವಾಗಿರಲಿಲ್ಲ, ಆದರೆ ಅದರ ವಿಚಿತ್ರ ಪ್ರಭಾವ ಬೇರೆ ರೀತಿಯೇ ಇದೆಯಲ್ಲವೇ! ಅದೇ ಸಮಸ್ಯೆ. ■



ಊರಿಗೆ ಬೆಂಕಿ ಇಟ್ಟ ಹುಚ್ಚನ ಕತ

ನಾನು ಹತ್ತು ದಿನಗಳ ಹಿಂದೆ ದುಬೈಯಲ್ಲಿ ಕೆಲಸ ಮಾಡುವ ನನ್ನ ಮಗನ ಮನೆಗೆ ಬಂದಿದ್ದೇನೆ. ಇಲ್ಲಿಯ ಝುಬೀಲ್ ಅಲಿ ಉಪನಗರದ ಡಿಸ್ಕವರಿ ಗಾರ್ಡನ್ ಪ್ರದೇಶದಲ್ಲಿ ನನ್ನ ಮಗನ ಮನೆಯಿದ್ದು, ದಿನಾಲೂ ಬೆಳಗ್ಗೆ ನಾನು ವಾಕ್‌ಗೆ ಹೋಗುವಾಗ ಅದೇ ಬಿಲ್ಡಿಂಗಿನಲ್ಲಿ ಇರುವ ಒಬ್ಬ ಎಪ್ಪತ್ತು ವರ್ಷ ವಯಸ್ಸಿನ ರಣಛೋಡ್ ದಾಸ್ ದೇಸಾಯಿ ಎಂಬ ಗುಜರಾತಿ ಬ್ರಾಹ್ಮಣ ಗೃಹಸ್ಥರ ಪರಿಚಯವಾಯಿತು. ಮೂಲತಃ ಅವರು ಅಹ್ಮದಾಬಾದಿನವರಾಗಿದ್ದು ಭಾರತದ ಈಗಿನ ರಾಜಕೀಯ ಪರಿಸ್ಥಿತಿಯ ಬಗ್ಗೆ ನನ್ನೊಡನೆ ಚರ್ಚಿಸುತ್ತಿದ್ದರು.

2002-2003 ರಲ್ಲಿ ಗುಜರಾತ್ ಮುಖ್ಯಮಂತ್ರಿ ಪದದ ಪ್ರತಿಸ್ಪರ್ಧಿಯಾಗಿದ್ದವರು ಹರೇನ್ ಪಾಂಡ್ಯಾ ಎಂಬ ಬಿಜೆಪಿಯ ಬ್ರಾಹ್ಮಣ ನೇತಾರ ಮತ್ತು ಆಗಿನ ಪ್ರಧಾನಿ ವಾಜಪೇಯಿಯವರ ಮೆಚ್ಚಿನ ಶಿಷ್ಯ. ಆದರೆ ಮಾರ್ಚ್ 2003 ರಲ್ಲಿ ಹರೇನ್ ಪಾಂಡ್ಯರದ್ದು ನಡುಬೀದಿಯಲ್ಲಿ ಸುಪಾರಿ ಕೊಲೆಯಾಗಿ ಅವರ ಮುಖ್ಯಮಂತ್ರಿ ಪದದ ಸ್ಪರ್ಧೆ ಕೊನೆಗೊಂಡು ಯಾರಿಗೆ ಲಾಭವಾಗಿದ್ದು ಎಂಬುದನ್ನು ಈ ನನ್ನ ಹೊಸ ದುಬೈ ಮಿತ್ರ ವಿವರಿಸಿದ್ದರು. ಮೊದಲು ಇವರೂ ಕಟ್ಟಾ ಬಿಜೆಪಿ ಬೆಂಬಲಿಗರಾಗಿದ್ದರಂತೆ. ಆದರೆ ಹರೇನ್ ಪಾಂಡ್ಯಾ ಕೊಲೆಯ ನಂತರ ಇವರಿಗೆ ರಾಜಕೀಯವೇ ಹೇಸಿಗೆ ಅನಿಸಿ ದೂರ ಸರಿದರಂತೆ. ಆನಂತರ ಕೆಟ್ಟ ಕರ್ಮಕ್ಕೆ ಘೋರ ಶಿಕ್ಷೆ ಕಾದಿರುತ್ತದೆ ಎಂಬ ಹಿಂದೂ ತತ್ವದಲ್ಲಿ ಅವರಿಗೆ ನಂಬಿಕೆ ಪೂರ್ಣ ಬಿದ್ದುಹೋಯಿತಂತೆ.



ಭಾರತದಲ್ಲಿಯ ಈಗಿನ ರಾಜಕೀಯ ಸ್ಥಿತಿಗೆ ಅನ್ವಯವಾಗುವ ಒಂದು ನಿಜ ಘಟನೆಯನ್ನು ಅವರು ನನಗೆ ಹೇಳಿದ್ದು ಅದು ಈ ಕೆಳಗಿನಂತಿದೆ.

ಒಂದೂರಲ್ಲಿ ಊರ ಹೊರಗೆ ಪಾಳುಬಿದ್ದ ಒಂದು ದೇವಾಲಯವಿತ್ತು, ಅಲ್ಲಿ ಊರಿನ ಸೋಮಾರಿ ಪಡ್ಡೆಗಳು ಇಸ್ಪೀಟ್ ಆಡಿ ಕಾಲ ಕಳೆಯುತ್ತಿದ್ದರು. ಒಂದು ದಿನ ಮಧ್ಯಾಹ್ನ ಈ ಪಡ್ಡೆಗಳು ಪಾಳು ದೇವಳಕ್ಕೆ ಹೋದಾಗ ದೇವಾಲಯ ಸ್ವಚ್ಛವಾಗಿತ್ತು ಮತ್ತು ಗರ್ಭಗುಡಿಯಲ್ಲಿ ಯಾರೋ ಒಂದು ಗುಂಡು ಕಲ್ಲು ಇಟ್ಟು ಅದನ್ನು ಕಾಡು ಹೂವಿನಿಂದ ಅಲಂಕರಿಸಿದ್ದು ಕಂಡುಬಂತು. ಪಡ್ಡೆಗಳು ಕುತೂಹಲದಿಂದ ಗರ್ಭಗುಡಿ ಹೊಕ್ಕು ನೋಡಿದಾಗ ಅಲ್ಲಿ ಒಬ್ಬ ಉದ್ದ ಗಡ್ಡ ಉದ್ದ ತಲೆ ಕೂದಲು ಇದ್ದ ವ್ಯಕ್ತಿ ಅದೇನೋ ಮಂತ್ರ ಜಪಿಸುತ್ತಾ ಕೂತಿದ್ದ. ಅವನ ಮೈಮೇಲಿದ್ದ ಬಟ್ಟೆಯಿಂದ ಹಾಗೂ ವರ್ತನೆಯಿಂದ ಅವನು ಹುಚ್ಚಾಸ್ಪತ್ರೆಯಿಂದ ತಪ್ಪಿಸಿಕೊಂಡು ಬಂದಿದ್ದ ವ್ಯಕ್ತಿ ಎಂದು ಗೊತ್ತಾಗುತ್ತಿತ್ತು. ಪಡ್ಡೆಗಳು ಅವನನ್ನು ಕೆದುಕಿ ವಿಚಾರಿಸಿದಾಗ ಅವನು ನಗರದ ಒಂದು ದೇವಸ್ಥಾನದ ಅರ್ಚಕನಾಗಿದ್ದ ಹಾಗೂ ಅವನ ಹೆಂಡತಿ ತರಕಾರಿ ಮಾರುವ ಸಾಬಿಯೊಂದಿಗೆ ಓಡಿಹೋಗಿದ್ದರಿಂದ ಅರ್ಚಕನಿಗೆ ಹುಚ್ಚು ಹಿಡಿದಿತ್ತು ಮತ್ತು ಅವನ ಹಿತೈಷಿಗಳು ಅವನನ್ನು ಹುಚ್ಚಾಸ್ಪತ್ರೆ ಸೇರಿಸಿದ್ದರು ಮತ್ತು ನಿನ್ನೆ ಸಾಯಂಕಾಲ ಅವನು ಹುಚ್ಚಾಸ್ಪತ್ರೆಯಿಂದ ತಪ್ಪಿಸಿಕೊಂಡು ಗೊತ್ತುಗುರಿ ಇಲ್ಲದೇ ಇಲ್ಲಿಗೆ ಬಂದು ಮುಟ್ಟಿದ್ದ ಎಂದು ತಿಳಿದುಬಂತು. ಆದರೆ ಅವನ ಉದ್ದನೆಯ ಗಡ್ಡ ಹಾಗೂ ಅವನು ಪಠಿಸುತ್ತಿದ್ದ ಮಂತ್ರ ಕೇಳಿ ಪಡ್ಡೆಗಳಲ್ಲಿ ಒಬ್ಬ ವ್ಯಾಪಾರಿ ಬುದ್ಧಿಯುಳ್ಳವನಿಗೆ ಒಂದು ಯುಕ್ತಿ ಹೊಳೆಯಿತು. ಅವನ ಯೋಜನೆಯಂತೆ ಆ ಐದು ಪಡ್ಡೆಗಳು "ಆ ವ್ಯಕ್ತಿ ಹಿಮಾಲಯದಲ್ಲಿ 12 ವರ್ಷ ತಪಸ್ಸು ಮಾಡಿ ಬಂದಿರುವ ಪವಾಡ ಪುರುಷ. ಚಿಕ್ಕಂದಿನಲ್ಲಿ ಅವನು ತನ್ನ ಊರಿನ ನದಿಯಲ್ಲಿದ್ದ ಮೊಸಳೆಗಳೊಂದಿಗೆ ಹೊಡೆದಾಡಿದ್ದ ವೀರ, ದೇಶಭಕ್ತ ಹಾಗೂ ಅವನ ಕೃಪೆಯಾದರೆ ಜನರ ಕಷ್ಟಗಳು ಪರಿಹಾರ ಆಗುತ್ತವೆ" ಎಂದು ಪ್ರಚಾರ ಮಾಡಿದರು. ಆ ಊರು ಅರೆಸಾಕ್ಷರ ರೈತರೇ ಹೆಚ್ಚಿದ್ದ ಊರಾಗಿತ್ತು, ಆಗ ಮಳೆಗಾಲವಾದರೂ ಮಳೆ ತಡವಾಗಿದ್ದರಿಂದ ಊರ ರೈತರು ಕಳವಳಗೊಂಡಿದ್ದರು. ಈ ಹುಚ್ಚ ಆ ಊರಿಗೆ ಬಂದ ಎರಡೇ ದಿನಕ್ಕೆ ಕಾಕತಾಳೀಯವಾಗಿ ಚೆನ್ನಾಗಿ ಮಳೆ ಬೀಳಲು ಶುರುವಾಯಿತು. ಈ ಮಳೆ ಬಂದಿದ್ದು ತಮ್ಮ ಊರಿಗೆ ಬಂದಿರುವ ಮಹಾತ್ಮನ ಪವಾಡದಿಂದಲೇ ಎಂದು ಪಡ್ಡೆಗಳು ಪ್ರಚಾರ ಮಾಡಿದರು. ನಂತರ ಆ ಋತುವಿನಲ್ಲಿ ಮಳೆ ಬೆಳೆ ಚೆನ್ನಾಗಿ ಆಗಿದ್ದರಿಂದ ಆ ಹುಚ್ಚ ನಿಜವಾಗಿ ಮಹಾತ್ಮನಾಗಿರುವ ಬಗ್ಗೆ ಊರಿನ ಮುಗ್ಧ ಜನರ ನಂಬಿಕೆ ಹೆಚ್ಚುತ್ತಾ ಹೋಯಿತು. ಮೇಲಾಗಿ ಅವನ ಪವಾಡದ ಸುದ್ದಿ ನೆರೆಯ ಊರುಗಳಿಗೂ ಹಬ್ಬಿ ಬರುವ ಭಕ್ತರ ಸಂಖ್ಯೆ ಹೆಚ್ಚುತ್ತಾ ಹೋಯಿತು. ಅದರಿಂದಾಗಿ ಮಹಾತ್ಮರಿಗೆ ಹರಕೆ-ದಕ್ಷಿಣೆಯ ರೂಪದಲ್ಲಿ ಹೆಚ್ಚು ಹೆಚ್ಚು ಹಣ ಬರಲು ಶುರುವಾಗಿ ಆ ಹುಚ್ಚನನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದ ಶಿಷ್ಯರ ವೇಷದ ಪಡ್ಡೆಗಳ ಆದಾಯವೂ ಭಾರಿ ಹೆಚ್ಚಾಯಿತು. ಜತೆಗೆ ಆ ಊರಲ್ಲಿ ಪಡ್ಡೆಗಳ ರಾಜಕೀಯ ಪ್ರಭಾವವೂ ಬೆಳೆಯಿತು. ಅದನ್ನು ಬಳಸಿ ಒಬ್ಬ ಪಡ್ಡೆ ಊರಿನ ಪಟೇಲನೂ ಆಗಿಬಿಟ್ಟ. ಋತುವಿನ ಕೊನೆಗೆ ಸಮೃದ್ಧ ಫಸಲು ಕಟಾವಿಗೆ ಬಂದು ನಿಂತಿತ್ತು.

ಆದರೆ ಒಂದು ಅಮಾವಾಸ್ಯೆ ರಾತ್ರಿ ಆ ಹುಚ್ಚನ ಹುಚ್ಚು ಕೆರಳಿ ನಡುರಾತ್ರಿಯಲ್ಲಿ ಎಲ್ಲರೂ ಮಲಗಿದ್ದಾಗ ಆ ಮಹಾತ್ಮ ಒಂದು ಕೊಳ್ಳಿ ಹಿಡಿದುಕೊಂಡು ಊರ ಸುತ್ತಲಿನ ಹೊಲಗಳಿಗೆ ನುಗ್ಗಿ ಕಟಾವಿಗೆ ಬಂದಿದ್ದ ಫಸಲಿಗೆ ಬೆಂಕಿ ಇಟ್ಟು ಸುಟ್ಟು ಹಾಕಿದ. ಮರುದಿನ ಬೆಳಗ್ಗೆ ತಮ್ಮ ಬೆಳೆಯೆಲ್ಲಾ ಸುಟ್ಟು ಹೋಗಿರುವುದು ಕಂಡು ಊರಿನಲ್ಲೆಲ್ಲಾ ಹಾಹಾಕಾರ ಎದ್ದಿತು. ಈ ಹುಚ್ಚ ಬೆಳೆಗಳಿಗೆ ಬೆಂಕಿ ಇಕ್ಕುವುದನ್ನು ನೋಡಿದ್ದವರೊಬ್ಬರು ಅದನ್ನು ಊರವರಿಗೆ ತಿಳಿಸಿದರು. ಊರವರ ಸಿಟ್ಟು ಆ ಹುಚ್ಚನ ವಿರುದ್ಧ ತಿರುಗಿತು. ಆಗ ತಕ್ಷಣ ಜಾಗೃತರಾದ ಪಡ್ಡೆ ಶಿಷ್ಯರು ಊರಿನ ಜನರನ್ನು ಸಮಾಧಾನಿಸುತ್ತ "ಈ ಬಾರಿಯ ಬೆಳೆಯ ನಡುವೆ ತುಂಬಾ ಕಳೆ ಬೆಳೆದಿತ್ತು, ಹಾಗಾಗಿ ಕಾಳುಗಳೆಲ್ಲಾ ಹೊರಗಿನಿಂದ ನೋಡಲು ಚೆನ್ನಾಗಿದ್ದರೂ ಒಳಗಿನಿಂದ ಜೊಳ್ಳಾಗಿದ್ದವು. ಈ ವಿಷಯ ಮಹಾತ್ಮರಿಗೆ ಅಂತರ್ ಜ್ಞಾನದಿಂದ ಗೊತ್ತಾಗಿ ಅವರು ಮುಂದಿನ ದಿನಗಳಲ್ಲಿ ಪೈರಿನ ನಡುವಿನ ಕಳೆಗಳನ್ನು ಸಂಪೂರ್ಣ ನಿವಾರಿಸಲು ಹಾಗೂ ಈಗಿನ ಜೊಳ್ಳು ಪೈರು ಸುಟ್ಟ ಗೊಬ್ಬರವಾಗಿ ಮುಂದಿನ ಋತುವಿಗೆ ನೆಲದ ಸತ್ವ ಹೆಚ್ಚಿಸಲು ಮತ್ತು ಮುಂದಿನ ಬೆಳೆಯ ಕಾಳು ಜೊಳ್ಳು ಆಗದಿರಲು ಮಹಾತ್ಮರು ನಿಮ್ಮ ಒಳ್ಳೆಯದಕ್ಕೇ ಬೆಳೆಗಳಿಗೆ ಬೆಂಕಿ ಕೊಟ್ಟಿದ್ದು. ಮುಂದೆ ಈ ಮಹಾತ್ಮರಿಂದಾಗಿ ಊರಿನವರಿಗೆ ಒಳ್ಳೆಯ ದಿನಗಳು ಬರಲಿವೆ" ಎಂದು ಪಡ್ಡೆ ಶಿಷ್ಯರು ಊರಿನ ಮುಗ್ಧ ರೈತರ ತಲೆ ತಿಕ್ಕಿ ಮಂಗ ಮಾಡಿದರು. ಹೊಸದಾಗಿ ಹುಟ್ಟಿದ್ದ ನೆರೆಯ ಊರಿನ ಭಕ್ತರೂ ಈ ಊರಿನ ರೈತರಿಗೆ ಉಪದೇಶಿಸುತ್ತಾ "ಮಹಾತ್ಮರು ನಿಮಗಾಗಿ ಇಷ್ಟೆಲ್ಲಾ ಕಷ್ಟಪಡುತ್ತಿದ್ದಾರೆ, ಇಷ್ಟೆಲ್ಲಾ ತ್ಯಾಗ ಮಾಡಿ ನಿಮ್ಮ ಊರಿಗೆ ಬಂದು ನೆಲೆಸಿದ್ದಾರೆ. ಆದರೆ ಅವರ ಮಹಾತ್ಮೆಯನ್ನು ಅರಿಯಲು ಆಗದ ಪಾಪಿಗಳು ನೀವು. ನಿಮಗಾಗಿ ತಮ್ಮ ಹೆಂಡತಿಯನ್ನು ಮತ್ತು ಕುಟುಂಬವನ್ನು ತ್ಯಾಗ ಮಾಡಿದ ಮಹಾತ್ಮರು ನಿಮಗಾಗಿ ವರ್ಷಗಟ್ಟಲೆ ಉಪವಾಸವಿದ್ದು ನಿಮಗಾಗಿ ಹಿಮಾಲಯದಲ್ಲಿ ತಪಸ್ಸು ಮಾಡಿದ್ದಾರೆ. ಈಗ ನಿಮ್ಮ ಬೆಳೆ ಸುಟ್ಟು ಹೋಗಿ ನಿಮ್ಮ ಮಕ್ಕಳು ಸ್ವಲ್ಪ ದಿನ ಉಪವಾಸ ಬಿದ್ದರೂ ಊರಿನ ಒಳ್ಳೆಯದಕ್ಕಾಗಿ ನಿಮ್ಮಿಂದ ಸ್ವಲ್ಪ ದಿನ ತಾಳ್ಮೆ ವಹಿಸಲು ಸಾಧ್ಯ ಇಲ್ಲವೇ? ಇಂತಹ ಸಣ್ಣ ತ್ಯಾಗವನ್ನೂ ಮಾಡಲಾಗದ ಮಹಾಸ್ವಾರ್ಥಿಗಳು ನೀವು" ಎಂದು ಶಿಷ್ಯರು ಮತ್ತು ಭಕ್ತರು ಊರಿನ ರೈತರನ್ನು ಮೊದಲಿಸಿದರು. ಈ ಮಾತು ಕೇಳಿ, ಮಹಾತ್ಮ ತರುವ ಒಳ್ಳೆಯ ದಿನಗಳ ನಿರೀಕ್ಷೆಯಲ್ಲಿ ಊರಿನ ಜನರು ಹೇಗೋ ಅರೆಹೊಟ್ಟೆಯಲ್ಲಿ ದಿನದೂಡತೊಡಗಿದರು.

ಮತ್ತೆ ಕೆಲವು ತಿಂಗಳು ಕಳೆದ ನಂತರ ಇನ್ನೊಂದು ಅಮಾವಾಸ್ಯೆಗೆ ಆ ಹುಚ್ಚನ ಹುಚ್ಚು ಮತ್ತೆ ಕೆರಳಿ, ಈ ಬಾರಿ ನಡುರಾತ್ರಿಯಲ್ಲಿ ಊರಿನ ಜನರ ಮನೆ ಮತ್ತು ಕೊಟ್ಟಿಗೆಗಳಿಗೇ ಕೊಳ್ಳಿಯಿಟ್ಟು ಬಿಟ್ಟ. ಕೊಟ್ಟಿಗೆಯಲ್ಲಿ ಕಟ್ಟಿದ್ದ ಜಾನುವಾರುಗಳು ಸುಟ್ಟು ಸತ್ತವು. ಕೆಲವು ಮನೆಯಲ್ಲಿ ಗಾಢ ನಿದ್ದೆಯಲ್ಲಿದ್ದ ಮಕ್ಕಳು ಮುದುಕರು ಸುಟ್ಟು ಹೋದರು. ಈ ವಿಷಯ ನಗರದ ಪೊಲೀಸರಿಗೆ ಗೊತ್ತಾಗಿ ಅವರು ಹುಚ್ಚಾಸ್ಪತ್ರೆಯವರನ್ನು ಕರೆದು ತಂದು ಹುಚ್ಚನನ್ನು ಹಿಡಿದುಕೊಂಡು ಹೋದಾಗಲೇ ಊರಿನ ಜನರಿಗೆ ಗೊತ್ತಾಗಿದ್ದು ತಾವು ಇಷ್ಟು ದಿನ ಮಹಾತ್ಮ ಎಂದು ಪೂಜಿಸಿದ್ದು ಒಬ್ಬ ಹುಚ್ಚನನ್ನು ಎಂದು. ಆದರೆ ಅಷ್ಟರಲ್ಲಿ ಮಹಾತ್ಮನ ಹೆಸರಲ್ಲಿ ಶಿಷ್ಯರು ತಾವು ಗಳಿಸಿದ್ದ ಹಣವನ್ನೆಲ್ಲಾ ಎತ್ತಿಕೊಂಡು ಎಲ್ಲಿಗೋ ಪಲಾಯನಗೈದಿದ್ದರು. ಮೊದಲ ಬಾರಿಯೇ ಕೈಗೆ ಬಂದಿದ್ದ ಫಸಲು ಸುಟ್ಟಾಗಲೇ ಆ ಮಹಾತ್ಮನ ಹುಚ್ಚನ್ನು ತಾವು ಸರಿಯಾಗಿ ಗುರುತಿಸಿ ಅವನನ್ನು ಊರಿನಿಂದ ಓಡಿಸಿದ್ದರೆ ತಮ್ಮ ಕುಟುಂಬಿಕರ ಹಾಗೂ ಜಾನುವಾರುಗಳ ಜೀವವಾದರೂ ಉಳಿಯುತ್ತಿತ್ತು ಎಂದು ಊರಜನರು ಪರಿತಪಿಸತೊಡಗಿದರು. ಆದರೆ ಕಾಲ ಮಿಂಚಿತ್ತು.

ಈ ಕಥೆಯಂತೆಯೇ ಈಗಿನ ನೋಟು ರದ್ದತಿಯ ಪ್ರಮಾದದ ನಂತರ ಭಾರತೀಯರು ಎಚ್ಚೆತ್ತುಕೊಳ್ಳದಿದ್ದರೆ ಇನ್ನೂ ಹೆಚ್ಚಿನ ಸಂಕಟ ಗಂಡಾಂತರಗಳು ಕಾದಿವೆ ಎಂದು ಆ ದುಬೈಯ ಗುಜರಾತಿ ಗೃಹಸ್ಥರು ಅರ್ಥಗರ್ಭಿತವಾಗಿ ಹೇಳಿದರು.

- ಪ್ರವೀಣ್ ಎಸ್‌ಶೆಟ್ಟಿ, ಇಮೇಲ್ ಮುಖಾಂತರ

ರಾಜಕೀಯ ಪಕ್ಷಗಳು ಮತ್ತು ಕಪ್ಪು ಹಣ

ಮಾಧ್ಯಮದಲ್ಲಿ ರಾಜಕೀಯ ಪಕ್ಷಗಳು ತಮಗೆ ಹಣ ಎಲ್ಲಿಂದ ಬಂತು ಎಂದು ವಿವರಿಸಬೇಕಿಲ್ಲ ಎಂಬ ಸುದ್ದಿ ಓದಿದಾಗ ನಮಗೆ ಬಹಳ ದಿಗ್ಭ್ರಮೆಯಾಯಿತು. ಇಲ್ಲಿಯವರೆಗೆ ಕೇಂದ್ರ ಸರಕಾರದ ನೋಟುಗಳ ರದ್ದತಿಯ ಉದ್ದೇಶ ಇದೇ ಇದ್ದಿತ್ತೆಂಬ ಅನುಮಾನವೂ ಉಂಟಾಯ್ತು.

ಯಾಕೆಂದರೆ, ಈ ಸವಲತ್ತಿನಿಂದಾಗಿ ಕಪ್ಪು ಹಣ ಉಳ್ಳವರಿಗೆ ದೊಡ್ಡ ಅನುಕೂಲವಾಗುತ್ತದೆ. ಅವರು ತಮ್ಮಲ್ಲಿ ಇನ್ನೂ ಉಳಿದಿರುವ ಹಳೇ ನೋಟುಗಳನ್ನು ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡಿ, ಆ ಪಕ್ಷಗಳೊಂದಿಗೆ ಘನಿಷ್ಠ ಸಂಬಂಧ ಹೊಂದಿ, ಅವುಗಳಿಂದ ಅಪಾರ ಲಾಭ ಪಡೆಯುವ ಸಂದರ್ಭಗಳಿವೆ. ಹೀಗಿರುವಾಗ ಕೇಂದ್ರ ಸರಕಾರ ಯಾವ ಪುರುಷಾರ್ಥಕ್ಕಾಗಿ ಹಳೇ ನೋಟುಗಳ ರದ್ಧತಿ ಜಾರಿಗೆ ತಂದಿದೆಂಬುದು ತಿಳಿಯದಾಗುತ್ತದೆ.

ಇದರಿಂದಾಗಿ ಆಡಳಿತ ಪಕ್ಷ ಮತ್ತು ಎಲ್ಲಾ ವಿರೋಧಿ ಪಕ್ಷಗಳು ಸ್ನೇಹಿತರಾಗಿ, ಒಂದಾಗಿ ದೇಶವನ್ನು ಲೂಟಿ ಮಾಡುವ ಸಂಭವ ಮಾತ್ರ ಖಚಿತವಿದೆ.

ಆದ್ದರಿಂದ, ದೇಶಾಭಿಮಾನಿಗಳು ಒಟ್ಟಾಗಿ ಇದನ್ನು




ಪ್ರತಿಭಟಿಸಬೇಕಾಗಿದೆ. ದೇಶದ ಉಚ್ಚ ನ್ಯಾಯಾಲಯ ಮೊರೆ ಹೋಗಬೇಕಾಗಿದೆ. ದೇಶದ ಸಂರಕ್ಷ ಮಾಡಬೇಕಾಗಿದೆ. ಮಾಧ್ಯಮದವರೂ ಇದಕ್ಕೆ ಟೊಂಕಕ ನಿಲ್ಲಬೇಕಾಗಿದೆ.

- ಡಾ. ಬಸವರಾಜ ಮೋದಿ, ಕಲಬುಗ


ಮೋದಿ ಭಕ್ತರು ಉತ್ತರ ಕೊರಿಯಾದಿಂದ ಪ್ರೇರಣೆ ಪಡೆದಿದ್ದಾ

ಕರ್ನಾಟಕದಲ್ಲಿ ಎಲ್ಲಿಯೇ ಆಗಲಿ ಯಾವುದಾದರು ರಾಜಕೀಯ ಪಕ್ಷದವರು ಮೋದಿಯ ನೋಟು ರದ್ದತಿ ವಿರುದ್ಧ ಪ್ರತಿಭಟನೆ ನಡೆಸುತ್ತಿರಲಿ ಅಥವಾ ಬ್ಯಾಂಕ ಎದುರು ನೋಟು ಬದಲಾಯಿಸಲು ಸೇರಿದ ಜನ ಹೊಸ ನೋಟುಗಳ ಕೊರತೆಯ ವಿರುದ್ಧ ತಮ್ಮ ಆಕ್ರೋ ತೋರಿಸಲಿ, ಆಗ ಅಲ್ಲಿ ಯಾವುದಾದರೂ ಒಬ್ಬ ಮುದು ಅಥವಾ ಮುದುಕ ಪ್ರತ್ಯಕ್ಷವಾಗಿ ಪ್ರತಿಭಟಿಸುತ್ತಿರುವವರ ತರಾಟೆಗೆ ತೆಗೆದುಕೊಂಡು ಮೋದಿಯನ್ನು ವಿಪರೀ ಹೊಗಳಿ ಪ್ರತಿಭಟನೆಕಾರರನ್ನು ಹೀಯಾಳಿಸುವ ಘಟ ನಡೆದೇ ನಡೆಯುತ್ತದೆ. ಆಗ ಅಲ್ಲಿ ಯಾವುದಾದರೂ ಪೇ ಪತ್ರಕರ್ತ ಇದ್ದು ಅವನು ಈ ಘಟನೆಯನ್ನು ಪತ್ರಿಕೆಗ ವರದಿ ಮಾಡುತ್ತಾನೆ.

ಇದು ಪೂರ್ವಯೋಜಿತ ನಾಟಕ ಎಂದು ಹ ಜನರಿಗೆ ಗೊತ್ತಿರಲಿಕ್ಕಿಲ್ಲ. ಹಿಂದಿನ ಐದಾರು ವಾರಗಳ ನಮ್ಮ ನೆರೆಯಲ್ಲಿದ್ದ ಒಬ್ಬ ಗುಯ್ಯಾಳಿ ಅಜ್ಜಿ ವಾರದ ದಿನಗ ಬೆಳಗ್ಗೆ ಒಬ್ಬ ಬಿಜೆಪಿ ಕಾರ್ಯಕರ್ತನೊಟ್ಟಿಗೆ ಎಲ್ಲಿಗ ರಿಕ್ಷಾದಲ್ಲಿ ಹೊರಗೆ ಹೋಗಿ ಮೂರು-ನಾಲ್ಕು ಗಂಟೆ ನಂತರ ಹಿಂತಿರುಗುತ್ತಿತ್ತು, ಒಮ್ಮೆ ಕುತೂಹಲದಿಂದ ನಮ ಮನೆಯ ಹೆಂಗಸರು ಆ ಅಜ್ಜಿಯನ್ನು ಈ ಬಗ್ಗೆ ವಿಚಾರಿಸ ಆ ಅಜ್ಜಿ ಸ್ವಲ್ಪ ಮುಜುಗರಪಡುತ್ತಾ ನಿಜ ಹೇಳಿ "ನಾನು ಎಲ್ಲಿಯಾದರೂ ಬ್ಯಾಂಕಿನ ಲೈನಿನಲ್ಲಿ ಬಿಜ ಕಾರ್ಯಕರ್ತ ಕೊಟ್ಟ ನಾಲ್ಕು ಹಳೆಯ ನೋಟುಗಳ ಹಿಡಿದು ನಿಂತುಕೊಂಡು ಅಲ್ಲಿ ಮೋದಿಯ ನೋ ರದ್ದತಿಯನ್ನು ಹೊಗಳಬೇಕು ಹಾಗೂ ಯಾರಾದ ಮೋದಿಯನ್ನು ತೆಗಳಿದರೆ ಅಂತಹವರನ್ನು ತರಾ ತೆಗೆದುಕೊಂಡು, ಸಾಧ್ಯವಾದರೆ ನಮ್ಮ ದೇಶದ ಯೋ ಉದಾಹರಣೆ ಕೊಟ್ಟು, ನೋಟು ರದ್ದತಿಯ ಸಮರ್ಥಿಸುವಂತಹ ವಾಗ್ದಾಳಿ ಬ್ಯಾಂಕಿನ ಲೈನಿನಲ್ಲಿ ನಿಂತಿ ಮೋದಿ ವಿರೋಧಿಗಳ ಮೇಲೆ ಮಾಡಬೇಕು" ಎ ತನಗೆ ಬಿಜೆಪಿಯ ಯುವ ಬ್ರಿಗೇಡಿನವ ಹೇಳಿಕೊಟ್ಟಿರುವರು ಹಾಗೂ ಈ ಕೆಲಸಕ್ಕೆ ತನಗೆ ದಿ ರೂ. 300 /- ಸಿಗುತ್ತದೆ ಎಂದು ಆ ಅಜ್ಜಿ ನಮ ಹೇಳಿತು. ಹೀಗಿದೆ ನಮ್ಮ ನೆರೆಯ ಘಾಟಿ ಅಜ್ಜಿ ಹಾಗ ಯುವ ಬ್ರಿಗೇಡಿನ ಕಜ್ಜಿ ನಾಯಿಗಳ ವರಸೆ. ಈ ರಿ ಅನೇಕ ಬಾರಿಗೆ ಅಜ್ಜಿ ಅಥವಾ ಅಜ್ಜಂದಿರನ್ನು ಬಿಜೆ ಯುವ ಬ್ರಿಗೇಡಿನವರು ದಿನಾಲೂ ಸಾರ್ವಜನಿಕ ಸ್ಥಳಗ



'ಡಿಜಿಟಲ್ ಕಡುಬು'ವಿನ ಬಲವಂತದ ತುರುಕುವಿಕೆ ಯಾವ ಪುರುಷಾರ್ಥಕ್ಕಾಗಿ?



ಸೀಮೆಗಿಲ್ಲದ ಹಳಸಲು (ಹಿಂದಿನ ಸರ್ಕಾರಗಳೂ ಎದಾಯಿ ಕೊಟ್ಟರೇ ನಡೆಸಿದ್ದ) ಸರ್ಜಿಕಲ್ ಸ್ಟ್ರೈಕ್‌ನ ಬಳಿಕವೂ ನಿಲ್ಲದ ಪಾಕ್ ರಂಪಾಟ ಹಾಗು ಭಾರತೀಯ ಯೋಧರ ಕೊಲೆ ಹಾಗು ರುಂಡ ಕತ್ತರಿಸುವಿಕೆಗಳು, ವಿದೇಶಿ ಕಪ್ಪುಹಣದ ವಿಚಾರದಲ್ಲಿನ ಬಹಿರಂಗವಾದ ಬುರುಡೆತನಗಳು, ಅಭಿವೃದ್ಧಿ ಕೇವಲ ಪ್ರಚಾರ ಫಲಕಗಳಿಗೆ ಸೀಮಿತಗೊಂಡಿರುವ ನಗ್ನಸತ್ಯ ಇತ್ಯಾದಿ ಟೊಳ್ಳುತನವನ್ನು ಮರೆಮಾಚಲು ನವೆಂಬರ್ ಎಂಟರಂದು ದೇಶಾದ್ಯಂತ ಟಿವಿಯಲ್ಲಿ ಬಂದದ್ದು ಅಚ್ಛೇದಿನ್ ವಾಲಾನ 'ಐತಿಹಾಸಿಕ' ಲೈವ್ ಬಾಂಬ್. (ಇದು ಲೈವ್ ಅಲ್ಲ, ಮೊದಲೇ ಚಿತ್ರೀಕರಿಸಲ್ಪಟ್ಟದ್ದು ಎಂಬ ಸತ್ಯವೂ ಹೊರಬಂದಿದೆ) ಈ ಬಾಂಬ್‌ನಲ್ಲಿ ಈ ದೇಶದ ಕಪ್ಪುಹಣ, ನಕಲಿ ನೋಟು ಹಾಗು ಭಯೋತ್ಪಾದನೆಯ ವಿರುದ್ಧ ಸಮರ ಸಾರುವ ಉದ್ದೇಶಕ್ಕಾಗಿ ಎಂದು ಹೇಳಲಾಯಿತು. ಆದರೆ ಆಸ್ತಿ, ಚಿನ್ನ, ಭೂಮಿ, ಬೇನಾಮಿ ದಂಧೆ, ಷೇರು ಮಾರುಕಟ್ಟೆ ಹಾಗು ವಿದೇಶಿ ವ್ಯವಹಾರ ಬಿಟ್ಟರೆ ಕೇವಲ ಐದಾರು ಪರ್ಸೆಂಟಷ್ಟೇ ಇರುವಂತಹ 'ನೋಟಿನ ರೂಪದ ಕಪ್ಪುಹಣ'ದ ವಿರುದ್ಧ ಹೊಸ ನೋಟಿನ ಛಪಾವಣೆ ಮೂಲಕ ಸಮರ ಎನ್ನುವುದೇ ಹಾಸ್ಯಾಸ್ಪದ.

ಇದು ಜಾಹೀರಾದ ಮೇಲೆ ಹಾಗು ಮಲ್ಯ ಹಾಗು ಲಲಿತ್ ಮೋದಿಯಂತವರ ಮಿಲಿಯನ್ ಡಾಲರ್ ಕಳ್ಳರ ಬಗೆಗಿನ ಇವರ ಒಳಮಮಕಾರ ಬಹಿರಂಗಗೊಂಡಿತು. ಈಗ ಭಕ್ತರು ಹಾಗು ಯೋಜನೆಯ ರೂವಾರಿಗಳು ಈ ತನಕ ಕೊರೆಯುತ್ತಿದ್ದ ಕಪ್ಪುಹಣ-ಭಯೋತ್ಪಾದನೆಯ ಬದಲು ದೇಶದಲ್ಲಿ ಕ್ಯಾಶ್ ಲೆಸ್ ದುನಿಯಾ ಸೃಷ್ಟಿಗಾಗಿ ಈ ತೀರ್ಮಾನ ಎಂದು ತಮ್ಮ ವರಸೆಯನ್ನು ಬದಲಿಸಿಕೊಂಡರು. ಹಾಗಾದರೆ ಈ ಡಿಜಿಟಲ್ ದುನಿಯಾ, ಕ್ಯಾಶ್ ಲೆಸ್ ವ್ಯವಹಾರ, ಪೇಟಿಎಂ ವ್ಯವಸ್ಥೆ ನಮ್ಮಲ್ಲಿ ಎಷ್ಟರಮಟ್ಟಿಗೆ ಒಗ್ಗುವಂತಾದ್ದು ಎಂಬ ಪ್ರಶ್ನೆ ಇದೀಗ ಎದುರಾಗಿದೆ.


ಇಂದಿನ ದಿನಗಳಲ್ಲಿ ತಂತ್ರಜ್ಞಾನದ ವೇಗ ನಿಜಕ್ಕೂ ಬೆಚ್ಚಿ ಬೀಳಿಸುವಂತಿದೆ. ಬಡವ ಶ್ರೀಮಂತರೆನ್ನದೇ ಬಹುತೇಕ ಎಲ್ಲರ ಕೈಯ್ಯಲ್ಲೂ ಮೊಬೈಲ್ ಫೋನ್‌ಗಳು ಕುಣಿದಾಡುತ್ತಿವೆ. ಆ ಸಾಧನದ ಕರಾಮತ್ತೋ ದಿನದಿನಕ್ಕೆ ಸಂಭಾಷಣೆಗಷ್ಟೇ ಸೀಮಿತವಾಗುಳಿಯದೇ ಬದಲಾಗುತ್ತಲೇ ಇದೆ. ಆದರೆ ಇದು ತಂತ್ರಜ್ಞಾನದ ಒಂದು ಮುಖದ ಸಣ್ಣ ಭಾಗವಷ್ಟೆ ಎನ್ನುವುದು ಅಷ್ಟೇ ಸತ್ಯ.

ಕೆಲವರ್ಷಗಳ ಹಿಂದೆ ಸದ್ದು ಮಾಡಿದ ರಜನಿಕಾಂತರ 'ಎಂದಿರನ್' ಸಿನಿಮಾದಲ್ಲಿ ಆ ಸಿನಿಮಾಕ್ಕೆ ತಿರುವುಕೊಡುವಂತಹ ಒಂದು ದೃಶ್ಯವಿದೆ. ಅದೆಂದರೆ, ಎಲ್ಲವನ್ನೂ ಅದ್ಭುತವಾಗಿ ಮಾಡಿ ಮುಗಿಸುವ ರಜನಿಯ ಯಂತ್ರಮಾನವ ಬೆಂಕಿಯ ನಡುವೆ ಸಿಕ್ಕಿಬಿದ್ದ ಒಬ್ಬ ಮಹಿಳೆಯನ್ನು ರಕ್ಷಿಸುತ್ತಾನೆಂಬುದು ಹೌದಾದರೂ ಅದು ರಕ್ಷಣೆಯಾಗಿರದೇ ಒಂದು ರೀತಿಯ ಭೀಕರ ಕೊಲೆಯೇ ಆಗಿ ಬದಲಾಗುತ್ತದೆ. ಪ್ರೋಗ್ರಾಮಿಂಗ್ ಮೂಲಕ ಎಲ್ಲವನ್ನೂ ಯಾಂತ್ರಿಕವಾಗಿ ಮಾಡುವ ಆ ಯಂತ್ರಮಾನವ ಬೆತ್ತಲೆಯಿದ್ದ ಮಹಿಳೆಯನ್ನು ರಕ್ಷಿಸಿ ಸಾರ್ವಜನಿಕರೆದುರು ಹೊರ ತಂದುದಕ್ಕೆ ಅವಮಾನಿತಳಾದ ಆಕೆ ಅಲ್ಲಿದ್ದ ವಾಹನದಡಿ ಬಿದ್ದು ಸಾಯುತ್ತಾಳೆ.

ಹೌದು, ಈಗ ಲಭ್ಯವಿರುವ ಕಂಪ್ಯೂಟರ್ ತಂತ್ರಜ್ಞಾನಗಳೆಲ್ಲವೂ ಯಾವುದೋ ನಿರ್ದಿಷ್ಟ ಪ್ರೋಗ್ರಾಮಿಂಗ್ ಮೂಲಕ ನಿಯಂತ್ರಿತವಾದುವುಗಳೇ ಹೊರತು (ಇತ್ತೀಚಿಗಿನವುಗಳು ಕೆಲವು ಪೂರಕ ಸೆನ್ಸರ್-ಸಂವೇದಕಗಳೊಂದಿಗೆ ಇನ್ನಷ್ಟು ಆಧುನಿಕಗೊಂಡಿವೆ ಎನ್ನುವುದನ್ನು ಬಿಟ್ಟರೆ) ಸ್ವಯಂ ಮಾನವೀಯ ಸ್ಪಂದನೆಯ ಯಾವ ಕಂಪ್ಯೂಟರ್ ಸಾಧನವನ್ನೂ ಇನ್ನೂ ಕಂಡುಕೊಳ್ಳಲಾಗಿಲ್ಲ. ಅಂದರೆ ಈ ಬರಹದಲ್ಲಿ ಪ್ರಸ್ತಾಪಿಸಲಿರುವ ಕಂಪ್ಯೂಟರ್ ಆಧಾರಿತ ಎಟಿಎಂ ಮೆಶಿನಾಗಲೀ ಸ್ವೈಪಿಂಗ್ ಮೆಶಿನಾಗಲೀ ಬಡವ-ಶ್ರೀಮಂತ, ಕರಿಯ-ಬಿಳಿಯ, ಬ್ರಾಹ್ಮಣ-ಶೂದ್ರ, ಕಳ್ಳಸುಳ್ಳ ಎನ್ನುವ ಯಾವ ವ್ಯತ್ಯಾಸದ ಅರಿವೂ ಇರದು. ನಿಜವಾದ ಯಜಮಾನ ಒತ್ತಿದ ಕೋಡನ್ನು ಎಟಿಎಂ ಬಳಸಿ ಕಳ್ಳ ಒತ್ತಿದರೂ ನಿರ್ಭಾವುಕ ಸಂತನಂತೆ ಕಳ್ಳನಿಗೂ ಹಣವನ್ನು ಅಷ್ಟೇ ಪ್ರಾಮಾಣಿಕತೆಯಿಂದ ಈ ಮೆಷಿನ್ ಕೊಡುತ್ತದೆನ್ನುವುದು ಅಷ್ಟೇ ವಾಸ್ತವ.

ವರ್ಷದ ಹಿಂದೆ ನನ್ನ ಮಗನ ಹೃದಯಭಾಗದ ಬಳಿಯ ಸರ್ಜರಿಗೆಂದು ಆಸ್ಪತ್ರೆಯಲ್ಲಿದ್ದಾಗ ಒಂದು ಹೆಣ್ಣಿನ ಧ್ವನಿ ಫೋನ್ ಮಾಡಿ "ನಾವು ಡೆಲ್ಲಿಯ ಬ್ಯಾಂಕ್‌ನಿಂದ ಮಾತನಾಡೋದು. ನಿಮ್ಮ ಎಟಿಎಮ್ ಸೆಟ್ಟಿಂಗ್‌ನಲ್ಲಿ ಏನೋ ಬದಲಾವಣೆಯಾಗಬೇಕಿದೆ. ಬೇಗ ನಿಮ್ಮ ಎಟಿಎಮ್‌ನ ಡೀಟೈಲ್ಸ್ ಎಲ್ಲ ಕೊಡಿ. ಇಲ್ಲವಾದರೆ ನಿಮ್ಮ ಎಟಿಎಮ್ ಅನ್ನು ಬ್ಲಾಕ್ ಮಾಡುತ್ತೇವೆ" ಎಂದು ಹಿಂದಿಯಲ್ಲಿ ಹೆದರಿಸಿತ್ತು. ಮೊದಲೇ ತಲೆಬಿಸಿಯಲ್ಲಿದ್ದ ನಾನು ಸಾವುಬದುಕಿನ ನಡುವೆ ಮಲಗಿದ್ದ ಮಗನಿಗಾಗಿ ಹಣದ ತುರ್ತು ಅಗತ್ಯವೂ ಇದ್ದಕಾರಣ ಬ್ಲಾಕ್ ಆದರೆ ತೊಂದರೆ ಎನ್ನುವ ಭಯಕ್ಕೆ ಬಿದ್ದು (ಆಸ್ಪತ್ರೆಯ ಅಗತ್ಯಕ್ಕೊಂದು ಅಡ್ವಾನ್ಸ್ ತೆಗೆದುಕೊಂಡ ಒಟ್ಟು ಒಂದುವರೆ ಲಕ್ಷ ಹಣ ನನ್ನ ಅಕೌಂಟ್‌ನಲ್ಲಿತ್ತು) ಆಕೆ ಕೇಳಿದ ವಿವರಕ್ಕೆಲ್ಲ ಉತ್ತರಿಸುತ್ತಾ ಕೊನೆಗೆ ಯಾಕೋ ಸಿಗ್ನಲ್ ಸಿಗದೆನ್ನುವ ನೆಪದಲ್ಲಿ ಕಟ್ ಮಾಡಿದೆ. ಆಕೆ ಪುನಃ ಕರೆ ಮಾಡಿದಳಾದರೂ ಆಕೆಯ ಮಾತಿನ ಧಾಟಿ ಅನುಮಾನಾಸ್ಪದವಿದ್ದ ಕಾರಣ ನಾನು ಮುಂದುವರೆಯಹೋಗಲಿಲ್ಲ. ಒಂದು ವೇಳೆ ನಾನು ಆ ವಂಚಕಿಯ ಗುಂಪಿನ ಬಲೆಗೆ ಬಿದ್ದಿದ್ದರೆ ನನ್ನ ಪಾಡು ನಿಜಕ್ಕೂ ಕಂಗಾಲಾಗಿರುತಿತ್ತು. ಇಂತಹ ಖದೀಮ ಗುಂಪನ್ನು ಹಿಡಿಯುವುದು ಕಷ್ಟವೇನಲ್ಲ, ಪುನಃ ಪುನಃ ಅದೇ ನಂಬರಿಂದ ಕರೆ ಮಾಡುವ ಅವರ ಆ ನಂಬರಿನ ಜಾಡು ಹಿಡಿದರಷ್ಟೇ ಸಾಕು. ಆದರೆ ಇಂತಹ ಕೇಸಿನಲ್ಲಿ ಪೊಲೀಸ್ ವ್ಯವಸ್ಥೆಯೂ "ನಿಮ್ಮ ಹಣಬರಹಕ್ಕೆ ನಾವು ಹೊಣೆಯಲ್ಲ" ಎಂದು ಬೇಕಂತಲೇ ಜಾರಿಕೊಳ್ಳುತ್ತದೆ.

ಆತ ಅಕ್ಷರಸ್ಥನಿರಲಿ, ಅನಕ್ಷರಸ್ಥನಿರಲಿ ಡಿಜಿಟಲ್ ತಂತ್ರಜ್ಞಾನದ ಇಂತಹ ವಂಚನೆಗಳಿಗೆ ಲೆಕ್ಕವೇ ಇಲ್ಲ, ಕೆಲವಂತೂ ಗೊತ್ತೇ ಆಗದಂತಹ ಸೂಕ್ಷ್ಮ ವಂಚನೆಗಳಿರುತ್ತವೆ. ಅಷ್ಟೇ ಅಲ್ಲದೇ ಈ ಕಂಪ್ಯೂಟರ್ ಆಧಾರಿತ ಯಂತ್ರಗಳು ನೂರಕ್ಕೆ ನೂರು ನಂಬಿಕೆಗೆ ಅರ್ಹವೆಂತಲೂ ಹೇಳಲಾಗದು. ದುಡ್ಡು ಬಾರದೇ ಕೇವಲ ರಿಸೀಟ್ ಬಂದಂತ ಅನುಭವಗಳಾಗಿರಬಹುದು. ಸಾವಿರ ಒತ್ತಿದ್ದಕ್ಕೆ ಬುರ ಬುರ ಅಂತ ಲಕ್ಷ ಹಣ ಕಾರಿಕೊಂಡ ಎಟಿಎಮ್ ಮೆಷಿನ್‌ಗಳೂ ಇವೆ. ತಾಂತ್ರಿಕ ಸಮಸ್ಯೆಯೋ ಅಥವ ಅದರಲ್ಲಿನ ಸೆನ್ಸರ್‌ಗಳೋ ಕೈಕೊಟ್ಟು ಯಾವ ಮೆಷಿನ್‌ನಲ್ಲೂ ಈ ರೀತಿ ಆಗಬಹುದಾಗಿದೆ. ಅದೇರೀತಿ ಸರಿಯಾದ ಕರೆಂಟ್ ಹಾಗು ಇಂಟರ್‌ನೆಟ್ ಸೌಲಭ್ಯ ಇರದಿದ್ದರಷ್ಟೇ ಅಲ್ಲದೇ ಗ್ರಾಹಕನಿಗೆ ಈ ಬಗೆಗಿನ ಅರೆಬರೆ ಜ್ಞಾನವಿದ್ದರೂ ಕೂಡ ಇಲ್ಲಿ ಸಮಸ್ಯೆಗಳು ಎದುರಾಗುವ ಸಂಭವವಿದೆ.



ಈಗಿನ ಪ್ರತಿಯೊಂದು ಸಾಧನಗಳಲ್ಲೂ ಡಿಜಿಟಲ್ ತಂತ್ರಜ್ಞಾನದ ಅಳವಡಿಕೆಯಿದೆ. ಡಿಜಿಟಲ್ ಎಂದರೆ 0 ಹಾಗು 1 ಎನ್ನುವ ಎರಡಂಕಿಯ ಬೈನರಿ ಡಿಜಿಟ್ ಸೂತ್ರದಲ್ಲಿ ಕಟ್ಟಿಕೊಂಡ ತಂತ್ರಜ್ಞಾನ (ನಮ್ಮ ಸಾಮಾನ್ಯ ಬಳಕೆಯಲ್ಲಿರುವುದು ಹತ್ತಂಕಿ ಬಳಕೆಯ ದಶಮಾನ ಪದ್ಧತಿ). ಇದೂ ಕೂಡ ಯಾವ ಸಾಧನಕ್ಕೂ ಅರ್ಥವಾಗದು. ಅವುಗಳು ಅರ್ಥಮಾಡಿಕೊಳ್ಳುವುದು ಕೇವಲ ಆಫ್-ಆನ್‌ಗಳನ್ನು ಮಾತ್ರ. ಡಿಜಿಟಲ್ ತಂತ್ರಜ್ಞಾನ ಆಧುನಿಕ ಯುಗದ ಅಭಿವೃದ್ಧಿ ವಿಚಾರದಲ್ಲಿ ದೊಡ್ಡ ಮೈಲಿಗಲ್ಲೇ ಹೌದಾದರೂ ಅದೇ ಸರ್ವಸ್ವ ಖಂಡಿತ ಅಲ್ಲ. ಸಾವಿರಾರು ರೂ. ಮುಖಬೆಲೆಯ ಮೊಬೈಲ್ ಸಾಧನಗಳು ಸಂಪರ್ಕ ಮನರಂಜನೆಯೇ ಮೊದಲಾದ ಹಲವಾರು ಕಾರಣಗಳಿಂದ ಅದರಷ್ಟಕ್ಕೇ ವಿದ್ಯಾವಂತ ಅವಿದ್ಯಾವಂತರೆನ್ನದೇ ಬಹುತೇಕ ಎಲ್ಲರಲ್ಲೂ ಹರಡಿಹೋದವೇ ಹೊರತು ಇಲ್ಲಿ ಯಾವ ಸರಕಾರವೂ ಮೊಬೈಲ್ ಬಳಕೆಯನ್ನು ಕಡ್ಡಾಯಗೊಳಿಸಿಲ್ಲ. ಕ್ಯಾಶ್‌ಲೆಶ್ ವ್ಯವಹಾರ ಅಥವ ಪೇಟಿಎಮ್ ಅಳವಡಿಕೆ ಗಳಿಗೆಲ್ಲ ನಮ್ಮ ದೇಶದಲ್ಲಿ ಅದರದ್ದೇ ಆದ ತೊಡಕುಗಳಿವೆ. ಮುಖ್ಯವಾಗಿ ಇದು ವ್ಯಕ್ತಿಯೊಬ್ಬನ ಹಣದ ವ್ಯವಹಾರಕ್ಕೆ ಸಂಬಂಧಿಸಿದಂತದ್ದಾಗಿರುವ ಕಾರಣ. ಅನಕ್ಷರಸ್ಥರೂ ಅವಿದ್ಯಾವಂತರೂ ಅದೇರೀತಿ ವಂಚಕ ಮತ್ತು ಅದರ ಪರೋಕ್ಷ ಪೋಷಕರು ಬಹಳಷ್ಟಿರುವ ನಮ್ಮ ದೇಶದಲ್ಲಿ ಒಮ್ಮೆಲೆ ಕ್ಯಾಶ್‌ಲೆಶ್ ವ್ಯವಹಾರವೆಂದರೆ ಅದು ನೀರು ಇಳಿಯದ ಗಂಟಲಿನಲ್ಲಿ ಕಡುಬು ತುರುಕಿದಂತೆ ಬಲವಂತದ ಪ್ರಕ್ರಿಯೆ ಎಂದು ಅನೇಕರಿಗೆ ಅನ್ನಿಸದೇ ಇರದು.

ಎಟಿಎಮ್ ಬೂತಿನ ಒಳಗೆ ಅಥವಾ ಬಾಗಿಲಿನಲ್ಲಿ - ಅಪರಿಚಿತರೊಂದಿಗೆ ವ್ಯವಹರಿಸದಿರಿ, ಅಪರಿಚಿತರೊಂದಿಗೆ ನಿಮ್ಮ ನಂಬರನ್ನು ಹಂಚಿಕೊಳ್ಳಬೇಡಿ ಎಂಬಂತಹ ಸೂಚನೆಗಳಿದ್ದರೂ ಎಷ್ಟೋ ಅನಕ್ಷರಸ್ಥರು ವಿಧಿಯಿಲ್ಲದೇ ತನ್ನ ಹಿಂದೆ ಕ್ಯೂನಲ್ಲಿ ನಿಂತಿದ್ದ ಅಪರಿಚಿತನಲ್ಲಿ ತನ್ನ ಕಾರ್ಡ್ ಹಾಗು ನಂಬರ್ ಕೊಟ್ಟು ತನ್ನದೇ ಹಣವನ್ನು ದೈನೇಸಿಯಂತೆ ಡ್ರಾ ಮಾಡಿಕೊಳ್ಳುವಂತಹ ಅನಿವಾರ್ಯತೆ ಇದೆ. ಇಲ್ಲಿ ಪೇಟಿಎಮ್ -ಕ್ಯಾಶ್‌ಲೆಸ್ ವ್ಯವಹಾರಗಳೆಲ್ಲ ಒಂದು 'ಆಯ್ಕೆ'ಗಳಾಗಿರಬೇಕೇ ಹೊರತು ಕಡ್ಡಾಯವಾಗಿ ಅಲ್ಲ. ಅನೇಕ ಮುಂದುವರೆದ ದೇಶಗಳು ಕೂಡ ನೂರಕ್ಕೆ ನೂರು ಇವನ್ನು ಕಡ್ಡಾಯಗೊಳಿಸದಿರುವಾಗ ನಮ್ಮವರಿಗೆ ಇಲ್ಲಿನ ಬಲಾಢ್ಯ ಉದ್ಯಮಿಗಳನ್ನು ಸಂಪ್ರೀತಗೊಳಿಸುವ ತರಾತುರಿ(ಕೆ)ಗಳೆಲ್ಲ ಯಾಕೋ? ಇದನ್ನು ಕಂಡೇ ಅರುಣ್ ಶೌರಿಯಂತವರು ಹೇಳಿದ್ದು "ಹೆಂಡತಿ, ಮಕ್ಕಳು ಹಾಗು ಕೌಟುಂಬಿಕ ಸಹಜ ಜಂಜಾಟಗಳ ಸಾಮಾನ್ಯ ಅರಿವಿರದ ಮುತ್ಠಾಳನನ್ನು ಇನ್ನು ಮುಂದಾದರೂ ದಯವಿಟ್ಟು ಆರಿಸ ಹೋಗದಿರಿ" ಎಂದು.

- ಓದುಗ, ಬೆಂಗಳೂರು

ಮೋದಿಯ ನೋಟು ರದ್ದತಿಯನ್ನು ಸಮರ್ಥಿಸಿ ಮಾತನಾಡಲು ನೇಮಿಸಿಕೊಂಡಿರುವವರಂತೆ. ಇದು ಕೇವಲ ಕರ್ನಾಟಕದಲ್ಲಿ ಮಾತ್ರ ನಡೆಯುತ್ತಿರುವ ಬಾಡಿಗೆ ಜಜ್ಜ-ಅಜ್ಜಿಯರ ನಾಟಕವಲ್ಲ, ಇದು ದೇಶದೆಲ್ಲೆಡೆ ಮೋದಿ ಭಕ್ತರು ಆಡುತ್ತಿರುವ ನಾಟಕವಂತೆ.

ಸರ್ವಾಧಿಕಾರ ಇರುವ ಉತ್ತರ ಕೊರಿಯಾದಲ್ಲಿ ಅಮಾನುಷ ಸರ್ವಾಧಿಕಾರಿ ಕಿಮ್ ಜೊಂಗ್ ಉನ್‌ರನ್ನು ಸಮರ್ಥಿಸಿ ಇಂತಹ ಬೀದಿ ನಾಟಕ ದಿನಾಲೂ ನಡೆಯುತ್ತದಂತೆ. ನಮ್ಮ ಮೋದಿ ಭಕ್ತರು ಉತ್ತರ ಕೊರಿಯಾದಿಂದ ಈ ಬೀದಿ ನಾಟಕಕ್ಕೆ ಪ್ರೇರಣೆ ಪಡೆದಿರುವಂತಿದೆ.

- ಮಲ್ಲಿಕಾರ್ಜುನ ಶೆಟ್ಟರ್, ಬೆಂಗಳೂರು

ಸುಪ್ರೀಮ್ ಕೋರ್ಟಿಗೆ ಈ ಉಸಾಬರಿ ಬೇಕಿತ್ತೆ?

ಈಗ ದೇಶದಲ್ಲಿನ ವಿವಿಧ ಕೋರ್ಟ್‌ಗಳಲ್ಲಿ ಕೋಟಿ ಕೋಟಿ ಕೇಸುಗಳು ಪೆಂಡಿಂಗ್ ಬಿದ್ದಿದ್ದು, ಕೋಟ್ಯಾಂತರ ಮಂದಿ ನ್ಯಾಯಕ್ಕಾಗಿ ಅಸಹಾಯಕರಾಗಿ ಕಾಯುತ್ತಿದ್ದಾರೆ. ನೀವೆ ತಾವು ಡಿಸೆಂಬರ್ 28ರ ಸಂಚಿಕೆಯಲ್ಲಿ ಹೇಳಿರುವಂತೆ, ಸುಪ್ರೀಂಕೋರ್ಟ್ ಚಿತ್ರಮಂದಿರಗಳಲ್ಲಿ ರಾಷ್ಟ್ರಗೀತೆ ಹಾಕುವ ಬಗ್ಗೆ ಆದ್ಯತೆ ನೀಡಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ....

ಕೇಸುಗಳು ಇತ್ಯರ್ಥವಾಗಲು ಹತ್ತಾರು ವರ್ಷ ಕಾಲ ಕಾಯಬೇಕಾದ ಅನಿವಾರ್ಯತೆಗೆ ಸಿಕ್ಕಿ ಜನರು ವ್ಯವಸ್ಥೆಯಲ್ಲಿ ನಂಬಿಕೆಯನ್ನೇ ಕಳೆದುಕೊಂಡಿದ್ದಾರೆ. "ಕೋರ್ಟಿಗೋಗಿ ಗೆದ್ದವನು ಸೋತ; ಸೋತವನು ಸತ್ತ" ಎಂಬುದು ಕೋರ್ಟಿನ ಅನುಭವ ಇರುವವರ ಅನಿಸಿಕೆ. "Justice DELAYED is Justice DENIED" ಎಂಬುದು ಪ್ರಪಂಚದಾದ್ಯಂತ ಗೌರವಿಸುವ ಪ್ರಾಥಮಿಕ ನಿಯಮ..... ಆದ್ದರಿಂದ ಸುಪ್ರೀಂಕೋರ್ಟ್ ಈ ಕಡೆಗೆ ಗಮನ ಹರಿಸಿ, ದೇಶದಲ್ಲಿ ಯಾವುದೇ ಕೋರ್ಟ್ ಆಗಲೀ, ಕೇಸುಗಳು 3 ಅಥವ 6 ತಿಂಗಳೊಳಗಾಗಿ ಇತ್ಯರ್ಥವಾಗುವಂತೆ ನೋಡಿಕೊಳ್ಳಬೇಕಾದದ್ದು ಅತ್ಯಂತ ತುರ್ತಾಗಿ ಮಾಡಬೇಕಾದ ಕೆಲಸ.

ಸಾಲದ್ದಕ್ಕೆ ಈಗ ಕೋರ್ಟ್‌ಗಳಿಗೆ 15 ದಿನ ಚಳಿಗಾಲದ ರಜವಂತೆ!!!

ಇದೇ ನಮ್ಮ ಕೋರ್ಟ್‌ಗಳು ಕೇಸುಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸುವ ರೀತಿ. ಅಂದರೆ ಈ ದೇಶಕ್ಕೆ ಮುಕ್ತಿ ಸಿಗಲು ಸಾಧ್ಯವೇ?

- ವೀರಭ್ಯಾತಯ್ಯ, ಬೆಂಗಳೂರು



ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಅನಿಸಿಕೆಗಳನ್ನು 9980331427 ನಂಬರಿಗೂ ಸ್ಪಷ್ಟವಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

'ತರ್ಲೆ ವಿಲೇಜ್'ನ ತರ್ಲೆಗಳು

'ತಿಥಿ' ಸಿನಿಮಾ ಈ ನಾಡಿನಲ್ಲಿ ಹುಟ್ಟು ಹಾಕಿದ ಚರ್ಚೆ ಮತ್ತು ಅಚ್ಚರಿಗಳ ಸಂದರ್ಭದಲ್ಲಿ ಮತ್ಯಾರಾದರೂ ಈ ಹಳ್ಳಿ ಪ್ರಸಂಗಗಳಿಗೆ ಕೈ ಹಾಕಬಹುದೆಂಬ ಗುಮಾನಿ ಇತ್ತು, ಆ ಗುಮಾನಿ ನಿಜವಾಗುವಂತೆ ಸಾಹಸಿಗರು 'ತರ್ಲೆ ವಿಲೇಜ್' ಎಂಬ ಬಿಡಿಬಿಡಿ ದೃಶ್ಯ ನಿರ್ಮಿಸಿ ಅದಕ್ಕೊಂದು ಕಲಾರೂಪ ಕೊಡಲಾಗದೆ ಅದ್ವಾನ ಮಾಡಿಬಿಟ್ಟಿದ್ದಾರೆ. ಈ ಚಿತ್ರ ತೆಗೆದ ಪುಣ್ಯಾತ್ಮರು ಹಳ್ಳಿ ಎಂದರೆ ಹಾದರ ಬಡುಕ ಪ್ರದೇಶ ಎಂದು ನಂಬಿದಂತೆ ಕಾಣುತ್ತದೆ. ಅಭಿ ಮತ್ತವನ ಬಾಮೈದ ಇಬ್ಬರು ಹುಡುಗಿಯರನ್ನು ಕುಂತಿ ಬೆಟ್ಟಕ್ಕೆ ಕರೆದುಕೊಂಡು ಹೋಗಿ ಮದುವೆಗೆ ಮುಂಚೆ ಕುಂತಿಗಾದ ಗತಿಯನ್ನೇ ಕಾಣಿಸುತ್ತಾರೆ. ದಲ್ಲಾಳಿ ತಮ್ಮಣ್ಣಗೌಡ ಬೇಕಾದಷ್ಟು ಒಡವೆ ಕಾಸು ಕೊಟ್ಟು ಇಂತದೇ ಕೆಲಸ ಮಾಡುತ್ತಾನೆ. ಮತ್ತೊಬ್ಬ ಇಂತಹ ಕೆಲಸ ಮಾಡುವಾಗಲೇ ಊರವರು ಚಿಲಕ ಹಾಕಿ ಅಪರಾಧಿಗಳನ್ನು ಬೋನಿಗೆ ಕೆಡವುತ್ತಾರೆ. ಬರೀ ಚಡ್ಡಿಯಲ್ಲೇ ಆತ ಈಚೆ ಬರುತ್ತಾನೆ. ಇವೆಲ್ಲಾ ಹಳ್ಳಿಯ ನೈಜ ಘಟನೆಗಳನ್ನು ಕಲೆಯಾಗಿಸಲು ಸಾಧ್ಯವಿಲ್ಲದವರ ಸಾಹಸಗಳು ಅನ್ನಿಸಿತು.

ಹಳ್ಳಿಗಳು ಇವತ್ತು ಸರ್ವನಾಶವಾಗುತ್ತಿವೆ ನಿಜ. ಆದರೆ ಅಲ್ಲೇ ಬದುಕು ಕಟ್ಟಿಕೊಂಡು ಬಾಳುವವರ ನೈತಿಕತೆಯನ್ನು ನಾವು ಗ್ರಹಿಸಬೇಕಾಗುತ್ತದೆ. ಅವರ ಭಾಷೆಯಲ್ಲೇ ಹಾಸ್ಯ ಮತ್ತು ಗಂಭೀರತೆಯಿರುತ್ತದೆ ಎಂಬುದನ್ನು ನೆನಪಿಡಬೇಕು. ಈ ಚಿತ್ರದಲ್ಲಿ ಎಲ್ಲರ ಕೆಲಸಗಳಿಗಿಂತ ಸಂಗೀತವೊದಗಿಸಿದ ಪುಣ್ಯಾತ್ಮ ಯಾರೊ. ಅವನಿಗೊಂದು ಶಿರಸಾಷ್ಟಾಂಗ ನಮಸ್ಕಾರ. ಈ ಚಿತ್ರದಲ್ಲಿ ನಿಧಿಗಾಗಿ ನಡೆಯುವ ಮೂರು ಕೊಲೆಗೆ ಸ್ಪಷ್ಟ ಅಂತ್ಯವಿಲ್ಲ, ಇನ್ನೊಂದು ವಿಶೇಷವೆಂದರೆ ಒಂದು ತರುಣ ಜನಾಂಗವನ್ನೇ ತನ್ನ ವಿಕ್ಷಿಪ್ತ ನಟನೆಯಿಂದ ದಾರಿ ತಪ್ಪಿಸಿದ್ದ ಉಪೇಂದ್ರನ ಕ್ಯಾರೆಕ್ಟರ್‌ಗೆ ಒಂದು ಗತಿ ಕಾಣಿಸಿದ್ದು ಮೆಚ್ಚತಕ್ಕ ಅಂಶ.

ಇರಲಿ,

ಗೆಳೆಯರು "ನಿಮ್ಮ ಕಟ್ಟೆ ಪುರಾಣದಲ್ಲಿನ ದೃಶ್ಯಗಳಂತಿವೆ 'ತರ್ಲೆ ವಿಲೇಜ್' ಸಿನಿಮಾದ ದೃಶ್ಯಗಳು" ಎನ್ನಲಾಗಿ ಹೋಗಿ ನೋಡಿದರೆ ಈ ಚಿತ್ರ ತೆಗೆದವರ ಬಗ್ಗೆ ಕನಿಕರವಾಯ್ತು. ಹಿಂದೊಮ್ಮೆ ನಾಗತಿಹಳ್ಳಿ ಚಂದ್ರಶೇಖರ 'ಮಾತಾಡು ಮಾತಾಡು ಮಲ್ಲಿಗೆ' ಚಿತ್ರದ ಆರಂಭಿಕ ದೃಶ್ಯಕ್ಕೆ ಐದಾರು ದೃಶ್ಯ ಬರೆಸಿಕೊಂಡಿದ್ದ. ಆದರೆ ಆ ದೃಶ್ಯಗಳು ಕಟ್ಟೆ ಪುರಾಣದಿಂದ ಹೊರಗುಳಿದಿದ್ದವು. ಅಕ್ಕಿಮೂಟೆಯಂತೆ ಕಾಣುವ ದೊಡ್ಡಣ್ಣ ಕಾಳಮಾವನಾಗಿ ನಟಿಸಿದ್ದು ಒಂದು ಜೋಕ್. ಇನ್ನ ಯಾರ್ಯಾರೊ ಕಟ್ಟೆ ಪುರಾಣವನ್ನು ಸಿನಿಮಾ ಅಲ್ಲ ಧಾರಾವಾಹಿ ಮಾಡುತ್ತೇವೆಂದು ನನ್ನ ಬಳಿ ಬಂದಿದ್ದರು. ಇದ್ಯಂಗೆ ಸಿನಿಮಾ ಆಗಲು ಸಾಧ್ಯ ನಾಟಕ ಮಾಡಬಹುದಷ್ಟೆ ಎಂದು ಸುಮ್ಮನಿದ್ದೆ.

ಅಂತಹ ಒಂದು ಕಾಲದಲ್ಲಿ ಡಾ. ರಾಜಪ್ಪ ದಳವಾಯಿಯವರು "ನೀನೆಲ್ಲಿದ್ದರೂ ವಿಜಯನಗರಕ್ಕೆ ಬಾ. ನಿನ್ನ ಕಟ್ಟೆ ಪುರಾಣವನ್ನ ಸಿನಿಮಾ ಮಾಡುವ ಜನ ಬಂದಿದ್ದಾರೆ" ಎಂದು ಫೋನ್ ಮಾಡಿದ. ನಾನು ಗೆಳೆಯ ಶ್ರೀನಿವಾಸ್ ಕರಿಯಪ್ಪನೊಡನೆ ಓಡಿದೆ. ಕಟ್ಟೆ ಪುರಾಣದ ನಿರ್ಮಾಪಕರುಗಳು ಮಹಡಿ ಮೇಲಿನ ಬಾರಿನಲ್ಲಿ ಕುಳಿತು ನನಗಾಗಿ ಕಾಯುತ್ತಿದ್ದರು.

ಹೋದಕೂಡಲೇ "ಎರಡು ಲಕ್ಷ ರೂ.ಗಳಿಗೆ ಆ ನಿಮ್ಮ ಪುರಾಣ ಸ್ಕ್ರಿಪ್ಟ್ ಕೊಡಿ. ಈ ವ್ಯವಹಾರ ಕುದುರಿಸಿದ ಹುಡುಗರಿಗೆ ಐವತ್ತು ಸಾವಿರ ಕೊಡಿ" ಎಂದು ದಳವಾಯಿ ಆಜ್ಞಾಪಿಸಿದರು. ಆ ಕ್ಷಣ ನನಗೆ ಒಂದೂವರೆ ಲಕ್ಷದಲ್ಲಿ ಏನೇನು ಮಾಡಬಹುದೆಂಬ ಗೊಂದಲಕ್ಕೆ ಬಿದ್ದೆ.

ಅಷ್ಟರಲ್ಲಿ ಬಿಲ್ ಬಂತು. ನನ್ನ ಜೇಬಲ್ಲಿ ಕೇವಲ ಎರಡು ಸಾವಿರ ಇತ್ತು ಇನ್ನುಳಿದ ಮೂರೂವರೆ ಸಾವಿರವನ್ನು ಗೆಳೆಯ ಶ್ರೀನಿವಾಸ್ ಕೊಟ್ಟರು. ಯಾಕೆಂದರೆ ಬಹುಶಃ ಅವರು ಕಟ್ಟೆಪುರಾಣದಲ್ಲೊಂದು ಪಾತ್ರವನ್ನು ನಿರೀಕ್ಷಿಸಿದ್ದರು ಅನ್ನಿಸುತ್ತೆ. ಎಲ್ಲರೂ ಮಹಡಿಯಿಂದ ಕೆಳಗಿಳಿದು ಬಂದೆವು. ನಿರ್ಮಾತೃಗಳು ನನ್ನ ಫೋನ್ ನಂಬರ್ ತೆಗೆದುಕೊಂಡು ಬೆಳಗ್ಗೆ ಫೋನ್ ಮಾಡುವುದಾಗಿ ಹೋದರು. ಎರಡು ವರ್ಷವಾದರೂ ಅವರಿಂದ ಫೋನಿಲ್ಲ, ನಾನು ಅವರ ಫೋನ್ ನಂಬರ್ ತೆಗೆದುಕೊಳ್ಳುವುದನ್ನು ಮರೆತೆ. ಕೇಳಿದ್ದರೆ ಅವರು ಸುಳ್ಳು ನಂಬರ್ ಕೊಡುತ್ತಿದ್ದರೇನೊ.

■ ಬಿ. ಚಂದ್ರೇಗೌಡ

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 04-01-2017 RNI No. KARKAN2005/14



ಗಣೇಶ್ ಈಗ ಡಾಕ್ಟರ್

ಗೋಲ್ಡನ್ ಸ್ಟಾರ್ ಗಣೇಶ್ ಸಿನಿಮಾರಂಗಕ್ಕೆ ಬಂದು ಹತ್ತು ವರ್ಷಗಳಾದರೂ ಯಾವತ್ತೂ ತೆರೆಯ ಮೇಲೆ ವೈದ್ಯನಾಗಿ ಕಾಣಿಸಿಕೊಂಡಿರಲಿಲ್ಲ. ಇದೇ ಮೊದಲ ಬಾರಿಗೆ ಗಣೇಶ್ ಡಾಕ್ಟರ್ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಸಿಂಪಲ್ ಸುನಿ ನಿರ್ದೇಶನದಲ್ಲಿ ಚಿತ್ರ ಮೂಡಿಬರಲಿದೆ. ಲವರ್‌ಬಾಯ್ ಆಗಿಯೇ ಫೇಮಸ್ ಆಗಿರುವ ಗಣೇಶ್‌ಗೆ ಡಾಕ್ಟರ್ ಪಾತ್ರ ಹೊಸದು. ಹಾಗಾಗಿಯೇ ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ವಿಷಯಗಳನ್ನು ಆಸಕ್ತಿಯಿಂದಲೇ ಓದುತ್ತಿದ್ದಾರಂತೆ. ಅಲ್ಲದೇ ವೈದ್ಯರ ನಡವಳಿಕೆಗಳನ್ನೂ ಅವರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರಂತೆ.

ಚಿತ್ರಕ್ಕೆ 'ಚಮಕ್' ಅಂತ ಹೆಸರಿಡಲಾಗಿದೆ. ಪಾತ್ರಕ್ಕೂ ಮತ್ತು ಶೀರ್ಷಿಕೆಗೂ ತೀರಾ ಹತ್ತಿರದ ಸಂಬಂಧವಿದೆಯಂತೆ. ಅದನ್ನು ಸಿನಿಮಾದಲ್ಲಿಯೇ ನೋಡಬೇಕು ಅನ್ನುವುದು ನಿರ್ದೇಶಕರ ಮಾತು.

ಸದ್ಯ ಗಣೇಶ್ ಅವರು ಯೋಗರಾಜ್ ಭಟ್ ನಿರ್ದೇಶನದ 'ಮುಗುಳ್ನಗೆ' ಸಿನಿಮಾದ ಶೂಟಿಂಗ್‌ನಲ್ಲಿ ಬ್ಯುಸಿಯಾಗಿದ್ದಾರೆ. ಈ ವಾರ 'ಸುಂದರಾಂಗ ಜಾಣ' ಚಿತ್ರ ರಿಲೀಸ್ ಆಗಲಿದೆ. ಇದೆಲ್ಲದರ ನಂತರ 'ಚಮಕ್' ಚಿತ್ರೀಕರಣದಲ್ಲಿ ತೊಡಗಲಿದ್ದಾರಂತೆ ಗೋಲ್ಡನ್ ಸ್ಟಾರ್.

ಗಣೇಶ್ ಕೈಯಲ್ಲಿ ಈಗ ಮೂರ್‍ನಾಲ್ಕು ಚಿತ್ರಗಳಿವೆ. 'ಪಟಾಕಿ' ಚಿತ್ರ ಕೂಡ ರಿಲೀಸ್‌ಗೆ ಸಿದ್ಧವಾಗಿದೆ. ಈ ಚಿತ್ರದಲ್ಲಿ ಇವರು ಪೊಲೀಸ್ ಆಫೀಸರ್ ಪಾತ್ರವನ್ನು ಮಾಡಿದ್ದಾರೆ. ಫಸ್ಟ್ ಟೈಮ್ ಖಾಕಿ ತೊಟ್ಟಿದ್ದು ಈ ಸಿನಿಮಾದ ವಿಶೇಷತೆ ಕೂಡ. ಲವರ್‌ಬಾಯ್ ಪಾತ್ರಗಳ ಹೊರತಾಗಿಯೂ ಇವರು ವಿಭಿನ್ನ ಪಾತ್ರವನ್ನು ಪೋಷಿಸುತ್ತಿದ್ದಾರೆ. ಹಾಗಾಗಿ ಗಣೇಶ್‌ಗೆ ಮತ್ತೆ ಡಿಮಾಂಡ್ ಕ್ರಿಯೇಟ್ ಆಗಿದೆ. ■

ರೀಮೇಕ್ ಚಿತ್ರದಲ್ಲಿ ಶಿವರಾಜ್‌ಕುಮಾರ್

ತಾವು ರೀಮೇಕ್ ಸಿನಿಮಾಗಳನ್ನು ಒಪ್ಪಿಕೊಳ್ಳುವುದಿಲ್ಲ ಮತ್ತು ಬೇರೆ ಭಾಷೆಯ ಚಿತ್ರಗಳಲ್ಲಿ ನಟಿಸುವುದಿಲ್ಲ ಅನ್ನುವ ಮಾತುಗಳನ್ನು ಆಡಿದ್ದರು ಶಿವರಾಜ್‌ಕುಮಾರ್. ನೂರು ಚಿತ್ರಗಳನ್ನು ಪೂರೈಸುವತನಕ ಇದನ್ನು ಚಾಚೂತಪ್ಪದೇ ಪಾಲಿಸಿಕೊಂಡು ಬಂದಿದ್ದರು. ಈಗ ಆ ಎರಡೂ ಮಾತುಗಳಿಗೂ ಗೋಲಿ ಹೊಡೆದಿದ್ದಾರೆ. ಹಾಗಾಗಿ ಮೊನ್ನೆಯಷ್ಟೇ ತೆಲುಗಿನ 'ಗೌತಮಿಪುತ್ರ ಶಾತಕರ್ಣಿ' ಚಿತ್ರದಲ್ಲಿ ನಟಿಸಿ ಬಂದಿದ್ದಾರೆ. ಅಲ್ಲದೇ ಮೋಹನ್‌ಲಾಲ್ ನಟನೆಯ ಮಲೆಯಾಳಂ ಸಿನಿಮಾ 'ಒಪ್ಪಂ' ಚಿತ್ರದಲ್ಲಿ ನಟಿಸಲು ಯೋಚನೆ ಮಾಡುತ್ತಿದ್ದಾರೆ.

ಈ ಎರಡೂ ಸಿನಿಮಾಗಳನ್ನು ಅವರು ಒಪ್ಪಿಕೊಳ್ಳಲು ಒಂದೊಂದು ಕಾರಣವಿದೆಯಂತೆ. 'ಗೌತಮಿಪುತ್ರ ಶಾತಕರ್ಣಿ' ಸಿನಿಮಾಗೆ ಬಾಲಕೃಷ್ಣ ನಾಯಕ. ಬಾಲಕೃಷ್ಣ ಮತ್ತು ಶಿವಣ್ಣ ತೀರಾ ಆಪ್ತರು. ಅವರ ಒತ್ತಾಸೆಗೆ ಇಲ್ಲ ಅನ್ನುವುದಕ್ಕೆ ಆಗಲಿಲ್ಲವಂತೆ. ಅಲ್ಲದೇ 'ಒಪ್ಪಂ' ಸಿನಿಮಾದ ಕತೆಯು ಅಂಧರ ಬದುಕಿಗೆ ದಾರಿದೀಪವಾಗಲಿದೆಯಂತೆ. ಈ ಸಿನಿಮಾದಿಂದಾಗಿ ಅಂತವರ ಬದುಕಿನಲ್ಲಿ ಬೆಳಕಾಗಲಿ ಅನ್ನುವುದು ಅವರ ಉದ್ದೇಶವಂತೆ. ಹಾಗಾಗಿ ತಮ್ಮ ಮಾತಿನಂತೆ ನಡೆದುಕೊಳ್ಳಲು ಆಗುತ್ತಿಲ್ಲ ಅಂದಿದ್ದಾರೆ. ■

ಟಿಎನ್‌ಎಸ್ ಚಿತ್ರದಲ್ಲಿ ರಾಧಿಕಾ



ಕಿರುತೆರೆಯ ಫೇಮಸ್ ಲಾಯರ್ ಟಿ.ಎನ್.ಸೀತಾರಾಮ್ ತುಂಬಾ ವರ್ಷಗಳ ನಂತರ ಸಿನಿಮಾವೊಂದರ ನಿರ್ದೇಶನಕ್ಕೆ ಮುಂದಾಗಿದ್ದಾರೆ. ಈ ಬಾರಿ ಅವರು ಸಸ್ಪೆನ್ಸ್ ಮತ್ತು ಥ್ರಿಲ್ಲರ್ ಕತೆಯನ್ನು ಆಯ್ಕೆ ಮಾಡಿಕೊಂಡಿದ್ದು, ಫೇಮಸ್ ಕಲಾವಿದರನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಅವರಲ್ಲಿ 'ರಂಗಿತರಂಗ' ಸೇರಿದಂತೆ ಹಲವು ಚಿತ್ರಗಳಲ್ಲಿ ನಟಿಸಿರುವ ರಾಧಿಕಾ ಚೇತನ್ ಕೂಡ ಒಬ್ಬರು. ಚಿತ್ರಕ್ಕೆ ರಘು ಮುಖರ್ಜಿ ನಾಯಕನಾದರೆ, ರಾಧಿಕಾ ಮತ್ತೊಂದು ಪ್ರಮುಖ ಪಾತ್ರವನ್ನು ನಿರ್ವಹಿಸಲಿದ್ದಾರೆ. 'ರಂಗಿತರಂಗ' ಸಿನಿಮಾದ ಮೂಲಕ ಸಿನಿಮಾರಂಗಕ್ಕೆ ಬಂದಿರುವ ರಾಧಿಕಾ, ತಮಿಳು ಸೇರಿದಂತೆ ಹಲವು ಚಿತ್ರರಂಗಗಳಲ್ಲಿ ಸಕ್ರಿಯರಾಗಿದ್ದಾರೆ. ಅನೇಕ ವ್ಯಾಪಾರಿ ಸಿನಿಮಾಗಳಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಟಿಎನ್‌ಎಸ್ ಅವರ ನಿರ್ದೇಶನದ ಚಿತ್ರವನ್ನು ರಾಧಿಕಾ ಚೇತನ್ ಒಪ್ಪಿಕೊಂಡಿದ್ದಕ್ಕೆ ಕಾರಣ ಕೇವಲ ಚಿತ್ರದ ಕತೆಯಂತೆ.

''ಸಿನಿಮಾದ ಕತೆ ತುಂಬಾನೇ ಚೆನ್ನಾಗಿದೆ. ನನ್ನ ಪಾತ್ರ ಕೂಡ ವಿಭಿನ್ನವಾಗಿದೆ. ಅಲ್ಲದೇ ಸೀತಾರಾಮ್ ಸಾರ್ ಬಗ್ಗೆ ಕೇಳಿದ್ದೇನೆ.

ಅವರ ಧಾರಾವಾಹಿ ಗಳನ್ನು ನೋಡಿದ್ದೇನೆ. ಈ ಸಿನಿಮಾ ನನ್ನ ವೃತ್ತಿಬದುಕಿಗೆ ಬೇರೊಂದು ದಿಕ್ಕು ತೋರಿಸ ಬಲ್ಲದು'' ಅಂದಿದ್ದಾರೆ ರಾಧಿಕಾ ಚೇತನ್. ■



ಹಾಡಿದ... ಸುದೀಪ್...

ಸುದೀಪ್ ಯಾವಾಗ ಏನು ಮಾಡುತ್ತಾರೆ ಅಂತ ಸ್ವತಃ ಅವರಿ... ಗೊತ್ತಿರುವುದಿಲ್ಲ, ಹಾಗಾಗಿ ಅವರು ಮಾಡಿದ್ದೆಲ್ಲವೂ ಸರ್‌ಪ್ರೈಸ್ ಅನಿಸುತ್ತ... ಈಗ ಇಂಥದ್ದೇ ಸರ್‌ಪ್ರೈಸ್ ಕಾರಣದಿಂದಾಗಿ ಕಿಚ್ಚ ಸುದ್ದಿಯಾಗಿದ್ದಾರೆ. 'ಹೆಬ್ಬುಲಿ' ಶೂಟಿಂಗ್, ಧಾರಾವಾಹಿ ನಿರ್ಮಾಣ ಮತ್ತು ಬಿಗ್‌ಬಾಸ್ ಕಾರ್ಯಕ್ರಮದ... ಸದಾ ಬ್ಯುಸಿಯಾಗಿರುವ ಸುದೀಪ್‌ಗೆ, ತಮ್ಮ ಸಿನಿಮಾದ ಹಾಡೊಂದ... ಹಾಡಲು ನಿರ್ದೇಶಕ ಎಸ್.ನಾರಾಯಣ್ ಕೇಳಿಕೊಂಡಿದ್ದರಂತೆ. ಬರೋಬ್ಬ... ಎರಡು ತಿಂಗಳುಗಳ ಕಾಲ ನಾಣಿಯನ್ನು ಕಾಯಿಸಿದ್ದ ಸುದೀಪ್ ಕೊನೆ... ಯಾರಿಗೂ ಗೊತ್ತಾಗದಂತೆ ಸ್ಟುಡಿಯೋಗೆ ಹೋಗಿ ಹಾಡಿದ್ದಾರಂತೆ. ಈ ನ... ನಾರಾಯಣ್ ಅವರಿಗೆ ಅಚ್ಚರಿ ತರಿಸಿದೆ. "ಹಲವು ಬಾರಿ ಕೇಳಿಕೊಂಡಿದ್ದರೂ... ತಪ್ಪಿಸಿಕೊಂಡಿದ್ದ ಸುದೀಪ್, ನನಗೇ ಗೊತ್ತಿಲ್ಲದಂತೆ ಹಾಡಿ ಬಂದಿದ್ದಾರೆ. ಅವ... ಕೆಲಸದ ವೈಖರಿಗೆ ಫಿದಾ ಆಗಿದ್ದೇನೆ" ಅಂದಿದ್ದಾರೆ ನಾಣಿ. ಅಂದಹಾ... ನಾರಾಯಣ್ 'ಪಂಟ' ಅನ್ನುವ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಅನೂಪ... ರೇವಣ್ಣ ಈ ಸಿನಿಮಾದ ನಾಯಕ. ಈ ಚಿತ್ರಕ್ಕೆ ಸುದೀಪ್ ಹಾಡುವ ಮೂಲ... ತಾನೇ ಬೇರೆ ತನ್ನ ಸ್ಟೈಲೇ ಬೇರೆ ಎಂದಿದ್ದಾರೆ.

ಸುದೀಪ್ ಹಾಗೆಯೇ, ಯಾರ ಕೈಗೂ ಸಿಗುವುದಿಲ್ಲ, ತನಗೆ ಇಷ್ಟ... ಅನಿಸಿದ್ದನ್ನು ಬಿಡುವುದಿಲ್ಲ, ಹಾಗಾಗಿ ಇಂತಹ ಸರ್‌ಪ್ರೈಸ್‌ಗಳನ್ನು ಆಗಾ... ಹಲವರ ಜೀವನದಲ್ಲಿ ಅವರು ಕೊಟ್ಟಿದ್ದಾರೆ. ■

ರಾಜಕೀಯ ಬೇಡ ಅಂತಿದ್ದಾರೆ ಪ್ರಿಯಾಂಕಾ

ರಾಜಕೀಯ ರಣರಂಗಕ್ಕೆ ಇಳಿಯಲು ಉಪೇಂದ್ರ ಸರ್ವರೀತಿಯಲ್ಲೂ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಅದಕ್ಕಾಗಿ ಅವರು ಯುವಪಡೆಯನ್ನೂ ಕಟ್ಟುತ್ತಿದ್ದಾರೆ. ಬಿಜೆಪಿಯ ಹಲವು ಯೋಜನೆಗಳನ್ನು ಮೆಚ್ಚಿಕೊಂಡು ಮಾತಾಡುತ್ತಿರುವ ಇವರು ಭಾರತೀಯ ಜನತಾ ಪಕ್ಷ ಸೇರುತ್ತಾರೆ ಅನ್ನುವ ಸುದ್ದಿ ಕೂಡ ಇದೆ. ಆದರೆ ಅವರ ಪತ್ನಿ ಪ್ರಿಯಾಂಕಾಗೆ ಮಾತ್ರ ಉಪೇಂದ್ರ ರಾಜಕೀಯಕ್ಕೆ ಹೋಗುವುದು ಇಷ್ಟವಿಲ್ಲವಂತೆ. ಈ ಮಾತನ್ನು ಅವರು ಬಹಿರಂಗವಾಗಿಯೇ ಆಡಿದ್ದಾರೆ. "ನನಗಂತೂ ರಾಜಕೀಯದಲ್ಲಿ ಆಸಕ್ತಿ ಇಲ್ಲ. ನಾನು ಯಾರ ಪರವೂ ಇಲ್ಲ. ಉಪೇಂದ್ರ ಕೂಡ ರಾಜಕಾರಣಿ ಆಗುವುದು ಬೇಡ. ಅವರು ನಟ ಮತ್ತು ನಿರ್ದೇಶಕರಾಗಿಯೇ ಉಳಿಯಲಿ" ಅಂದಿದ್ದಾರೆ. ಸದಾ ರಾಜಕಾರಣಿಯಂತೆ ಮಾತಾಡುವ ಉಪೇಂದ್ರ, ಸದ್ಯದಲ್ಲೇ ರಾಜಕೀಯ ಕ್ಷೇತ್ರಕ್ಕೆ ಕಾಲಿಡಲಿದ್ದಾರೆ ಅನ್ನುವ ಹೊತ್ತಿನಲ್ಲಿ ಪತ್ನಿಯ ಮಾತು ಅಚ್ಚರಿ ಮೂಡಿಸಿದೆ. ಸ್ವತಃ ಪತ್ನಿಗೆ ಇಷ್ಟವಿಲ್ಲ ಅಂದಮೇಲೆ ಉಪೇಂದ್ರ ನಡೆ ಏನಾಗಿರಲಿದೆ ಅನ್ನುವ ಕುತೂಹಲ ಕೂಡ ಮೂಡಿದೆ. ಇತ್ತೀಚೆಗೆ ರಾಜಕಾರಣ ಜನರಲ್ಲಿ ಬೇಸರ ಮೂಡಿಸಿದೆ. ಆದರಲ್ಲೂ ಬಹುತೇಕ ರಾಜಕಾರಣಿಗಳು ನಾನಾ ಹಗರಣಗಳಲ್ಲಿ ಸಿಲುಕಿಕೊಳ್ಳುತ್ತಿದ್ದಾರೆ. ನಿಷ್ಠಾವಂತ ರಾಜಕಾರಣಿಗೆ ಅಲ್ಲಿ ಸ್ಥಾನ ಇಲ್ಲದಂತಾಗಿದೆ. ಹೀಗಾಗಿ ಪ್ರಿಯಾಂಕಾಗೆ ರಾಜಕಾರಣ ಬೇಸರ ತರಿಸಿದೆಯಂತೆ. ■

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com